ಕ್ಷಣ ಕ್ಷಣಕ್ಕೂ ಹೊಸ ಬದುಕಿಗೆ



ಮೂಲ : ಜೆ. ಕೃಷ್ಣಮೂರ್ತಿ (J. K.)
ಅನು : ಟಿ. ಜಿ. ಭಟ್ಟ (ಹಾಸಣಗಿ)

ಓದಿಗೆ ಮೊದಲು...

ಪ್ರತಿ ವರ್ಷದಂತೆ ಈ ವರ್ಷವೂ ಸಹ ಚಳಿಗಾಲದಲ್ಲಿಯ ತಮ್ಮ ಭಾರತ-ಭೇಟಿ, ವಾಸ್ತವ್ಯಕ್ಕೆ ಜನವರಿಯಲ್ಲಿ ಕೃಷ್ಣಮೂರ್ತಿ ಬಂದಿದ್ದರು. ಅವರು ಭಾರತದಲ್ಲಿ ಈ ವರ್ಷದ ತಮ್ಮ ಮೊದಲ ಉಪನ್ಯಾಸವನ್ನು ಮದ್ರಾಸಿನ ಅಡ್ಯಾರಿನಲ್ಲಿ ನೀಡಿದರು. ಆದರೆ ಅವರಿಗೆ ಕ್ಯಾನ್ಸರ್ ರೋಗ ಉಲ್ಬಣಗೊಂಡಿದ್ದರಿಂದ ಚಿಕಿತ್ಸೆಗಾಗಿ ಅವರನ್ನು ಕೂಡಲೇ ಕ್ಯಾಲಿಫೋರ್ನಿಯಾಕ್ಕೆ ಕರೆದೊಯ್ಯಲಾಯಿತು.

ಮೇದೋಜ್ಜೀರಕ ಗ್ರಂಥಿಯ ಕ್ಯಾನ್ಸರ್‌ನಿಂದ ಬಳಲುತ್ತಿದ್ದ ಅವರಿಗೆ ಚಿಕಿತ್ಸೆಯಿಂದ ವಿಶೇಷ ಪ್ರಯೋಜನ ಆಗದಿದ್ದಾಗ, ಓಹೈದಲ್ಲಿಯ ಅವರ ಪೈನ್ ಮರದ ಗುಡಿಸಲಿನಂಥ ಗೃಹಕ್ಕೆ ಕರೆತರಲಾಯಿತು. ೧೯೨೨ ರಲ್ಲಿ ಈ ಮನೆಯಲ್ಲೇ ಅವರ ಪ್ರಜ್ಞೆಯನ್ನು ಸಂಪೂರ್ಣವಾಗಿ ಮಾರ್ಪಡಿಸಿದ ಆಧ್ಯಾತ್ಮಿಕ ಅನುಭವ ಉಂಟಾಗಿತ್ತು. "ನಾನು ಆ ಜ್ಯೋತಿಯನ್ನು ಕಂಡೆ .... ಎಲ್ಲ ದುಃಖ, ಯಾತನೆಗಳನ್ನು ಗುಣಪಡಿಸುವ ಆ ಕರುಣೆಯನ್ನು ನಾನು ಮುಟ್ಟಿದ್ದೇನೆ, ಇದು ಕೇವಲ ನನಗಾಗಿ ಅಲ್ಲ, ವಿಶ್ವಕ್ಕಾಗಿ " ಎಂದು ಬರೆದಿದ್ದರು ಜೆ. ಕೆ.

ಕೃಷ್ಣಮೂರ್ತಿ ಅವರ ಆಪ್ತ ಒಡನಾಡಿಗಳಾದ ಶ್ರೀಮತಿ ಪುಪುಲ್ ಜಯಕರ, ಪ್ರೊ. ಕೃಷ್ಣ, ಶ್ರೀ ಮಹೇಶ ಸಕ್ಸೇನಾ ಹಾಗು ಅಮೇರಿಕೆ, ಇಂಗ್ಲೆಂಡ್ ದೇಶಗಳ ಅವರ ಅನೇಕ ಅನುಯಾಯಿಗಳು ಅವರ ಸುತ್ತಲಿದ್ದರು. ತಮ್ಮ ಮರಣಾನಂತರ ತಮ್ಮ ಹೆಸರಿನಲ್ಲಿ ಯಾವದೇ ಮಠ-ಮಂದಿರಗಳನ್ನು ನಿರ್ಮಿಸಬಾರದೆಂದು ಅವರು ಸುತ್ತಲೂ ಸೇರಿದ್ದ ಈ ಆಪ್ತರಲ್ಲಿ, ಅಭಿಮಾನಿ ಅನುಯಾಯಿಗಳಲ್ಲಿ ವಿನಂತಿಸಿಕೊಂಡರು.

ದಿ. ೧೭-೨-೧೯೮೬ ರ ಸೋಮವಾರ ರಾತ್ರಿ ೧೨-೪೦ ಕ್ಕೆ, ಭಾರತೀಯ ಕಾಲಮಾನದ ಪ್ರಕಾರ ಮಾಘ ಶುದ್ಧ ಅಷ್ಟಮಿ ಸೋಮವಾರ ಮಧ್ಯಾಹ್ನ ೨-೧೦ ಕ್ಕೆ ಜೆ. ಕೆ. ತಮ್ಮ ಆ ಮನೆಯಲ್ಲಿ ಕೊನೆಯುಸಿರೆಳೆದರು.

" ಕೃಷ್ಣಾಜಿ (ಜೆ. ಕೃಷ್ಣಮೂರ್ತಿ) ಅವರದ್ದು ಋಷಿಯ ಸಾವಿನಂತಿತ್ತು. ಇಚ್ಛಾ ಮರಣವಾಗಿತ್ತು. ಅಂಥ ಸಾವು ಶೋಕವನ್ನಾಗಲಿ, ಸ್ಮಾರಕವನ್ನಾಗಲಿ ಖಂಡಿತ ಕೇಳುವದಿಲ್ಲ " ಎಂದು ಹೇಳಿದ್ದಾರೆ ಶ್ರೀಮತಿ ಪುಪುಲ್ ಜಯಕರ.

'ಮಹಾತ್ಮರ ಜೀವನ ಮರಣದಲ್ಲಿ ನೋಡು' ಎಂಬ ಮಾತಿಗೆ ನಿದರ್ಶನ ದಂತಿದೆ ಜೆ. ಕೆ. ಅವರ ಮರಣ.

*　　*　　•　　•

೧೯೭೧ ರಿಂದ ಜೆ. ಕೆ. ಅವರ ಬರಹಗಳನ್ನು ಓದಿ, ಮಾರ್ಗದರ್ಶನ ಕಂಡುಕೊಳ್ಳುತ್ತ ಬಂದ ನನಗೆ, ಅವರನ್ನು ಇಂಗ್ಲಿಷ್ ಗೊತ್ತಿಲ್ಲದ ನನ್ನ ಸುತ್ತಲಿನ ಆಪ್ತರಿಗೆ ಪರಿಚಯಿಸುವ ಇಚ್ಛೆ ಇದ್ದಿತು. ೧೯೮೧ ರಲ್ಲಿ ಶ್ರೀ ಮನೋಹರ ಘಾಣೇಕರ ಅವರಲ್ಲಿ ಈ ಬಗ್ಗೆ ಪ್ರಸ್ತಾಪಿಸಿದಾಗ, ಪ್ರಕಟಣೆ ತಾವು ಮಾಡುವ-ದಾಗಿ ಹೇಳಿ ಉತ್ತೇಜನ ನೀಡಿದರು. ಈ ಪರಿಚಯಾತ್ಮಕ ಕೆಲಸ ವರ್ಷೊಪ್ಪತ್ತಿ-ನಲ್ಲಿ ಮುಗಿದೀತೆಂದು ಭಾವಿಸಿದ ನನಗೆ, ಕೈಕೊಂಡ ಕೆಲಸ ಆದಷ್ಟು ಸಮರ್ಪಕ ಹಾಗು ಸಮಗ್ರವಾಗಬೇಕೆಂಬ ಇಚ್ಛೆಯಿಂದಾಗಿ ಮುಗಿಯಲು ೧೯೮೫ ರ ವರೆಗೆ ಬೇಕಾಯಿತು. ಜೆ. ಕೆ. ಅವರ First and Last Freedom ಪುಸ್ತಕದ ಮಾದರಿಯಲ್ಲಿ. ಕೆಲವು ವಿಷಯಗಳನ್ನು ಆಯ್ದುಕೊಂಡು, ಅವುಗಳ ವಿವಿಧ ಮುಖ-ಮಜಲುಗಳನ್ನು ಅವರ ಹಲವು ಪುಸ್ತಕಗಳಿಂದ ಓದಿ, ಒಂದೆಡೆ ಸೇರಿಸಿ, ನಂತರ ಒಂದು ಸ್ವತಂತ್ರ ಪ್ರಬಂಧವೆನ್ನುವಂತೆ ಅವನ್ನು ಬರೆದೆ. (ಇಲ್ಲಿ ಕೆಲವು ಅಪವಾದ ಇವೆ) ಹೀಗೆ ಮಾಡುವಾಗ ಮೂಲದಲ್ಲಿರುವ ಸಂವಾದದ ಆಪ್ತ ಧಾಟಿ, ಚಿಂತನೆಯ ಶ್ರುತಿ, ಲಯಗಳನ್ನು, ನೇರತೆ, ಸ್ಪಷ್ಟತೆಗಳನ್ನು ಕನ್ನಡದಲ್ಲೂ ಉಳಿಸಿಕೊಳ್ಳಲು ಪ್ರಯತ್ನಿಸಿದ್ದೇನೆ. ನಂತರ ಈ ಎಲ್ಲವುಗಳ ಬಗ್ಗೆ ಆಕ್ಷೇಪ ಬರಬಾರದೆಂದು ಮದ್ರಾಸಿನಲ್ಲಿರುವ ಕೃಷ್ಣಮೂರ್ತಿ ಫೌಂಡೇಶನ್ ಅವರಿಗೆ ಹಸ್ತಪ್ರತಿ ಕಳಿಸಿ ಅನುಮತಿ ಪಡೆದೆ. ನಂತರ ಮುದ್ರಣ ಅರ್ಧವಾಗಿರುವಾಗಲೇ ಜೆ.ಕೆ. ಅಸ್ವಸ್ಥರಾದರೆಂಬ ಸುದ್ದಿ ಕೇಳಿ, ಒಂದೇ ವಾರದಲ್ಲೇ ಮುದ್ರಣ ಕಾರ್ಯವನ್ನು ಶ್ರೀ ಘಾಣೇಕರ ಮುಗಿಸಿದರು. ಮುಖಪುಟದ ವಿನ್ಯಾಸಕ್ಕೆ ಮದ್ರಾಸಿಗೆ ಪುನಃ ಅನುಮತಿ ಕೇಳಿ ಕಳಿಸಿದಾಗ, ಸಹಜವಾಗಿಯೇ ಅಂಚೆ ಮೂಲಕ ವಿಳಂಬವಾಯಿತು. ಜೆ. ಕೆ. ಇರುವಾಗಲೇ ಈ ಪುಸ್ತಕ ತರಬೇಕೆಂದು ಎಷ್ಟೇ ಪ್ರಯತ್ನಪಟ್ಟರೂ ಆಗಲಿಲ್ಲ—ಎಂಬ ವಿಷಾದ ಇದರಿಂದಾಗಿ.

೨೭ —೪— ೧೯೮೬　　　　ಟಿ. ಜಿ. ಭಟ್ಟ, ಹಾಸಣಗಿ.

ಜೆ. ಕೃಷ್ಣಮೂರ್ತಿ (J. K.) ಅವರ

ಕ್ಷಣ ಕ್ಷಣಕೂ ಹೊಸ ಬದುಕಿಗೆ

(ಜೀವನ ಹಾಗು ದರ್ಶನ)

ಟಿ. ಜಿ. ಭಟ್ಟ, ಹಾಸಣಗಿ

ಪ್ರಾಧ್ಯಾಪಕರು : ಡಾ. ಎ. ವ್ಹಿ. ಬಾಳಿಗಾ ಆರ್ಟ್ಸ್-ಸೈನ್ಸ್ ಕಾಲೇಜು, ಕುಮಟಾ

ಸಮಾಜ ಪುಸ್ತಕಾಲಯ, ಧಾರವಾಡ.

ಪ್ರಕಾಶಕರು :
ಮನೋಹರ ಘಾಣೇಕರ,
ಬಿ.ಎ., ಬಿ.ಕಾಂ.
ಸಮಾಜ ಪುಸ್ತಕಾಲಯ, ಧಾರವಾಡ.

ಪ್ರಥಮ ಮುದ್ರಣ : ೧೯೮೬

ಮುದ್ರಕರು :
ಪ್ರತಿಭಾ ಮುದ್ರಣ,
ಶಿವಾಜಿಬೀದಿ, ಧಾರವಾಡ-೫೮೦೦೦೧.

ವ್ಯಕ್ತಿತ್ವ ವಿಕಾಸದ ಪುಸ್ತಕಗಳು :

●

ಜೀವನ ಪಾಠಗಳು
ಡಾ. ವಿ. ಕೃ. ಗೋಕಾಕ

ಬದುಕಿನ ಬೆಳಕು
ರಮೇಶ ಉಪಾಧ್ಯಾಯ

ಗೌರವ ತಪಸ್ವಿ
ನಂಜುಂಡಸ್ವಾಮಿ

ವಿದ್ಯಾರ್ಥಿ ಸನ್ಮಾರ್ಗದರ್ಶಿನಿ
ನಾಗಿರೆಡ್ಡಿ

ದಾರಿಯ ಬುತ್ತಿ
ಬಾ. ಶಂ. ಬಾ. ಜೋಶಿ

ಪರಿವಿಡಿ

ಮೊದಲ ಮಾತು

"ಬುದ್ಧಿಜೀವಿಗಳ ತತ್ತ್ವಜ್ಞಾನಿ" ಎಂದೇ ಖ್ಯಾತರಾದವರು ಜಿಡ್ಡು ಕೃಷ್ಣಮೂರ್ತಿ. ಕನ್ನಡನಾಡಿನ ಬುದ್ಧಿಜೀವಿಗಳ, ಸಾಹಿತಿ-ಚಿಂತಕರ ಮೇಲೆ ಅವರ ಪ್ರಭಾವ ತುಂಬ ಹಿಂದಿನಿಂದಲೂ ಆಗಿದೆ, ಆಗುತ್ತಿದೆ. ಆದರೆ ಕನ್ನಡ ಬಲ್ಲ ಜನಸಾಮಾನ್ಯನಿಗೆ ಮಾತ್ರ ಪತ್ರಿಕೆಗಳಲ್ಲಿ ಆಗೀಗ ಪ್ರಕಟಗೊಂಡ ಜೆ. ಕೆ. ಯವರ ಬದುಕು-ವಿಚಾರಗಳ ಅಲ್ಪ-ಸ್ವಲ್ಪ ಪರಿಚಯ ಬಿಟ್ಟರೆ ಮತ್ತೇನೂ ಅರಿಯಲು ಸಿಗದು. ಆ ದಿಸೆಯಲ್ಲಿ ಕೈಗೊಂಡ ಅಲ್ಪ ಪ್ರಯತ್ನ ಇದು.

ಬುದ್ಧಿಜೀವಿಗಳಲ್ಲದವರಿಗೆ, ಜನಸಾಮಾನ್ಯನಿಗೆ ನಿಲುಕುವಂತಹದಲ್ಲ ಜೆ. ಕೆ. ಅವರ ವಿಚಾರ— ಎಂಬ ಮಾತು ತುಂಬ ಹಿಂದಿನಿಂದಲೂ ಕೇಳಿಬರು-ತ್ತಿದೆ. "ನೀವು ಹೇಳುವದೆಲ್ಲ ಅತಿಮಾನವರ ಸೃಷ್ಟಿಗೆ ಕರೆದೊಯ್ದೀತು. ತಮ್ಮನ್ನೇ ತಾವು ಆಳಬಲ್ಲ, ತಮ್ಮಲ್ಲೇ ಸುವ್ಯವಸ್ಥೆ ಸ್ಥಾಪಿಸಿಕೊಳ್ಳಬಲ್ಲ, ತಮ್ಮನ್ನೇ ತಾವು ನಿಯಂತ್ರಿಸಿಕೊಳ್ಳಬಲ್ಲ ಸಮರ್ಥರ ಸೃಷ್ಟಿಗೆ ಕಾರಣವಾಗ-ಬಹುದು. ಆದರೆ ಈ ಏಣಿಯ ಬುಡದಲ್ಲಿರುವ ಶ್ರೀ ಸಾಮಾನ್ಯನಿಗೆ— ಬಾಹ್ಯ ಅಧಿಕಾರ, ಸತ್ತೆಗಳ ಮೇಲೆ ಅವಲಂಬಿತನಾದ, ಎಲ್ಲ ಬಗೆಯ ಆಧಾರಗಳನ್ನು ಉಪಯೋಗಿಸುವಂಥ, ತನಗೆ ಯೋಗ್ಯವಾದ ರೀತಿಯಲ್ಲಿ ಆಳವಡಿಸಿಕೊಳ್ಳಲು ಆಗದೇ ಇರುವಂಥ ನೈತಿಕ ವ್ಯವಸ್ಥೆಗೆ ತನ್ನನ್ನು ಒಗ್ಗಿಸಿಕೊಂಡಂಥ— ಶ್ರೀ ಸಾಮಾನ್ಯನಿಗೆ ಹೇಗೆ ಸಹಾಯ ನೀಡಬಲ್ಲದು ?"

ಇದಕ್ಕೆ ಜೆ. ಕೆ. ಹೀಗೆ ಉತ್ತರಿಸಿದ್ದಾರೆ : "ಈ ಜಗತ್ತಿನಲ್ಲಿ ಏನಾಗು-ತ್ತಿದೆ ಎನ್ನುವುದನ್ನು ಗಮನಿಸಿ : ಪ್ರಬಲರು, ಸಶಕ್ತರು, ಕ್ರೂರಿಗಳೂ ಆದ, ಇನ್ನೊಬ್ಬರ ಮೇಲೆ ಅಧಿಕಾರ ಚಲಾಯಿಸಬಲ್ಲಂಥ ಜನರು ತುತ್ತ ತುದಿಯಲ್ಲಿ-ದ್ದಾರೆ; ತಳದಲ್ಲಿ ದುರ್ಬಲರೂ, ಸಭ್ಯರೂ ಆದಂಥ ಜನ ಹೋರಾಡುತ್ತ,

ಹೇಣಗುತ್ತ ಇದ್ದಾರೆ. ಇದಕ್ಕೆ ವಿರುದ್ಧವಾಗಿ ಒಂದು ಮರದ ಬಗ್ಗೆ ವಿಚಾರ ಮಾಡಿ; ಅದರ ಬಲ ಹಾಗು ವೈಭವ ಕೆಳಗೆ ಆಳದಲ್ಲಿ ಹುದುಗಿರುವ ಬೇರು-ಗಳಿಂದ ಬಂದಿದೆ; ಮರದ ಮೇಲ್ಭಾಗ ಕೋಮಲ ಎಲೆಗಳಿಂದ, ಮೃದು ಚಿಗುರುಗಳಿಂದ, ಅತ್ಯಂತ ದುರ್ಬಲವಾದ ರೆಂಬೆ-ಕೊಂಬೆಗಳಿಂದ ಆಚ್ಛಾದಿತ-ವಾಗಿದೆ. ಇಂದಿನ ಮಾನವ— ಸಮಾಜದಲ್ಲಿ ಪ್ರಬಲರೂ, ಅಧಿಕಾರಾರೂಢರೂ ದುರ್ಬಲರಿಂದ ಆಧಾರಿತರಾಗಿದ್ದಾರೆ. ಆದರೆ ನಿಸರ್ಗದಲ್ಲಿ ಪ್ರಬಲರು, ಶಕ್ತಿ-ವಂತರು ದುರ್ಬಲರಿಗೆ ಆಧಾರವಾಗಿರುತ್ತಾರೆ. ಪ್ರತಿಯೊಂದು ಸಮಸ್ಯೆಯನ್ನು ವಿಕೃತಗೊಳಿಸಿ ನೋಡುವುದನ್ನೇ ಮುಂದುವರಿಸುವುದು ಇರುವ ವರೆಗೂ ಈಗಿ-ರುವ ಸ್ಥಿತಿಯನ್ನು ಸ್ವೀಕರಿಸುತ್ತಲೇ ಹೋಗುತ್ತೀರಿ........ನಾನು ಸಮಸ್ಯೆಯನ್ನು ಬೇರೆ ದೃಷ್ಟಿಕೋನದಿಂದ ನೋಡುತ್ತೇನೆ. ಯಾಕೆಂದರೆ ನಿಮ್ಮ ನಿರ್ಧಾರಗಳು, ನಿಮ್ಮ ಅರಿವಿನದೇ ಫಲವಾಗಿರದೆ ಬೇರೆಯವರು ಅಧಿಕಾರಪೀಠ (ಧಾರ್ಮಿಕ ರಾಜಕೀಯ, ಸಾಮಾಜಿಕ ಇತ್ಯಾದಿ) ದಲ್ಲಿರುವವರು ಕೊಟ್ಟಂಥವುಗಳನ್ನು ಪುನರುಚ್ಚರಿಸುತ್ತಿದ್ದೀರಿ. ನೀವು ದೃಷ್ಟಾಂತಗಳನ್ನು ಸಂಗ್ರಹಿಸುತ್ತೀರಿ. ಹೊಸ ಗುರುಗಳನ್ನು ಹಳೆ ಜಾಗದಲ್ಲಿ ಕುಳ್ಳಿರಿಸುತ್ತ ಹೋಗುತ್ತೀರಿ........"

ಹೀಗೆ ಶ್ರೀಸಾಮಾನ್ಯರಿಗೆ ತನ್ನ ಸ್ಥಿತಿಗೆ ತಾನೂ ಬಹುಪಾಲು ಹೇಗೆ ಹೊಣೆ ಎನ್ನುವುದನ್ನು ಅರಿಯುವಲ್ಲಿ, ತನ್ನನ್ನು ತಾನು ಬದಲಾಯಿಸಿಕೊಳ್ಳು-ವಲ್ಲಿ ಸಹಾಯ ಸಿಗುತ್ತದೆ— ಜೆ. ಕೆ. ಅವರ ವಿಶ್ಲೇಷಣೆಯಲ್ಲಿ. ನಮ್ಮೊಳಗಿನ ನಮಗೇ ಗೊತ್ತಿರದ ನಮ್ಮ ತೊಳಲಾಟಕ್ಕೆ, ನರಳಿಕೆಗೆ ಕಾರಣವಾದ ಸಂಗತಿಗಳ ಅರಿವು ಮಾಡಿಕೊಳ್ಳುವುದಕ್ಕೆ ಜೆ. ಕೆ. ಅವರ ಚಿಂತನೆ ನೀಡುವ ನೆರವು ಅಪಾರ. ನಮ್ಮ ಮನಸ್ಸಿನ ಸೂಕ್ಷ್ಮಾತಿಸೂಕ್ಷ್ಮ ವೇಷಗಳನ್ನು ಬಹಿರಂಗಗೊಳಿಸಿ, ಅವುಗಳಿಂದ ಮೋಸಹೋಗುವ ನಮ್ಮ ಹಾಗು ನಮ್ಮ ನರಳಾಟಗಳ ವಿಶ್ಲೇ-ಷಣೆ ಕೇವಲ ಇಂದಿನ ಆವಶ್ಯಕತೆಯಷ್ಟೇ ಅಲ್ಲ; ಸದಾಕಾಲ ಇರುವಂತಹದು. ಆದರೆ ಇವೆಲ್ಲವುಗಳೂ ಕೇವಲ ವಿಶಿಷ್ಟ ಕ್ಷೇತ್ರದ ತಜ್ಞರಿಗೆ, ನಿಷ್ಣಾತರಿಗೆ, ಸೀಮಿತವಾಗಿರದೆ ಅಕ್ಷರಬಲ್ಲ ಪ್ರತಿಯೊಬ್ಬನ ಸೊತ್ತೂ ಆಗಬೇಕೆಂಬ ಆಶಯ ಜೆ. ಕೆ. ಅವರದು. ಆದ್ದರಿಂದಲೇ ಅವರು ಹೇಳುವುದನ್ನು ಅರಿತುಕೊಳ್ಳಲು ಯಾವ ವಿಶೇಷ ಪರಿಣತಿ, ಬೌದ್ಧಿಕ ಸಿದ್ಧತೆ, ತಯಾರಿ ಬೇಕಿಲ್ಲ. ತತ್ತ್ವಜ್ಞಾನದ ಪಾರಿಭಾಷಿಕತೆಯ ಕಸರತ್ತಿಲ್ಲದೆ, ಪ್ರತಿಯೊಂದು ವಿಷಯದ

ಗಹನತೆ, ಅಗಾಧತೆಗಳನ್ನು ಅದರೆಲ್ಲ ಸೂಕ್ಷ್ಮತೆಗಳೊಂದಿಗೆ ಗಾಢವಾಗಿ ತಟ್ಟು-ವಂತೆ ಪರಿಚಯಿಸುವ ಅವರ ಶೈಲಿ ಅನನ್ಯವಾದದ್ದು, ಅಸಾಮಾನ್ಯವಾದದ್ದು. ಒಬ್ಬ ಮನುಷ್ಯ ಮತ್ತೊಬ್ಬನ ಹತ್ತಿರ ನೇರವಾಗಿ, ಆಪ್ತವಾಗಿ, ಸರಳವಾಗಿ, ಮುಕ್ತವಾಗಿ ಮಾತನಾಡುತ್ತಿರುವಂತೆ ಅವರನ್ನು ಓದುವಾಗ (ಇಂಗ್ಲೀಷಿನಲ್ಲಿ) ಭಾಸವಾಗುತ್ತದೆ. ಆ ಆತ್ಮೀಯ ಧಾಟಿ, ಭಾಷೆಯಲ್ಲಿನ ಸ್ಫಟಿಕತೆ, ಸಹಜತೆ-ಗಳನ್ನು ಕನ್ನಡದಲ್ಲೂ ಉಳಿಸಿಕೊಳ್ಳಲು ನನ್ನ ಕೈಲಾದ ಎಲ್ಲ ಪ್ರಯತ್ನಗಳನ್ನು ಮಾಡಿದ್ದೇನೆ.

ಈ ಪುಸ್ತಕದ ರಚನೆಯಲ್ಲಿ ಸಹಕರಿಸಿ, ಉಪಕರಿಸದವರು ಹಲವು ಜನ; ಮದ್ರಾಸಿನ ಕೃಷ್ಣಮೂರ್ತಿ ಫೌಂಡೇಶನ್ ಇಂಡಿಯಾದ ಶ್ರೀ ಅಚ್ಯುತ ಪಟ-ವರ್ಧನ ಹಾಗು ಶ್ರೀಮತಿ ಸುನಂದಾ ಪಟವರ್ಧನ ಅವರು, ಈ ಪುಸ್ತಕದ ಹಸ್ತಪ್ರತಿಯನ್ನು ತಮ್ಮ ಸಂಸ್ಥೆಯ ತಜ್ಞರಿಗೆ ನೀಡಿ ಆಮೂಲಾಗ್ರ ಪರಿ-ಶೀಲಿಸಿ, ಕೆಲವು ಮಾರ್ಗದರ್ಶನ, ಸಲಹೆ-ಸೂಚನೆಗಳನ್ನು ನೀಡಿ ಪ್ರಕಟಿಸಲು ಅನುಮತಿ ನೀಡಿದ್ದಾರೆ ಹಾಗು ಮುಖಪುಟಕ್ಕೆ ಬೇಕಾದ ಜೆ. ಕೆ. ಅವರ ಫೋಟೋಗಳನ್ನೂ ಒದಗಿಸಿ ಉಪಕರಿಸಿದ್ದಾರೆ—

ನನಗೆ ಬೇಕಾದ ಕೆಲವು ಪುಸ್ತಕಗಳನ್ನು ಒದಗಿಸಿ ಅನುಕೂಲ ಮಾಡಿ ಕೊಟ್ಟವರು ಪ್ರಾ. ಎನ್. ಆರ್. ನಾರಾಯಣರಾವ್, ಪ್ರಾ. ಕೆ. ಎಸ್. ಬೈಲಕೇರಿ, ಸಹೋದ್ಯೋಗಿಗಳಾದ ಸರ್ವಶ್ರೀ. ಆರ್. ಜೆ. ಪಾಂಡುರಂಗಿ, ಆರ್. ಜಿ. ಹೆಗಡೆ, ಜೆ. ವಿ. ವಾಲಿಪ್ಲವರ್, ನಮ್ಮ ಕಾಲೇಜಿನ ಗ್ರಂಥಭಂಡಾ-ರದ ಶ್ರೀ. ಎ. ಎಸ್. ಶಾನಭಾಗ ಹಾಗು ವಿ. ಆರ್. ಶಿಬಾಡ್.—

ಸ್ನೇಹಿತರಾದ ಶ್ರೀಧರ ಬಳ್ಗಾರ, ಮಾರುತಿ, ಸೀತಣ್ಣಯ್ಯ ಅವರು ಹಸ್ತ-ಪ್ರತಿ ಓದಿ, ಕೆಲವು ಸೂಚನೆ ನೀಡಿದ್ದಾರೆ—

ನನ್ನ ಬರಹದ ಬಗ್ಗೆ ಆಸ್ಥೆ ವಹಿಸಿರುವ ನನ್ನ ತಂದೆ, ತಾಯಿ, ಸಹೋದರ-ಸಹೋದರಿಯರಿಗೆ, ಈ ಪುಸ್ತಕ ಸಾಧ್ಯವಾಗಿಸಿರುವ ಸಹಧರ್ಮಿಣಿ ಮುಕ್ತಾಳಿಗೆ— ನನ್ನ ಕೃತಜ್ಞತೆಗಳು.

“ಸಾಮಾನ್ಯವಾಗಿ ಪುಸ್ತಕದ ಬಗ್ಗೆ ಅಸಡ್ಡೆ ಇರುವ ಇಂದಿನ ಸ್ಥಿತಿಯಲ್ಲಿ, ಗಂಭೀರ, ವೈಚಾರಿಕ ಸಾಹಿತ್ಯದ ಬಗ್ಗೆ ಇರುವ ಅಸಡ್ಡೆಯಂತೂ ಹೇಳತೀರದಷ್ಟು.

ಇಂಥ ಪ್ರಸಂಗದಲ್ಲಿ ಮಾನ್ಯ ಶ್ರೀ ಘಾಣೇಕರ ಅವರು ಪ್ರಸ್ತುತ ಪುಸ್ತಕವನ್ನು ಕೈಗೆತ್ತಿಕೊಂಡಿರುವದು ಸ್ವಲ್ಪ ಸಾಹಸದ ಮಾತು. ಆದರೆ ಅವರಲ್ಲಿಯ ಸದಭಿರುಚಿ, ಸಾಂಸ್ಕೃತಿಕವಾಗಿ ಮಹತ್ವದವಾದವುಗಳ ಬಗ್ಗೆ ಇರುವ ಗೌರವ, ಆದರ ಹಾಗೂ ಅವರ ವೃತ್ತಿಗೆ ಸಹಜವಾದ ಸಾಹಸ ಮನೋಭಾವಗಳ ಒಟ್ಟು ಪರಿಣಾಮ ಈ ಕೆಲಸಕ್ಕೆ ದುಡುಕಿಸಿದೆ ಎನ್ನಬಹುದು. ಇಂಥ ಅರ್ಥಪೂರ್ಣ ದುಡುಕಿಗಾಗಿ ಶ್ರೀ ಮನೋಹರ ಘಾಣೇಕರರಿಗೆ ಹಾಗು ಕೆಲಸವನ್ನು ಅತ್ಯಂತ ಅಚ್ಚುಕಟ್ಟಾಗಿ ನಿರ್ವಹಿಸಿದ ಅವರ ಸಹಾಯಕರಿಗೆ, ಶಿಬ್ಬಂದಿಗೆ ನನ್ನ ಕೃತಜ್ಞತೆಗಳು. ”

ಗಾಂಧಿ ನಗರ
ಕುಮಟಾ (ಉ. ಕ.)

ಟಿ. ಜಿ. ಭಟ್ಟ, ಹಾಸಣಗಿ

ಗ್ರಂಥ ಋಣ

೧. Krishnamurti
The years of Awakening
—*Mary Lutyens*

೨. Krishnamurti —*Ren'e Fou'ere'*

೩. Krishnamurti and the
Unity of Man —*Carlo Suar'es*

೪. The First and Last
Freedom —*J. Krishnamurti*

೫. Life Ahead —*J K.*

೬. Education and the
Signifioance of Life —*J. K.*

೭. Beyond Violence —*J K.*

೮. Tradition & Revolution
—*J. K.*

೯. Beginnings of Learning
—*J. K.*

೧೦. The Second Penguin
Krishnamurti Reader—*Edi. Mary Lutyns*

೧೧. Commentaries on Living
From the note books J. K.
Part–I Editor : *D. Rajagopal*
Part–II — do —
Part–III — do —

೧೨. The Seer Who Walks Alone
—*Pupul Jayakar*

" ನಾನು ವಿಶ್ವಗುರು ಅಲ್ಲ ! "

೧೯೨೯ ರ ಅಗಸ್ಟ್ ೨. ಇಡೀ ಜಗತ್ತಿನ ಬಹುಜನ ಬುದ್ಧಿಜೀವಿಗಳ ಲಕ್ಷ್ಯೆ ಹಾಲೆಂಡಿನ ಅಮೆನ್—ಅಲ್ಲಿ ಜರಗುತ್ತಿರುವ ಥಿಯೊಸೊಫಿಕಲ್ ಸೊಸ್ಸಾೃಟಿಯ ಅಂಗ ಸಂಸ್ಥೆಯಾದ " ಆರ್ಡರ್ ಆಫ್ ದಿ ಸ್ಟಾರ್ ಇನ್ ದಿ ಈಸ್ಟ್ " ವಾರ್ಷಿಕ ಶಿಬಿರದಲ್ಲಿ ಕೇಂದ್ರೀಕರಿಸಲ್ಪಟ್ಟಿದೆ. ಜಗತ್ತಿನ ವಿವಿಧ ಭಾಗಗಳಿಂದ, ದೇಶಗಳಿಂದ ಸಹಸ್ರಾರು ಜನ ಪ್ರತಿನಿಧಿಗಳು, ಸದಸ್ಯರು ಇಲ್ಲಿಗೆ ಬಂದು ಸೇರಿದ್ದಾರೆ.

ಕಳೆದ ೧೮ ವರ್ಷಗಳಿಂದ ಶ್ರೀಕೃಷ್ಣ, ಏಸುಕ್ರಿಸ್ತ, ಭಗವಾನ್ ಬುದ್ಧರ ಸಾಲಿನಲ್ಲಿ ಬರುವ; ಶಕಪುರುಷನಾಗಲಿರುವ ಒಬ್ಬ " ವಿಶ್ವಗುರು " ವಿನ ಆ ಸಂದೇಶ ಸಂವಹನಕ್ಕಾಗಿ ಸಿದ್ಧತೆ ನಡೆಸುತ್ತಿದೆ— ಈ " ಆರ್ಡರ್ ಆಫ್ ದಿ ಸ್ಟಾರ್ ಇನ್ ದಿ ಈಸ್ಟ್. " ಪೌರ್ವಾತ್ಯ ಹಾಗು ಪಾಶ್ಚಿಮಾತ್ಯ ದೇಶಗಳ ಅನೇಕ ಭವಿಷ್ಯವಾದಿಗಳು, ಪ್ರವಾದಿಗಳು ಏಕಕಂಠದಿಂದ ಹೇಳಿದ್ದಾರೆ " ಆತ ವಿಶ್ವಗುರು ಆಗಲಿದ್ದಾನೆ " ಎಂದು. ಜಗತ್ತಿನ ಬಹುತೇಕ ರಾಷ್ಟ್ರಗಳಲ್ಲಿ ವ್ಯಾಪಿಸಿರುವ ಥಿಯೊಸೊಫಿಕಲ್ ಸೊಸ್ಸಾೃಟಿಯ ಪ್ರಧಾನ ಮಾರ್ಗದರ್ಶಕ-ರಲ್ಲೊಬ್ಬರಾದ, ಜಗತ್ತಿನ ೧/೩ ರಾಷ್ಟ್ರಗಳಲ್ಲಿ, ಅದರಲ್ಲೂ ವಿಶೇಷವಾಗಿ ಮುಂದುವರಿದ ರಾಷ್ಟ್ರಗಳಲ್ಲಿ ತನ್ನ ರಾಜಕೀಯ ಹಾಗು ವೈಯಕ್ತಿಕ ಪ್ರಭಾವ-ಪ್ರಭುತ್ವಗಳಿರುವ ಅಂತಾರಾಷ್ಟ್ರೀಯ ಧುರೀಣೆ ಶ್ರೀಮತಿ ಅ್ಯನಿ ಬೆಸೆಂಟರು ' ವಿಶ್ವಗುರು ' ಆಗಲಿರುವ ಆ ವ್ಯಕ್ತಿಯನ್ನು ವಿಶೇಷ ಮುತುವರ್ಜಿಯಿಂದ, ಜವಾಬ್ದಾರಿಯಿಂದ ಸಲಹುತ್ತಿದ್ದಾರೆ, ನೋಡಿಕೊಳ್ಳುತ್ತಿದ್ದಾರೆ. ಆತನ ಸ್ವಾಗತಕ್ಕೆಂದು, ಆತನ ಸಂದೇಶ ಪ್ರಚಾರಕ್ಕೆಂದು ಸ್ಥಾಪಿತಗೊಂಡ "ಆರ್ಡರ್ ಆಫ್ ದಿ ಸ್ಟಾರ್ ಇನ್ ದಿ ಈಸ್ಟ್" ಸಂಸ್ಥೆಯ ಸದಸ್ಯರಾಗಲು ಜಗತ್ತಿನ ವಿವಿಧ ದೇಶಗಳ ಬುದ್ಧಿಜೀವಿಗಳು, ಧೀಮಂತರು ತವಕದಿಂದ ಕ್ಯೂ ಹಚ್ಚಿ ನಿಂತಿ-

ದಾರೆ. ಈ ಸಂಸ್ಥೆಯ ಸದಸ್ಯರಾಗುವುದೆಂದರೆ ವಿಶೇಷ ಅನುಗ್ರಹ ಸಂಪಾದಿಸಿದಂತೆ ಎಂಬ ಭಾವನೆ ಸಾಮಾನ್ಯವಾಗಿದೆ.

ಹಾಲೆಂಡಿನ ಅಮೆನ್-ಅಲ್ಲಿ ಸಮಾವೇಶಗೊಂಡಿರುವ ಈ ವಾರ್ಷಿಕ ಶಿಬಿರ ನಡೆಯುತ್ತಿರುವ ಸ್ಥಳವೂ ಸೇರಿದಂತೆ ೫,೦೦೦ ಎಕರೆ ವಿಸ್ತೀರ್ಣದ ಪ್ರದೇಶವನ್ನು ಅದರ ಒಡೆಯ, ಬ್ರಹ್ಮಾಂಡಗಾತ್ರದ ತನ್ನ ಅರಮನೆಯೂ ಸೇರಿದಂತೆ ‘ ವಿಶ್ವಗುರು ’ ಆಗಲಿರುವ ಆ ವ್ಯಕ್ತಿಗೆ, ಆತನ ಸಂದೇಶ ಪ್ರಸಾರಕ್ಕೆ ಸಮರ್ಪಿಸಿದ್ದಾನೆ. ಆಸ್ಟ್ರೇಲಿಯಾದ ಸಿಡ್ನಿಯಲ್ಲಿ ಆತನ ಸಂದೇಶ ಪ್ರಸಾರಕ್ಕೆಂದು ಬೇರೆಯದೇ ಆದ ಆಕಾಶವಾಣಿ ಪ್ರಸಾರ ನಿಲಯ ನಿರ್ಮಾಣಗೊಂಡಿದೆ. ಜಗತ್ತಿನ ಖ್ಯಾತ ಪತ್ರಿಕೆಗಳೆಲ್ಲ ಆತನ ಹೇಳಿಕೆಗಳನ್ನು ಪ್ರಸಿದ್ಧಿಸಲು ತಮ್ಮ ತಮ್ಮ ಪ್ರಮುಖ ವರದಿಗಾರರನ್ನೇ ಕಳುಹಿಸುವ ಪರಿಪಾಠವಿಟ್ಟುಕೊಂಡಿದ್ದಾರೆ. ಇದರ ಹೊರತಾಗಿ ಆತನ ಸಂದೇಶಪ್ರಸಾರಕ್ಕೆಂದೇ ಮೀಸಲಾಗಿಟ್ಟ ಹಲವಾರು ನಿಯತಕಾಲಿಕೆಗಳು, ಪತ್ರಿಕೆಗಳು ನಡೆಯುತ್ತಿವೆ. ‘ ವಿಶ್ವಗುರು ’ ಆಗಲಿರುವ ಆ ವ್ಯಕ್ತಿಯ ವಿದ್ಯಾಭ್ಯಾಸಕ್ಕೆ ಪ್ರತ್ಯೇಕವಾದ ವಿಶೇಷ ರೀತಿಯ ವ್ಯವಸ್ಥೆಯನ್ನು ಮಾಡಲಾಗಿದೆ. ಆತನ ಪಾಲಕಸ್ಥಾನದಲ್ಲಿರುವ ಶ್ರೀಮತಿ ಆ್ಯನಿ ಬೆಸೆಂಟ್ ಆತನಿಗೆ ಯಾವ ರೀತಿಯಲ್ಲೂ—ಭೌತಿಕ-ಸಾಂಪತ್ತಿಕ, ಶೈಕ್ಷಣಿಕ, ಅಧಿಕಾರಾತ್ಮಕ ಕೊರತೆ, ತೊಂದರೆಯಾಗದಂತೆ, ಕಾಳಜಿ ವಹಿಸಿದ್ದಾರೆ. ಥಿಯೊಸೊಫಿಕಲ್ ಸೊಸ್ಯಾಟಿಯವರು ಜಗತ್ತಿನಾದ್ಯಂತ ಇರುವ ತಮ್ಮ ಸಹಸ್ರಾರು ಶಾಖೆಗಳಲ್ಲಿ ಈ ‘ ವಿಶ್ವಗುರು ’ ಆಗಲಿರುವ ವ್ಯಕ್ತಿಯ ಭಾಷಣ ಕಾರ್ಯಕ್ರಮಗಳನ್ನು ಅನೇಕ ವರ್ಷಗಳಿಂದ ಏರ್ಪಡಿಸುತ್ತ ಬಂದಿದ್ದಾರೆ. ಆದ್ದರಿಂದ ಆ ವ್ಯಕ್ತಿ ಸದಾ ಜಗತ್ತಿನ ಒಂದು ಭಾಗದಿಂದ ಮತ್ತೊಂದು ಭಾಗದ ಕಡೆ, ಒಂದು ದೇಶದಿಂದ ಮತ್ತೊಂದು ದೇಶಕ್ಕೆ ಸಂಚರಿಸುತ್ತ, ಭಾಷಣ ಮಾಡುತ್ತ ಬಂದಿದ್ದಾನೆ. ಆತ ಇಲ್ಲಿಯ ವರೆಗೆ ಇವನ್ನೆಲ್ಲ ಪುಷ್ಟೀಕರಿಸುತ್ತಿರಲಿಲ್ಲ, ನಿರಾಕರಿಸುತ್ತಲೂ ಇರಲಿಲ್ಲ. ನಿರ್ಲಿಪ್ತನಾಗಿರುತ್ತಿದ್ದ.

ಆದರೆ ‘ ವಿಶ್ವಗುರು ’ ಆಗಲಿರುವ ಆ ವ್ಯಕ್ತಿಯ ಸಹೋದರ ೪ ವರ್ಷಗಳ ಹಿಂದೆ, ಹದಿವಯಸ್ಸಿನಲ್ಲಿರುವಾಗಲೇ ಮೃತನಾದದ್ದು ಆ ವ್ಯಕ್ತಿಗೆ ತೀವ್ರತಮ ಆಘಾತವಾಗಿದೆ. ಆತ ಖಿನ್ನನಾಗಿದ್ದಾನೆ; ಮೌನಿಯಾಗಿದ್ದಾನೆ; ಆಳವಾದ

ಚಿಂತನೆಯಲ್ಲಿ ಮಗ್ನನಾಗಿದ್ದಾನೆ. ಮೊದಲಿಗಿಂತ ತುಂಬ ಬದಲಾಗಿದ್ದಾನೆ; ತನ್ನನ್ನು ಕೇಂದ್ರಿಸಿ ಬೆಳೆದು ನಿಂತಿರುವ ಈ ಬೃಹತ್ ಸಂಘಟನೆಯನ್ನು ಈಗೀಗ ಪ್ರಶ್ನಿಸಲಾರಂಭಿಸಿದ್ದಾನೆ.

ಇದರಿಂದ ಆತಂಕಗೊಂಡಿದೆ–ಥಿಯೊಸೊಫಿಕಲ್ ಸೊಸ್ಯಾಟಿಯ ಲಕ್ಷಾವಧಿ ಸಂಖ್ಯೆಯ ಸದಸ್ಯರ ಸಮುದಾಯ. ತಮ್ಮ ಆತ್ಮೋದ್ಧಾರಕ್ಕೆಂದು 'ವಿಶ್ವಗುರು' ವಿನ ಮಾರ್ಗದರ್ಶನಕ್ಕೆ, ಸಂದೇಶಕ್ಕೆ ಕಾದು ಕುಳಿತವರಿಗೆ, ಒಳಗೊಳಗೆ ಕಳವಳ ಆರಂಭವಾಗಿದೆ. ಆದರೆ ಆತನ ಸಂಶಯ ಪ್ರಶ್ನೆಗಳೆಲ್ಲ ತಾತ್ಕಾಲಿಕ; ಸಹೋದರನ ಮರಣದ ದುಃಖ ಸೃಷ್ಟಿಸಿದ್ದು, ಅವೆಲ್ಲವೂ ಕಾಲಾನುಕ್ರಮದಲ್ಲಿ ಮರೆತು, ನಂತರ ಎಲ್ಲವೂ ಸುಗಮವಾಗಿ ಸಾಗೀತು ಎಂಬ ಆಸೆ; ಅಂಥ ವೈಭವೋ-ಪೇತ ವಿಶ್ವಗುರು ಪಟ್ಟವನ್ನು ಬಿಟ್ಟುಬಿಡಲಿಕ್ಕಿಲ್ಲ ಎಂಬ ವ್ಯಾವಹಾರಿಕ ವಿಶ್ವಾಸ, ಭವಿಷ್ಯವಾದಿಗಳ ಮಾತು ಹುಸಿಯಾಗಲಿಕ್ಕಿಲ್ಲ ಎಂಬ ಭರವಸೆ ಅವರಲ್ಲಿ ತುಂಬಿದೆ.

ಹೀಗೆ ಆತಂಕ, ಕಳವಳ, ಆಸೆ, ವಿಶ್ವಾಸ, ಕುತೂಹಲಗಳ ಸಮ್ಮಿಶ್ರ ಭಾವಗಳ ಸ್ಥಿತಿಯಲ್ಲಿರುವ ೩,೦೦೦ ಪ್ರತಿನಿಧಿಗಳು, ಸದಸ್ಯರು ಸಮಾವೇಶ–ಗೊಂಡ ಆ ಸಭೆಯಲ್ಲಿ, ವಿಶ್ವವಿಖ್ಯಾತಿಯ ಮಹಾನ್ ಮಹಿಳೆ ಶ್ರೀಮತಿ ಆ್ಯನಿ ಬೆಸೆಂಟ್ ಅವರ ಸಮ್ಮುಖದಲ್ಲಿ, ಸಾವಿರಾರು ಡಚ್ ಜನರು ತಮ್ಮ ತಮ್ಮ ಮನೆಯಲ್ಲಿ ರೇಡಿಯೋದ ಮುಂದೆ, ಆತನ ಮಾತನ್ನು ಕೇಳಲು ತವಕದಿಂದ ಕುಳಿತಿರುವ ಕಾಲದಲ್ಲಿ, ' ವಿಶ್ವಗುರು ' ಎಂದು ಪ್ರಸಿದ್ಧಗೊಂಡ, ೩೪ ವರ್ಷದ ಆ ನೀಳಕಾಯದ, ಆ ತೇಜಸ್ವೀ ವ್ಯಕ್ತಿ ತನ್ನ ಜೇನಿನ ಕಂಠದಿಂದ ಜಗತ್ತನ್ನೇ ಉದ್ದೇಶಿಸಿ ತನ್ನ ಹೃದ್ಗತವನ್ನು ಹೇಳಲಾರಂಭಿಸಿದ :

" ಈ ಮುಂಜಾನೆ ನಾವು, 'ಆರ್ಡರ್ ಆಫ್ ದಿ ಸ್ಟಾರ್ ಇನ್ ದಿ ಈಸ್ಟ್' ಇದನ್ನು ವಿಸರ್ಜಿಸುವುದರ ಬಗ್ಗೆ ಚರ್ಚಿಸಲಿದ್ದೇವೆ. ಇದರಿಂದ ಬಹಳ ಜನ ಸಂತೋಷಪಡಬಹುದು; ಕೆಲವರು ದುಃಖಿತರಾಗಬಹುದು. ಆದರೆ ಈ ಪ್ರಶ್ನೆ ಸಂತೋಷಪಡುವಂತಹದ್ದೂ ಅಲ್ಲ, ಖಿನ್ನವಾಗುವಂತಹದ್ದೂ ಅಲ್ಲ, ನಾನು ಮುಂದೆ ವಿವರಿಸುವ ಹಾಗೆ ಅನಿವಾರ್ಯವಾದದ್ದು. "

ಈ ಕತೆ ನೀವು ಕೇಳಿರಬಹುದು. ಅದು ಒಂದು ಪಿಶಾಚಿ ಹಾಗು ಅವನ ಸ್ನೇಹಿತನ ಕಥೆ; ಅವರಿಬ್ಬರೂ ಒಮ್ಮೆ ರಸ್ತೆಯಲ್ಲಿ ಹೋಗುತ್ತಿದ್ದಾಗ ತೊಂದರೆಯಾಗದಂತೆ ಕಾಳಜಿ ವಹಿಸಿದ್ದಾರೆ. ವಿಶ್ವಗುರು ಆಗಲಿರುವ ವ್ಯಕ್ತಿ ಮಾತ್ರ ಈ ಎಲ್ಲ ವಿದ್ಯಮಾನಗಳಿಗೆ ನಿರ್ಲಿಪ್ತನಾಗಿದ್ದಾನೆ. ಆತ ಇವನ್ನೆಲ್ಲ, ಪುಷ್ಟೀಕರಿಸುತ್ತಲೂ ಇಲ್ಲ, ನಿರಾಕರಿಸಲೂ ಇಲ್ಲ. ಸದಾಕಾಲ ಅಭಿಮಾನಿಗಳು ಅವರಿಗಿಂತ ಸ್ವಲ್ಪ ಮುಂದೆ ಹೋಗುತ್ತಿದ್ದ ಒಬ್ಬ ಮನುಷ್ಯ ಬಾಗಿ, ನೆಲದಲ್ಲಿ ಬಿದ್ದಿದ್ದ ಏನನ್ನೋ ಹೆಕ್ಕಿಕೊಂಡು, ದಿಟ್ಟಿಸಿ ನೋಡಿ, ಕಿಸೆಯಲ್ಲಿ ಹಾಕಿಕೊಂಡ. ಪಿಶಾಚಿಯ ಸ್ನೇಹಿತ ಪಿಶಾಚಿಯನ್ನು " ಆ ಮನುಷ್ಯ ಹೆಕ್ಕಿಕೊಂಡು ಕಿಸೆಯಲ್ಲಿ ಇಟ್ಟುಕೊಂಡಿದ್ದೇನು? " ಎಂದು ಕೇಳಿದ. " ಆತ ಸತ್ಯದ ಒಂದು ತುಣುಕನ್ನು ಹೆಕ್ಕಿಕೊಂಡ " ಎಂದು ಪಿಶಾಚಿ ಉತ್ತರಿಸಿತು. " ಹಾಗಾದರೆ ಇದರಿಂದ ನಿನಗೆ ತುಂಬ ತೊಂದರೆ ಆಗಬಹುದಲ್ಲವೆ? ಎಂದು ಪಿಶಾಚಿಯ ಮಿತ್ರ ಪಿಶಾಚಿಯನ್ನು ಪ್ರಶ್ನಿಸಿದ್ದಕ್ಕೆ, "ಓ ಹಾಗೇನಿಲ್ಲ. ಆ ಸತ್ಯವನ್ನು ಆತ ಸಂಘಟಿಸುವಂತೆ ಮಾಡುತ್ತೇನೆ" ಎಂದು ನಿರಾಳವಾಗಿ ಉತ್ತರಿಸಿತು !

ಸತ್ಯ ಒಂದು ನಿಶ್ಚಿತ ದಾರಿ ಇಲ್ಲದಂಥ ನೆಲೆ. ಆ ನೆಲೆಯನ್ನು ಯಾವುದೇ ಧರ್ಮ, ಸಿದ್ಧಾಂತ ಇತ್ಯಾದಿ ಯಾವ ದಾರಿಗಳ ಮೂಲಕವೂ ತಲುಪಲು ಸಾಧ್ಯವಿಲ್ಲ ಎನ್ನುವುದನ್ನು ನಾನು ಪ್ರತಿಪಾದಿಸುತ್ತೇನೆ. ಇದು ನನ್ನ ದೃಷ್ಟಿಕೋನ. ಇದಕ್ಕೆ ಯಾವ ನಿರ್ಬಂಧವಿಲ್ಲದೇ ನಾನು ಬದ್ಧನಾಗಿದ್ದೇನೆ. ಸತ್ಯ ಅಪಾರವೂ, ಅನಿರ್ಬಂಧಿತವೂ ಯಾವುದೇ ನಿಶ್ಚಿತ ದಾರಿಯಿಂದ ತಲುಪಲು ಅಸಾಧ್ಯವೂ ಆದ್ದರಿಂದ ಅದನ್ನು ಸಂಘಟಿಸುವುದು ಅಶಕ್ಯ; ಅದೇ ತರಹ ಯಾವುದೋ ಒಂದು ವಿಶಿಷ್ಟರೀತಿಯಲ್ಲಿ ಜನರೆಲ್ಲರೂ ಹೋಗುವಂತೆ ಕಡ್ಡಾಯಗೊಳಿಸುವುದಕ್ಕೆ, ಅವರನ್ನು ಮುಂದುವರಿಸಿಕೊಂಡು ಹೋಗುವದಕ್ಕೆ ಯಾವುದೇ ಸಂಘಟನೆಯನ್ನೂ ಮಾಡಬಾರದು.

ಇದನ್ನು ನೀವು ಮೊದಲು ಅರ್ಥ ಮಾಡಿಕೊಂಡರೆ, ಒಂದು ನಂಬಿಕೆಯನ್ನು ಸಂಘಟಿಸುವುದು ಎಷ್ಟು ಅಸಾಧ್ಯವಾದದ್ದು ಎನ್ನುವುದನ್ನು ನೀವೇ ಕಾಣಬಲ್ಲಿರಿ. ನಂಬಿಕೆ ಸಂಪೂರ್ಣವಾಗಿ ಒಬ್ಬನ ವೈಯಕ್ತಿಕ ವಿಷಯ; ಅದನ್ನು ನೀವು ಸಂಘಟಿಸಲಾರಿರಿ, ಸಂಘಟಿಸಲೂ ಕೂಡದು; ಅಕಸ್ಮಾತ್ ಹಾಗೆ

ಮಾಡಿದರೆ ಸತ್ಯ ಸಾಯುತ್ತದೆ; ಹರಳುಗಟ್ಟುತ್ತದೆ. ಒಂದು ಪಂಥವೋ, ಸಿದ್ಧಾಂತವೋ, ಧರ್ಮವೋ ಆಗಿ ಇನ್ನೊಬ್ಬನ ಮೇಲೆ ಹೇರಲ್ಪಡುವ ವಸ್ತು-ವಾಗಿಬಿಡುತ್ತದೆ. ಇದನ್ನೇ ಜಗತ್ತಿನಲ್ಲಿ ಪ್ರತಿಯೊಬ್ಬನೂ ಮಾಡಲು ಪ್ರಯತ್ನ ಪಡುತ್ತಿರುವುದು. ಸತ್ಯವನ್ನು ಸಂಕುಚಿತಗೊಳಿಸಿ ಗೊಳಿಸಿ, ದುರ್ಬಲರಾದವರಿಗೆ, ತಾತ್ಕಾಲಿಕವಾಗಿ ತೃಪ್ತಿಯನ್ನು ಇಚ್ಛಿಸುವವರಿಗೆ ಆಡಲು ಕೊಡುವ ಆಟಿಗೆ-ಯಾಗಿಬಿಟ್ಟದೆ ಸತ್ಯ. ಸತ್ಯವನ್ನು ಕೆಳಕ್ಕೆ ತರುವುದು ಶಕ್ಯವಿಲ್ಲ; ವ್ಯಕ್ತಿಯೇ ಪ್ರಯತ್ನಪಟ್ಟು ಸತ್ಯದ ಎತ್ತರಕ್ಕೆ ಏರಬೇಕು. ಪರ್ವತದ ಉತ್ತುಂಗ ಶೃಂಗವನ್ನು ಕಣಿವೆಯ ಬುಡಕ್ಕೆ ತರುವುದು ಅಸತ್ಯವಷ್ಟೇ. ಪರ್ವತ ಶೃಂಗ-ವನ್ನು ತಲುಪಬೇಕೆಂದಿದ್ದರೆ, ಕಣಿವೆ ದಾಟಿ, ಕಡಿದಾದ ಮಾರ್ಗಗಳಲ್ಲಿ ಹತ್ತಿ ಇಳಿದು, ಅಪಾಯಕಾರಿ ಪ್ರಪಾತಗಳಿಗೆ ಅಂಜದೆ, ಅಳುಕದೆ ದಾರಿ ಕ್ರಮಿಸ ಬೇಕು. ಸತ್ಯದತ್ತ ನೀವು ಏರಬೇಕು. ನಿಮಗಾಗಿ ಅದನ್ನು ಸಂಘಟಿಸಲೂ-ಬಾರದು. ಹಂತ-ಹಂತವಾಗಿ ಕೆಳಗಿಳಿಯಲೂಬಾರದು. ವಿಚಾರಗಳಲ್ಲಿಯ ಆಸಕ್ತಿ ಮಾತ್ರ ಇಂಥ ಸಂಘಟನೆಯಿಂದ ಸಂರಕ್ಷಿಸಲ್ಪಟ್ಟಿದೆ. ಆದರೆ ಸಂಘ-ಟನೆಗಳು ಹೊರಗಿನಿಂದ ಮಾತ್ರ ಆಸಕ್ತಿಯನ್ನು ಜಾಗ್ರತಗೊಳಿಸಬಲ್ಲವು. ಸತ್ಯಕ್ಕಾಗಿ ಇರುವ ಸತ್ಯದ ಪ್ರೇಮದಿಂದ ಜನ್ಮ ತಾಳಿರದ, ಆದರೆ ಸಂಘಟ-ನೆಯಿಂದ ಎಚ್ಚರಗೊಳಿಸಲ್ಪಟ್ಟಂಥ ಆಸಕ್ತಿಗೆ ಯಾವ ಬೆಲೆಯೂ ಇಲ್ಲ. ಸಂಘಟನೆ, ಅದರ ಸದಸ್ಯರೆಲ್ಲರೂ ಸುಗಮವಾಗಿ ಹೊಂದುವ ಹಾಗೆ ಮಾಡ-ಲ್ಪಟ್ಟ ಚೌಕಟ್ಟಾಗಿಬಿಡುತ್ತದೆ. ಸತ್ಯಕ್ಕಾಗಿ, ಪರ್ವತದ ಉತ್ತುಂಗ ಶೃಂಗ-ಕ್ಕಾಗಿ ಅವರು ಹೆಣಗಾಡದೆ ತಾವು ಇಟ್ಟುಕೊಂಡು, ಅನುಕೂಲಕರವಾಗಿ ಇರುವ ಮಾಡುಗೂಡಿಗಾಗಿ ಆಶಿಸುತ್ತ ಅಥವಾ ಆ ಸಂಘಟನೆಯೇ ತಮ್ಮನ್ನು ಹಾಗೆ ಅಂಥಲ್ಲಿ ಇಡಬೇಕೆಂದು ಬಯಸುತ್ತ, ತನ್ಮೂಲಕ ಸಂಘಟನೆ ತಮ್ಮನ್ನು ಸತ್ಯಕ್ಕೆ ಕೊಂಡೊಯ್ಯುತ್ತದೆ ಎಂದು ಭಾವಿಸುತ್ತ ಉಳಿದುಬಿಡುತ್ತಾರೆ.

ಆದ್ದರಿಂದ ಆರ್ಡರ್ ಆಫ್ ಸ್ಟಾರ್‌ನ್ನು ಯಾಕೆ ವಿಸರ್ಜಿಸಬೇಕು ಎನ್ನುವುದಕ್ಕೆ ಇದು ನನ್ನ ದೃಷ್ಟಿಯಿಂದ ಮೊದಲ ಕಾರಣ. ಹೀಗಿದ್ದರೂ, ಬೇರೆ ಬಗೆಯ ಆರ್ಡರ್‌ನ್ನು ನೀವು ಸೃಜಿಸಿಕೊಳ್ಳಬಹುದು, ಸತ್ಯಕ್ಕಾಗಿ ಹುಡುಕಾಟ ನಡೆಸುತ್ತಿರುವ ಇನ್ನಿತರ ವ್ಯವಸ್ಥೆಗೆ ನೀವು ಸೇರಿಕೊಂಡು ಮುಂದುವರಿಯಬಹುದು. ಆಧ್ಯಾತ್ಮಿಕ ಸ್ವರೂಪದ ಯಾವುದೇ ಸಂಘಟನೆಗೂ

ನಾನು ಸೇರಲು ಬಯಸುವುದಿಲ್ಲ. ದಯವಿಟ್ಟು ಇದನ್ನು ಅರ್ಥಮಾಡಿಕೊಳ್ಳಿ; ನನ್ನನ್ನು ಇಲ್ಲಿಂದ ಲಂಡನ್‌ಗೆ ಕೊಂಡೊಯ್ಯುವ ವ್ಯವಸ್ಥೆಯನ್ನು ನಾನು ಉಪಯೋಗಿಸಿಕೊಳ್ಳಬಹುದು. ಅದು ಬೇರೆ ಬಗೆಯ ವ್ಯವಸ್ಥೆ; ಕೇವಲ ಯಾಂತ್ರಿಕವಾದದ್ದು — ಅಂಚೆ ಮತ್ತು ತಂತಿ ಇಲಾಖೆಯ ವ್ಯವಸ್ಥೆಯ ಹಾಗೆ. ಮೋಟರ್-ಕಾರ್ ಅಥವಾ ಉಗಿಹಡಗವನ್ನು ನಾನು ಉಪಯೋಗಿಸಿಕೊಳ್ಳ-ಬಹುದು. ಇವೆಲ್ಲ ಕೇವಲ ಭೌತಿಕ ಯಂತ್ರಸಾಧನಗಳು. ಅಧ್ಯಾತ್ಮ-ದೊಂದಿಗೆ ಏನೂ ಸಂಬಂಧವಿಲ್ಲದಂಥವುಗಳು. ಪುನಃ ನಾನು ಮತ್ತೊಮ್ಮೆ ಹೇಳುತ್ತೇನೆ : ಮನುಷ್ಯನನ್ನು ಯಾವ ಸಂಘಟನೆಯೂ ಅಧ್ಯಾತ್ಮಕ್ಕೆ ಒಯ್ಯದು.

ಅಂಥ ಉದ್ದೇಶಕ್ಕಾಗಿ ಒಂದು ಸಂಘಟನೆಯನ್ನು ಸೃಷ್ಟಿಸಿದರೆ, ಅದು ಊರುಗೋಲಾಗಿಬಿಡುತ್ತದೆ, ದೌರ್ಬಲ್ಯವಾಗಿಬಿಡುತ್ತದೆ, ಬಂಧನವಾಗಿ ಪರಿ-ಣಮಿಸುತ್ತದೆ; ಮತ್ತು ಅನಿವಾರ್ಯವಾಗಿ ವ್ಯಕ್ತಿತ್ವವನ್ನು ವಿಕೃತಗೊಳಿಸಿ, ಆತ ಬೆಳೆಯುವುದನ್ನು, ತನ್ನ ಅನನ್ಯತೆಯನ್ನು ಸ್ಥಾಪಿಸುವುದನ್ನು ಅಡ್ಡಿ-ಪಡಿಸುತ್ತದೆ. ಬೆಳವಣಿಗೆಯ ಮೂಲಕ ಉಂಟಾಗುವ ಈ ಅನನ್ಯತೆಯ ಸ್ಥಾಪನೆ, ಆತ ಆ ಅನಿರ್ಬಂಧಿತವಾದ ನಿರಪೇಕ್ಷವಾದ ಸತ್ಯವನ್ನು ಕಂಡು-ಕೊಳ್ಳುವುದರಲ್ಲಿದೆ. ಇದು ಮತ್ತೊಂದು ಕಾರಣ : ಈ ಆರ್ಡರ್ ಆಫ್ ಸ್ಟಾರ್‌ದ ಮುಖ್ಯಸ್ಥನಾಗಿ ನಾನದನ್ನು ವಿಸರ್ಜಿಸುವುದಕ್ಕೆ; ಯಾರೂ ನನ್ನನ್ನು ಈ ತೀರ್ಮಾನಕ್ಕೆ ಬರುವಂತೆ ಮನ ಒಲಿಸಲಿಲ್ಲ.

ಇದೇನೂ ಅಂಥ ' ಮಹಾ ' ಕೆಲಸ ಅಲ್ಲ, ನನಗೆ ಯಾರೂ ಹಿಂಬಾಲ-ಕರು ಎನ್ನುವವರು ಬೇಕಿಲ್ಲ ಎನ್ನುವುದೇ ಇದರ ಅರ್ಥ. ಯಾವನನ್ನಾದರೂ ನೀವು ಅನುಸರಿಸಿದ ಕ್ಷಣದಲ್ಲೇ ಸತ್ಯವನ್ನು ಹಿಂಬಾಲಿಸುವುದನ್ನು ನೀವು ಬಿಟ್ಟುಬಿಡುತ್ತೀರಿ. ನಾನು ಹೇಳುತ್ತಿರುವುದರ ಬಗ್ಗೆ ನೀವು ಲಕ್ಷ್ಯ ಕೊಡು-ತ್ತೀರೋ ಇಲ್ಲವೋ ಎನ್ನುವದರ ಬಗ್ಗೆ ನನಗೆ ಕಾಳಜಿ ಇಲ್ಲ; ಈ ಜಗತ್ತಿನಲ್ಲಿ ನನಗೆ ಕೆಲವು ಕಾರ್ಯ ಮಾಡಬೇಕಾಗಿದೆ. ಅವಿಚಲನಾಗದೇ, ಸಂಪೂರ್ಣ ಏಕಾಗ್ರತೆಯಿಂದ ಅದನ್ನು ನಾನು ಮಾಡಲಿದ್ದೇನೆ. ಮನುಷ್ಯನನ್ನು ' ಬಿಡುಗಡೆ ' ಗೊಳಿಸುವ, ' ಸ್ವತಂತ್ರ ' ಗೊಳಿಸುವ ಒಂದೇ ಒಂದು ಮೂಲ-

ಭೂತ ಕೆಲಸ ನನ್ನ ಕಾಳಜಿ. ಎಲ್ಲ ಬಗೆಯ ಪಂಜರಗಳಿಂದಲೂ, ಭಯಗಳಿಂದಲೂ ಆತನನ್ನು ಬಿಡುಗಡೆಗೊಳಿಸಬೇಕೆಂಬ ದು ನನ್ನ ಆಸೆಯೇ ಹೊರತು, ಹೊಸ ಧರ್ಮದ ಅಥವಾ ಮತದ ಸ್ಥಾಪನೆ ಅಲ್ಲ. ಹೊಸ ಸಿದ್ಧಾಂತದ ಮತ್ತು ಹೊಸ ತತ್ತ್ವಜ್ಞಾನದ ಪ್ರತಿಷ್ಠಾಪನೆಯೂ ಅಲ್ಲ. ಹಾಗಿದ್ದಲ್ಲಿ ಸದಾ ಸಂಭಾಷಣೆ ನಡೆಸುತ್ತ ನಾನು ವಿಶ್ವದಾದ್ಯಂತ ಸಂಚಾರ ಮಾಡುವುದು ಏಕೆ ಎನ್ನುವ ನಿಮ್ಮ ಪ್ರಶ್ನೆ ಸಹಜವಾದದ್ದೇ. ಅದಕ್ಕೆ ಕಾರಣ ನಾನು ಹೇಳುತ್ತೇನೆ : ನನಗೆ ಹಿಂಬಾಲಕರು ಬೇಕಂತ ಅಲ್ಲ, ವಿಶಿಷ್ಟ ಶಿಷ್ಯರ ವಿಶಿಷ್ಟ ಗುಂಪು ಬೇಕೆಂದೂ ಅಲ್ಲ. [ಎಷ್ಟೇ ಅಪಹಾಸ್ಯಕರವಾಗಿರಲಿ, ಅಸಂಗತವಾಗಿರಲಿ, ಕ್ಷುಲ್ಲಕವಾಗಿರಲಿ ಅವರ ಭಿನ್ನತೆ— ತಾವು ಇತರರಿಗಿಂತ ಬೇರೆಯಾಗಿರಲೇಬೇಕೆಂಬುದನ್ನು ಎಷ್ಟು ಉತ್ಕಟವಾಗಿ ಜನ ಪ್ರೀತಿಸುತ್ತಾರೆ ! ಈ ಅಸಂಗತತೆಯನ್ನು ಪ್ರೋತ್ಸಾಹಿಸಲು ನಾನು ಇಚ್ಛಿಸುವುದಿಲ್ಲ !]. ನನಗೆ ಯಾರೂ ಶಿಷ್ಯರಿಲ್ಲ, ಧರ್ಮ ಪ್ರಸಾರಕ-ರಿಲ್ಲ— ಈ ಭೂಮಿಯ ಮೇಲೂ ಇಲ್ಲ, ಆಧ್ಯಾತ್ಮಿಕ ಪ್ರಪಂಚದಲ್ಲೂ ಇಲ್ಲ; ವೈಭವದ ಬದುಕು ಬಾಳುವ ಇಚ್ಛೆಯೂ ನನ್ನನ್ನು ಆಕರ್ಷಿಸುತ್ತಿಲ್ಲ ಹಣದ ಆಮಿಷವೂ ಇಲ್ಲ; ಸುಖಕರವಾದ ಬದುಕೇ ನನ್ನ ಇಚ್ಛೆಯಾಗಿದ್ದರೆ ಈ ಶಿಬಿರಕ್ಕೆ ಬರುವುದೇ ಇಲ್ಲವಾಗಿತ್ತು; ಈ ಥಂಡಿಯ ಊರಲ್ಲಿ ಇರುವುದೂ ಇಲ್ಲವಾಗಿತ್ತು. ನಾನು ಪ್ರಾಮಾಣಿಕವಾಗಿ, ಬಿಚ್ಚುಮನಸ್ಸಿನಿಂದ ಹೇಳು-ತ್ತೇನೆ : ನನಗೆ ಇವನ್ನೆಲ್ಲ ಶಾಶ್ವತವಾಗಿ ಒಂದು ಸಾರಿ ಇತ್ಯರ್ಥಗೊಳಿಸ-ಬೇಕಾಗಿತ್ತು. ವರ್ಷ-ವರ್ಷವೂ ಈ ಬಾಲಿಶ ಚರ್ಚೆ ನನಗೆ ಬೇಕಾಗಿಲ್ಲ.

ನನ್ನನ್ನು ಸಂದರ್ಶಿಸಿದ ಒಬ್ಬ ಪತ್ರಿಕಾ ವರದಿಗಾರರು ನನ್ನ ಈ ಕೆಲಸ-ಸಹಸ್ರ-ಸಹಸ್ರ ಸಂಖ್ಯೆಯಲ್ಲಿ ಸದಸ್ಯರಿರುವ ಈ ಸಂಸ್ಥೆಯ ವಿಸರ್ಜನೆ— ನಿಜಕ್ಕೂ ಒಂದು ಮಹಾನ್ ಕಾರ್ಯ ಎಂದು ಪರಿಗಣಿಸಿದರು. “ ನಾನು ಮುಂದೇನು ಮಾಡುತ್ತೇನೆ ? ಹೇಗೆ ಬದುಕುತ್ತೇನೆ ? ನನಗೆ ಯಾರೂ ಹಿಂಬಾಲಕರು ಇರುವದಿಲ್ಲವಲ್ಲ. ನನ್ನನ್ನು ಕೇಳುವವರೇ ಇರುವುದಿಲ್ಲವಲ್ಲ ” ಎಂದವರು ಪ್ರಶ್ನಿಸಿದರು. ಕೇಳುವಂಥವರು, ಕೇಳಿದ್ದನ್ನು ಅರಿತು ಬದುಕು-ವಂಥವರು, ಸದಾ ಚಿರಂತನವಾದುದರ ಕಡೆಗೆ ಮುಖ ಮಾಡಿರುವಂಥವರು, ಕೇವಲ ಐದೇ ಜನರಿರಲಿ, ಅಷ್ಟೇ ಸಾಕು. ಅರಿಯಲಾರದಂಥವರು, ತಮ್ಮ ತಮ್ಮ ಪೂರ್ವಗ್ರಹದಲ್ಲೇ ಮುಳುಗಿರುವವರು, ಹೊಸದನ್ನು ಇಚ್ಛಿಸದೇ,

ಹೊಸದನ್ನೂ ತಮ್ಮ ನಿಶ್ಚಲವೂ, ನಿರ್ಜೀವವೂ ಆದ ವ್ಯಕ್ತಿತ್ವಗಳಿಗೆ ಬೇಕಾದ ಹಾಗೇ ಅನುವಾದಿಸುವಂಥವರು ಸಹಸ್ರ–ಸಹಸ್ರ ಸಂಖ್ಯೆಯಲ್ಲಿದ್ದರೇನು ಪ್ರಯೋಜನ? ನಾನು ಸ್ವಲ್ಪ ಕಟುವಾಗಿ ಮಾತನಾಡಿದರೆ, ದಯವಿಟ್ಟು ತಪ್ಪು ತಿಳಿಯಬೇಡಿ; ನಿಮ್ಮ ಬಗ್ಗೆ ಅನುಕಂಪನೇ ಇಲ್ಲ ಎಂದು ಭಾವಿಸಬೇಡಿ. ನೀವು ಆಪರೇಶನ್ನಿಗಾಗಿ ಒಬ್ಬ ಶಸ್ತ್ರಚಿಕಿತ್ಸಕನ ಬಳಿಗೆ ಹೋದರೆ ಆಪರೇಶನ್ ಮಾಡುವಾಗ ನಿಮಗೆ ನೋವನ್ನುಂಟುಮಾಡಿದರೂ ಆತ ದಯೆಯಿಂದಲೇ ವರ್ತಿಸುತ್ತಿರುತ್ತಾನೆ; ಅಲ್ಲವೆ? ಅದೇ ತರಹ ನಾನು ನೇರವಾಗಿ ಮಾತನಾಡು–ತ್ತಿರುವುದಕ್ಕೆ ಅನುಕಂಪದ ಅಭಾವ ಕಾರಣವಿಲ್ಲ; ಅದರ ತದ್ವಿರುದ್ಧ–(ಅನುಕಂಪ ಭರಿತನಾಗಿರುವುದು.)

ನಾನು ಈಗಾಗಲೇ ಹೇಳಿರುವಂತೆ ನನಗಿರುವುದು ಒಂದೇ ಒಂದು ಗುರಿ: ಮನುಷ್ಯನನ್ನು ಮುಕ್ತಗೊಳಿಸುವುದು. ಬಿಡುಗಡೆಯತ್ತ ಹೋಗುವಂತೆ ಒತ್ತಾಯಿಸುವುದು; ಎಲ್ಲ ಬಗೆಯ ಮಿತಿ–ಪರಿಮಿತಿಗಳನ್ನು ಮುರಿದು ಮುಂದೆ ಹೋಗುವಲ್ಲಿ ಸಹಾಯ ನೀಡುವುದು. ಯಾಕೆಂದರೆ ಅದು ಮಾತ್ರ ಅವನಿಗೆ ಚಿರಂತನವಾದ ಆನಂದ ನೀಡಬಲ್ಲದು; ಆತ್ಮದ ಅನಿರ್ಬಂಧಿತವಾದ ಸಾಕ್ಷಾತ್ಕಾರ ಕೊಡಬಲ್ಲದು.

ಯಾಕೆಂದರೆ ನಾನು ಮುಕ್ತ; ಅನಿರ್ಬಂಧಿತ. ಸಮಗ್ರ— ಅಂಶನಲ್ಲ, ಸಾಕ್ಷೇಪನಲ್ಲ; ಆದರೆ ಚಿರಂತನವಾದ ಸಮಗ್ರ ಸತ್ಯ. ಆದ್ದರಿಂದ ನನ್ನನ್ನು ಅರಿಯಬಯಸುವವರು ನನ್ನಂತೆ ಮುಕ್ತರಾಗಿರಬೇಕೆಂಬುದೇ ನನ್ನ ಇಚ್ಛೆ. ನನ್ನನ್ನು ಹಿಂಬಾಲಿಸುವದಲ್ಲ, ನನ್ನಿಂದಲೇ ಒಂದು ಪಂಜರ ಮಾಡಿ, ತನ್ಮೂಲಕ ಒಂದು ಧರ್ಮವನ್ನು, ಸಿದ್ಧಾಂತವನ್ನು ಸ್ಥಾಪಿಸುವದಲ್ಲ. ಅವರು ಎಲ್ಲ ಬಗೆಯ ಭಯ— ಧರ್ಮದ ಭಯ, ಮೋಕ್ಷದ ಭಯ. ಆಧ್ಯಾತ್ಮದ ಭಯ, ಪ್ರೇಮದ ಭಯ. ಸಾವಿನ ಭಯ, ಬದುಕಿನ ಭಯಗಳಿಂದಲೂ ಬಿಡುಗಡೆ ಪಡೆದರೆ ಒಳಿತು. ಚಿತ್ರ ಬಿಡಿಸುವುದರಲ್ಲಿ ತನಗೆ ಆನಂದ ಸಿಗುತ್ತದೆ; ಯಾಕೆಂದರೆ ಅಲ್ಲಿ ತನ್ನ ವ್ಯಕ್ತಿತ್ವದ ದಿವ್ಯತೆಯ, ಸುಭಗತೆಯ ಅಭಿವ್ಯಕ್ತಿ ಇದೆ ಎಂದು ಕಲಾವಿದನೊಬ್ಬ ಚಿತ್ರ ಬಿಡಿಸುವಂತೆಯೇ, ನಾನು ಈ ಕೆಲಸ ಮಾಡುತ್ತಿ–ದ್ದೇನೆ; ಹೊರತು ಯಾರಿಂದಲೋ ಏನನ್ನೋ ಪಡೆಯುವ ಸಲುವಾಗಿ ಖಂಡಿತ ಹೀಗೆ ಮಾಡುತ್ತಿಲ್ಲ.

ನೀವು ಅಧಿಕಾರ-ಸತ್ತೆಗೆ ಅಥವಾ ಅಂಥದೇ ವಾತಾವರಣಕ್ಕೆ ಹೊಂದಿಕೊಂಡಿದ್ದೀರಿ. ಅದು ನಿಮ್ಮನ್ನು ಅಧ್ಯಾತ್ಮಕ್ಕೆ ಒಯ್ಯುತ್ತದೆ ಎಂಬ ವಿಚಾರ ನಿಮ್ಮದು. ಇನ್ನೊಬ್ಬ ತನ್ನ ಅಸಾಮಾನ್ಯವಾದ ಶಕ್ತಿಯ ಮೂಲಕ—ಪವಾಡದ ಮೂಲಕ-ನಿಮ್ಮನ್ನು ಆನಂದ ಎನ್ನುವಂಥ ಶಾಶ್ವತವಾದ ಬಿಡುಗಡೆಯ ಸಾಮ್ರಾಜ್ಯಕ್ಕೆ ಕೊಂಡೊಯ್ಯುತ್ತಾನೆ— ಎಂದು ಭಾವಿಸುತ್ತೀರಿ, ಆಶಿಸುತ್ತೀರಿ. ಅಂಥ ಅಧಿಕಾರ-ಸತ್ತೆಗಳ ಮೇಲೆಯೇ ನಿಂತುಕೊಂಡಿದೆ ನಿಮ್ಮ ಸಮಸ್ತ ದೃಷ್ಟಿಕೋನ.

ಮೂರು ವರ್ಷಗಳಿಂದ ನನ್ನನ್ನು ಕೇಳುತ್ತಲೇ ಬಂದಿದ್ದೀರಿ. ಅಪವಾದವೆಂಬಂತೆ ಕೆಲವರನ್ನು ಬಿಟ್ಟರೆ ನಿಮ್ಮಲ್ಲಿ ಯಾವ ಬದಲಾವಣೆಯೂ ಆಗಿಲ್ಲ. ನಾನು ಈಗ ಹೇಳುವುದನ್ನು ವಿಶ್ಲೇಷಿಸಿ, ಮೂಲಭೂತವಾಗಿ, ಸಮಗ್ರವಾಗಿ ಅರಿಯಲು ವಿಮರ್ಶಕದೃಷ್ಟಿಯಿಂದ ನೋಡಿ ನಿಮ್ಮನ್ನು ಆಧ್ಯಾತ್ಮಿಕವಾಗಿ ಮುಂದೆ ಕರೆದುಕೊಂಡು ಹೋಗುವಂಥ ಅಧಿಕಾರ—ಸತ್ತೆಯನ್ನು ಎದುರು ನೋಡುತ್ತಿರುವಾಗ, ಆ ಅಧಿಕಾರ-ಸತ್ತೆಯ ಸುತ್ತ ಸಂಘಟನೆಯನ್ನು ಸ್ವತಃ ನೀವೇ ಸೃಷ್ಟಿಸಬೇಕಾಗುತ್ತದೆ. ಆ ಸಂಘಟನೆಯನ್ನು ಸೃಷ್ಟಿಸುವುದರಲ್ಲಿಯೇ ನೀವು ಒಂದು ಪಂಜರದಲ್ಲಿ ಬಂಧಿತರಾಗಿಬಿಡುತ್ತೀರಿ.

ನಾನು ನಿರ್ಭಿಡೆಯಿಂದ ಮಾತನಾಡಿದರೆ, ನಾನು ಒರಟುತನದಿಂದ, ಕ್ರೌರ್ಯದಿಂದ, ನನ್ನ ಗುರಿಯ ಬಗೆಗಿನ ಅತ್ಯುತ್ಸಾಹದಿಂದ ಹಾಗೆ ಮಾತಾಡುತ್ತಿದ್ದೇನೆ ಎಂದು ದಯವಿಟ್ಟು ಭಾವಿಸಬೇಡಿ. ಬದಲಾಗಿ ನೀವು, ನಾನು ಹೇಳುವುದನ್ನು ಅರಿಯಬೇಕೆಂಬ ಕಳಕಳಿಯಿಂದ ಎನ್ನುವುದನ್ನು ಅರ್ಥಮಾಡಿಕೊಳ್ಳಿ. ಅದಕ್ಕಾಗಿಯೇ ನಾನು ನನ್ನ ದೃಷ್ಟಿಕೋನವನ್ನು ಇಲ್ಲಿ ಸೇರಿರುವ ನಿಮ್ಮೆದುರು ನಿರ್ಣಾಯಕವಾಗಿ, ಸ್ಪಷ್ಟವಾಗಿ ವಿಶದೀಕರಿಸದಿದ್ದರೆ ಎಲ್ಲವೂ ವ್ಯರ್ಥ.

ಹದಿನೆಂಟು ವರ್ಷಗಳಿಂದ ನೀವು ' ವಿಶ್ವಗುರು ' ವಿನ ಆಗಮನಕ್ಕೆ ಸಿದ್ಧತೆ ಮಾಡುತ್ತಿದ್ದೀರಿ. ಹದಿನೆಂಟು ವರ್ಷಗಳ ಕಾಲ ಸಂಘಟನೆ ನಡೆಸಿದ್ದೀರಿ. ನಿಮ್ಮ ಹೃದಯ-ಮನಸ್ಸುಗಳಿಗೆ ಆನಂದ ನೀಡುವವನನ್ನು, ನಿಮ್ಮ ಸಂಪೂರ್ಣ ಬದುಕನ್ನೇ ಮಾರ್ಪಡಿಸುವವನನ್ನು, ಹೊಸ ಬಗೆಯ ಅರಿವನ್ನು ನೀಡುವಂಥವನನ್ನು, ನಿಮ್ಮನ್ನು ಬದುಕಿನ ಬೇರೆಯದೇ ಆದ ಸ್ತರಕ್ಕೆ ಎತ್ತರಿಸುವವನನ್ನು, ಹೊಸ ಧೈರ್ಯವನ್ನು ನೀಡುವಂಥವನನ್ನು, ನಿಮ್ಮನ್ನು ಮುಕ್ತಗೊಳಿಸುವವ-

ನನ್ನ—ಎದುರು ನೋಡುತ್ತಿದ್ದೀರಿ. ಈಗ ನೋಡಿ, ಏನಾಗುತ್ತಿದೆ? ಇದಕ್ಕೆ ಕಾರಣಗಳನ್ನು ನಿಮ್ಮಷ್ಟಕ್ಕೆ ನೀವೇ ವಿವೇಚಿಸಿ ಕಂಡುಕೊಳ್ಳಿ. ಆ ಬಗೆಯ ನಂಬಿಕೆ ಬ್ಯಾಚ್ ಧರಿಸುವಂಥ ಅತ್ಯಂತ ಅಸಂಗತವಾದ ಬಾಹ್ಯ ಬದಲಾವಣೆಯ ಹೊರತಾಗಿ ಯಾವ ರೀತಿಯಲ್ಲಿ ನಿಮ್ಮನ್ನು ಭಿನ್ನರನ್ನಾಗಿ ಮಾಡಿದೆ? ಆ ನಂಬಿಕೆ ಯಾವ ಬಗೆಯಲ್ಲಿ ಬದುಕಿನ ಅನಗತ್ಯ ಸಂಗತಿಗಳನ್ನು ತೊಡೆದು ಹಾಕಿದೆ? ಇದೊಂದೇ ತೀರ್ಮಾನ ವಿಧಾನ: ಯಾವ ರೀತಿಯಲ್ಲಿ ನೀವು ಹೆಚ್ಚು ಸ್ವತಂತ್ರರು? ಶ್ರೇಷ್ಠತರ ವ್ಯಕ್ತಿಗಳು? ಸುಳ್ಳು ಹಾಗು ಅನಗತ್ಯ ಸಂಗತಿಗಳ ಮೇಲೆ ನಿಂತಿರುವ ಸಮಾಜಕ್ಕೆ ಅಪಾಯ ತರುವಂಥ ವ್ಯಕ್ತಿಗಳು? ಯಾವ ರೀತಿಯಲ್ಲಿ ಈ ಆರ್ಡರ್ ಆಫ್ ಸ್ಟಾರ್‌ನ ಸದಸ್ಯರು ಇತರರಿಗಿಂತ ಭಿನ್ನರು? ಹೇಳಿ

ಕಳೆದ ಹದಿನೆಂಟು ವರ್ಷಗಳಿಂದ ನೀವು ನನಗಾಗಿ ಸಿದ್ಧತೆ ನಡಿಸಿದ್ದೀರಿ. ನಾನು 'ವಿಶ್ವಗುರು' ಎಂದು ನೀವು ನಂಬುತ್ತೀರೋ, ಬಿಡುತ್ತೀರೋ ಎನ್ನುವುದರ ಬಗ್ಗೆ ನನಗೆ ಆಸಕ್ತಿ ಇಲ್ಲ. ಅದೇನು ಮಹತ್ವದ್ದೂ ಅಲ್ಲ. ನೀವು ಈ ಆರ್ಡರ್ ಆಫ್ ಸ್ಟಾರ್‌ಗೆ ಸೇರಿದ್ದರಿಂದ ನಿಮ್ಮ ಸಹಾನುಭೂತಿಯನ್ನು, ಶಕ್ತಿ, ಸಾಮರ್ಥ್ಯಗಳನ್ನು ಧಾರೆಯೆರೆದಿದ್ದೀರಿ. 'ಕೃಷ್ಣಮೂರ್ತಿ—ವಿಶ್ವಗುರು' ಎಂದು ಅಧಿಕೃತವಾಗಿ ಸ್ವೀಕರಿಸಿದವರು ಸಂಪೂರ್ಣವಾಗಿ (ನಿಜವಾಗಿ ಅನ್ವೇಷಣೆಗೆ ತೊಡಗಿದವರು) ಕೆಲವರು, ಅರ್ಥಮರ್ಥ ಎಂದು (ತಮ್ಮ ಅರ್ಥಮರ್ಥ ಸತ್ಯದಿಂದಲೇ ತೃಪ್ತಿಹೊಂದುವಂತಹವರು) ಇನ್ನು ಕೆಲವರು.

ಕಳೆದ ಹದಿನೆಂಟು ವರ್ಷಗಳಿಂದ ನೀವು ತಯಾರಿ ನಡೆಸುತ್ತಿದ್ದೀರಿ, ಆದರೆ ನಿಮ್ಮ ಹಾದಿಯಲ್ಲಿ ಎಷ್ಟು ಕಷ್ಟಗಳಿದ್ದಾವೆ, ಎಷ್ಟು ತೊಡಕುಗಳಿದ್ದಾವೆ, ಎಷ್ಟು ಕ್ಷುದ್ರ ಸಂಗತಿಗಳಿದ್ದಾವೆ ಎನ್ನುವುದನ್ನು ಪರಿಶೀಲಿಸಿ ನೋಡಿ. ನಿಮ್ಮ ಪೂರ್ವಗ್ರಹಗಳು, ನಿಮ್ಮ ಭಯಗಳು, ನೀವು ಸ್ವೀಕರಿಸಿದ ಅಧಿಕಾರಸತ್ತೆಗಳು, ನಿಮ್ಮ ಹಳೆ-ಹೊಸ ಚರ್ಚೆಗಳು—ಎಲ್ಲವೂ ನಿಮ್ಮ ಅರಿವಿಗೆ ಅಡ್ಡಿ ತರುತ್ತವೆ. ಇದಕ್ಕಿಂತ ಹೆಚ್ಚಿಗೆ ನಾನೀಗ ಏನನ್ನೂ ಹೇಳಲಾರೆ. ನಾನು ಹೇಳಿದ್ದಕ್ಕೆ ನೀವು ಒಪ್ಪಬೇಕೆಂದಾಗಲಿ, ನನ್ನನ್ನು ನೀವು ಅನುಸರಿಸಬೇಕೆಂದಾಗಲಿ ನಾನು ಇಚ್ಛಿಸುತ್ತಿಲ್ಲ; ನಾನು ಹೇಳುವುದನ್ನು ದಯವಿಟ್ಟು ಕೇಳಿ, ಅರಿತುಕೊಳ್ಳಿ, ಅಷ್ಟೇ.

ಈ ಅರಿವು ಅತ್ಯಗತ್ಯ. ಏಕೆಂದರೆ ನಿಮ್ಮನ್ನು ನಿಮ್ಮ ನಂಬಿಕೆ ಬದಲಾಯಿಸಿಲ್ಲ, ಬದಲಾಗಿ ನಿಮ್ಮನ್ನು ಹೆಚ್ಚು ತೊಡಕಿನಲ್ಲಿ ಸಿಕ್ಕಿಸಿದೆ. ಎಲ್ಲವೂ ಇದ್ದಿರುವಂತೆಯೇ ಇದ್ದು, ನೀವದನ್ನು ಎದುರಿಸಲು ಸಿದ್ಧರಾಗಿದ್ದೀರಿ. ನಿಮಗೆ ಬೇಕಾದ ದೇವರುಗಳನ್ನೇ ನೀವು ಬಯಸುತ್ತಿದ್ದೀರಿ— ಹಳೆ ದೇವರ ಬದಲಾಗಿ ಹೊಸ ದೇವರು; ಹಳೆ ಧರ್ಮದ ಬದಲಾಗಿ ಹೊಸ ಧರ್ಮ; ಹಳೆಯ ಪ್ರಕಾರಗಳ ಬದಲಾಗಿ ಹೊಸ ಪ್ರಕಾರಗಳು; ಎಲ್ಲವೂ ನಿರರ್ಥಕ, ಎಲ್ಲವೂ ಮಿತಿಗಳೇ, ಬಂಧನಗಳೇ, ಅಡ್ಡಿಗಳೇ. ಹಳೆಯ ಆಧ್ಯಾತ್ಮಿಕ ವಿಶಿಷ್ಟತೆಯ ಬದಲಾಗಿ ಹೊಸ ಆಧ್ಯಾತ್ಮಿಕ ವೈಶಿಷ್ಟ್ಯ; ಹಳೆಯ ಆರಾಧನಾ ವಿಧಾನದ ಬದಲಾಗಿ ಹೊಸ ಆರಾಧನಾ ವಿಧಾನ. ನಿಮ್ಮ ಆಧ್ಯಾತ್ಮಿಕತೆ ಬೇರೊಬ್ಬ ವ್ಯಕ್ತಿಯ ಮೇಲೆ ಅವಲಂಬಿಸಿಕೊಂಡಿದೆ; ನಿಮ್ಮ ಆನಂದವೂ ಬೇರೊಬ್ಬರ ಮೇಲಿದೆ. ನಿಮ್ಮ ಸಾಕ್ಷಾತ್ಕಾರ ಬೇರೆಯವರ ಮೇಲಿದೆ ಮತ್ತು ಕಳೆದ ೧೮ ವರ್ಷಗಳಿಂದ ನನಗಾಗಿ ನೀವು ಸಿದ್ಧತೆ ನಡೆಸುತ್ತಿದ್ದರೂ, 'ಇವೆಲ್ಲ ಅನಗತ್ಯ' ಎಂದು ನಾನೆಂದಾಗ, 'ಇವನ್ನೆಲ್ಲ ಬದಿಗಿಟ್ಟು, ನಿಮ್ಮೊಳಗೇ ನೀವು ನೋಡಿಕೊಳ್ಳಿರಿ— ಸಾಕ್ಷಾತ್ಕಾರಕ್ಕೆ, ಸತ್ಯದರ್ಶನಕ್ಕೆ, ಪವಿತ್ರೀಕರಣಕ್ಕೆ, ವ್ಯಕ್ತಿತ್ವದ ನಿಷ್ಕಳಂಕತೆಗೆ' ಎಂದು ನಾನು ಹೇಳಿದರೆ, ನಿಮ್ಮಲ್ಲೊಬ್ಬರೂ ಹಾಗೆ ಮಾಡಲು ಸಿದ್ಧರಿಲ್ಲ. ಕೆಲವೇ ಜನ, ಬೆರಳಿನಲ್ಲಿ ಎಣಿಸಬಹುದಾದಷ್ಟೇ ಜನ ಇರಬಹುದು, ಅಪವಾದವೆಂಬಂತೆ.

ಆದ್ದರಿಂದ ಈ ಸಂಘಟನೆ ಯಾಕೆ?

ಯಾಕೆ ಈ ಸುಳ್ಳರೂ, ವಂಚಕರೂ ಆದ ಜನರು ನನ್ನನ್ನೂ, ಸತ್ಯವನ್ನೂ ಹಿಂಬಾಲಿಸಬೇಕು? ದಯವಿಟ್ಟು ನೆನಪಿಡಿ. ನಾನು ತುಂಬ ನಿಷ್ಕರುಣಿಯಾಗಿ, ನಿರ್ದಯಿಯಾಗಿ ಮಾತನಾಡುತ್ತಿಲ್ಲ. ಆದರೆ ನಾವು ವಾಸ್ತವತೆಯನ್ನು ಇರುವಂತೆಯೇ ಎದುರಿಸುವ ಸನ್ನಿವೇಶಕ್ಕೆ, ಆ ಘಟ್ಟಕ್ಕೆ ತಲುಪಿದ್ದೇವೆ. ನಾನು ಒಪ್ಪಂದ ಮಾಡಿಕೊಳ್ಳುವುದಕ್ಕೆ, ಹೊಂದಾಣಿಕೆಗೆ ಸಿದ್ಧವಿಲ್ಲವೆಂದು ಕಳೆದ ವರ್ಷವೇ ಹೇಳಿದ್ದೇನೆ. ಯಾರೂ ಆಗ ಕೇಳಲಿಲ್ಲ. ಈ ವರ್ಷ ಇದನ್ನು ಅತ್ಯಂತ ಸ್ಪಷ್ಟಗೊಳಿಸಿದ್ದೇನೆ. ಈ ಜಗತ್ತಿನಾದ್ಯಂತ ಎಷ್ಟು ಸಹಸ್ರ ಸಂಖ್ಯೆಯಲ್ಲಿ ಈ ಆರ್ಡರ್ ಆಫ್ ಸ್ಟಾರ್‌ನ ಸದಸ್ಯರೆಂದು ಕಳೆದ

೧೮ ವರ್ಷಗಳಿಂದ ಸಿದ್ಧತೆ ಮಾಡುತ್ತಿದ್ದಾರೋ ನನಗೆ ಗೊತ್ತಿಲ್ಲ. ಆದರೆ ಅವರ್‍ಯಾರೂ ಇಂದು ನಾನು ಹೇಳುತ್ತಿರುವುದನ್ನು ಅನಿರ್ಬಂಧಿತವಾಗಿ, ಸಮಗ್ರವಾಗಿ ಕೇಳಲೂ ತಯಾರಿಲ್ಲ.

ಆದ್ದರಿಂದ ಯಾಕೆ ಈ ಸಂಘಟನೆ ?

ಈ ಹಿಂದೆ ಹೇಳಿದಂತೆ ನನ್ನ ಉದ್ದೇಶ ಮನುಷ್ಯನನ್ನು ಅನಿರ್ಬಂಧಿತವಾಗಿ ಮುಕ್ತಗೊಳಿಸುವುದು. ಯಾಕೆಂದರೆ ನಿಜವಾದ ಆಧ್ಯಾತ್ಮವೆಂದರೆ ಚಿರಂತನ-ವಾದ, ಆತ್ಮದ ನಿಷ್ಕಳಂಕತೆ, ಚಿಂತನೆ ಹಾಗು ಪ್ರೇಮಗಳ ಸಾಮರಸ್ಯ, ಇದು ನಿರಂಕುಶವಾದ ಅನಿರ್ಬಂಧಿತವಾದ ಸತ್ಯ, ಅಂದರೆ ಸ್ವತಃ ಬದುಕೇ. ಆದ್ದರಿಂದ ನನ್ನ ಇಚ್ಛೆ ಮನುಷ್ಯನನ್ನು ಸ್ವತಂತ್ರಗೊಳಿಸುವುದು; ನೀಲಿಯ ಶುಭ್ರ ಆಕಾಶದಲ್ಲಿ ಸ್ವಚ್ಛಂದವಾಗಿ, ಯಾವ ಲಂಗು-ಲಗಾಮು, ಹೊರೆ-ಭಾರಗಳಿಲ್ಲದೆ ಸ್ವಾತಂತ್ರ್ಯದ ಆನಂದೋತ್ಕರ್ಷದಲ್ಲಿ, ಹಾರುವ ಹಕ್ಕಿಯಂತೆ ಮನುಷ್ಯನೂ ಬದುಕನ್ನು ಆನಂದದಿಂದ ಅನುಭವಿಸುವಂತೆ ಮಾಡುವದು. ಮತ್ತು ನಾನು, ಯಾವನ ಸಲುವಾಗಿ ೧೮ ವರ್ಷಗಳಿಂದ ಸಿದ್ಧತೆ ನಡೆಸಿರು-ವಿರೋ ಆ ನಾನು ಹೇಳುತ್ತೇನೆ-ನೀವೆಲ್ಲರೂ ಈ ಎಲ್ಲ ನಿಮ್ಮ ತೊಡಕು-ತೊಂದರೆಗಳಿಂದ, ಬಂಧನಗಳಿಂದ ಸಂಪೂರ್ಣ ಬಿಡುಗಡೆ ಹೊಂದಲೇಬೇಕು. ಇದಕ್ಕೆ ಆಧ್ಯಾತ್ಮಿಕ ನಂಬಿಕೆಯ ಮೇಲೆ ನಿಂತಂಥ ಸಂಘಟನೆ ಬೇಕಿಲ್ಲ. ಇದನ್ನು ಅರಿತಂಥ ಐದು-ಹತ್ತು ಜನರಿಗೆ, ಎಲ್ಲ ಚಿಲ್ಲರೆ ಸಂಗತಿಗಳನ್ನು ಬದಿಗಿಟ್ಟು ಹೋರಾಟ ನಿರತರಾದಂಥ ಐದು-ಹತ್ತು ಜನರಿಗೇಕೆ ಸಂಘಟನೆ ? ದುರ್ಬಲ ಜನರಿಗೆ ಸತ್ಯವನ್ನು ಕಂಡುಹಿಡಿಯುವಲ್ಲಿ ಅವರಿಗೆ ಸಹಾಯ ನೀಡುವಂಥ ಯಾವ ಸಂಘಟನೆಯೂ ಇಲ್ಲ. ಸತ್ಯ ಪ್ರತಿಯೊಬ್ಬನ ಒಳಗೇ ಇದೆ. ಸತ್ಯ ದೂರವೂ ಇಲ್ಲ; ಹತ್ತಿರವೂ ಇಲ್ಲ; ಅಂತರಂಗದಲ್ಲೇ ಚಿರಂತನವಾಗಿದೆ.

ಸಂಘಟನೆಗಳು ನಿಮ್ಮನ್ನು ಸ್ವತಂತ್ರಗೊಳಿಸಲಾರವು. ಹೊರಗಿನ ಯಾವೊಬ್ಬನೂ ನಿಮ್ಮನ್ನು ಸ್ವತಂತ್ರಗೊಳಿಸಲಾರ. ಅದರಂತೆ ಸಂಘಟಿತ ಆರಾಧನೆ, ಪೂಜೆಗಳಾಗಲಿ, ಒಂದು ಉದ್ದೇಶಕ್ಕೆ ನಿಮ್ಮನ್ನೇ ಆಹುತಿ ಕೊಟ್ಟು-ಕೊಳ್ಳುವುದಾಗಲಿ, ನಿಮ್ಮನ್ನು ಮುಕ್ತಗೊಳಿಸಲಾರವು. ಅದರಂತೆ ನೀವೆಲ್ಲ ಸೇರಿ ಸಂಘಟನೆ ಮಾಡುವದಾಗಲಿ, ಒಂದು ಕೆಲಸಕ್ಕೆ ನಿಮ್ಮನ್ನು ಸಮರ್ಪಿಸಿ-ಕೊಳ್ಳುವದಾಗಲಿ, ನಿಮ್ಮನ್ನು ಸ್ವತಂತ್ರಗೊಳಿಸಲಾರವು. ಪತ್ರ ಬರೆಯಲು

ನೀವು ಟೈಪ್‌ರೈಟರ್ ಉಪಯೋಗಿಸುತ್ತೀರಿ; ಆದರೆ ಅದನ್ನು ಪೂಜಾಸ್ಥಾನ-ದಲ್ಲಿಟ್ಟು ಪೂಜಿಸುವುದಿಲ್ಲ, ಅಲ್ಲವೆ ? ಆದರೆ ಸಂಘಟನೆಯೇ ಪ್ರಧಾನ ಕಾಳಜಿಯಾದಾಗ ನೀವು ಮಾಡುವುದು ಇಂಥದ್ದನ್ನೇ. "ಅದರಲ್ಲಿ ಎಷ್ಟು ಜನ ಸದಸ್ಯರಿದ್ದಾರೆ ? " ಇದು ಮೇಲಿಂದಮೇಲೆ ಹಲವಾರು ಪತ್ರಿಕಾವರದಿಗಾರರು ನನ್ನನ್ನು ಕೇಳುವ ಪ್ರಶ್ನೆ, "ಎಷ್ಟು ಜನ ನಿಮಗೆ ಹಿಂಬಾಲಕರಿದ್ದಾರೆ ? ಆ ಸಂಖ್ಯೆಯ ಮೇಲೆ ನೀವು ಹೇಳುವುದು ನಿಜವೋ, ಸುಳ್ಳೋ ಎನ್ನುವುದನ್ನು ನಿರ್ಧರಿಸುತ್ತೇವೆ." ಈಗೆಷ್ಟು ಜನರಿದ್ದಾರೋ ನನಗೆ ಗೊತ್ತಿಲ್ಲ. ನನಗೆ ಅವರ ಬಗ್ಗೆ ಕಾಳಜಿಯೂ ಇಲ್ಲ. ನಾನು ಹೇಳಿದ ಹಾಗೆ, ನಿಜವಾಗಿಯೂ ಸ್ವತಂತ್ರನಾದ ಒಬ್ಬನೇ ಒಬ್ಬ ವ್ಯಕ್ತಿ ಇದ್ದರೂ ಸಾಕು.

ಜೊತೆಗೆ, ಆನಂದ ಸಾಮ್ರಾಜ್ಯದ ಬೀಗದ ಕೈಯನ್ನು ಕೆಲವೇ ಜನರು ಪಡೆದಿದ್ದಾರೆಂಬ ವಿಚಾರವೂ ನಿಮ್ಮದು. ಆದರೆ ಅದನ್ನು ಯಾರೂ ಹೊಂದಿಲ್ಲ. ಆ ಬೀಗದ ಕೈಯನ್ನು ಹೊಂದುವ ಅಧಿಕಾರ ಯಾರಿಗೂ ಇಲ್ಲ. ನಿಮ್ಮೊಳಗಿನ ನೀವೇ ಆ ಬೀಗದ ಕೈ. ಆ ನಿಮ್ಮ ಬೆಳವಣಿಗೆಯಲ್ಲಿ, ಶುದ್ಧೀಕರಣದಲ್ಲಿ, ನಿಷ್ಕಳಂಕತೆಯಲ್ಲಿ ಮಾತ್ರ ಇದೆ ಆ ಚಿರಂತನ ಸಾಮ್ರಾಜ್ಯ.

ಹೀಗೆ ನೀವು ಕಟ್ಟಿದಂಥ ಈ ಸಮಗ್ರ ರಚನೆ, ಹೊರಗಿನವರಿಂದ ಸಹಾಯ ನಿರೀಕ್ಷಿಸುವ, ನಿಮ್ಮ ಸುಖಕ್ಕೆ, ಸಂತೋಷಕ್ಕೆ, ಬಲಕ್ಕೆ ಬೇರೆಯವ-ರನ್ನು ಅವಲಂಬಿಸಿಕೊಂಡಿರುವ— ಈ ರಚನೆ ಎಷ್ಟು ಅಸಂಗತವಾದದ್ದು ಎನ್ನುವದನ್ನು ಕಾಣಬಲ್ಲಿರಿ. ಆ ಎಲ್ಲವೂ ನಿಮ್ಮೊಳಗೇ ಇವೆ.

ಆದ್ದರಿಂದ ಈ ಸಂಘಟನೆ ಯಾಕಾಗಿ ?

ಆದರೆ ನಿಜವಾಗಿಯೂ ಅರಿವಿನ ಆಸೆ ಉಳ್ಳವರು, ಆದಿಯೂ ಇಲ್ಲದ, ಅಂತ್ಯವೂ ಇಲ್ಲದ, ಆ ಚಿರಂತನವಾದದ್ದನ್ನು ನೋಡಬಯಸುವವರು ಎಲ್ಲರೂ ಇನ್ನೂ ಶ್ರೇಷ್ಠತರ ಉತ್ಕಟತೆಯಿಂದ ಮುಂದೆ ಸಾಗಬೇಕು. ಅನಗತ್ಯವಾದಂಥ, ಅಸತ್ಯವಾದಂಥ, ಕೇವಲ ನೆರಳಾದಂಥವುಗಳಿಗೆಲ್ಲ ಅಪಾಯ ತರುವಂಥವರಾಗಿ ಸಾಗಬೇಕು. ಅವರು ಅರಿಯುವುದರಿಂದ, ಅವರು ಜ್ಯೋತಿಗಳಾಗುತ್ತಾರೆ, ಏಕಚಿತ್ತರಾಗುತ್ತಾರೆ. ಅಂಥದ್ದನ್ನು ನಾವು ಸೃಷ್ಟಿಸಬೇಕು, ಅದೇ ನನ್ನ ಧ್ಯೇಯ. ಅಂಥ ಅರಿವಿನಿಂದಾಗಿ ನಿಜವಾದ ಸ್ನೇಹ, ಮೈತ್ರಿ ನಮ್ಮಲ್ಲಿರುತ್ತದೆ. ನಿಮಗೆ ಬಹುಶಃ ಗೊತ್ತಿರಲಿಕ್ಕಿಲ್ಲದ ಆ ನೈಜ ಸ್ನೇಹದ ನೆಲೆಯಲ್ಲಿ ಪ್ರತಿಯೊಬ್ಬ-

ನಲ್ಲೂ ಸಹಕಾರವಿರುತ್ತದೆ. ಆದರೆ ಅದು ಇರುವುದು ಅಧಿಕಾರಕ್ಕಾಗಿಯಲ್ಲ, ಮೋಕ್ಷಕ್ಕಾಗಿಯಲ್ಲ, ಒಂದು ಉದ್ದೇಶಕ್ಕೆ ಸಮರ್ಪಿಸಿಕೊಳ್ಳುವುದರಿಂದಲ್ಲ; ಕೇವಲ ಸರಿಯಾದ ಅರಿವು ನಿಮ್ಮಲ್ಲಿರುವುದರಿಂದ ಚಿರಂತನತೆಯಲ್ಲಿ ನೀವು ಬದುಕಬಲ್ಲವ. ರಾಗುತ್ತೀರಿ. ಇದು ಎಲ್ಲ ಸುಖಕ್ಕಿಂತಲೂ ಮಿಗಿಲಾದದ್ದು; ಎಲ್ಲ ತ್ಯಾಗ-ಕ್ಕಿಂತಲೂ ಹಿರಿದಾದದ್ದು.

ಇವು, ಎರಡು ವರ್ಗಗಳ ಕಾಲ ಸಂಪೂರ್ಣ ತೂಗಿ, ವಿಚಾರ ಮಾಡಿ ಅನಂತರವೇ ಬಂದ ತೀರ್ಮಾನಕ್ಕೆ ನೀಡಬಹುದಾದ ಕೆಲವು ಕಾರಣಗಳು. ಒಂದು ಕ್ಷಣದಲ್ಲಿ ಅನಿಸಿದಂಥದಲ್ಲ; ಯಾರಿಂದಲೋ ಈ ಬಗ್ಗೆ ನಾನು ಮನಃಪರಿವರ್ತನೆಗೊಂಡು ಹೇಳುತ್ತಿರುವುದೂ ಅಲ್ಲ; ಇಂಥ ವಿಷಯಗಳಲ್ಲಿ ನಾನು ಹಾಗೆಲ್ಲ ಪ್ರಭಾವಕ್ಕೆ ಒಳಗಾಗುವವನೂ ಅಲ್ಲ. ನಿಧಾನವಾಗಿ, ಜಾಗ-ರೂಕನಾಗಿ, ತಾಳ್ಮೆ ವಹಿಸಿ ಕಳೆದ ಎರಡು ವರ್ಷಗಳ ಅವಧಿಯಲ್ಲಿ ನಾನು ವಿಚಾರ ಮಾಡುತ್ತಲೇ ಬಂದು, ಈ ಆರ್ಡರ್‌ನ ಮುಖ್ಯಸ್ಥನಾದ್ದರಿಂದ ಈ ವ್ಯವಸ್ಥೆಯನ್ನೇ ವಿಸರ್ಜಿಸುವ ತೀರ್ಮಾನಕ್ಕೆ ಬಂದಿದ್ದೇನೆ. ನೀವು ಬೇಕಾದರೆ ಬೇರೆ ಸಂಘಟನೆಯನ್ನು ಮಾಡಿಕೊಳ್ಳಬಹುದು. ಬೇರೊಬ್ಬನನ್ನು ಕಾಯುತ್ತ ಕೂಡ್ರಬಹುದು. ಅದು ನನಗೆ ಸಂಬಂಧಪಟ್ಟದ್ದಲ್ಲ; ಹೊಸ ಪಂಜರಗಳನ್ನು ಸೃಷ್ಟಿಸುವುದು, ಅವುಗಳಿಗೆ ಹೊಸ-ಹೊಸ ಅಲಂಕಾರ ಸೃಷ್ಟಿಸುವುದು— ಇವು ನನ್ನ ಕಾಳಜಿಗಳೂ ಅಲ್ಲ. ನನ್ನ ಒಂದೇ ಒಂದು ಉದ್ದೇಶವೆಂದರೆ ಮನು-ಷ್ಯನನ್ನು ಅನಿರ್ಬಂಧಿತವಾಗಿ, ಸಂಪೂರ್ಣವಾಗಿ ಸ್ವತಂತ್ರಗೊಳಿಸುವುದು. "

ತಮ್ಮ ಸುದೀರ್ಘ ಭಾಷಣ ಮುಗಿಸಿ, "ಆರ್ಡರ್ ಆಫ್ ದಿ ಸ್ಟಾರ"ನ್ನು ವಿಸರ್ಜಿಸಿ, ತಾನು 'ವಿಶ್ವಗುರು' ಅಲ್ಲ, ಆಗಲಾರೆ; ತಾನು ಕೇವಲ ಜಿಡ್ಡು ಕೃಷ್ಣಮೂರ್ತಿ ಎಂದು ಸಾರಿದರು. ಆ ವ್ಯಕ್ತಿ, ಆತ ಹುಟ್ಟಿನಿಂದ ಒಬ್ಬ ಭಾರತೀಯ; ಬದುಕಿನಿಂದ ಒಬ್ಬ ವಿಶ್ವಮಾನವ. ಸ್ವಯಂಘೋಷಿತ ಜಗದ್ಗುರು-ಗಳ, ಬಾಬಾಗಳ, ಪವಾಡಪುರುಷರ ಇಂದಿನ ಭಾರತದಲ್ಲಿ ಇಂಥದ್ದನ್ನು ನಂಬುವುದೂ ಕಷ್ಟತರವಾದರೂ ಆ ವ್ಯಕ್ತಿ ಇನ್ನೂ ನಮ್ಮೊಂದಿಗೆ ಬದುಕು-ತ್ತಿರುವುದರಿಂದ, ನಂಬಲೇಬೇಕಾಗಿದೆ. ಇದಕ್ಕೇ ಇರಬೇಕು ಸತ್ಯ, ಕಲ್ಪನೆ-ಗಿಂತ ವಿಚಿತ್ರತರವಾಗುತ್ತದೆ ಎಂದು ಹೇಳುವುದು, ಅಲ್ಲವೆ ?

* * *

" ಜಿಡ್ಡು ಕೃಷ್ಣಮೂರ್ತಿ "

ಜಿಡ್ಡು ಕೃಷ್ಣಮೂರ್ತಿ ಜನಿಸಿದ್ದು ೧೧, ಮೇ ೧೮೯೫ ರಲ್ಲಿ, ಆಂಧ್ರ ಪ್ರದೇಶದ ಮದನಪಲ್ಲಿ ಎಂಬ ಒಂದು ಸಣ್ಣ ಮಲೆನಾಡ ಪಟ್ಟಣದಲ್ಲಿ. ಜಿಡ್ಡು ಅವರದ್ದು ತೆಲಗು ಬ್ರಾಹ್ಮಣರ ಕುಟುಂಬ; ಮುತ್ತಜ್ಜ, ಅಜ್ಜರ ಕಾಲದಿಂದಲೇ ಪರಂಪರಾಗತ ಉಚ್ಚ ಶಿಕ್ಷಣದೊಂದಿಗೆ ಸರಕಾರಿ ನೌಕರಿಯನ್ನೂ ಮಾಡುತ್ತ ಬಂದ ಕುಟುಂಬ. ಕೃಷ್ಣಮೂರ್ತಿ ಅವರ ತಂದೆ ಜಿಡ್ಡು ನಾರಾಯಣಯ್ಯ, ಮದ್ರಾಸ್ ವಿಶ್ವವಿದ್ಯಾಲಯದಿಂದ ಪದವಿ ಪಡೆದ ನಂತರ ಕಂದಾಯ ಇಲಾಖೆಯಲ್ಲಿ ಅಧಿಕಾರಿಯಾಗಿ ಸೇರಿ, ತಹಶೀಲದಾರರಾಗಿ ನಿವೃತ್ತಿ ಹೊಂದಿದವರು.

ನಾರಾಯಣಯ್ಯ ಅವರು ತಮ್ಮ ಬಳಗದವರೇ ಆದ ಮಧುರಕಂಠದ ಸಂಜೀವಮ್ಮ ಅವರನ್ನು ವಿವಾಹವಾಗಿದ್ದರು. ಒಟ್ಟು ೧೧ ಸಂತಾನ. ಅವರಿಗಾದರೂ ಕೇವಲ ಆರೇ ಮಕ್ಕಳು ಬದುಕಿ ಉಳಿದವರು. ಅತ್ಯಂತ ನಿಷ್ಠಾವಂತ ಬ್ರಾಹ್ಮಣರಾದ ಈ ಕುಟುಂಬದಲ್ಲಿ ಎಂಟನೆಯ ಗಂಡುಮಗುವಾಗಿ ಹುಟ್ಟಿದ ಕಾರಣ, ಹಿಂದೂ ಪರಂಪರೆಯಂತೆ ಶ್ರೀಕೃಷ್ಣನ ಹೆಸರನ್ನು ಕೃಷ್ಣಮೂರ್ತಿಗೆ ಇಡಲಾಗಿತ್ತು.

ತಾಯಿ ಸಂಜೀವಮ್ಮನವರಿಗೆ ಕೃಷ್ಣಮೂರ್ತಿ ಅವರ ಜನನ ಪೂರ್ವದಲ್ಲೇ, ಈತ ತನ್ನ ಮಕ್ಕಳಲ್ಲೇ ಅತ್ಯಂತ ವಿಶಿಷ್ಟನಾಗುವನೆಂಬ 'ಅನಿಸಿಕೆ' ಪ್ರಬಲವಾಗಿ ಉಂಟಾಗಿತ್ತಂತೆ. ಆದ್ದರಿಂದಲೇ ಆಕೆ ದೇವರ ಕೋಣೆಯಲ್ಲಿ ತನಗೆ ಪ್ರಸವದ ವ್ಯವಸ್ಥೆ ಆಗಬೇಕೆಂದು ಆಗ್ರಹಿಸಿದ್ದರಿಂದ ನಾರಾಯಣಯ್ಯ ಅನುಮತಿ ನೀಡಿದ್ದರಂತೆ. ಆಕೆಯ ಇತರ ಹೆರಿಗೆಯ ಹಾಗೆ, ವಿಶೇಷ ತೊಂದರೆಯಾಗದೆ, ಮಧ್ಯರಾತ್ರಿ ೧೨-೩೦ ಕ್ಕೆ "ಶಿರಸೋದಯಾ" ಅಂತ ಸೂಲಗಿತ್ತಿ ತಿಳಿಸಿದರಂತೆ.

[ಮರುದಿನ ಕುಮಾರ ಶ್ರೋತುಲು ಎಂಬ ಆ ಪ್ರದೇಶದ ಪ್ರಸಿದ್ಧ ಜ್ಯೋತಿಷಿಗಳು ಆತನ ಜಾತಕ ಬರೆದು, ಈತ ಅತ್ಯಂತ ಶ್ರೇಷ್ಠ ಪುರುಷನಾಗುತ್ತಾನೆ ಎಂದು ನುಡಿದಿದ್ದರಂತೆ. ಕೆಲವು ವರ್ಷಗಳ ವರೆಗೆ ಅಂಥದ್ದೇನೂ ತೋರಿಬರದಿದ್ದಾಗ ಪ್ರಶ್ನಿಸಿದ ನಾರಾಯಣಯ್ಯ ಅವರಿಗೆ. “ ಕಾದು ನೋಡಿ, ನಾನು ಹೇಳಿದ ಸತ್ಯದ ಬಗ್ಗೆ ನಿಮಗೇ ತಿಳಿಯುತ್ತದೆ ” ಎಂದು ಕುಮಾರ ಶ್ರೋತುಲು ಸಮಾಧಾನ ನುಡಿಯುತ್ತಿದ್ದರಂತೆ]

ನಾರಾಯಣಯ್ಯ ಅವರಿಗೆ ಮೇಲಿಂದ ಮೇಲೆ ವರ್ಗವಾಗುತ್ತಿದ್ದರಿಂದ, ಮಲೇರಿಯಾ, ಮೂಗಿನಲ್ಲಿ ರಕ್ತಸೋರುವಿಕೆ ಇತ್ಯಾದಿಗಳಿಂದ ಮಗು ಕೃಷ್ಣಮೂರ್ತಿ ಸತ್ತು-ಸತ್ತು ಬದುಕುತ್ತಿದ್ದರು. ಆರು ವರ್ಷದಲ್ಲಿರುವಾಗ ಕೃಷ್ಣಮೂರ್ತಿ ಅವರಿಗೆ ಉಪನಯನ ಸಂಸ್ಕಾರ ಮಾಡಿ ಪರಂಪರೆಯ ವಾಡಿಕೆಯಂತೆ ಶಾಲೆಗೆ ಕಳಿಸಲಾಯಿತು. ತಂದೆಯವರ ವರ್ಗಾವರ್ಗಿ ಹಾಗು ದೈಹಿಕ ಅನಾರೋಗ್ಯಗಳಿಂದಾಗಿ ಕೃಷ್ಣಮೂರ್ತಿಯವರ ಶಾಲಾಭ್ಯಾಸವು ಹಿಂದೆ ಬಿದ್ದಿತ್ತು. ತಮ್ಮ ಓರಿಗೆಯವರಿಗಿಂತ ಪಾಠಗಳಲ್ಲಿ ಅವರು ತುಂಬ ಹಿಂದುಳಿಯಬೇಕಾಯಿತು. ಅಲ್ಲದೆ ಪುಸ್ತಕ ಓದುವದೆಂದರೆ ಕೃಷ್ಣಮೂರ್ತಿ ಅವರಿಗೆ ಸೇರದ ವಿಷಯ. ಸದಾ ಕನಸು ಕಾಣುವುದರಲ್ಲೇ ಮಗ್ನರಾಗಿರುತ್ತಿದ್ದ ಕೃಷ್ಣಮೂರ್ತಿ ಮಾನಸಿಕವಾಗಿ ಜಡರಂತೆ ಕಾಣುತ್ತಿದ್ದರು. ಆದರೆ ಆಸಕ್ತಿ ಹುಟ್ಟಿದಾಗ ಸೂಕ್ಷ್ಮವಾಗಿ ಅವಲೋಕಿಸುವ ಸಾಮರ್ಥ್ಯ ಅವರಲ್ಲಿತ್ತು. ಮರ, ಗಿಡ, ಮೋಡ ಪಶು, ಪಕ್ಷಿ, ಕೀಟಗಳನ್ನು ನೋಡುತ್ತ ತಾಸುಗಟ್ಟಲೆ ನಿಂತುಬಿಡುತ್ತಿದ್ದರು. ಜೊತೆಗೆ ಧಾರ್ಮಿಕ ಮನೋಭಾವ-ದೇವಸ್ಥಾನಕ್ಕೆ ತಪ್ಪದೇ ತಾಯಿ ಜೊತೆಗೆ ಹೋಗುವುದು, ಬಡವರಿಗೆ, ಭಿಕ್ಷುಕರಿಗೆ ತನ್ನಲ್ಲಿ ಇದ್ದುದನ್ನು ಕೊಟ್ಟು ದಾನಮಾಡಿಬಿಡುವುದು ಮುಂತಾದವೆಲ್ಲ ಎಳೆವಯಸ್ಸಿನಲ್ಲೇ ಕೃಷ್ಣಮೂರ್ತಿಯವರಲ್ಲಿ ಕಂಡುಬರುತ್ತಿತ್ತು. ಇಷ್ಟೇ ಸೋಜಿಗವಾದದ್ದು : ಬಾಲಕನಾಗಿದ್ದಾಗಿನಿಂದಲೂ ಕೃಷ್ಣಮೂರ್ತಿ ಅವರಲ್ಲಿದ್ದ ಯಂತ್ರಜ್ಞಾನದ ಆಸಕ್ತಿ, ಬುದ್ಧಿಶಕ್ತಿ. ಒಮ್ಮೆ ತಂದೆ ಮನೆಯಲ್ಲಿ ಇಲ್ಲದಿದ್ದಾಗ ಗಡಿಯಾರವನ್ನು ಸಂಪೂರ್ಣ ಕಳಚಿ, ಪುನಃ ಅದನ್ನು ಚಾಚೂ ತಪ್ಪದೇ ಸರಿಯಾಗಿ ಜೋಡಿಸಿಡುವ ತನಕ ಊಟವನ್ನೂ ಮಾಡಲಿಲ್ಲ, ಶಾಲೆಗೂ ಹೋಗಲೊಪ್ಪಲಿಲ್ಲ. ಈ ಬಗೆಯ ಪರಸ್ಪರ ವಿರೋಧ ಎನ್ನಬಹುದಾದ ಶಕ್ತಿ ವಿಶೇಷಗಳ ಜೊತೆಗೆ

ಉದಾರತೆ ಅವರ ಬದುಕಿನಾದ್ಯಂತ ಇರುವುದನ್ನು ನಾವು ಗಮನಿಸುತ್ತೇವೆ. ಇದರೊಂದಿಗೆ ಗಮನಿಸಬೇಕಾದ ಮತ್ತೊಂದು ವಿಶೇಷ ಸಂಗತಿ: ಕೃಷ್ಣಮೂರ್ತಿಯವರಿಗಿಂತ ಮೂರು ವರ್ಷ ಚಿಕ್ಕವನಾದ ಕೃಷ್ಣಮೂರ್ತಿ ಅವರ ತಮ್ಮ 'ನಿತ್ಯಾನಂದ'ನ ಜೊತೆಗಿನ ಗಾಢ ಪ್ರೀತಿ, ಅಣ್ಣ ಶಾಲೆಗೆ ಹೊರಟಾಗ ತಾನೂ ಹಠ ಮಾಡಿ ಶಾಲೆಗೆ ಅಣ್ಣನ ಜೊತೆಗೇ ಹೋಗುತ್ತಿದ್ದ. ಆದರೆ ಸ್ವಭಾವದಲ್ಲಿ ನಿತ್ಯ, ಕೃಷ್ಣಮೂರ್ತಿಯವರಿಗಿಂತ ಭಿನ್ನ. ಚುರುಕುತನ, ಚಟುವಟಿಕೆಯಿಂದ, ಲವಲವಿಕೆಯಿಂದ ಇರುವುದು ಆತನ ಗುಣವಿಶೇಷ.

ಕೃಷ್ಣಮೂರ್ತಿ ಹತ್ತೂವರೆ ವರ್ಷದವರಾಗಿದ್ದಾಗ ತಾಯಿ ಸಂಜೀವಮ್ಮ ತೀರಿಕೊಂಡರು. ಆಕೆ ತಮ್ಮ ಬದುಕಿಗೆ ಅಂತ್ಯಕಾಲದಲ್ಲಿ ಅಧ್ಯಾತ್ಮದಲ್ಲಿ ತಮ್ಮ ಲಕ್ಷ್ಯವನ್ನು ಕೇಂದ್ರೀಕರಿಸಿದ್ದರು. ಅವರು ಬದುಕಿರುವಾಗಲೇ ಕೃಷ್ಣಮೂರ್ತಿ ತಮ್ಮ ಅತೀಂದ್ರಿಯ ಶಕ್ತಿವಿಶೇಷವನ್ನು ಪ್ರಕಟಪಡಿಸಿದ್ದರು. ಆ ನಂತರ ಸಹ ಆ ಶಕ್ತಿಯ ಬಗ್ಗೆ ತಮ್ಮ ತಂದೆಯವರಿಗೆ ಬರೆದ ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಭಾರತದ ಎಲ್ಲ ತಾಯಂದಿರು ನೀಡುವ ಅಪಾರ ಮಮತೆ–ವಾತ್ಸಲ್ಯಗಳ ಅಮೃತಧಾರೆ ಹರಿಸಿದ್ದ ತಾಯಿ, ತೀರಿಕೊಂಡ ನಂತರ ಕೃಷ್ಣ-ಮೂರ್ತಿ ಹಾಗು ಅವರ ಸಹೋದರರೆಲ್ಲ ಅವುಗಳಿಂದ ವಂಚಿತರಾದರು.

ನಾರಾಯಣಯ್ಯ ಸಂಪ್ರದಾಯದ ಬ್ರಾಹ್ಮಣರಾಗಿದ್ದರೂ ೧೮೮೨ ರಿಂದಲೇ ಥಿಯೊಸೋಫಿಕಲ್ ಸೊಸೈಟಿಯ ಸದಸ್ಯರಾಗಿದ್ದರು. ತಾಯಿ ಸಂಜೀವಮ್ಮನವರೂ ಪತಿಯ ಧೋರಣೆಗೆ ಸಮ್ಮತಿ ಸೂಚಿಸಿದ್ದರು. ಅವರ ಮನೆಯಲ್ಲಿ ಶ್ರೀಮತಿ ಆ್ಯನಿ ಬೆಸೆಂಟ್‌ರ ಫೋಟೋ ಇದ್ದಿತಲ್ಲದೇ, ತಾಯಿ ಸಂಜೀವಮ್ಮನವರೇ ಶ್ರೀಮತಿ ಬೆಸೆಂಟ್‌ರವರ ಬಗ್ಗೆ ಬಾಲಕ ಕೃಷ್ಣಮೂರ್ತಿಗೆ ಹೇಳಿದ್ದರು. ತಮ್ಮ ೫೨ ನೆಯ ವಯಸ್ಸಿನಲ್ಲಿ, ೧೯೦೭ ರಲ್ಲಿ ಸೇವೆಯಿಂದ ನಿವೃತ್ತಿಗೊಂಡ ನಾರಾಯಣಯ್ಯ ಶ್ರೀಮತಿ ಬೆಸೆಂಟ್‌ರಿಗೆ ಪತ್ರಬರೆದು, ಥಿಯೊಸೋಫಿಕಲ್ ಸೊಸೈಟಿಯ ಯಾವುದೇ ಕೆಲಸ ನಿರ್ವಹಣೆಗೆ ತಮ್ಮನ್ನು ನೇಮಿಸಿಕೊಂಡು, ತಮಗೆ ಹಾಗು ತಮ್ಮ ಐವರು ಮಕ್ಕಳಿಗೆ ವಿದ್ಯಾಭ್ಯಾಸದ ಹಾಗೂ ವಾಸ್ತವ್ಯದ ವ್ಯವಸ್ಥೆಯನ್ನು ಸೇವೆಗೆ ಸಂಭಾವನೆಯ ರೂಪದಲ್ಲಿ ನೀಡಬೇಕೆಂದು ಕೋರಿದ್ದರು. ಇದಕ್ಕೆ ಮೊದಲು ಅಷ್ಟು ಲಕ್ಷ್ಯ ನೀಡದ ಶ್ರೀಮತಿ ಬೆಸೆಂಟ್, ೧೯೦೯ ರಲ್ಲಿ ನಾರಾಯಣಯ್ಯ ಅವರಿಗೆ ಅನುಮತಿ

ನೀಡಿದರು. ಇದರಿಂದ ೧೯೨೯ ರಲ್ಲಿ ಮದ್ರಾಸಿನ ಅಡಯಾರಿನಲ್ಲಿರುವ ಥಿಯೊಸೊಫಿಕಲ್ ಸೊಸ್ಸಾಯಿಟಿಯ ಅಂತಾರಾಷ್ಟ್ರೀಯ ಕಛೇರಿಯ ವಠಾರದಲ್ಲಿ ಸಂಸಾರ ಸಮೇತವಾಗಿ ನಾರಾಯಣಯ್ಯ ಬಂದಿಳಿದರು. ಕಂಪೌಂಡಿನಲ್ಲಿ ಮನೆ ಸಿಗದ್ದರಿಂದ ಹೊರಗಿನ ಹಾಳಾದ ಗುಡಿಸಲಿನಲ್ಲಿ ಅವರೆಲ್ಲರೂ ತಾತ್ಕಾಲಿಕ ವಾಗಿ ಉಳಿಯಬೇಕಾಯಿತು. ಹದಿನೇಳು ವರ್ಷದ ಹಿರಿಯ ಮಗ ಶಿವರಾಮ ಪ್ರೆಸಿಡೆನ್ಸಿ ಕಾಲೇಜಿಗೂ, ಕೃಷ್ಣ, ನಿತ್ಯ ಹಾಗು ಅವರ ಸಂಬಂಧಿಕರ ಮಗ ಒಬ್ಬ- ಮೂವರೂ "ಪೆನ್ನಥರ ಸುಬ್ರಹ್ಮಣ್ಯನ್ ಹೈಸ್ಕೂಲಿ"ಗೂ ದಿನಾಲು ಮೂರು ಮೈಲು ನಡೆದುಕೊಂಡು ಹೋಗಿಬಂದು ಮಾಡಲಾರಂಭಿಸಿದರು.

*   *   *   *

ಥಿಯೊಸೊಫಿಕಲ್ ಸೊಸ್ಸಾಟಿ (ಬ್ರಹ್ಮಜ್ಞಾನ ಸಮಾಜ) ಆರಂಭ-ವಾದದ್ದು ೧೮೭೫ ರಲ್ಲಿ. ಅಮೇರಿಕೆಯ ಸಿವಿಲ್ ಯುದ್ಧದಲ್ಲಿ ದುಡಿದ, ಮೊದಲಿನಿಂದಲೂ ಅಧ್ಯಾತ್ಮದಲ್ಲಿ ಹಾಗು ಸಮ್ಮೋಹನವಿದ್ಯೆಯಲ್ಲಿ ಆಸಕ್ತಿ ಹೊಂದಿದ್ದ ಕರ್ನಲ್ ಹೆನ್ರಿ ಸ್ಟೀಲ್ ಆಲ್ಕಾಟ್ ಹಾಗು ಅತ್ಯಂತ ವಿವಾದ-ಗ್ರಸ್ತ ಮಹಿಳೆ ರಶಿಯಾದ ಶ್ರೀಮತಿ ಹೆಲೆನಾ ಪೆಟ್ರೊವ್ನಾ ಬ್ಲಾವಟ್‌ಸ್ಕಿ-ಇವರಿಬ್ಬರಿಂದ ಅದು ಸ್ಥಾಪಿತಗೊಂಡಿತ್ತು.

ಥಿಯೊಸೊಫಿಕಲ್ ಸೊಸ್ಸಾಯಿಟಿಯ ಉದ್ದೇಶ ಮುಖ್ಯವಾಗಿ ಮೂರು :

೧) ಜಾತಿ, ಜನಾಂಗ, ಲಿಂಗ, ಮೈಬಣ್ಣ ಇತ್ಯಾದಿಗಳ ಭೇದ-ಭಾವ-ಗಳಿಲ್ಲದೇ ಮಾನವ ಜನಾಂಗದ ಜಾಗತಿಕ ಸಹೋದರತ್ವದ ಜೀವಕೇಂದ್ರವನ್ನು ನಿರ್ಮಿಸುವುದು.

೨) ಧರ್ಮ, ತತ್ತ್ವಶಾಸ್ತ್ರ ಹಾಗು ವಿಜ್ಞಾನಿಗಳ ತುಲನಾತ್ಮಕ ಅಧ್ಯಯನವನ್ನು ಪ್ರೋತ್ಸಾಹಿಸುವುದು.

೩) ವಿವರಣೆಗೆ ಇನ್ನೂ ಸಿಕ್ಕಿರದ ನಿಸರ್ಗದ ನಿಯಮಗಳನ್ನು ಹಾಗು ಮನುಷ್ಯನಲ್ಲಿ ಸುಪ್ತವಾಗಿರುವ ಶಕ್ತಿಯನ್ನು ಶೋಧಿಸುವುದು.

೧೮೮೨ ರಲ್ಲಿ ಅಧ್ಯಾತ್ಮದ ವಾತಾವರಣ ಹೆಚ್ಚಿರುವ ಭಾರತಕ್ಕೆ ಅಮೇರಿಕೆಯಿಂದ ಥಿಯೊಸೊಫಿಕಲ್ ಸೊಸ್ಸಾಯಿಟಿಯ ಪ್ರಧಾನ ಕಛೇರಿ ಸ್ಥಳಾಂತರಗೊಂಡಿತು. ಮತ್ತು ಅಲ್ಲಿಂದ ಅನಂತರ ಅತ್ಯಂತ ಶೀಘ್ರದಲ್ಲಿ

ವಿಶ್ವದಾದ್ಯಂತ ಪಸರಿಸಿತು. ೧೯೦೭ ರಲ್ಲಿ ಶ್ರೀಮತಿ ಬೆಸೆಂಟ್‌ರು ಈ ಸೊಸೈಟಿಯ ಅಧ್ಯಕ್ಷರಾದ ಮೇಲಂತೂ ಜಗತ್ತಿನ ವಿವಿಧ ದೇಶಗಳ ಬುದ್ಧಿಜೀವಿಗಳಿಗೆ ಈ ಸೊಸೈಟಿಯ ಸದಸ್ಯರಾಗುವುದು ಒಂದು ಪ್ರತಿಷ್ಠೆ ಹಾಗು ಬೌದ್ಧಿಕವಾಗಿ ಮುಂದುವರಿದಿರುವುದರ ಸಂಕೇತವಾಗಿತ್ತು. [ನಾರಾಯಣಯ್ಯ ತಮ್ಮ ಮಕ್ಕಳೊಂದಿಗೆ ಅಡ್ಯಾರಿಗೆ ಬಂದಿಳಿದ ಕಾಲಕ್ಕೆ ಅಡ್ಯಾರ್ ನದಿಯ ದಕ್ಷಿಣಭಾಗದ ೨೬೦ ಎಕರೆ ವಿಸ್ತೀರ್ಣದ ಸ್ಥಳದಲ್ಲಿ ಹಲವಾರು ಬೃಹತ್ ಕಟ್ಟಡಗಳನ್ನು ಹೊಂದಿತ್ತು. ಇದಕ್ಕೆ ಕಾರಣ— ಥಿಯೊಸೋಫಿಕಲ್ ಸೊಸೈಟಿಯ ಸದಸ್ಯರಿಗೆ ಶ್ರೀಮತಿ ಬೆಸೆಂಟ್‌ರು ಅಧ್ಯಕ್ಷರಾದ ಮೇಲೆ ಕಟ್ಟಡಗಳನ್ನು ಕಟ್ಟಿಕೊಂಡು ಉಳಿದುಕೊಳ್ಳಲು ಪ್ರೋತ್ಸಾಹಿಸಿದ್ದರು; ಆ ಮನೆಗಳ ಒಡೆಯರು ಅಲ್ಲಿರದಿದ್ದಾಗ ಅವುಗಳನ್ನು ತಮಗೆ ಬೇಕಾದವರಿಗೆ ಉಪಯೋಗಿಸಲು ಕೊಡಬೇಕು. (ಶ್ರೀಮತಿ ಬೆಸೆಂಟ್‌ರಿಗೆ) ಹಾಗು ಒಡೆಯರ ಮರಣಾನಂತರ ಆ ಕಟ್ಟಡಗಳು ಥಿಯೊಸೋಫಿಕಲ್ ಸೊಸೈಟಿಗೆ ಸೇರಬೇಕೆಂಬ ನಿರ್ಬಂಧಗಳಿದ್ದವು.]

ಥಿಯೊಸೋಪಿಕಲ್ ಸೊಸೈಟಿಯ ಒಳಗೇ ಈ ' ದೀಕ್ಷಾಸಂಘ ' ಅಥವಾ ' ಪೌರ್ವಾತ್ಯ ಸಂಘ ' ಎಂಬ, ಶ್ರೀಮತಿ ಬ್ಲಾವಟ್‌ಸ್ಕಿ ಅವರ ನೇತೃತ್ವದ ಸಂಸ್ಥೆ ಇದ್ದಿತ್ತು. ಈ ದೀಕ್ಷಾಸಂಘ ಹಲವಾರು ಪ್ರಾಚೀನ ಧರ್ಮಗಳ ಉತ್ತಮಾಂಶಗಳನ್ನು ಹೆಕ್ಕಿ ಕೂಡಿಸಿ ರಚಿಸಿದ ಕೂಟ. ಸಾರ್ವಜನಿಕರು ಥಿಯೊಸೋಫಿಕಲ್ ಸೊಸೈಟಿಯ ಸದಸ್ಯರಾಗಬಹುದಾದರೆ ಆ ಸೊಸೈಟಿಯ ಸದಸ್ಯರಾಗಿ ಎರಡು ವರ್ಷಗಳ ಕಾಲ ದುಡಿದವರಿಗೆ ಮಾತ್ರ ಈ ಒಳಗಿನ ' ದೀಕ್ಷಾ ಸಂಘ 'ದ ಸದಸ್ಯತ್ವ ಪ್ರಾಪ್ತವಾಗುತ್ತಿತ್ತು. ನಾರಾಯಣಯ್ಯ ಈ ದೀಕ್ಷಾಘಟಕದ ಸದಸ್ಯರಾಗಿದ್ದು, ಈ ದೀಕ್ಷಾಘಟಕದ ರಿಕಾರ್ಡಿಂಗ್ ಕಾರ್ಯದರ್ಶಿಯವರ ಸಹಾಯಕರೆಂದು ನೌಕರಿ ದೊರೆತು ಅವರು ಅಡ್ಯಾರಿಗೆ ಬರಲು ಅವಕಾಶ ದೊರೆತಿತ್ತು.

ಥಿಯೊಸೊಫಿಸ್ಟರ ಅದರಲ್ಲೂ ವಿಶೇಷವಾಗಿ ಈ ದೀಕ್ಷಾಸಂಘದ ನಂಬಿಕೆಯಂತೆ ಜಗತ್ತಿಗೆ ಅತ್ಯಂತ ಅವಶ್ಯಕವಿದ್ದ ಹೊಸ ಜ್ಞಾನ ನೀಡುವ ಸಲುವಾಗಿ ದೇವ ಮೈತ್ರೇಯನು ದೇಹಧಾರಣ ಮಾಡಿ ಬರುತ್ತಾನೆ. ಈ ಹಿಂದೆ ಆತ ಕ್ರಿ. ಪೂ. ೪ ರಲ್ಲಿ ಶ್ರೀ ಕೃಷ್ಣನಾಗಿ, ಅನಂತರ ಏಸುಕ್ರಿಸ್ತನಾಗಿ

ಮತ್ತು ಬೋಧಿಸತ್ವನಾಗಿ ಬಂದಿಳಿದಿದ್ದಿದೆ. ಈಗ ಮತ್ತೊಮ್ಮೆ ಕಾಲ ಪರಿಪಕ್ವವಾಗಿದ್ದು ಸದ್ಯೋಭವಿಷ್ಯದಲ್ಲಿ ಮೈತ್ರೇಯದೇವ ಮತ್ತೊಮ್ಮೆ ದೇಹಧಾರಣೆ ಮಾಡಿ ಜಗತ್ತಿಗೆ ಹೊಸ ಧರ್ಮ ನೀಡುವುದಾಗಿ ಅವರು ನಂಬಿದ್ದರು. ಮೈತ್ರೇಯದೇವನೆಂದರೆ ಭಗವಾನ್ ಬುದ್ಧನಲ್ಲ. ಥಿಯೊಸೋಫಿಸ್ಟ್‌ರ ಪ್ರಕಾರ ಬುದ್ಧ ಇನ್ನೂ ಮೇಲಿನ, ದಿವ್ಯತಮ ವಲಯಕ್ಕೆ ಸೇರಿದವನು. ಈ ಮೈತ್ರೇಯದೇವ ಅಥವಾ 'ವಿಶ್ವಗುರು' ಭೂಮಿಗೆ ಬಂದಿಳಿದಾಗ ಅವನನ್ನು ಸ್ವಾಗತಿಸಲು ಮಾನವಜನಾಂಗವನ್ನು ಸಿದ್ಧಗೊಳಿಸುವದೇ ಸೊಸೈಟಿಯ ಸ್ಥಾಪನೆಯ ಉದ್ದೇಶವೆಂದು ಎಲ್ಲ ಸದಸ್ಯರೆದುರು ಶ್ರೀಮತಿ ಬ್ಲಾವಟ್‌ಸ್ಕಿ ಗಲರ್ಲ ರಷ್ಟು ಹಿಂದೆಯೇ ಹೇಳಿದ್ದರು.

ಶ್ರೀಮತಿ ಆ್ಯನಿ ಬೆಸೆಂಟರು ಥಿಯೊಸೊಫಿಕಲ್ ಸೊಸ್ಯಾಟಿಯ ಅಧ್ಯಕ್ಷರಾಗಿದ್ದರೂ ಅವರಷ್ಟೇ ಪ್ರಭಾವ ಹಾಗು ಪ್ರಭುತ್ವಶಾಲಿ ವ್ಯಕ್ತಿಯೊಬ್ಬರು ಸೊಸ್ಯಾಟಿಯಲ್ಲಿದ್ದರು. ಅವರೇ ಲೆಡ್ ಬೀಟರ್. ಆ ಹೊತ್ತಿಗಾಗಲೇ ಅವರು ಶ್ರೇಷ್ಠ ಬರಹಗಾರರು, ಉತ್ತಮ ಭಾಷಣಕಾರರು, ಎಲ್ಲಕ್ಕೂ ಮೇಲಾಗಿ ವಿಶೇಷ ಅತೀಂದ್ರಿಯ ಶಕ್ತಿಸಂಪನ್ನರು, ಶಿಕ್ಷಕರು ಎಂಬ ಖ್ಯಾತಿಯನ್ನು ಪಡೆದಿದ್ದರು. ಅತೀಂದ್ರಿಯ ವಿಷಯಗಳಿಗೆ ಸಂಬಂಧಪಟ್ಟಂತೆ ಶ್ರೀಮತಿ ಆ್ಯನಿ ಬೆಸೆಂಟರೂ ಇತ್ತೀಚಿನ ದಿವಸಗಳಲ್ಲಿ ಲೆಡ್ ಬೀಟರ್ ಅವರನ್ನೆ ನಂಬುತ್ತಿದ್ದರು. ಇದಕ್ಕೂ ಮೊದಲು ಶ್ರೀ ಲೆಡ್ ಬೀಟರ್ ಅವರು, ಲೈಂಗಿಕ ಒತ್ತಡ ಹೆಚ್ಚು ಕಂಡು ಬಂದ ವಿದ್ಯಾರ್ಥಿಗಳಿಗೆ ಮುಷ್ಟಿ ಮೈಥುನಕ್ಕೆ ಪ್ರಚೋದಿಸಿದ್ದರಿಂದ, ಲೈಂಗಿಕವಾಗಿ ಶ್ರೀ ಲೆಡ್ ಬೀಟರ್ ಅವರು ಪರಿಶುದ್ಧರಲ್ಲ ಎಂಬ ವಾದ-ವಿವಾದ ಎದ್ದು, ಲೆಡ್ ಬೀಟರ್‌ರು ಸೊಸ್ಯಾಟಿಗೆ ರಾಜೀನಾಮೆ ಕೊಡುವ ಹಂತಕ್ಕೂ ಹೋಗಿತ್ತು. ಆದರೆ ಶ್ರೀ ಆಲ್ಕಾಟ್ ಅವರು ತಮ್ಮ ಮರಣ ಪೂರ್ವದಲ್ಲಿ ತಮ್ಮ ಅತೀಂದ್ರಿಯಶಕ್ತಿಗೆ ಗೋಚರಿಸಿದ ತಮ್ಮ ಗುರುವಿನ ಆಣತಿಯಂತೆ ಶ್ರೀ ಲೆಡ್ ಬೀಟರ್‌ಗೆ ಕ್ಷಮಾಪಣೆ ಪತ್ರ ಬರೆದು, ಲೆಡ್ ಬೀಟರ್ ಅವರು ಸೊಸ್ಯಾಟಿಗೆ ಪುನಃ ಬರುವಂತೆ ಆಯಿತು. ಅವರು ಸಣ್ಣ ಮಕ್ಕಳನ್ನು ತರಬೇತಿಗೊಳಿಸುವಲ್ಲಿ ಸಿದ್ಧಹಸ್ತರೆಂಬ ಖ್ಯಾತಿ ಇತ್ತು.

ನಾರಾಯಣಯ್ಯ ಅವರು ಕೃಷ್ಣಮೂರ್ತಿ ಹಾಗು ತಮ್ಮ ಇತರ ಮಕ್ಕಳೊಂದಿಗೆ ಅಡ್ಯಾರಿಗೆ ಬಂದು ನೆಲೆಸಿದ ಮೂರು ವಾರದೊಳಗೆ ಲೆಡ್ ಬೀಟರ್

ಅಡ್ಯಾರಿಗೆ ಬಂದಿದ್ದರು. ಲೆಡ್ ಬೀಟರ್ ಅವರಿಗೆ ೬೨ ವರ್ಷ ವಯಸ್ಸಾಗಿದ್ದರೂ ಮೊದಲಿನಷ್ಟೇ ಉಕ್ಕೇರುವ ಉತ್ಸಾಹದಿಂದ, ಚುರುಕುತನದಿಂದ ಕೆಲಸ ಮಾಡುತ್ತಿದ್ದರು.

ಒಂದು ಸಂಜೆ ತಮ್ಮ ಯುವಸ್ನೇಹಿತರೊಂದಿಗೆ ಸಮುದ್ರಸ್ನಾನಕ್ಕೆ ಹೋಗಿದ್ದ ಲೆಡ್ ಬೀಟರ್, ಹಿಂದಿರುಗಿದ ಬಳಿಕ ಅಂದು ತಾವು ಅತ್ಯಂತ ತೇಜಸ್ವೀ ಪ್ರಭಾವಳಿ ಇರುವ ಬಾಲಕರನ್ನು ನೋಡಿರುವದಾಗಿ ತಿಳಿಸಿದರು. ಮನೆಪಾಠದಲ್ಲಿ ನೆರವಾಗುವಾಗ ಗಮನಕ್ಕೆ ಬಂದ ಸ್ವಲ್ಪ ಮಡ್ಡುತಲೆಯ ಕೃಷ್ಣಮೂರ್ತಿಯೇ ಆ ಬಾಲಕ ಎಂದು ತಿಳಿದಾಗ ಶ್ರೀ ವುಡ್ ಅವರಿಗೆ ತುಂಬ ಆಶ್ಚರ್ಯವಾಯಿತು. ಆದರೆ ಈ ಸಂಗತಿಯಿಂದ ವಿಚಲಿತಗೊಳ್ಳದ ಲೆಡ್ ಬೀಟರ್, ಆ ಬಾಲಕ ಒಂದು ದಿನ ಶ್ರೇಷ್ಠ ಆಧ್ಯಾತ್ಮಿಕ ಗುರುವಾಗುತ್ತಾನೆಂದೂ, ಶ್ರೇಷ್ಠತಮ ಭಾಷಣಕಾರನಾಗುತ್ತಾನೆಂದೂ ಭವಿಷ್ಯ ನುಡಿದರು- “ಶ್ರೀಮತಿ ಬೆಸೆಂಟ್‌ರಷ್ಟು ದೊಡ್ಡವನಾಗುತ್ತಾನೋ ?” ಎಂದು ಪ್ರಶ್ನಿಸಿದ್ದಕ್ಕೆ, ‘ಅವರಿಗಿಂತಲೂ ದೊಡ್ಡ ಮನುಷ್ಯನಾಗುತ್ತಾನೆಂ’ ದು ನುಡಿದರು ಲೆಡ್ ಬೀಟರ್.

ಕೃಷ್ಣನ ಬಾಹ್ಯರೂಪ ಲೆಡ್ ಬೀಟರ್ ಅವರನ್ನು ಸೆಳೆಯುವಂತಿರಲಿಲ್ಲ. ಸುಂದರವಾದ ಕಣ್ಣುಗಳಿದ್ದರೂ, ಬಡತನ, ಹಸಿವೆ, ಕೊಳೆಗಳು ತುಂಬಿದ್ದವು. ಎಲುಬಿಗೆ ಅಂಟಿಕೊಂಡ ಚರ್ಮ, ಮೇಲಿಂದ ಮೇಲೆ ಬರುವ ಕೆಮ್ಮು, ಸೊಟ್ಟಪಟ್ಟ ಹಲ್ಲು, ಮೊಳಕಾಲವರೆಗೆ ಬಿಟ್ಟ ಉದ್ದ ಜುಟ್ಟು, ದಡ್ಡತನ ತೋರುವ ಖಾಲಿ ದೃಷ್ಟಿ–ದೈಹಿಕವಾಗಿ, ಮಾನಸಿಕವಾಗಿ ಶಾಲೆಗೂ ಹೋಗಲಾರದ ಸ್ಥಿತಿಯಲ್ಲಿದ್ದ ಅತ್ಯಂತ ಕಿರಿಯ ತಮ್ಮ ಸದಾನಂದನಿಗೂ ಕೃಷ್ಣನಿಗೂ ಯಾವ ಭೇದವೂ ಇಲ್ಲವೆಂದು ಎಲ್ಲರೂ, ಲೆಡ್ ಬೀಟರ್ ಅವನನ್ನು ಕಾಣುವ ಮೊದಲು ಹೇಳುತ್ತಿದ್ದರು. ಅಲ್ಲದೇ ಕೃಷ್ಣ ದೈಹಿಕವಾಗಿ ಎಷ್ಟು ದುರ್ಬಲನಾಗಿದ್ದನೆಂದರೆ – ಆದರಲ್ಲೇ ಒಂದು ದಿನ ಆತ ಸಾಯಲೂಬಹುದು ಎಂದು ನಾರಾಯಣಯ್ಯ ವುಡ್ ಅವರ ಹತ್ತಿರ ಹಲವು ಬಾರಿ ಹೇಳಿದ್ದರು.

ಕೃಷ್ಣನ ಭೇಟಿಯಾದ ನಂತರ ಸ್ವಲ್ಪ ದಿನಗಳಲ್ಲಿ ಮತ್ತೇನೂ ಘಟಿಸದಿದ್ದರೆ ಬಾಲಕ ಕೃಷ್ಣ ಮೈತ್ರೇಯ ದೇವನ ವಾಹಕನಾಗುವುದರಿಂದ ಆತನನ್ನು

ತರಬೇತಿಗೊಳಿಸಬೇಕೆಂದು ತಮಗೆ ಭುವರ್ಲೋಕದಲ್ಲಿ ದರ್ಶನ ನೀಡುವ ತಮ್ಮ ಗುರುಗಳಿಂದ ನಿರ್ದೇಶನ ಬಂದಿದೆ ಎಂದು ಲೆಡ್ ಬೀಟರ್, ವುಡ್ ಅವರಿಗೆ ಹೇಳಿದರು. ನಂತರ ನಾರಾಯಣಯ್ಯ ಅವರ ಹತ್ತಿರ ಬಾಲಕ ಕೃಷ್ಣನಿಗೆ ಶಾಲೆ ಇರದಿದ್ದಾಗ ತಮ್ಮ ಬಂಗಲೆಗೆ ಕರೆದು ತರಬೇಕೆಂದು ಲೆಡ್ ಬೀಟರ್ ಕೇಳಿಕೊಂಡರು. ತಮ್ಮ ಪಕ್ಕದ ಸೋಫಾದಲ್ಲಿ ಕೃಷ್ಣನನ್ನು ಕುಳ್ಳಿರಿಸಿಕೊಂಡು, ಆತನ ತಲೆಯ ಮೇಲೆ ತಮ್ಮ ಕೈಯನ್ನಿಟ್ಟು, ಆತನ ಹಿಂದಿನ ಜನ್ಮಗಳ ವೃತ್ತಾಂತಗಳನ್ನು ನುಡಿಯಲಾರಂಭಿಸಿದರು. ನಂತರದ ಪ್ರತಿ ಶನಿವಾರ ಹಾಗು ರವಿವಾರ ಇದೇ ತರಹ ಹಿಂದಿನ ಜನ್ಮಗಳ ವೃತ್ತಾಂತಗಳ ವಿವರಣೆ ನಡೆಯಿತು. ಮೊದಮೊದಲು ನಾರಾಯಣಯ್ಯ ಅವರೇ ಹಾಜರಿದ್ದು ಅವೆಲ್ಲ-ವನ್ನು ಬರೆದುಕೊಳ್ಳುತ್ತಿದ್ದರು. ನಂತರ ವುಡ್ ಅವರು ಅವೆಲ್ಲವನ್ನೂ ಶೀಘ್ರ ಲಿಪಿಯಲ್ಲಿ ಬರೆದಿರಿಸಿಕೊಳ್ಳಲಾರಂಭಿಸಿದರು ' ಅಲ್ಸಿಯನ್ ' ಎಂದು ಆತನಿಗೆ ಹೆಸರಿಟ್ಟು ಕೃಷ್ಣಮೂರ್ತಿಯ ಗತಜನ್ಮಗಳ ೩೦ ಅವತಾರಗಳನ್ನು (ಕ್ರಿ.ಪೂ. ೬೬೨ ರಿಂದ ಕ್ರಿ. ಶ. ೬೨೪ ರ ಅವಧಿಯೊಳಗಿನ)— ತಮ್ಮ ಅತೀಂದ್ರಿಯ ಶಕ್ತಿಯ ಮೂಲಕ ಅರಿತುಕೊಂಡು ಅವುಗಳ ವಿವರಪೂರ್ಣ ಮಾಹಿತಿಯನ್ನು ೧೯೧೦ ರ ಏಪ್ರಿಲ್‌ದ ' ಥಿಯೊಸೊಫಿಸ್ಟ್ ' ಪತ್ರಿಕೆಯಲ್ಲಿ ಪ್ರಕಟ ಮಾಡಿದರು. ಈ ವೃತ್ತಾಂತದಲ್ಲಿ ಸೊಸೈಟಿಯ ಸದಸ್ಯರೆಲ್ಲರೂ ಗುಪ್ತನಾಮದಲ್ಲಿ ಸೇರ್ಪಡೆಯಾಗತೊಡಗಿ, ಸೊಸೈಟಿಯ ಪ್ರತಿಯೊಬ್ಬ ಸದಸ್ಯ ಶಿಕ್ಷಕಗ, ಗುರುವಿಗೆ ತಾವೆಷ್ಟು ಹತ್ತಿರ, ಅದೂ ಯಾವ-ಯಾವ ಜನ್ಮದಲ್ಲಿ— ಎಂದು ಹೇಳಿ-ಕೊಳ್ಳುವಂತಹ ಸನ್ನಿವೇಶ ಸೃಷ್ಟಿಯಾಯಿತು.

ಈ ಅವಧಿಯಲ್ಲಿ ಕೃಷ್ಣಮೂರ್ತಿ ಹಾಗು ನಿತ್ಯರಿಗೆ ಅವರ ಸದ್ಯದ ಸಾಂಪ್ರದಾಯಿಕ ವಾತಾವರಣದಿಂದ ಬೇರ್ಪಡಿಸಿ, ಆಹಾರ ಬದಲಾಯಿಸಿ, ನಿಯಮಿತ ದೈಹಿಕ ವ್ಯಾಯಾಮ ಹಾಗು ಪಾಶ್ಚಿಮಾತ್ಯ ಸ್ನಾನವಿಧಾನ ಕಲಿಸಬೇಕು, ಬೂಟುದಾರ ಮಾಂಲು ಯೋಗ್ಯರಾದ ಅವರ ಶಿಕ್ಷಕರಿಂದ ಹೊಡೆತ ತಿನ್ನುವ ಅವರನ್ನು, ದೂರ ಒಯ್ದು ಬೇರೆ ಶಾಲೆಗೆ ಕಳಿಸಿ ವಿದ್ಯೆ ಕಲಿಸಬೇಕು; ಇದಕ್ಕೆಲ್ಲ ತುಂಬ ವಿರೋಧ ಬರುತ್ತದೆ " ಎಂಬುದಾಗಿ ಲೆಡ್ ಬೀಟರ್ ಅವರಿಗೆ ಅವರ ಗುರುಗಳು ನಿರ್ದೇಶನ ನೀಡಿದ್ದಾರೆಂದು ತಿಳಿಸಿದ್ದರು.

ಶಾಲೆಯಿಂದ ಅವರನ್ನು ತಪ್ಪಿಸಿದರೆ ನಿರ್ದೇಶನದಂತೆ ನಡೆಯಬಹು-ದಾದರೂ, ತಮ್ಮ ಹಿಂದಿನ ಅನುಭವದ ಕಹಿಯಿಂದ ಲೆಡ್ ಬೀಟರ್ ತಾವೇ ನೇರವಾಗಿ ಅವನ್ನು ಮಾಡಲು ಹಿಂಜರಿದರು. ಆದರೆ ಒಂದು ದಿನ ದನಕ್ಕೆ ಹೊಡೆದ ಹಾಗೆ ಆ ಹುಡುಗರನ್ನು ಹೊಡೆದಿದ್ದರಿಂದ ಅವರ ಶಿಕ್ಷಕರು, ಅವರ ತೇಜೋಶರೀರ ಕದಡಿಹೋದದ್ದರಿಂದ, ಲೆಡ್ ಬೀಟರ್ ನಾರಾಯಣಯ್ಯರನ್ನು ಕರೆದು, ಹುಡುಗರನ್ನು ಶಾಲೆಯಿಂದ ಬಿಡಿಸಲು ಒತ್ತಾಯ ಮಾಡಲೇ ಬೇಕಾಯಿತು. ಸರಕಾರಿ ಶಾಲೆಯಲ್ಲಿ ಕಲಿಯದೇ ಹೋದರೆ ಭವಿಷ್ಯದಲ್ಲಿ ಉದ್ಯೋಗಕ್ಕೆ, ಜೀವನೋಪಾಯಕ್ಕೆ ತೊಂದರೆ ಆದೀತೆಂಬ ಆತಂಕದಿಂದ ನಾರಾಯಣಯ್ಯ ಅನುಮಾನಿಸಿದರು. ಆದರೆ ಅವರ ಬಗ್ಗೆ ಶ್ರೀಮತಿ ಬೆಸೆಂಟರು ಸ್ವತಃ ಮುತುವರ್ಜಿ ವಹಿಸುವದಷ್ಟೇ ಅಲ್ಲ, ಅವರ ವಿದ್ಯಾಭ್ಯಾಸಕ್ಕೆ ಇಂಗ್ಲೆಂಡಿ-ನಲ್ಲಿ ವ್ಯವಸ್ಥೆ ಮಾಡಬಹುದೆಂದು ಲೆಡ್ ಬೀಟರ್ ಹೇಳಿದರು. ಇದಕ್ಕೂ ನಾರಾಯಣಯ್ಯ ಅವರು ಒಪ್ಪಿದ ಮೇಲೆ ರಿಡ್‌ಕ್ಲಾರ್ಕ್, ಸುಬ್ರಹ್ಮಣ್ಯಂ ಅಯ್ಯರ್, ಅರ್ನೆಸ್ಟ್, ವುಡ್ ಹಾಗು ಡಾನ್ ಫೆಬ್ರಿಜಿಯೋ ರಸ್ಪೋಲಿ ಅವರು ಅಕ್ಯಾಗನ್ ಬಂಗ್ಲೆಯಲ್ಲಿ ಹುಡುಗರಿಗೆ ಪಾಠ ಹೇಳಲಾರಂಭಿಸಿದರು. ಸ್ವತಃ ಲೆಡ್ ಬೀಟರ್ ಅವರು ಇತಿಹಾಸವನ್ನು ಅವರಿಗೆ ಬಿಡುವಿನ ಕಾಲದಲ್ಲಿ ಕಲಿಸಲಾರಂಭಿಸಿದರು. ಆದರೆ 'ಇಂಗ್ಲೀಷ್' ಕಲಿಕೆಯ ಮೇಲೆ ವಿಶೇಷ ಒತ್ತುಕೊಡಲಾಗಿತ್ತು : ಶ್ರೀಮತಿ ಬೆಸೆಂಟ್‌ರು ಹಿಂದಿರುಗಿದಾಗ ಕೃಷ್ಣಮೂರ್ತಿ ಅವರೊಂದಿಗೆ ಮಾತನಾಡಲು ಸಮರ್ಥನಾಗಬೇಕೆಂಬ ಉದ್ದೇಶದಿಂದ.

ಈಗ ತಂದೆಯೊಂದಿಗೇ ಆ ಬಾಲಕರು ಮಲಗುವುದು, ಊಟ ಮಾಡು-ವುದು ಇತ್ಯಾದಿ ಮಾಡುತ್ತಿದ್ದರೂ ಹೆಚ್ಚಿನ ವೇಳೆಯನ್ನು ಲೆಡ್ ಬೀಟರ್ ಹಾಗು ಇನ್ನಿತರ ಶಿಕ್ಷಕರೊಂದಿಗೆ ಕಳೆಯುತ್ತಿದ್ದರು. ಕಣ್ಣುಹುಬ್ಬಿನಲ್ಲೂ ಮನೆ ಮಾಡಿಕೊಳ್ಳುವಷ್ಟರ ಮಟ್ಟಿಗೆ ಹೇನು ತುಂಬಿದ್ದ ಅವರ ಉದ್ದ ತಲೆ-ಗೂದಲನ್ನು ಕತ್ತರಿಸಿ ಆಕಾರ ನೀಡಲಾಗಿತ್ತು; ದಂತವೈದ್ಯರಿಂದ ಕೃಷ್ಣಮೂರ್ತಿ ಅವರ ಹಲ್ಲನ್ನು ಸ್ವಚ್ಛಗೊಳಿಸಿ, ಒಂದು ಪ್ಲೇಟ್ ಇರಿಸಲಾಗಿತ್ತು; ಲೆಡ್ ಬೀಟರ್ ಅವರು ಸ್ವತಃ ತಾವೇ, ಅವರನ್ನು ಸ್ವಚ್ಛವಾಗಿ ಸ್ನಾನ ಮಾಡು-ವಂತೆ— ಅಂದರೆ ಸೊಂಟಕ್ಕೆ ಸುತ್ತಿದ್ದನ್ನು ಬಿಚ್ಚದೆ, ಹಾಗೇ ಬಸಬಸ ಎಂದು ನೀರು ಹೊಯ್ದುಕೊಳ್ಳುವ, ಮೈ ತಿಕ್ಕಿಕೊಳ್ಳದೇ ಹಾಗೇ ಒರೆಸಿಕೊಳ್ಳುವ

'ಭಾರತೀಯ ಸ್ನಾನ' ವನ್ನು ಮಾಡದೆ, ಪಾಶ್ಚಿಮಾತ್ಯ ರೀತಿಯ ಸ್ನಾನ ರೂಢಿಸಿದ್ದರಿಂದ ಮುಂದೆ ಅವರೇ ಸಿಕ್ಕಿಹಾಕಿಕೊಳ್ಳುವಂತೆ ಆಯಿತು. ಈಗ ಅವರಿಗೆ ಒಂದು ಬಗೆಯ ಕ್ರಮಬದ್ಧ ದಿನಚರಿಯನ್ನು ನೀಡಲಾಗಿತ್ತು: ಬೆಳಗಿನ ಜಾವ ೫ ಘಂಟೆಗೆ ಏಳುವುದು, ಬಾವಿ ಪಕ್ಕದಲ್ಲೇ ತಣ್ಣೀರಿನಲ್ಲಿ ಸಾಂಪ್ರದಾಯಿಕ ಬ್ರಾಹ್ಮಣರ ಸ್ನಾನ ಮಾಡುವುದು, ನಂತರ ಆಕ್ಯಾಗನ್ ಬಂಗಲೆಯಲ್ಲಿ ಸಜಾತಿ ಬ್ರಾಹ್ಮಣ ನೀಡುವ ಬಿಸಿ ಹಾಲನ್ನು ಕುಡಿಯುವುದು, ನಂತರ ಲೆಡ್‌ಬೀಟರ್ ಹತ್ತಿರ 'ಶ್ರೇಷ್ಠ ವಿಚಾರ, ವಿಷಯ' ಗಳ ಬಗ್ಗೆ ಸ್ವಲ್ಪಕಾಲ ಮಾತನಾಡಿ, ಹೊರಗೆ ಮೈದಾನದಲ್ಲಿ ವ್ಯಾಯಾಮಕ್ಕೆ ಹೊರಡುವುದು, ನಂತರ ಬಂಗ್ಲೆಗೆ ಹಿಂದಿರುಗಿ ಬಿಸಿ ನೀರಿನ ಪಾಶ್ಚಿಮಾತ್ಯ ರೀತಿಯ ಸ್ನಾನ, ಸ್ವಚ್ಛ ಬಟ್ಟೆ ಹಾಗು ದಿನದ ಪಾಠ.

ನಂತರ ಅದೇ ವರ್ಷ ಆಗಸ್ಟ್ ತಿಂಗಳಲ್ಲಿ ಕೃಷ್ಣಮೂರ್ತಿ ಹಾಗು ನಿತ್ಯ ಇಬ್ಬರೂ ನಿದ್ದೆ ಮಾಡಿದ್ದಾಗ ಅವರ ತೇಜೋ ಶರೀರಗಳನ್ನು, ತಮ್ಮ ಗುರು ಕುಥುಮಿಯವರಲ್ಲಿಗೆ ಒಯ್ದುದಾಗಿಯೂ, ಗುರು ಕುಥುಮಿ ಅವರಿಬ್ಬರನ್ನೂ ಶಿಷ್ಯರನ್ನಾಗಿ ಪರಿವೀಕ್ಷಣೆ (probation) ಗಾಗಿ ಸ್ವೀಕರಿಸುವುದಾಗಿಯೂ ಲೆಡ್‌ಬೀಟರ್ ಶ್ರೀಮತಿ ಬೆಸೆಂಟ್‌ರಿಗೆ ಬರೆದಿದ್ದಾರೆ. ಈ 'ಶಿಷ್ಯತ್ವಪಥ' ದಲ್ಲಿ ಪರಿವೀಕ್ಷಣೆ (Probation) ಹಾಗು ಸ್ವೀಕೃತಿಗಳೆಂಬ ಎರಡೂ ಹಂತಗಳಿವೆ. ಇವೆರಡರ ನಂತರವೇ 'ಪ್ರಥಮ ಉಪನಯನ' ಅಥವಾ 'ದ್ವಿಜತ್ವ ದೀಕ್ಷೆ' ಯ ಮೂಲಕ 'ಶ್ರೇಷ್ಠಶ್ವೇತ ಭ್ರಾತೃತ್ವ' ದ ಸದಸ್ಯತ್ವ ದೊರಕುತ್ತದೆ. ಇಂಥ ನಾಲ್ಕು 'ದೀಕ್ಷಾ' ಗಳ ಅಂತ್ಯದಲ್ಲಿ ಪ್ರಾಪ್ತವಾಗುವಂತಹದು ಅಭಿಜ್ಞತ್ವ (Adepthood) ಶ್ರೀಮತಿ ಬೆಸೆಂಟ್ ಹಾಗು ಲೆಡ್ ಬೀಟರ್ ಅವರು ಈ ನಾಲ್ಕನೆಯ ದೀಕ್ಷಾ ಘಟ್ಟ ದಾಟಿದ್ದರು. ಶ್ರೀಮತಿ ಬೆಸೆಂಟ್‌ರು ೧೯೦೭ ರಲ್ಲಿ ಥಿಯೊಸೊಫಿಕಲ್ ಸೊಸ್ಯಾಟಿಯ ಅಧ್ಯಕ್ಷೆಯಾದದ್ದು ಈ ಹಂತದಲ್ಲಿ. ೧೯೦೬ ರಲ್ಲಿ ಲೆಡ್‌ಬೀಟರ್‌ಗೆ ಬಂದ ಕಳಂಕ, ಅವರ ಮುಂದಿನ ಪ್ರಗತಿ ಕೇಳಿದ ಆಹುತಿ ಎಂದು ಎಲ್ಲರೂ ನಂಬಿದ್ದರು. ಅವರಿಬ್ಬರಿಗೂ ಪರಿಪೂರ್ಣತ್ವ ತಲುಪಲು ಕೇವಲ ಇನ್ನೊಂದೇ ಮೆಟ್ಟಿಲು ದಾಟಬೇಕಾಗಿತ್ತು.

'ಪ್ರಥಮ ದ್ವಿಜತ್ವ ದೀಕ್ಷೆ' ಗೆ ಬೇಕಾದ ಅರ್ಹತೆಗಳೂ ಮಾನವಸಾಧ್ಯವಲ್ಲವೆಂದೇ ತೋರುತ್ತವೆ: ಪರಿಪೂರ್ಣ ನೈತಿಕ ಆರೋಗ್ಯ. ಸಂಪೂರ್ಣ

ಮಾನಸಿಕ ಹಾಗು ದೈಹಿಕ ಪರಿಶುದ್ಧತೆ, ನಿಸ್ವಾರ್ಥ ಗುರಿ, ಸಾರ್ವತ್ರಿಕ ಔದಾರ್ಯ, ಸಕಲ ಜೀವಿಗಳಲ್ಲಿ ದಯೆ, ಎಂಥ ದುರ್ಭರ ಕ್ಷಣಗಳಲ್ಲೂ ಅಚಲ ಧೈರ್ಯ, ಸತ್ಯನಿಷ್ಠೆ, ಈ ಲೌಕಿಕ ಜಗತ್ತಿನ ಪ್ರತಿ ವಸ್ತುವಿನ ಬಗ್ಗೆ ಪ್ರಶಂಸೆ ಹಾಗು ಪ್ರಶಾಂತ ನಿರ್ಲಿಪ್ತತೆ.

ಕೃಷ್ಣನ ' ಪರಿವೀಕ್ಷಣೆ ' ಹಾಗು ಸ್ವೀಕೃತಿಗಳ ಮಧ್ಯದ ಐದು ತಿಂಗ-ಳಾವಧಿಯಲ್ಲಿ ಗುರು ಕುಥುಮಿ ಇರುವೆಡೆ ೧೫ ನಿಮಿಷಗಳ ಪಾಠಕ್ಕಾಗಿ ಪ್ರತಿ ರಾತ್ರಿ ಕೃಷ್ಣನ ಜ್ಯೋತಿಶ್ಶರೀರರೂಪದಲ್ಲಿ ಕೃಷ್ಣನನ್ನು ಲೆಡ್ ಬೀಟರ್ ಒಯ್ಯುತ್ತಿದ್ದರು, ಹಾಗು ಗುರು ಕುಥುಮಿ ಆ ೧೫ ನಿಮಿಷಗಳ ಕೊನೆಗೆ ಕೃಷ್ಣ ನೆನಪಿಡಲು ಅನುಕೂಲವಾಗುವಂತೆ ಅವೆಲ್ಲವನ್ನೂ ಸಂಕ್ಷೇಪಿಸಿ ಸರಳ ವಾಕ್ಯ-ದಲ್ಲಿ ಹೇಳುತ್ತಿದ್ದರು. ಮರುದಿನ ಮುಂಜಾನೆ ಆ ಲಕ್ಶ್ಯಾಗನ್ ಬಂಗ್ಲೆಯಲ್ಲಿ ಕೃಷ್ಣ ಹಿಂದಿನ ರಾತ್ರಿ ಗುರು ಕುಥುಮಿ ಕಲಿಸಿದ್ದನ್ನೆಲ್ಲ ತನಗೆ ನೆನಪಿರುವ ಹಾಗೆ ಬರೆದಿಡಲು ಹೆಣಗುತ್ತಿದ್ದ. ತುಂಬ ಕಷ್ಟಪಟ್ಟು ಕೃಷ್ಣ ಅವನ್ನು ಬರೆಯು-ತ್ತಿದ್ದರೆಂದೂ, ಸ್ಪೆಲಿಂಗ್ ಹಾಗು ಉಚ್ಚಾರಗಳ ಬಗ್ಗೆಯಷ್ಟೇ ಆತ ಹೊರಗಿ-ನವರ ಸಹಾಯ ಪಡೆಯುತ್ತಿದ್ದನೆಂದೂ ಕ್ಲಾರ್ಕ್ ಹಾಗೂ ಶ್ರೀಮತಿ ಶಸಾಕ್ ದೃಢಪಡಿಸಿದ್ದಾರೆ. ಆ ಟಿಪ್ಪಣಿಗಳೆಲ್ಲ ' ಗುರುವಿನ ಪದತಲದಲ್ಲಿ ' (**At the Feet of the Master**) ಎಂಬ ಕಿರುಹೊತ್ತಗೆಯಲ್ಲಿ ಪ್ರಕಟ-ಗೊಂಡಿವೆ. ಅದು ಸುಮಾರು ೩೦ ರಷ್ಟು ವಿವಿಧ ಭಾಷೆಗಳಲ್ಲಿ ಪ್ರಕಟ-ಗೊಂಡಿದೆಯಷ್ಟೇ ಅಲ್ಲ, ಇಂಗ್ಲೀಷಿದಲ್ಲಿ ಸುಮಾರು ೪೦ ಸಾರೆ ಪುನರ್ಮುದ್ರಣ-ಗೊಂಡಿರುವುದರ ಜೊತೆಗೆ ಮತ್ತೆ ಪುನರ್ಮುದ್ರಣಕ್ಕೆ ಅಣಿಯಾಗುತ್ತಿದೆ-ಯಂತೆ.

೧೯೦೯ ರ ನವ್ಹಂಬರದಲ್ಲಿ ಶ್ರೀಮತಿ ಬೆಸೆಂಟ್‌ರು ಭಾರತಕ್ಕೆ ಮರಳಿದ ನಂತರ ಕೃಷ್ಣ ಹಾಗು ನಿತ್ಯರನ್ನು ಕಂಡು ಸಂತೋಷಪಟ್ಟರು. ನಂತರ ತಾವು ಹೋಗುವ ಕಡೆ ಸಾಧ್ಯವಿದ್ದಾಗಲೆಲ್ಲ, ಇವರಿಬ್ಬರನ್ನೂ ಕರೆದೊಯ್ದು ಪರಿಚ-ಯಿಸತೊಡಗಿದರು. ಲೆಡ್ ಬೀಟರ್ ಬಗ್ಗೆ ಅವರ ಪೂರ್ವೇತಿಹಾಸದ ಮೂಲಕ ಜುಗುಪ್ಸೆ ತಾಳಿದ್ದ ನಾರಾಯಣಯ್ಯ ಅವರಿಗೆ ನಯವಾಗಿ, ಲೆಡ್ ಬೀಟರ್ ಅವರಿಂದ ಬರುವ ಗುರುಗಳ ನಿರ್ದೇಶನವನ್ನು ಚಾಚೂ ತಪ್ಪದೆ ಪಾಲಿಸಬೇಕೆಂದು ಹೇಳಿದರು.

೧೯೧೦ ರ ಜನೇವರಿಯಲ್ಲಿ "ಪ್ರಥಮ ದ್ವಿಜತ್ವದೀಕ್ಷಾಪ್ರದಾನ" ಆದ ಬಗ್ಗೆ ವಿವರವಾದ ದಾಖಲೆಗಳಿವೆ. ಇದರ ನಂತರ ಕೃಷ್ಣ, ಲೆಡ್‌ಬೀಟರ್ ಅವರ ಮಾರ್ಗದರ್ಶನದಲ್ಲೇ ವ್ಯವಹರಿಸತೊಡಗಬೇಕಾಯಿತು.

೧೯೧೧ ರ ಜನವರಿ ೧೧ ರಂದು ಜಾರ್ಜ್ ಅರುಂಡಲೆ ಅವರು ಕೃಷ್ಣ-ಮೂರ್ತಿ ಅವರ ಪ್ರಥಮದೀಕ್ಷಾಪ್ರದಾನದ ವಾರ್ಷಿಕೋತ್ಸವದಂದು "ಆರ್ಡರ್ ಆಫ್ ದಿ ರೈಜಿಂಗ್ ಸನ್" (ಉದಯಿಸುತ್ತಿರುವ ಸೂರ್ಯಪಥ.) ಎನ್ನುವ ಸಂಸ್ಥೆಯನ್ನು ಕಾಶಿಯಲ್ಲಿ ಸ್ಥಾಪಿಸಿದರು. ಕೆಲವು ತಿಂಗಳುಗಳ ಬಳಿಕ ಶ್ರೀಮತಿ ಬೆಸೆಂಟ್ ಹಾಗು ಲೆಡ್ ಬೀಟರ್ ಅವರು ತುಂಬ ಉತ್ಸಾಹದಿಂದ ಜಾರ್ಜ್ ಅರುಂಡಲ್ ಅವರ ಸಲಹೆಯಂತೆ "ಆರ್ಡರ್ ಆಫ್ ದಿ ಸ್ಟಾರ್ ಇನ್ ದಿ ಈಸ್ಟ್" ಎಂಬ ಬೇರೆ ಹೆಸರಿನಿಂದ ಅದು ಅಂತಾರಾಷ್ಟ್ರೀಯ ಸಂಘಟನೆಯಾಗಿ ಬೆಳೆಯತೊಡಗಿತು. ಪ್ರತಿ ರಾಷ್ಟ್ರಕ್ಕೂ ಒಬ್ಬ ರಾಷ್ಟ್ರೀಯ ಪ್ರತಿನಿಧಿ, ಸಂಘಟನಾ ಕಾರ್ಯದರ್ಶಿಗಳ ನೇಮಕವಾಯಿತು. ಶ್ರೀಮತಿ ಬೆಸೆಂಟ್ ಹಾಗು ಲೆಡ್ ಬೀಟರ್ ಈ ಹೊಸ ಸಂಘಟನೆಯ ರಕ್ಷಕರು, ಪೋಷಕರು; ಕೃಷ್ಣ ಮುಖ್ಯಸ್ಥ, ಅರುಂಡಲೇ ಮುಖ್ಯಸ್ಥರ ಆಪ್ತ ಕಾರ್ಯದರ್ಶಿ ಹಾಗು ವುಡ್ ಹೌಸ್ ಸಂಘಟನಾ ಕಾರ್ಯದರ್ಶಿಯಾಗಿ ನೇಮಕಗೊಂಡರು. ಇದರ ಸದಸ್ಯತ್ವಕ್ಕೆ ಚಂದಾ ಆಗಲಿ, ವಿಶೇಷ ಕಾನೂನಾಗಲಿ ಇದ್ದಿಲ್ಲ. ಸದಸ್ಯತ್ವದ ಸರ್ಟಿಫಿಕೇಟ್ ಜತೆಗೆ ಪಂಥದ ಬ್ಯಾಜು ಧರಿಸಲು ಅನುಮತಿನೀಡುವುದಷ್ಟೇ ಆಗಿತ್ತು. ಇದರೊಟ್ಟಿಗೆ "ಹೆರಾಲ್ಡ್ ಆಫ್ ದಿ ಸ್ಟಾರ್," (ನಕ್ಷತ್ರದ ಅಗ್ರಗಾಮಿ ದೂತ) ಎಂಬ ತ್ರೈಮಾಸಿಕ, ಕೃಷ್ಣಮೂರ್ತಿ— ಸಂಪಾದಕ-ರಾಗಿ ಅಡ್ಯಾರಿನಲ್ಲಿ ಆರಂಭವಾಯಿತು.

ಆ ಹೊತ್ತಿಗೆ ಜಗತ್ತಿನಾದ್ಯಂತ ಕೇವಲ ೧೬,೦೦೦ ಸಕ್ರಿಯ ಸದಸ್ಯ-ರಿದ್ದರು. ಅವರೆಲ್ಲರೂ ತಮ್ಮ ಪ್ರದೇಶ ಅಥವಾ ಚಟುವಟಿಕೆಗಳಿಗನು-ಸಾರವಾಗಿ ಶಾಖೋಪಶಾಖೆಗಳಾಗಿ ಸ್ವತಂತ್ರವಾಗಿದ್ದರು, ವಿಂಗಡಣೆ-ಗೊಂಡಿದ್ದರು. ಹಿಂದೊಮ್ಮೆ ಲೆಡ್ ಬೀಟರ್ ಪ್ರಕರಣದಲ್ಲಿ ಅಮೇರಿಕೆಯಲ್ಲಿ ಸಂಘಟನೆ ಹೋಳಾದಂತೆ, ಈ "ಆರ್ಡರ್ ಆಫ್ ಸ್ಟಾರ್ ಇನ್ ದಿ ಈಸ್ಟ್"ನ ಹುಟ್ಟಿನಿಂದ ಮತ್ತೊಮ್ಮೆ ಜರ್ಮನಿಯಲ್ಲಿ ಥಿಯೊಸೊಫಿಕಲ್ ಸೊಸೈಟಿ ಇಬ್ಭಾಗವಾಯಿತು. ' ಆದರೆ ಇದರಿಂದ ಚೇತರಿಸಿಕೊಂಡ ಥಿಯೊಸೊಫಿಕಲ್

ಸೊಸೈಟಿ ೧೯೨೦ ರ ಹೊತ್ತಿಗೆ ೩೬,೩೫೦ ಸದಸ್ಯರನ್ನೂ, ೧೯೨೮ ರ ಹೊತ್ತಿಗೆ ೪೫,೦೦೦ ಸದಸ್ಯರನ್ನೂ ಹೊಂದಿತ್ತು.

ಈ ಮಧ್ಯೆ ಕೃಷ್ಣಮೂರ್ತಿ ಹಾಗು ನಿತ್ಯರ ವಿದ್ಯಾಭ್ಯಾಸಕ್ಕೆ ಏನೂ ವ್ಯತ್ಯಯ ಬರಕೂಡದೆಂದು ಶ್ರೀಮತಿ ಬೆಸೆಂಟರು ಕಾನೂನು ರೀತ್ಯಾ ಆ ಹುಡುಗರಿಗೆ ತಾವು ಪಾಲಕರೆಂದು, ನಾರಾಯಣಯ್ಯ ಸ್ವಯಂ ಇಚ್ಛೆಯಿಂದ ಒಪ್ಪಿಕೊಳ್ಳುವಂತೆ ಮಾಡಿ ಬರೆಸಿಕೊಂಡಿದ್ದರು. ಆದರೆ ನಾರಾಯಣಯ್ಯ ಅವರಿಗೆ ಲೆಡ್ ಬೀಟರ್ ಬಗ್ಗೆ, ಅವರ ಪೂರ್ವೇತಿಹಾಸದ ಜ್ಞಾನದಿಂದ ಜಿಗುಪ್ಸೆ ಇದ್ದುದರಿಂದ ಏನು ಹೇಳಿದರೂ ನಂಬುತ್ತಿದ್ದರು. ಗುರುಗಳ ಆದೇಶದಂತೆ ದೈಹಿಕವಾಗಿಯೂ ಆ ಮಕ್ಕಳನ್ನು, ವಿಶೇಷವಾಗಿ ಕೃಷ್ಣಮೂರ್ತಿಯವರನ್ನು ಆರೋಗ್ಯವಂತರನ್ನಾಗಿ ಮಾಡುವ ಉಪಕ್ರಮದಲ್ಲಿ, ಲೆಡ್ ಬೀಟರ್ ಸ್ವತಃ ತಾವೇ ಎಣ್ಣೆ ಅಭ್ಯಂಜನ ಸ್ನಾನಾದಿಗಳನ್ನು ಮಾಡಿಸುತ್ತಿದ್ದರಿಂದ— ಅದೂ ಪಾಶ್ಚಿಮಾತ್ಯ ರೀತಿಯಿಂದ— ಇಲ್ಲಸಲ್ಲದ ಅಪಪ್ರಚಾರಕ್ಕೆ ಸುರುವಾಯಿತು. ಅಲ್ಲಿ ಕೆಲಸಕ್ಕಿದ್ದ ಲಕ್ಷ್ಮಣನೆಂಬುವವನು ಈ ಅಪಪ್ರಚಾರದಲ್ಲಿ ಮೇರುಪಾಲು ವಹಿಸಿದವ. ಅವನ ಮಾತನ್ನು ನಂಬಿ ನಾರಾಯಣಯ್ಯ ತಮ್ಮ ಮಕ್ಕಳನ್ನು ತಮಗೆ ಹಿಂತಿರುಗಿ ಕೊಡಬೇಕೆಂದು ಕೋರ್ಟಿನಲ್ಲಿ ದಾವೆ ಹಾಕಿದರು. ಹಲವು ವರ್ಷಗಳ ಕಾಲ ಈ ಪ್ರಕರಣ ಕೋರ್ಟಿನಲ್ಲಿ ನಡೆದು, ಅಂತಿಮವಾಗಿ ಆ ಮಕ್ಕಳಿಗೆ, ತಮ್ಮ ತಂದೆ ಹಾಗು ಶ್ರೀಮತಿ ಆ್ಯನಿ ಬೆಸೆಂಟ್‌ರು ಇವರಿಬ್ಬರಲ್ಲಿ ಒಬ್ಬರನ್ನು ಆಯ್ಕೆ ಮಾಡಿಕೊಳ್ಳುವಂತೆ ಇಂಗ್ಲೆಂಡಿನಲ್ಲಿ ಪ್ರಿವಿ ಕೌನ್ಸಿಲ್ ಆಜ್ಞೆ ನೀಡಿತು. ಆಗ ಕೃಷ್ಣಮೂರ್ತಿ ಹಾಗು ನಿತ್ಯ ಶ್ರೀಮತಿ ಬೆಸೆಂಟ್‌ರನ್ನೇ ಆಯ್ಕೆ ಮಾಡಿಕೊಂಡರು. ಈ ಹಗರಣ ಭಾರತದಾದ್ಯಂತ ಕೋಲಾಹಲ ನಡೆಸಿರುವಾಗ, ಆ ಬಾಲಕರಿಬ್ಬರಿಗೂ ಯಾವುದೇ ಮಾನಸಿಕ ಆಘಾತ, ತೊಂದರೆ ಆಗದಂತೆ ಶ್ರೀಮತಿ ಬೆಸೆಂಟ್ ತುಂಬ ದಕ್ಷವಾಗಿ ಅವರ ವಸತಿ-ಶಿಕ್ಷಣಗಳ ಸೌಕರ್ಯಗಳನ್ನು ಯುರೋಪಿನಲ್ಲಿ ಏರ್ಪಡಿಸಿದ್ದರು.

ನಂತರ ಕೃಷ್ಣಮೂರ್ತಿ ಹಾಗು ನಿತ್ಯ ವಿದ್ಯಾಭ್ಯಾಸಕ್ಕೆ ತೊಡಗಿದರು. ಕೃಷ್ಣಮೂರ್ತಿ ಮೂರ್‍ನಾಲ್ಕು ಸಾರಿ ಕುಳಿತರೂ ಮೆಟ್ರಿಕ್ಯುಲೇಷನ್‌ಲ್ಲಿ ಪಾಸಾಗಲಿಲ್ಲ. ಆದರೆ ನಿತ್ಯ ತನ್ನ ಎಂದಿನ ಚುರುಕುತನದಿಂದ ಪದವಿ ಸಂಪಾದಿಸಿ ಮುಂದೆ ಒಂದು ವಾಣಿಜ್ಯೋದ್ದಿಮೆ ಆರಂಭಿಸುವ ಯೋಜನೆ ಹಾಕಿಕೊಂಡಿದ್ದ.

ಕೃಷ್ಣಮೂರ್ತಿ ಪ್ಯಾರಿಸಿನ ಸಾರಾಬಾನ್ ವಿಶ್ವವಿದ್ಯಾಲಯದಲ್ಲಿ ಸಂಸ್ಕೃತ-ವನ್ನೂ, ಫ್ರೆಂಚ್ ಭಾಷೆಯನ್ನೂ, ಇಂಗ್ಲೀಷ್ ಸಾಹಿತ್ಯ-ಕಾವ್ಯಾದಿಗಳನ್ನೂ ಅಧ್ಯಯನ ಮಾಡಿದರು.

ಈ ಮಧ್ಯೆ ಕೃಷ್ಣಮೂರ್ತಿ, 'ಹೆರಾಲ್ಡ್ ಆಫ್ ಸ್ಟಾರ್'ನ ಪತ್ರಿಕೆಯ ಪುನರ್ನಿರ್ಮಾಣಕ್ಕೆ ತೊಡಗಿದ್ದರು. ತ್ರೈಮಾಸಿಕವಾಗಿದ್ದ ಅದನ್ನು ಮಾಸಿಕ ಪತ್ರಿಕೆಯನ್ನಾಗಿ ಮಾಡಲು ಸಹಾಯ ಯಾಚಿಸಿ ಯೋಜನೆಯನ್ನು ಮುಂದಿಟ್ಟದ್ದೇ ತಡ, ಹಣದ ಸುರಿಮಳೆಯೇ ಆಯಿತು. ಒಂದು ಕರಪತ್ರ-ದಂತೆ ಆರಂಭಗೊಂಡಿದ್ದ ಈ ಪತ್ರಿಕೆ ಈಗ, ೧ ಜನವರಿ ೧೯೨೧ ರಿಂದ, ೬೪ ಪುಟಗಳ ರಂಗುರಂಗಿನ ಆಕರ್ಷಕ ಚಿತ್ರ, ವಿವರಣೆ, ಲೇಖನಗಳ ಸುಂದರ ಮಾಸಿಕವಾಗಿ ಆರಂಭಗೊಂಡಿತು.

ವರ್ಷಂಪ್ರತಿ ಎನ್ನುವಂತೆ ವಿಶ್ವಪರ್ಯಟನ, ಆರ್ಡರ್ ಆಫ್ ಸ್ಟಾರ್‌ದ ಶಾಖೋಪಶಾಖೆಗಳಲ್ಲಿ ಭಾಷಣ, ಚರ್ಚೆಗಳಂತೂ ಇದ್ದೇ ಇತ್ತು. ಈ ಅವಧಿ-ಯಲ್ಲಿ ಸ್ತ್ರೀಯರು ಹಲವಾರು ಯುವ ಸುಂದರಿಯರು ಕೃಷ್ಣಮೂರ್ತಿಯವ-ರನ್ನು ಆಕರ್ಷಿಸಲು ಯತ್ನಿಸುತ್ತಿದ್ದರು. ವಿಫಲರಾದಾಗ ತುಂಬ ವಿಚಿತ್ರ ವ್ಯಕ್ತಿ ಎಂದು ವಿಸ್ಮಯಪಡುತ್ತಿದ್ದರು. ವಿವಿಧ ದೇಶಗಳ ಹಲವಾರು ಜನ ಶ್ರೀಮಂತರು ಅನೇಕ ದಾನ-ದತ್ತಿಗಳನ್ನು ಕೃಷ್ಣಮೂರ್ತಿ ಅವರಿಗೆ ನೀಡಿದ್ದರು. ಹಾಲೆಂಡಿನ ಅಮೆನ್‌ದಲ್ಲಿ ತನ್ನ ೧೮ ನೆಯ ಶತಮಾನದ ಬೃಹತ್ ಕೋಟೆಯೂ ಸೇರಿದಂತೆ ೫,೦೦೦ ಎಕರೆ ಜಾಗವನ್ನು ಬೇರನ್ ಫಿಲಿಪ್ ವ್ಯಾನ್ ಪಾಲಂಡ್ ಅವರು ಕೃಷ್ಣಮೂರ್ತಿಗೆ ಅರ್ಪಿಸಿದ್ದರು. ಒಂದು ಹೊಸ ಕಾರನ್ನು ಕಾಣಿಕೆ-ಯಾಗಿ ಕೊಡುವುದರ ಜೊತೆಗೆ ಮಿಸ್ ಡಾಜ್ ಅವರು, ಕೃಷ್ಣಮೂರ್ತಿ ಅವರಿಗೆ ಬದುಕಿರುವ ವರೆಗೂ ಪ್ರತಿವರ್ಷ ೫೦೦ ಡಾಲರ್ ಹಣ ಪಡೆಯುವಂತೆ ಬ್ಯಾಂಕಿನಲ್ಲಿ ಠೇವಣಿ ಇಟ್ಟರು. ಇದೇ ರೀತಿ ಹಲವಾರು ಶ್ರೀಮಂತರು ಹಣದ ಹೊಳೆಯನ್ನೇ ಹರಿಸಿದರು. ಈ ಮಧ್ಯೆ ಹಾಲೆಂಡಿನಲ್ಲಿರುವಾಗ ಭೇಟಿಯಾದ ಕುಮಾರಿ ಹೆಲೆನ್ ನಾಥ್ ಎಂಬ ಅಮೇರಿಕನ್ ಯುವತಿಯೊಡನೆ ಕೃಷ್ಣಮೂರ್ತಿ ಪ್ರೇಮವಶರಾದರೆಂಬ ಗುಲ್ಲು ಇತ್ತು. ಆದರೆ ಆ ಪ್ರಕರಣ ಮುಂದು-ವರಿಯಲಿಲ್ಲ.

ಇಂಥ ವೈಭವದ ಉನ್ನತಿಯಲ್ಲಿರುವಾಗಲೇ ಕೃಷ್ಣಮೂರ್ತಿಯವರ ತಮ್ಮ ನಿತ್ಯನಿಗೆ ಹೃದಯಬೇನೆ ಸುರುವಾಯಿತು. ಆಗಿನ ಕಾಲದ ಅತ್ಯಂತ ಆಧುನಿಕ

ತಜ್ಞ ವೈದ್ಯರಿಗೆ ತೋರಿಸಿ, ಅವರ ಚಿಕಿತ್ಸೆಪಡೆದು, ಅವರ ಮಾರ್ಗದರ್ಶನದಂತೆ ತಮ್ಮನ ಜೊತೆ ಕೃಷ್ಣಮೂರ್ತಿ ಅವರು ಅಮೇರಿಕಾದ ಕ್ಯಾಲಿಫೋರ್ನಿಯಾಕ್ಕೆ ಹೋದರು. ಅಲ್ಲಿನ ವಾತಾವರಣ ತಮ್ಮನ ಆರೋಗ್ಯವನ್ನು ಏನಾದರೂ ಗುಣಪಡಿಸುತ್ತದೆಯೇನೋ ಎಂದು ೧೯೨೨ ರಲ್ಲಿ ಕ್ಯಾಲಿಫೋರ್ನಿಯಾದ ಗುಡ್ಡಗಳಲ್ಲಿನ ಒಂದು ಮನೆಯಲ್ಲಿ ನಿವಾಸ ಏರ್ಪಡಿಸಿಕೊಂಡರು.

ಇದರ ಜೊತೆಗೆ ಕೃಷ್ಣಮೂರ್ತಿ ಅವರಿಗೆ ಆಗಾಗ ತೀವ್ರತಮ ತಲೆಸಿಡಿತದ ಯಮಯಾತನೆಯೂ ಸುರುವಾಯಿತು; ಸಂಗಡ ಯಾವ ಡಾಕ್ಟರನೂ ಪತ್ತೆ ಹಚ್ಚಲಾಗದಂಥ ದೈಹಿಕ ಸಂಕಟವೂ ಸೇರಿಕೊಂಡಿತು. ಇವೆಲ್ಲವೂ 'ಸಾಧಕ'ನ ಪಥದಲ್ಲಿ ' ಸತ್ಯದರ್ಶನ 'ದ ಹಂತಕ್ಕೇರುವಾಗಿನ ಅನಿವಾರ್ಯ ಅತೀಂದ್ರಿಯ ಅನುಭವಗಳ ಘಟ್ಟಗಳು ಎಂದು ಸುತ್ತಮುತ್ತಲಿನವರು ಭಾವಿಸಿದ್ದರು. ಆದರೆ ಏಕಾಂಗಿಯೂ, ಸದಾ ಪ್ರಶ್ನಿಸುವ ಸ್ವಭಾವದವನೂ ತನ್ನ ಸುತ್ತಲಿನ ಜಗತ್ತಿನೊಂದಿಗೆ ಅತ್ಯಂತ ಆಳವಾಗಿ ಸಂವೇದನಾಶೀಲನಾಗಿರುವ ಹಾಗು ದಿಗ್ಭ್ರಮಿತಗೊಂಡಿರುವ ಕೃಷ್ಣಮೂರ್ತಿಯ ಚೈತನ್ಯ, ಶ್ರೀಮತಿ ಬೆಸೆಂಟ್‌ರ ಮೇಲಿನ ಮಾತೃಪ್ರೇಮದಿಂದ ತನಗಾಗಿ ಸಿದ್ಧಪಡಿಸಿದ ' ವಿಶ್ವಗುರು ' ಪಟ್ಟವನ್ನೇರುವುದು ಅವಿವೇಕ, ಅಪ್ರಾಮಾಣಿಕ ಹಾಗು ಅವಮಾನಕರವೆಂಬುದು ಅಂತರಂಗಕ್ಕೆ ಗೊತ್ತಿದ್ದರೂ, ಹೇಳಲಾಗದಂಥ ಸಂಕಟತರ ಸನ್ನಿವೇಶದಲ್ಲಿ ಸಿಕ್ಕು ಅತ್ಯಂತ ತಪ್ತವಾಗಿದ್ದು, ದೈಹಿಕ ಹಾಗು ಮಾನಸಿಕ ಸಂಯಮದ ಕಟ್ಟೆ ಮೀರಿದಾಗ ಉಂಟಾಗುತ್ತಿದ್ದ ಘಟನೆಗಳು— ಕೃಷ್ಣಮೂರ್ತಿ ಆಗಾಗ್ಗೆ ನಿಶ್ಚೇಷ್ಟಿತರಾಗಿ ಬೀಳುತ್ತಿದ್ದಿದ್ದು-ಸಂಕಟ ಅನುಭವಿಸುತ್ತಿದ್ದದು ಎಂದು ಅಭಿಪ್ರಾಯಪಡುತ್ತಾರೆ ಇಂದಿನ ಆಧುನಿಕ ಮನೋವಿಜ್ಞಾನಿಗಳು.

ವಿಶ್ವಪ್ರವಾಸ, ಭಾಷಣ, ಚರ್ಚೆ, ಇತ್ಯಾದಿಗಳ ಈ ಗದ್ದಲದಲ್ಲೇ ಅಮೇರಿಕೆಯ ಹಾಲಿವುಡ್‌ನ ಸಿನೇಮಾ ಪ್ರಪಂಚದಿಂದಲೂ ಕೃಷ್ಣಮೂರ್ತಿ ಅವರಿಗೆ ಕರೆ ಬಂತು ! ಭಗವಾನ್ ಬುದ್ಧನ ಪಾತ್ರವಹಿಸಿದರೆ ತಮ್ಮ ಚಿತ್ರದಲ್ಲಿ ವಾರಕ್ಕೆ ೫,೦೦೦ ಡಾಲರ್ (ಆಗಿನ ಕಾಲದಲ್ಲಿ ಹೊಸ ನಟ ಹೌಹಾರಿ ಬೀಳುವಂಥ ಸಂಭಾವನೆ)— ಕೊಡುವುದಾಗಿ ಆಗ್ರಹಪೂರ್ವಕ ವಿನಂತಿ ಬಂತು ! ಕೃಷ್ಣಮೂರ್ತಿ ನಿರಾಕರಿಸಿದರು. ವಿಸ್ತಾರವಾದ ಪ್ರದೇಶವನ್ನು ಕ್ಯಾಲಿ-

ಫೋರ್ನಿಯಾದ ಓಹೈದಲ್ಲಿ ಖರೀದಿಸಿ, ೨೦೦೦,೦೦ (೨ ಲಕ್ಷ) ಡಾಲರ್ ವೆಚ್ಚದ ಹ್ಯಾಪಿ ವ್ಯಾಲಿ ಫೌಂಡೇಶನ್ (ಆನಂದ ಕಣಿವೆ ಪ್ರತಿಷ್ಠಾನ) ಸ್ಥಾಪಿಸುವ ಯೋಜನೆ ಮುಂದಿಡಲಾಯಿತು. ದಿವಸೋಪ್ಪತ್ತಿನಲ್ಲಿ ಹಣ ಸಂಗ್ರಹವಾಗುತ್ತಿತ್ತು. ಪ್ರಸಿದ್ಧಿ, ಹಣ ವಿಶ್ವದಾದ್ಯಂತ ಜಯಭೇರಿಯ ಮತ್ತೇರಿಸುವ ಪ್ರಚಾರಗಳ ಉತ್ತುಂಗ ಸ್ಥಿತಿಯಲ್ಲಿದ್ದರು—ಈಗ ಕೃಷ್ಣ-ಮೂರ್ತಿ.

ಈ ಮಧ್ಯೆ ತೀವ್ರಗೊಳ್ಳುತ್ತ ಹೋದ ಸಹೋದರ ನಿತ್ಯನ ಅನಾರೋಗ್ಯ ೧೯೨೫ ರಲ್ಲಿ ಆತನ ಮರಣದೊಂದಿಗೆ ಅಂತ್ಯಗೊಂಡಿತು. ತಮ್ಮ ಜೀವದಷ್ಟೇ ಆಳವಾಗಿ ಪ್ರೀತಿಸುತ್ತಿದ್ದ ತಮ್ಮನ ಮರಣ ಕೃಷ್ಣಮೂರ್ತಿ ಅವರಿಗೆ ಪ್ರಚಂಡ-ವಾದ ಆಘಾತ ತಂದಿತು. ಅವರ ಸಂದೇಹಗಳು ಸ್ಪಷ್ಟರೂಪ ತಾಳುತ್ತ ಹೋದಂತೆ ಅವರು ಹೆಚ್ಚೆಚ್ಚು ವಿಷಣ್ಣರೂ, ಮೌನಿಗಳೂ ಆಗುತ್ತ ಹೊರ-ಟರು. ನಾಲ್ಕು ವರ್ಷಗಳ ಕಾಲ ಮೌನ ಚಿಂತನೆ ಗಟ್ಟಿಗೊಂಡು ಅಂತಿಮ ವಾಗಿ ೧೯೨೯ ರ ಆಗಷ್ಟ್ ೨ ರ ಆರ್ಡರ್ ಆಫ್ ಸ್ಟಾರ್‌ನ ವಾರ್ಷಿಕ ಶಿಬಿರ-ದಲ್ಲಿ ಆರ್ಡರ್ ಆಫ್ ಸ್ಟಾರ್ ಅನ್ನು ವಿಸರ್ಜಿಸುವುದರಲ್ಲಿ ಪರಿಸಮಾಪ್ತಿ-ಗೊಂಡಿತ್ತು.

* * * *

ಇದರಿಂದ ಶ್ರೀಮತಿ ಬೆಸೆಂಟ್‌ರಿಗೆ ತಾತ್ಕಾಲಿಕವಾಗಿ ನಿರಾಸೆಯಾದರೂ, ಅದನ್ನು ಸಹಿಸಿ, ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವ ಅಪಾರ ಚೈತನ್ಯ-ವಿದ್ದುದರಿಂದಲೇ ಆ ನಂತರವೂ ಅವರು ಜೆ. ಕೆ, ಯವರ ಜೊತೆ ಮೊದಲಿನ ಮಾತೃವಾತ್ಸಲ್ಯದೊಂದಿಗೆ ಇರಲು ಶಕ್ಯವಾಯಿತು. ಥಿಯೊಸೋಫಿಕಲ್ ಸೊಸೈಟಿಯಲ್ಲಿದ್ದ ಕೆಲವು ಮಹತ್ವಾಕಾಂಕ್ಷಿಗಳಿಗೆ ಇದರಿಂದ ತುಂಬ ನಿರಾಸೆ ಉಂಟಾಯಿತು. ಇಂಥ ಸಂದರ್ಭಗಳಲ್ಲಿ ಸಾಮಾನ್ಯವಾಗಿ ಉಂಟಾಗುವಂತೆ ಹಲವಾರು ಊಹಾ-ಪೋಹಗಳಿಗೆ ಕಾರಣವಾಯಿತು. ಆದರೆ ಇದರಿಂದ ಜೆ. ಕೆ. ಯವರು ಮಾತ್ರ ಕಿಂಚಿತ್ತೂ ಪ್ರಭಾವಿತಗೊಳ್ಳಲಿಲ್ಲ. ತಮ್ಮ ನಿರ್ಧಾರ-ದಿಂದ ವಿಚಲಗೊಳ್ಳಲಿಲ್ಲ.

೧೯೩೩ ರಲ್ಲಿ ಶ್ರೀಮತಿ ಆ್ಯನಿ ಬೆಸೆಂಟರ ಮರಣದ ನಂತರ ಥಿಯೊ-ಸೋಫಿಕಲ್ ಸಂಸ್ಥೆಯ ಸಂಪರ್ಕವನ್ನು ಸಂಪೂರ್ಣ ಕಡಿದುಕೊಂಡರು, ಕೃಷ್ಣಮೂರ್ತಿ. ಆ ನಂತರ ಯಾವುದೇ ಬಗೆಯ ಆಧ್ಯಾತ್ಮಿಕ ಸಂಘಟನೆಗೂ ಜೆ. ಕೆ. ತೊಡಗಲಿಲ್ಲ. ಇಂದು ಇಂಗ್ಲೆಂಡ್. ಅಮೇರಿಕಾ ಹಾಗು ಭಾರತ-ಗಳಲ್ಲಿ ಕೃಷ್ಣಮೂರ್ತಿ ಫೌಂಡೇಶನ್‌ಗಳು ಇವೆ. ಅವುಗಳ ಕೆಲಸ ಕೃಷ್ಣ-ಮೂರ್ತಿಯವರ ಭಾಷಣ, ಸಂಭಾಷಣೆಗಳನ್ನು ಏರ್ಪಡಿಸುವುದು, ಬರಹ ಪ್ರಕಟಿಸುವುದು ಹಾಗು ಅವರು ಉತ್ತೇಜಿಸಿದ ಶಾಲೆಗಳಿಗೆ ಸಹಾಯ ಸಲ್ಲಿಸುವುದು ಈ ಸಂಸ್ಥೆಗಳು ಯಾವುದೇ ದೀಕ್ಷೆ, ಮುಂತಾದವುಗಳನ್ನು ಕೊಡುವದಿಲ್ಲ.

ಜೆ. ಕೃಷ್ಣಮೂರ್ತಿ ಅವರು ತಮ್ಮ ೯೦ ನೆಯ ವರ್ಷದಲ್ಲೂ ಉಕ್ಕುವ ಚೈತನ್ಯ ಹಾಗು ಉತ್ತಮ ಆರೋಗ್ಯದಿಂದ ಯುರೋಪ್, ಅಮೇರಿಕಾ ಹಾಗು ಭಾರತಗಳಲ್ಲಿ ಸಂಚಾರ ಮಾಡುತ್ತಲೇ ಇರುತ್ತಾರೆ. ೧೯೬೮ ನೆಯ ಇಸ್ವಿಯಿಂದ ಸ್ವಿಝರ್ಲಂಡ್‌ದ ಸಾನೆನ್‌ದಲ್ಲಿ ಅಂತಾರಾಷ್ಟ್ರೀಯ ಸಭೆ ಜರು-ಗಿತ್ತು. ೧೫ ದಿನಗಳ ಅವಧಿಯಲ್ಲಿ ಏಳು ಭಾಷಣಗಳನ್ನು ನೀಡಿದರು. ಹಾಗು ಅವರೊಡನೆ ಜೆ. ಕೆ. ಚರ್ಚೆ ನಡೆಸಿದರು. ಇಂಗ್ಲೆಂಡಿನ ಹ್ಯಾಂಪ್-ಶೈರ್‌ನಲ್ಲಿ ಬ್ರಾಕ್‌ವುಡ್ ಪಾರ್ಕ್ ಎಂಬ ಸುಂದರ ಎಸ್ಟೇಟ್‌ನಲ್ಲಿ ಸಾರ್ವಜನಿಕ ಭಾಷಣಗಳನ್ನೂ ನೀಡುತ್ತಾರೆ. ಎರಡೂ ಕಡೆ ಉಳಿದುಕೊಳ್ಳುವ ವ್ಯವಸ್ಥೆ-ಯಿದೆ.

ವೈಜ್ಞಾನಿಕ ವಲಯದಲ್ಲೂ ಜೆ. ಕೆ. ಅವರ ಬಗ್ಗೆ ಈಗೀಗ ಸಾಕಷ್ಟು ಆಸಕ್ತಿ ಬೆಳೆದಿದೆ. ೧೯೭೪ ರಲ್ಲಿ ಪ್ರಥಮಬಾರಿಗೆ ಭೌತಶಾಸ್ತ್ರದ ವಿಜ್ಞಾನಿಗಳೂ ಹಾಗು ಮನೋವಿಜ್ಞಾನಿಗಳೂ ಇರುವ ಒಂದು ಗುಂಪು ೧೦ ದಿನಗಳ ಕಾಲ ಬ್ರಾಕ್‌ವುಡ್ ಪಾರ್ಕ್‌ದಲ್ಲಿ ಉಳಿದುಕೊಂಡು ಮನುಷ್ಯ ಹಾಗು ಸಮಾಜ ಪರಿವರ್ತನೆಯಲ್ಲಿ ಜ್ಞಾನದ ಸ್ಥಾನ ಏನು ಎನ್ನುವ ವಿಷಯವಾಗಿ ಚರ್ಚೆ ನಡೆಸಿದರು.

'ಶಿಕ್ಷಣ' ಎಲ್ಲಕ್ಕಿಂತಲೂ ಹೃದಯಕ್ಕೆ ಹತ್ತಿರವಾದ ವಿಷಯ ಕೃಷ್ಣಮೂರ್ತಿ ಅವರಿಗೆ ಭಾರತದಲ್ಲಿ ಅವರ ನಾಲ್ಕು ಸಹ ಶಿಕ್ಷಣ ಶಾಲೆ-ಗಳಿದ್ದು ಎರಡು ಅಂತಾರಾಷ್ಟ್ರೀಯ ಸ್ವರೂಪದವು. ಬ್ರಾಕ್‌ವುಡ್ ಪಾರ್ಕ್-

ದಲ್ಲಿಯೂ ಒಂದು ಅಂತಾರಾಷ್ಟ್ರೀಯ ಸ್ವರೂಪದ ಸಹಶಿಕ್ಷಣ ಶಾಲೆಯಿದೆ. ಎಲ್ಲದರಲ್ಲೂ ಶೇಕಡಾ ಹತ್ತರಷ್ಟು ಜಾಗ ಪ್ರತಿಭಾವಂತರಿಗೆ ಮೀಸಲಾಗಿಡಲಾಗಿದೆ. ವಿದ್ಯಾರ್ಥಿ ಹಾಗು ಶಿಕ್ಷಕರೊಂದಿಗೆ ಚರ್ಚೆನಡೆಸುವುದಕ್ಕಾಗಿ ಕೃಷ್ಣಮೂರ್ತಿ ಪ್ರತಿವರ್ಷ ಅಲ್ಲಿಗೆ ಬರುತ್ತಾರೆ. ಸಾಮಾನ್ಯ ಪಠ್ಯಕ್ರಮಗಳನ್ನೇ ಈ ಎಲ್ಲ ಶಾಲೆಗಳಲ್ಲಿ ಬಳಸುವುದರ ಜೊತೆಗೆ, ರಾಷ್ಟ್ರೀಯ, ಜನಾಂಗೀಯ, ಜಾತೀಯ, ವರ್ಗೀಯ, ಧಾರ್ಮಿಕ ಹಾಗು ಸಾಂಸ್ಕೃತಿಕ ಪೂರ್ವಗ್ರಹ ಭಾವನೆಗಳಿಂದ ಬಂಧಿತರಾಗದೇ ಮುಕ್ತರಾಗಿ ಬೆಳೆಸುವುದೇ ಅವರ ಉದ್ದೇಶ. ಸ್ವತಃ ಅವರೇ ಯಾವುದೇ ಒಂದು ಸ್ಥಳಕ್ಕೆ ಸೇರಿರದೇ, ಎಲ್ಲಕಡೆಗೂ ಸೇರಿದವರೆಂದು ಭಾವಿಸುತ್ತಾರೆ.

ಕರ್ನಾಟಕ ರಾಜ್ಯದಲ್ಲಿ ಜೆ. ಕೆ. ಯವರ ತತ್ತ್ವಗಳ ಆಧಾರದ ಮೇಲೆ ನಡೆಸಲಾಗುತ್ತಿರುವ ಶಿಕ್ಷಣಸಂಸ್ಥೆ ವ್ಯಾಲಿ ಸ್ಕೂಲ್. ಬೆಂಗಳೂರು, ಕನಕಪುರ ರಸ್ತೆಯಲ್ಲಿ ೧೮ ಕಿ. ಮೀ. ಹತ್ತಿರ ಬಲಕ್ಕೆ ತಿರುಗಿ ಎರಡು ಕಿ. ಮೀ. ದೂರ ಕ್ರಮಿಸಿದರೆ ಸಿಗುತ್ತದೆ—ಹರಿದ್ವನದ ಕಣಿವೆಯಲ್ಲಿ ಒಂದಾಗಿ ನಿಂತಿರುವ ವ್ಯಾಲಿ ಸ್ಕೂಲ್. ಬೇರಾವುದೇ ಶಾಲೆಗಿಂತ ಪೂರ್ಣ ಭಿನ್ನವಾಗಿರುವ ಈ ಸಂಸ್ಥೆ ನಿಧಾನವಾಗಿಯಾದರೂ ನಾಡಿನ ಪ್ರಾಜ್ಞ ಪ್ರಜೆಗಳ ಗಮನ ಸೆಳೆಯುತ್ತಿರುವುದು ಸಂತೋಷಕರ ಸಂಗತಿ.

* * *

೧. ದಯವಿಟ್ಟು ಗಮನಿಸಿ

ಭಾಷೆಯನ್ನು ನಾವು ಎಷ್ಟೇ ಚೆನ್ನಾಗಿ ಬಲ್ಲವರಾದರೂ, ಬರಿ ಭಾಷೆಯ ಮೂಲಕವೇ ಸಂಪರ್ಕವೇರ್ಪಡಿಸಿಕೊಳ್ಳುವುದು ತುಂಬಾ ಕಷ್ಟದ ಕೆಲಸ. ನಾವು ಉಪಯೋಗಿಸುವ ಶಬ್ದಗಳು ನಾವು ಅಪೇಕ್ಷಿಸಿದ ಅರ್ಥಕ್ಕಿಂತ ಬೇರೆ- ಯದೇ ಆದ ಅರ್ಥವನ್ನು ಕೇಳುಗರಿಗೆ, ಓದುಗರಿಗೆ ನೀಡಬಹುದು. ಮಾತ- ನಾಡುವವ ಹಾಗು ಕೇಳುಗ, ಬರಹಗಾರ ಮತ್ತು ಓದುಗ ಒಂದೇ ಸ್ತರದಲ್ಲಿ, ಏಕಕಾಲದಲ್ಲಿ ಸಂಧಿಸಿದಾಗ ಮಾತ್ರ ಅರಿವಿನ ಸಂವಹನ ಶಕ್ಯ. ಅದಕ್ಕೆ ಅತ್ಯಂತ ಆವಶ್ಯಕವಾಗಿ ಬೇಕಾದದ್ದು ಪರಸ್ಪರರಲ್ಲಿ ಪ್ರೀತಿ; ಗಂಡ-ಹೆಂಡತಿ ಮಧ್ಯೆ, ಆತ್ಮೀಯ ಸ್ನೇಹಿತರ ಮಧ್ಯೆ ನಿಜವಾದ ಪ್ರೀತಿ ಇದ್ದಾಗ ಮಾತ್ರ, ಅಂಥ ಅರಿವು ಸಾಧ್ಯ. ಆಗಲೇ ನಿಜವಾದ ಸಂವಾದ, ಸಂಪರ್ಕ ಶಕ್ಯ.

ನಮ್ಮ ಕಠಿಣ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವಲ್ಲಿ, ಯಾವುದೇ ಶಾಸ್ತ್ರದ ಪರಿಭಾಷೆಯಲ್ಲಿ ಮಾಡುವ ವಿಶ್ಲೇಷಣೆ ಸಹಾಯ ನೀಡೀತೆಂಬುದನ್ನು ಜೆ. ಕೆ. ನಂಬುವದಿಲ್ಲ. ನಾವು ದಿನ ನಿತ್ಯ ಉಪಯೋಗಿಸುವ ಅತ್ಯಂತ ಸರಳ ಶಬ್ದಗಳಲ್ಲೇ ಆಳವಾದ ಅರ್ಥವನ್ನು ತಿಳಿಸಲು ಅವರು ಇಚ್ಛಿಸುತ್ತಾರೆ. ಆದರೆ ಇದು, ಸಂಪೂರ್ಣ ಗಮನವಿಟ್ಟು ಕೇಳುವುದು ಅಥವಾ ಓದುವುದರಿಂದ ಮಾತ್ರ ಶಕ್ಯ ಎಂಬುದು ಅವರ ಹೇಳಿಕೆ. (ಜೆ. ಕೆ. ಯವರ ಬರಹವೂ ಒಂದು ರೀತಿಯ ಸಂವಾದವಾದ್ದರಿಂದ 'ಆಲಿಸುವುದು' ಎಂಬ ಶಬ್ದವನ್ನು ಅವರ ಬರಹಗಳ ಓದಿಗೂ ಉಪಯೋಗಿಸಬಹುದೇನೋ.)

'ಆಲಿಸುವುದು' ಅಥವಾ 'ಗಮನವಿಟ್ಟು ಕೇಳುವುದು' ಒಂದು ಕಲೆ. ನಿಜವಾಗಿಯೂ ಆಲಿಸಲು ಸಮರ್ಥನಾಗಬೇಕಿದ್ದರೆ, ನಾವು ನಮ್ಮ ಎಲ್ಲ ಪೂರ್ವಗ್ರಹ, ನಿಶ್ಚಿತ ಧೋರಣೆಗಳನ್ನು ಬದಿಗಿಡಬೇಕು. ಅಂಥವುಗಳಿಂದ

ಮುಕ್ತವಾಗಿ, ನಮ್ಮ ಮನಸ್ಸು ಗ್ರಹಿಸುವ ಸ್ಥಿತಿಯಲ್ಲಿದ್ದಾಗ ಮಾತ್ರ ಏನನ್ನೂ ಅರಿತುಕೊಳ್ಳಬಹುದು. ಆದರೆ ಸಾಮಾನ್ಯವಾಗಿ ನಾವು ಒಂದಲ್ಲ ಒಂದು ಬಗೆಯ ಮುಸುಕಿನೊಳಗಿಂದಲೇ ಕೇಳುತ್ತಿರುತ್ತೇವೆ, ನೋಡುತ್ತಿರುತ್ತೇವೆ. ಆ ಮುಸುಕು ವೈಜ್ಞಾನಿಕ, ಮನಶ್ಶಾಸ್ತ್ರೀಯ, ಧಾರ್ಮಿಕ, ಇಲ್ಲವೆ ಆಧ್ಯಾತ್ಮಿಕ ಪೂರ್ವಗ್ರಹಗಳಾಗಿದ್ದಿರಬಹುದು ಅಥವಾ ನಮ್ಮ ದೈನಂದಿನ ಚಿಂತೆ, ಆಸೆ, ಆಮಿಷ, ಭಯ–ಭೀತಿಗಳಾಗಿದ್ದಿರಬಹುದು. ಇಂಥ ಮುಸುಕಿನೊಳಗಿಂದ ನಾವು ಏನನ್ನೇ ಕೇಳಲಿ, ನೋಡಲಿ, ಅದು ನಮ್ಮದೇ ಗದ್ದಲ, ನಮ್ಮದೇ ವಿರೂಪ-ವಾಗಿಬಿಡುವುದರಿಂದ ಇನ್ನೊಬ್ಬರು ಹೇಳುವುದು, ತೋರಿಸುವುದು ನಮಗೆ ಗೊತ್ತೇ ಆಗುವುದಿಲ್ಲ. ಆದ್ದರಿಂದ, ನಮ್ಮೆಲ್ಲ ಪೂರ್ವಗ್ರಹಗಳನ್ನು, ಒಲವು-ಪ್ರತಿರೋಧಗಳನ್ನು ಆಚೆಗಿಟ್ಟು ಶಬ್ದಾತೀತವಾದ ಅಭಿವ್ಯಕ್ತಿಯನ್ನು ಅರ್ಥ-ಮಾಡಿಕೊಳ್ಳಲು, ಕ್ಷಣಮಾತ್ರದಲ್ಲೇ ಉಂಟಾಗುವ ಅರಿವಿನ ಸ್ಫುರಣ ಅನುಭವಿಸಲು ' ಆಲಿಸುವುದು ' ಹಾಗು ' ಗಮನಿಸುವುದು ' ಮಾತ್ರ ಅತ್ಯಂತ ಕಷ್ಟದ, ಆದರೆ ಮಹತ್ವದ ಕೆಲಸ.

ಅದಕ್ಕಾಗಿ ಜೆ. ಕೆ. ಹೇಳುತ್ತಾರೆ : " ಇಲ್ಲಿ ನಿಮ್ಮ ವಿಚಾರಸರಣಿಗೆ, ನಂಬಿಕೆಗೆ ವ್ಯತಿರಿಕ್ತವಾದದ್ದನ್ನು ಏನಾದರೂ ಹೇಳಿದರೆ ದಯವಿಟ್ಟು ಸುಮ್ಮನೆ ಕೇಳಿ, ಪ್ರತಿರೋಧಿಸಬೇಡಿ. ನೀವೇ ಸರಿಯಿರಬಹುದು; ನಾನೇ ತಪ್ಪಿರಬಹುದು. ಆದರೆ ಕೂಡಿ ಆಲಿಸುವುದರಿಂದ ಹಾಗು ಗಮನಿಸುವುದರಿಂದ ಸತ್ಯವೇನೆಂಬು-ದನ್ನು ನಾವು ಕಂಡುಕೊಳ್ಳಬಹುದು. ಯಾರಿಂದಲೋ ಸತ್ಯವನ್ನು ನಿಮಗೆ ನೀಡಲು ಬರುವುದಿಲ್ಲ. ನೀವೇ ಸ್ವತಃ ಅದನ್ನು ಕಂಡುಕೊಳ್ಳಬೇಕು. ಅದಕ್ಕೆ ನೇರವಾಗಿ ಗ್ರಹಿಸುವ ಮನಸ್ಥಿತಿ ಬೇಕು. ಪ್ರತಿರೋಧವಿದ್ದಾಗ, ಸಂರಕ್ಷಿತ ಭಾವವಿರುವಾಗ ನೇರ ಗ್ರಹಣವಾಗುವುದೇ ಇಲ್ಲ. ತಟಸ್ಥನಾಗಿ, ಸಂಪೂರ್ಣ ಎಚ್ಚರದಿಂದ ' ಇದ್ದದ್ದು ಏನು ' ಎನ್ನುವುದನ್ನು ಗಮನಿಸಿದಾಗ ಸತ್ಯದ ಅರಿವು ಮೂಡುತ್ತದೆ. "

' ಸತ್ಯ ' ಅರಿಯಬೇಕು ಎಂಬ ಉದ್ದೇಶದಿಂದ ಗಮನಿಸಲು ಸುರುಮಾಡಿ-ದರೆ ' ಸತ್ಯ ' ಅರಿಯಲಾರೆವು. ಏಕೆಂದರೆ ಒಂದು ಗುರಿ ಸಾಧಿಸುವ ಇಚ್ಛೆ ಇದ್ದಾಗ, ಉದ್ದೇಶಪೂರ್ವಕವಾಗಿ ಅನುಭವಿಸುವಿಕೆ ಇರುತ್ತದೆ. ಆದ್ದರಿಂದ ಈ ಬಗೆಯ ಉದ್ದೇಶ, ಮನಸ್ಸನ್ನು ಮತ್ತೂ ನಿರ್ಬಂಧಗೊಳಿಸುತ್ತದೆ.

‘ ಅರಿಯುವುದು ’ ಹಾಗು ‘ ಉದ್ದೇಶಪಟ್ಟು ಅರಿಯುವುದು ’ ಎರಡೂ ಪರಸ್ಪರ ವಿರೋಧಿಪ್ರಕ್ರಿಯೆಗಳೆನ್ನುತ್ತಾರೆ ಜೆ. ಕೆ. ಜ್ಞಾನ-ಸಂಗ್ರಹಣೆ ಅಥವಾ ತಾಂತ್ರಿಕ ಕೌಶಲ್ಯ-ಸಂಪಾದನೆ ಅರಿಯುವ ಕ್ರಿಯೆ ಅಲ್ಲ. ಲಾಭಕ್ಕಾಗಿ, ಏನನ್ನೋ ಸಾಧಿಸುವುದಕ್ಕಾಗಿ, ಯಾವುದೋ ಗುರಿ ತಲುಪುವುದಕ್ಕಾಗಿ ಜ್ಞಾನ-ಸಂಗ್ರಹಣೆ ಇದ್ದರೆ ‘ ಅರಿವು ’ ನಿಂತುಹೋಗುತ್ತದೆ. ‘ ಅರಿವು ’ ಎಂದರೆ ಪ್ರಜ್ಞೆಯ ಸ್ವರೂಪವನ್ನು ನಿರುದ್ದಿಶ್ಯವಾಗಿ ಗಮನಿಸುವುದು.

‘ ಗಮನಿಸುವುದು ’ ಎಂದರೆ ಆಸಕ್ತನಾಗುವದಲ್ಲ, ಆಸಕ್ತಿ ತೋರಿಸು-ವುದೂ ಅಲ್ಲ. ಆಟಿಗೆ ಮಗುವಿನ ಆಸಕ್ತಿಯನ್ನು ಹಿಡಿದಿಡುತ್ತದೆ, ಮನಸ್ಸನ್ನು ಆವರಿಸುತ್ತದೆ. ಆಗ ಮಗು ಚಡಪಡಿಕೆಯಿಲ್ಲದೆ ಶಾಂತವಾಗಿರುತ್ತದೆ. ಆದರೆ ಆಟಿಗೆಯನ್ನು ಕಿತ್ತುಕೊಂಡ ತಕ್ಷಣ ಮಗು ಚಡಪಡಿಸಲಾರಂಭಿಸುತ್ತದೆ. ಆಟಿಗೆಗಳು ಮಹತ್ವದ್ದಾಗುವುದು ಅವು ಮಗುವನ್ನು ಶಾಂತಗೊಳಿಸುವುದರಿಂದ, ಅಲ್ಲವೆ ? ದೊಡ್ಡವರ ವಿಷಯವೂ ಇದೇ ತರಹ. ಅವರ ಆಟಿಗೆಗಳಾದ ನಂಬಿಕೆ, ಮಹತ್ವಾಕಾಂಕ್ಷೆ, ಅಧಿಕಾರದ ಆಸೆ, ದೇಶ-ದೇವರುಗಳ ಆರಾಧನೆ, ಆದರ್ಶಗಳ ಸಾಧನೆ ಇತ್ಯಾದಿ, ಇತ್ಯಾದಿ ನೂರಾರು ಚಟುವಟಿಕೆಗಳು—ಇವುಗಳನ್ನೆಲ್ಲ ಕಸಿದುಕೊಂಡುಬಿಟ್ಟರೆ ಈ ದೊಡ್ಡವರೂ ಚಡಪಡಿಸಲಾರಂಭಿ-ಸುತ್ತಾರೆ, ಗೊಂದಲದಲ್ಲಿ ಸಿಕ್ಕಿಹಾಕಿಕೊಂಡುಬಿಡುತ್ತಾರೆ. ದೊಡ್ಡವರಿಗೂ ಹೀಗೆ ಆಟಿಗೆಗಳೇ ಮುಖ್ಯವಾಗುತ್ತವೆ. ಆಟಿಗೆ ಮನಸ್ಸನ್ನು ಆಕ್ರಮಿಸಿಕೊಂಡಿರುವಾಗ ಅಲ್ಲಿ ‘ ಗಮನ ’ ಇರುತ್ತದೆಯೆ ? ಆಟಿಗೆ ಮನಸ್ಸನ್ನು ಹಿಡಿದಿಡುವ, ಬೇಕಾದ ಕಡೆ ತಿರುಗಿಸುವ ಸಾಧನ, ಅಷ್ಟೇ. ಆದರೂ ನಮಗೆ ಮುಖ್ಯವಾಗಿಬಿಟ್ಟಿರುವುದು ಈ ಆಟಿಗೆಗಳೇ ಹೊರತು, ಮನಸ್ಸಲ್ಲ. ನಿಜವಾದ ‘ ಗಮನಿಸುವಿಕೆ ’ ಯಲ್ಲಿ ಮನಸ್ಸು, ಮನಸ್ಸನ್ನು ಆವರಿಸಿರುವ ಆಟಿಗೆಯೆಲ್ಲ ನಮ್ಮ ಮುಖ್ಯ ಕಾಳಜಿ ಆಗಬೇಕಾಗುತ್ತದೆ.

ಮನಸ್ಸಿನ ಆಸಕ್ತಿಯನ್ನು ಆಟಿಗೆಗಳು ಹಿಡಿದಿಡುತ್ತವೆಯಷ್ಟೇ. ಹೀಗೆ ಮನಸ್ಸನ್ನು ಸೆರೆಹಿಡಿದಿರುವ ‘ ಕ್ರಿಯೆ ’ ಯನ್ನು ‘ ಏಕಾಗ್ರತೆ ’ ಎಂದು ಕರೆಯಬಹುದು. ಆದರೆ ಈ ‘ ಏಕಾಗ್ರತೆ ’ ಮನಸ್ಸನ್ನು ಸಂಕುಚಿತಗೊಳಿಸುವ ಕ್ರಿಯೆಯಲ್ಲವೆ ? ಉಳಿದೆಲ್ಲ ಕಾಳಜಿಗಳನ್ನು ಬದಿಗೆ ಸರಿಸಿ ಒಂದು ವಿಷಯ, ವಸ್ತು, ವ್ಯಕ್ತಿ, ಸಂಗತಿ ಅಥವಾ ಸ್ಥಿತಿಯ ಮೇಲೆ ‘ ಗಮನ ’ ವನ್ನು ಕೇಂದ್ರೀ-

ಕರಿಸುವ ಹೋರಾಟವೇ ತಾನೆ ಈ ' ಏಕಾಗ್ರತೆ ' ಎನ್ನುವುದು ? ಹೀಗೆ ಹೋರಾಟವಿದ್ದಲ್ಲಿ ನಿಜವಾದ ಗಮನಿಸುವಿಕೆ ಇರಲು ಶಕ್ಯವುಂಟೆ ? ಯಾವುದೇ ತರಹದ ಆಟಿಗೆ—ಮನಸ್ಸಿನ ಆಟಿಗೆಯಲ್ಲಿ ಏಕಾಗ್ರತೆ ಇರುವಾಗ ಗಮನಿಸು-ವುದು ಸಾಧ್ಯವಾಗುವುದಿಲ್ಲ. ಉದ್ದೇಶ ಅಥವಾ ಗುರಿ ಎನ್ನುವಂತಹದು ಅತ್ಯಂತ ಸಂಕೀರ್ಣವಾದ ಆಟಿಗೆ. ಆ ಗುರಿ— ಕ್ರಿಯೆಗೆ ಒತ್ತಾಯ, ಭಯ ಮಹ-ತ್ವಾಕಾಂಕ್ಷೆಯ ಮೇಲೆ ನಿಂತಿರುವ ಆತ್ಮೋದ್ಧಾರದ ಒತ್ತಡ, ಸಂಶೋಧಿಸಲು ಹಚ್ಚಿರುವ ಕಾರಣ, ಫಲಾನಗೈಯಲು ಆಶಿಸುವಂತೆ ಮಾಡುವ ಯಾತನೆ—ಇತ್ಯಾದಿ ವಿವಿಧ ರೂಪದಲ್ಲಿರಬಹುದು. ಯಾವಾಗ ಅತ್ಯಂತ ಗುಪ್ತವಾಗಿ-ಯಾದರೂ ಒಂದಲ್ಲ ಒಂದು ಉದ್ದೇಶ ಕ್ರಿಯಾಶೀಲವಾಗಿರುತ್ತದೆಯೋ, ಆಗ ತಟಸ್ಥವಾಗಿ ಗಮನಿಸಲು, ತನ್ಮೂಲಕ ವಾಸ್ತವತೆ ಅರಿಯಲು ಶಕ್ಯ-ವಾಗುವುದಿಲ್ಲ.

ಇದೇ ತರಹ ಶಬ್ದ. ' ಶಬ್ದ ' ಸಹ ಗಮನಕೊಡುವಾಗ ಮಧ್ಯೆ ತಲೆ-ಹಾಕುತ್ತದೆ. ' ಚಂದ್ರ ' ನನ್ನು ನೋಡುವಾಗ ಆ ' ಶಬ್ದ ' ಅದರ ನಾದ, ಚಿತ್ರ, ಅವುಗಳೊಡನೆ ತಳಕುಹಾಕಿಕೊಂಡಿರುವ ನಾನಾ ವಿವರಣೆಗಳು—ಇವೊಂದೂ ಮಧ್ಯೆ ಬರದೆ ಸುಮ್ಮನೆ ಚಂದ್ರನನ್ನು ನೋಡಲು ಶಕ್ಯವಾಗಬೇಕು. ಅದರಂತೆ ಕೇಳುವಾಗಲೂ ಯಾವ ಟೀಕೆ, ಟಿಪ್ಪಣಿ, ವಿವರಣೆ, ಭಾಷ್ಯ ಇಲ್ಲದೇನೇ ಸುಮ್ಮನೆ ಲಕ್ಷ್ಯಪೂರ್ವಕವಾಗಿ, ಪರಿಪೂರ್ಣ ಗಮನವಿಟ್ಟು ಕೇಳಲು ಶಕ್ಯ-ವಾಗುತ್ತದೆಯೆ ?

ಹೀಗೆ ಉದ್ದೇಶ, ಗುರಿ, ಆಟಿಗೆ, ಹೋರಾಟ, ಶಬ್ದ ಯಾವುದೂ ಇಲ್ಲದೆ ಸುಮ್ಮನೆ ಗಮನಿಸುತ್ತಿರುವುದೇ ನಿಜವಾದ ಗಮನಿಸುವಿಕೆ. ಎಲ್ಲಿ ಇಂಥ ' ಗಮನಿಸುವಿಕೆ ' ಇರುತ್ತದೆಯೋ ಅಲ್ಲಿರುತ್ತದೆ ' ಸತ್ಯ '. ಅದೇ ಧ್ಯಾನ.

* * *

೨. ಹುಡುಕಾಟ ಯಾವುದಕ್ಕೆ?

ನಾವು ವಾಸಿಸುತ್ತಿರುವುದು ಮಹಾನಗರದಲ್ಲಾಗಿರಲಿ, ಹಳ್ಳಿಕೊಂಪೆಯಲ್ಲೇ ಆಗಿರಲಿ, ಎಲ್ಲೇ ಆಗಿರಲಿ, ನಾವು ಏನನ್ನೋ ಸದಾ ಅರಸುತ್ತಲೇ ಇರುತ್ತೇವೆ, ಅಲ್ಲವೆ? ಪ್ರಯತ್ನ, ಹೋರಾಟ, ಜಗಳ, ಗಲಭೆ, ಯುದ್ಧಗಳಿಂದ ತುಂಬಿ ಹೋಗಿರುವ ಈ ಜಗತ್ತಿನಲ್ಲಿ ನಾವು ಹುಡುಕುತ್ತಿರುವುದು ಸ್ವಲ್ಪ ಸಮಾಧಾನ, ಶಾಂತಿ, ಆನಂದಗಳನ್ನು ನೀಡುವಂತಹ ಒಂದು ಆಶ್ರಯವನ್ನಲ್ಲವೆ? ಆದ್ದರಿಂದಲೇ ಒಬ್ಬ ನೇತಾರನನ್ನು ಬಿಟ್ಟು ಇನ್ನೊಬ್ಬ ನೇತಾರನ ಹತ್ತಿರ, ಒಂದು ಸಂಘಟನೆ ತೊರೆದು ಮತ್ತೊಂದು ಸಂಘಟನೆಯ ಹತ್ತಿರ, ಒಬ್ಬ ಗುರುವಿನಿಂದ ಇನ್ನೊಬ್ಬ ಗುರುವಿನ ಕಡೆಗೆ, ಒಂದು ಸಿದ್ಧಾಂತ ತ್ಯಜಿಸಿ ಮತ್ತೊಂದು ಸಿದ್ಧಾಂತದತ್ತ ಧಾವಿಸುತ್ತ, ನಾವು ನಮ್ಮ ಹುಡುಕಾಟವನ್ನು ಮುಂದುವರಿಸುತ್ತಿರುತ್ತೇವೆ.

ನಿಜವಾಗಿ ನೋಡಿದರೆ ಈ ಹುಡುಕಾಟದ ಗುರಿಯಲ್ಲೇ ಸಂದಿಗ್ಧತೆ ಇದೆ: ನಾವು ಹುಡುಕುತ್ತಿರುವುದು ಆನಂದವನ್ನೋ ಅಥವಾ ಆನಂದ ದೊರೆಯಬಹುದೆಂದು ಭಾವಿಸಿರುವ ಯಾವುದೋ ಕಾಮನೆಯ ಸಂತೃಪ್ತಿಯನ್ನೋ? ಆನಂದ ಮತ್ತು ಸಂತೃಪ್ತಿಗಳ ಮಧ್ಯೆ ಬಹಳಷ್ಟು ಅಂತರವಿದೆ; ಬಹುಶಃ ಸಂತೃಪ್ತಿಯನ್ನು ನಾವು ಕಾಣಬಹುದು; ಆದರೆ ಆನಂದವನ್ನು ಕಾಣುವುದು ಮಾತ್ರ ಖಂಡಿತ ಶಕ್ಯವಿಲ್ಲ. ಏಕೆಂದರೆ ಆನಂದ ಬೇರೊಂದರಿಂದ ಉತ್ಪನ್ನವಾಗುವಂತಹದು; ಬೇರೊಂದು ವಸ್ತುವಿನ ಉಪ ಉತ್ಪತ್ತಿ ಅದು. 'ಸಂತೃಪ್ತಿ' ನಮ್ಮ ಕಾಮನೆಯ ಈಡೇರಿಕೆಯ ಕೊನೆಗೆ ಉಂಟಾಗುವ ಸಂಪೂರ್ಣವಾಗಿ ತುಂಬಿದಂಥ ಭಾವನಾಸ್ಥಿತಿ. ಈ ದೃಷ್ಟಿಯಿಂದ ನೋಡಿದಾಗ, ನಮ್ಮಲ್ಲಿ ಬಹುಜನರು ಹುಡುಕುತ್ತಿರುವುದು ಬಹುಶಃ 'ಸಂತೃಪ್ತಿ'ಯನ್ನೇ ಹೊರತು, ಆನಂದವನ್ನಲ್ಲ ಎಂಬ ಭಯ ಜೆ. ಕೆ. ಅವರಿಗೆ. ಆದರೆ ಇದು ಪ್ರತಿಯೊಬ್ಬನೂ

ತನ್ನನ್ನು ತಾನೇ ನಿರೀಕ್ಷಿಸಿಕೊಂಡು ಖಚಿತ ಪಡಿಸಿಕೊಳ್ಳಬೇಕಾದ ಸಂಗತಿ. ಯಾಕೆಂದರೆ ಅತ್ಯಂತ ಶ್ರದ್ಧೆ, ಕಾಳಜಿ, ವಿಚಾರ, ಎಚ್ಚರ ಬೇಕಾದಂತಹ ಯಾವುದನ್ನೇ ಆದರೂ ನಮ್ಮ ಮನಸ್ಸಿಗೆ ಹಾಗು ಹೃದಯಕ್ಕೆ ನೀಡುವ ಮೊದಲು, ನಾವು ಹುಡುಕುತ್ತ ಇರುವುದು ಏನು ಎನ್ನುವುದರ ಅರಿವು ಅತ್ಯಂತ ಅವಶ್ಯವಷ್ಟೇ ?

ನಮ್ಮ ಹುಡುಕಾಟದ ಉದ್ದೇಶ ' ಶಾಂತಿ ' ಹೊಂದುವದಿದ್ದರೆ, ಅದು ತುಂಬಾ ಸುಲಭ. ಒಂದು ವಿಚಾರಕ್ಕೋ, ಉದ್ದೇಶಕ್ಕೋ ಸಂಪೂರ್ಣವಾಗಿ ಕುರುಡಾಗಿ ಸಮರ್ಪಿಸಿಕೊಂಡಲ್ಲಿ ' ಶಾಂತಿ ' ಸುಲಭ ಸಾಧ್ಯ ! ಆದರೆ ಅದು ಸಮಸ್ಯೆಯನ್ನು ಖಂಡಿತ ಬಗೆಹರಿಸುವದಿಲ್ಲ. ಒಂದು ವಿಚಾರದ ಬಂಧನ-ದಲ್ಲಿದ್ದುಕೊಂಡು, ದ್ವೀಪವಾಗಿರುವುದು ಹೋರಾಟದಿಂದ ಬಿಡುಗಡೆ-ಯಾದಂತಲ್ಲವಲ್ಲ.

ಆದ್ದರಿಂದ ಪ್ರಥಮತಃ ನಾವು ಮಾಡಬೇಕಾದದ್ದು ನಮ್ಮ ಹುಡುಕಾಟದ ಗುರಿಯನ್ನು ಅರಿಯುವುದು. ಅದರ ಬಗ್ಗೆ ಸ್ಪಷ್ಟತೆ ಇದ್ದರೆ, ಎಲ್ಲಿಗೂ-ಯಾವ ಗುರು, ಮಠ, ಸಿದ್ಧಾಂತ, ಸಂಘಟನೆಗಳ ಹತ್ತಿರವೂ ನಾವು ಹೋಗಬೇಕಾ-ದ್ದಿಲ್ಲ. ಆದರೆ ಈ ಬಗ್ಗೆ ಸ್ಪಷ್ಟ ಅರಿವು ಹೇಗೆ ಶಕ್ಯ ? ಕೇವಲ ಹುಡುಕಾಟ-ದಿಂದಲೆ ? ರಾಶಿ-ರಾಶಿ ಮಹದ್ಗ್ರಂಥಗಳ ಅಧ್ಯಯನದಿಂದಲೇ ? ಮಹಾ-ಮಹಾ ವಿದ್ವಾಂಸರು, ವಿಚಾರವೇತ್ತರುಗಳ ಭಾಷಣ ಕೇಳುವುದರಿಂದಲೇ ? ವಿವಿಧ ಬಗೆಯ ಸಂಘಟನೆಗಳಿಗೆ ಸೇರುವುದರಿಂದಲೇ ? ಯಾವುದರಿಂದ ? ಸಾಮಾನ್ಯವಾಗಿ ನಾವು ಈ ಮೇಲೆ ತಿಳಿಸಿದ ಎಲ್ಲ ಅಥವಾ ಒಂದಲ್ಲ ಒಂದು ಬಗೆಯ ಚಟುವಟಿಕೆಯಲ್ಲಿ ನಿರತರಾಗೇ ಇರುತ್ತೇವೆ. ಅಲ್ಲೆಲ್ಲ ನಮ್ಮ ತುಮುಲಕ್ಕೆ, ಸರಳಾಟಕ್ಕೆ ಪರಿಹಾರ ಹುಡುಕುತ್ತೇವೆ. ಯಾವುದೋ ಒಂದು ಸಂಘಟನೆ, ಒಬ್ಬ ಗುರು, ಒಂದು ಗ್ರಂಥ ನಮ್ಮನ್ನು ತೃಪ್ತಿಗೊಳಿಸಿದೆ ಎಂದು ಹೇಳುತ್ತೇವೆ ಮತ್ತು ಅದರೊಂದಿಗೆ ಹರಳುಗಟ್ಟಿಕೊಂಡು ಬಂಧಿತರಾಗಿ ನಾವು ಉಳಿದುಬಿಡುತ್ತೇವೆ.

ನಾವೆಲ್ಲರೂ ಹಲವು ವಿಧಗಳಲ್ಲಿ ಹುಡುಕುತ್ತಿರುವ ಆ ' ವಸ್ತು ' ವಿನಲ್ಲಿ ಅದು ದೇವರೋ, ಸತ್ಯವೋ, ಸುಖವೋ, ಯಾವುದೇ ಹೆಸರಿನಿಂದ ಕರೆ-

ಲ್ಪಡುತ್ತಿರಲಿ— ಇರುವ ಸಾಮಾನ್ಯ ಗುಣ ‘ ಶಾಶ್ವತತೆ ’ ಅಲ್ಲವೆ ? ನಾವು ಗಟ್ಟಿಯಾಗಿ ಅಂಟಿಕೊಳ್ಳಬಹುದಾದ, ಭರವಸೆ ಕೊಡುವಂತಹ, ಆಶೆ ಕುದು- ರಿಸುವಂತಹ ಚಿರಂತನ ಉತ್ಸಾಹ, ಶಾಶ್ವತ ನಿಶ್ಚಿಂತತೆ ನೀಡುವಂತಹದರ ಹುಡುಕಾಟ. ಈ ಕಾಮನೆಯ ಈಡೇರಿಕೆಗಾಗಿ ನಾವು ಹಲವಾರು ಪ್ರಯೋಗ ಮಾಡಿದ್ದೇವಾದರೂ ಅವೆಲ್ಲ ನಿಷ್ಫಲಗೊಂಡಿವೆ. ಸತ್ಯದಲ್ಲಿ, ದೇವರಲ್ಲಿ ಶಾಶ್ವತ ಸಂತೃಪ್ತಿ ಸಿಗಬಹುದೆಂದು ನಾವು ಆಶಿಸಿದ್ದೇವೆ. ಬುದ್ಧಿವಂತರು, ದಡ್ಡರು, ಸೈದ್ಧಾಂತಿಕರು, ವಾಸ್ತವವಾದಿಗಳು— ಎಲ್ಲರೂ ಸೇರಿದಂತೆ ನಾವು ಹುಡುಕುತ್ತ ಇರುವುದು ಖಂಡಿತವಾಗಿ ಈ ಶಾಶ್ವತ ಸಂತೃಪ್ತಿಯನ್ನೇ ಅಲ್ಲವೆ ?

ಈ ಶಾಶ್ವತ ‘ ಸಂತೃಪ್ತಿ ’ ಯನ್ನು ಹುಡುಕಲು ಹೊರಡುವ ಪೂರ್ವದಲ್ಲಿ ಯಾಕಾಗಿ ಈ ‘ ಶಾಶ್ವತ ಸಂತೃಪ್ತಿ ’ ಯನ್ನು ಹುಡುಕುತ್ತಿದ್ದೇವೆ ಎನ್ನುವು- ದನ್ನು ಅರಿಯಬೇಕಷ್ಟೇ, ಬದುಕಿನಲ್ಲಿಯ ನಿರಂತರ ಬದಲಾವಣೆ ಉಂಟುಮಾಡುವ ನೋವಿನಿಂದಾಗಿ, ಬದುಕಿನಲ್ಲಿ ಅಶಾಶ್ವತವಾದುದರ ಬಗ್ಗೆ ನಮಗುಂಟಾದ ವ್ಯಥೆಯಿಂದಾಗಿ, ಈ ಶಾಶ್ವತವಾದುದರ ಆಸೆ, ಆದರ್ಶವನ್ನು ಮನಸ್ಸು ಸೃಷ್ಟಿಸಿದೆ, ಅಲ್ಲವೆ ? ಈ ದುಃಖದಿಂದ, ಅಶಾಶ್ವತವಾದುದರಿಂದ ಮನಸ್ಸು ಹೇಳುವ ಶಾಶ್ವತ ಆನಂದ ಎನ್ನುವಂತಹ ಸ್ಥಿತಿಗೆ ಪಲಾಯನ ಮಾಡುವುದೇ ನಮ್ಮೆಲ್ಲರ ಹುಡುಕಾಟದ ಹಿಂದಿರುವ ಉದ್ದೇಶ. ಆದರೆ ದುಃಖದಲ್ಲಿ, ಅಶಾಶ್ವತವಾದುದರಲ್ಲಿ ಹುಟ್ಟಿಕೊಂಡಿರುವ ಈ ವಿಚಾರವೇ ಅಶಾಶ್ವತವಾದದ್ದು. ಯಾವುದೋ ಬಗೆಯ ವಿರೋಧವನ್ನು ಮಾಡುವಂತಹದು ಎಷ್ಟೇ ಉದಾತ್ತ- ವಾಗಿದ್ದರೂ ತನ್ನ ಗರ್ಭದಲ್ಲಿ, ತನ್ನನ್ನೇ ವಿರೋಧಿಸುವ ಬೀಜಗಳನ್ನು ಧರಿಸಿಕೊಂಡಿರುತ್ತದೆ. ಆದ್ದರಿಂದ ನಮ್ಮ ‘ ಶೋಧ ’ ಇದ್ದುದರಿಂದ ಪಲಾ- ಯನ ಮಾಡುವ ಒತ್ತಾಸೆ ಅಲ್ಲವೆ? ಆದರೆ ಆದರ್ಶ ಅಸತ್ಯವಾದದ್ದು; ನೋವೋ ಸತ್ಯವಾದದ್ದು. ನೋವಿನ ವಾಸ್ತವತೆಯನ್ನು ನಾವೂ ಸಂಪೂರ್ಣ ಅರಿತಂತಿಲ್ಲ; ಆದ್ದರಿಂದ ನಾವು ನೋವಿಲ್ಲದಂತಹದಕ್ಕೆ, ಆದರ್ಶಕ್ಕೆ ಅಷ್ಟೆಲ್ಲ ಅಂಟಿಕೊಂಡಿ- ರುತ್ತೇವೆ. ಹೀಗೆ ನಮ್ಮಲ್ಲೇ, ವಾಸ್ತವತೆ ಮತ್ತು ಆದರ್ಶಗಳ ಮಧ್ಯೆ ಉಂಟಾದ ದ್ವಂದ್ವಸ್ಥಿತಿ, ಇದ್ದುದರ ಹಾಗು ಇರಬೇಕಾದುದರ ಮಧ್ಯೆ ನಿರಂತರ ಸಂಘರ್ಷಕ್ಕೆ ಕಾರಣವಾಗಿದೆ.

ಆದ್ದರಿಂದ ಶಾಶ್ವತವಾದುದನ್ನು ಹುಡುಕುವುದಕ್ಕಿಂತ ಮುಂಚೆ, ಅದನ್ನು

ಹುಡುಕುವವನನ್ನು ಅರಿತುಕೊಳ್ಳಬೇಕಾದದ್ದು ಸ್ವಾಭಾವಿಕ ಅಗತ್ಯವಷ್ಟೇ ? ಹುಡುಕುವವ ಹುಡುಕುತ್ತಿರುವ ವಸ್ತುವಿಗಿಂತ ಬೇರೆ ಆಗುತ್ತಾನೆಯೆ ? ನಾನು ಶಾಶ್ವತ ಸಂತೋಷ ಹುಡುಕುತ್ತಿದ್ದೇನೆ ಎಂದಾಗ ' ಹುಡುಕುತ್ತಿರು ' ವ ಈ ' ನಾನು ' ಎನ್ನುವವನನ್ನು ಅರ್ಥ ಮಾಡಿಕೊಳ್ಳಲೇಬೇಕಲ್ಲವೆ ? ಏಕೆಂದರೆ ಈ ನನ್ನ ಕಾಮನೆಗೆ ಕಾರಣ ' ನಾನು '; ಗುರಿಯೂ ' ನಾನು '; ಸಾಧಿಸುವವನೂ ' ನಾನೇ ! ' ಅಂದರೆ ನನ್ನ ವಿಚಾರಗಳಿಗೆ ಆಧಾರವಾದ ನನ್ನನ್ನು ನಾನು ಅರಿಯದ ವರೆಗೆ, ನನ್ನ ಹುಡುಕಾಟದ ಸ್ವರೂಪವೇ ಸ್ಪಷ್ಟಗೊಳ್ಳುವ-ದಿಲ್ಲ; ಆದ್ದರಿಂದ ಅದು ಸಫಲಗೊಳ್ಳುವುದೂ ಇಲ್ಲ. ಅಲ್ಲವೇ ?

ಹಾಗಾದರೆ ನನ್ನನ್ನು ನಾನು ಅರಿಯುವ ಬಗೆ ಹೇಗೆ ? ತನ್ನನ್ನು ತಾನೇ ಹಿಂಬಾಲಿಸುವುದರಿಂದ ಎಂದು ಹೇಳಬಹುದು; ಇದು ತುಂಬ ಸರಳವಾಗಿ ಕಾಣುತ್ತದೆ; ಆದರೆ ಅತ್ಯಂತ ಕ್ಲಿಷ್ಟವಾದ ಕೆಲಸ. ತನ್ನನ್ನೇ ತಾನು ಹಿಂಬಾ-ಲಿಸುವುದು; ತನ್ನ ವಿಚಾರ ಹೇಗೆ ಕಾರ್ಯ ನಡೆಸುತ್ತದೆ ಎಂದು ನೋಡಲು ವ್ಯಕ್ತಿ ಅಸಾಧಾರಣ ರೀತಿಯಲ್ಲಿ ಎಚ್ಚರವಾಗಿರಬೇಕಾಗುತ್ತದೆ. ಆಗ ತನ್ನವೇ ಆದ ವಿಚಾರಗಳ ಪ್ರತಿಸ್ಪಂದನಗಳ, ಹಾಗು ಭಾವನೆಗಳ, ಜಟಿಲತೆಗಳ ಬಗ್ಗೆ ವ್ಯಕ್ತಿ ಹೆಚ್ಚೆಚ್ಚು ಜಾಗ್ರತನಾಗತೊಡಗುತ್ತಾನೆ. ಆ ವ್ಯಕ್ತಿ ತನ್ನ ಬಗ್ಗೆ ಅಷ್ಟೇ ಅಲ್ಲ; ತನ್ನೊಡನೆ ಸಂಬಂಧವಿರುವ ವ್ಯಕ್ತಿಗಳೆಲ್ಲರ ಬಗೆಗೂ ಹೆಚ್ಚಿನ ಅರಿವನ್ನು ಹೊಂದುತ್ತ ಹೋಗುತ್ತಾನೆ. ತನ್ನನ್ನು ತಾನು ಅರಿಯುವುದು ಅಂದರೆ ತನ್ನ ಕ್ರಿಯೆಯಲ್ಲಿ ಆ ಮೂಲಕ ಸಂಬಂಧದಲ್ಲಿ ತನ್ನನ್ನು ಅಭ್ಯಸಿಸುವುದು. ಆದರೆ ಕಷ್ಟ ಎಂದರೆ ನಾವು ತುಂಬ ಅಸಹನೆಯ ಜನ; ಕೆಲವು ಬಾರಿ ಅಸಹನೆಯನ್ನೇ ಸಿದ್ಧಾಂತ ಮಾಡಿಕೊಂಡ ಜನ. ನಮಗೆ ಅಭಿವೃದ್ಧಿ ಬೇಕು; ಒಂದು ನಿರ್ದಿಷ್ಟ ಗುರಿ ತಲುಪಬೇಕು. ಆ ಒತ್ತಡದಲ್ಲಿ ನಮಗೆ ನಮ್ಮನ್ನು ಅವಲೋಕಿಸಲು ಅಭ್ಯಸಿಸಲು ಸಮಯವೇ ಸಿಗುವುದಿಲ್ಲ; ಅವಕಾಶ, ಸಂದರ್ಭಗಳು ಸಿಗುವುದೂ ಕಷ್ಟ. ಒಂದಾದ ಮೇಲೆ ಒಂದರಂತೆ ಚಟುವಟಿಕೆಗಳಿಗೆ ನಾವು ನಮ್ಮನ್ನು ಬಿಗಿದುಕೊಂಡಿರುತ್ತೇವೆ— ಜೀವನಕ್ಕಾಗಿ ಸಂಪಾದನೆ, ಮಕ್ಕಳ ಪೋಷಣೆ, ವಿವಿಧ ಸಂಘಟನೆಗಳ ಹಲವು ಜವಾಬ್ದಾರಿಗಳ ಭಾರ, ಇತ್ಯಾದಿ ಇತ್ಯಾದಿಯಾಗಿ. ಈ ಗಡಿಬಿಡಿಯಲ್ಲೇ ಜಗತ್ತಿನಾದ್ಯಂತ ತುಂಬಿರುವ ಗುರುಗಳನ್ನು ಹಾಗು ಅವರ ಪದ್ಧತಿ-ವಿಚಾರಗಳನ್ನು ಅನುಸರಿಸುವುದು; ಆ ಈ ವಿಷಯಗಳ ಮೇಲೆ

ಅತ್ಯಂತ ಇತ್ತೀಚಿನ ಪುಸ್ತಕ ಓದುವುದು; ಇತ್ಯಾದಿಗಳನ್ನೂ ಮಾಡು-ತ್ತಿರುತ್ತೇವೆ. ಆದರೆ ಕೊನೆಗೂ ನಾವು ಮರಳಬೇಕಾದದ್ದು ನಮ್ಮಲ್ಲಿಗೇ, ನಮ್ಮ ಅಂತರಂಗಕ್ಕೇ ಅಲ್ಲವೆ? ಆದ್ದರಿಂದ ಈ ಎಲ್ಲ ಚಟುವಟಿಕೆಗಳೂ ನಿರರ್ಥಕವೆನಿಸುತ್ತವೆ; ನಿಷ್ಫಲಗೊಳ್ಳುತ್ತವೆ, ಅಲ್ಲವೆ?

ತನ್ನನ್ನು ತಾನು ಗಮನಿಸುತ್ತಿರುವಂತೆ, ತನ್ನ ಬಗ್ಗೆ ಅರಿವು-ಸ್ಪಷ್ಟತೆ ಹೆಚ್ಚುತ್ತದೆ. ತನ್ನನ್ನು ತಾನು ತಿಳಿದುಕೊಳ್ಳುವದಕ್ಕೆ ಕೊನೆ ಎಂಬುದಿಲ್ಲ. ಅಲ್ಲಿ ಯಾವ ತೀರ್ಮಾನಕ್ಕೂ ಬರಲಿಕ್ಕಾಗುವದಿಲ್ಲ; ಯಾವ ಸಿದ್ಧಿಯನ್ನೂ ತಲುಪಲಿಕ್ಕಾಗುವುದಿಲ್ಲ. ಅದೊಂದು ಕೊನೆಯಿರದ ನದಿ. ಅದರೊಳಗೆ ಹೆಚ್ಚೆಚ್ಚು ಮುಳುಗುತ್ತ, ತಲ್ಲೀನನಾಗುತ್ತ ಹೋದಂತೆ ಮನಸ್ಸು ಪ್ರಶಾಂತ-ವಾಗುತ್ತದೆ. ಈ ಪ್ರಶಾಂತತೆಯಲ್ಲಿ, ಈ ಮೌನದಲ್ಲಿ ಸತ್ಯದ ಇರುವು ಅರಿವಿಗೆ ಬರಲು ಸಾಧ್ಯ. ಆಗ ಮಾತ್ರ ಆನಂದದ ಅನುಭವ, ಸೃಜನಾತ್ಮಕ ಕ್ರಿಯೆ ಇರಲು ಶಕ್ಯ. ಹೀಗೆ ಮನಸ್ಸಿನಾಚೆಗಿನ ಒಂದು ವಿಶಿಷ್ಟ ಅನುಭವವೇದ್ಯವಾದ ಸೃಜನಾತ್ಮಕ ಆನಂದವನ್ನು ಹೊಂದಲು ಸಮರ್ಥನಾದರೆ, ನಮ್ಮ ಸುತ್ತು-ಮುತ್ತಲು ಇರುವ ಅತ್ಯಂತ ಹತ್ತಿರದ ಜನರೊಂದಿಗಿನ ನಮ್ಮ ಸಂಬಂಧಗಳಲ್ಲಿ ಬದಲಾವಣೆ ಬಹುಶಃ ಆಗಬಹುದು; ಹಾಗು ಅದರಂತೆ ನಿಧಾನವಾಗಿ ನಾವು ಬದುಕುತ್ತಿರುವ ಜಗತ್ತಿನಲ್ಲೂ ಆಗಬಹುದು. ಆದ್ದರಿಂದ ನಮ್ಮ ಬಗ್ಗೆಗೇ ನಮಗೆ ಅರಿವು ಆರಂಭವಾಗಬೇಕಷ್ಟೇ.

* * *

೩. ಅರಿವು

ನಮ್ಮನ್ನು ನಾವು ಅರಿತುಕೊಳ್ಳುವುದು ಎಂದರೆ— ಈ ಜಗತ್ತಿನೊಂದಿಗಿನ ನಮ್ಮ ಸಂಬಂಧಗಳನ್ನು ಅರಿಯುವುದು. ಅದು ಕೇವಲ ವಿಚಾರ ಹಾಗು ಜನರ ಜಗತ್ತಿನೊಂದಿಗೆ ಮಾತ್ರವಲ್ಲ; ನಮ್ಮ ಸುತ್ತಲಿನ ನಿಸರ್ಗದ ಹಾಗು ನಾವು ಹೊಂದಿರುವ ವಸ್ತುಗಳ ಜೊತೆಗೆ ನಮಗಿರುವ ಸಂಬಂಧಗಳನ್ನೂ ಅರಿಯುವುದು. ಈ ಅರಿಯುವಿಕೆಗೆ ವಿಶೇಷ ತಜ್ಞತೆ ಬೇಕಾಗುತ್ತದೆ ಎಂದೇನೂ ಇಲ್ಲ. ಆದರೆ ಅತ್ಯಂತ ಅವಶ್ಯವಾಗಿ ಬೇಕಾದದ್ದು : ಬದುಕನ್ನು ಇಡಿಯಾಗಿ, ಸಮಗ್ರವಾಗಿ ಗಮನಿಸುವಿಕೆ ಅಥವಾ ಅರಿಯುವಿಕೆ.

ನಾವು ನಮ್ಮ ಜ್ಞಾನೇಂದ್ರಿಯಗಳ ಮೂಲಕ ಸುತ್ತಲಿನ ಜಗತ್ತನ್ನು ಅರಿಯುತ್ತೇವಷ್ಟೇ. ಹೂಗಳ ಬಣ್ಣ, ಆಕಾರ, ಗುಂಯ್‌ಗುಡುತ್ತಿರುವ ಭೃಂಗಗಳು, ಮುಳುಗುತ್ತಿರುವ ಬಂಗಾರಬಣ್ಣದ ಸೂರ್ಯ, ರಂಗುರಂಗಿನ ಮೋಡಗಳು, ಹೊಸದಾಗಿ ಅರಳಿದ ಮಲ್ಲಿಗೆಯ ಘಮ-ಘಮ, ತಂಪಾಗಿ ಬೀಸುತ್ತಿರುವ ಮುಂದಗಾಳಿ ಇತ್ಯಾದಿ ಸಾವಿರಾರು ಬಗೆಯ ಶಬ್ದ, ರೂಪ, ರಸ, ವಾಸನೆ, ಸ್ಪರ್ಶಗಳನ್ನು ಸ್ಥೂಲ ಹಾಗು ಸೂಕ್ಷ್ಮರೂಪಗಳಲ್ಲಿ ಅರಿಯುತ್ತಿರುತ್ತೇವಷ್ಟೇ. ಅದೇ ತರಹ ಈ ಎಲ್ಲ ಮಾಹಿತಿ ಸಂಗ್ರಹಿಸುವ ಈ ದೇಹವನ್ನು ನಾವು ಅರಿಯಬಲ್ಲೆವು. ಈ ಎಲ್ಲ ಗ್ರಹಿಕೆಗಳು ಮೇಲ್ಪದರ ಮಟ್ಟದಲ್ಲೇ ಇದ್ದರೆ ಯಾವ ಗೊಂದಲವೂ ಇಲ್ಲ. ಮಲ್ಲಿಗೆ, ಮಲ್ಲಿಗೆ-ಮಟ್ಟಿ, ಮಲ್ಲಿಗೆ ಹೂಗಳಿಗೆ ಮುತ್ತಿರುವ ದುಂಬಿಗಳು— ಎಲ್ಲ ಅಲ್ಲಿವೆ-ಎಂದು ಗ್ರಹಿಸಿದರೆ ಸರಿ. ನಾವು ಬಯಸಿರಲಿ, ಬಯಸದಿರಲಿ, ಅವು ಅಲ್ಲಿವೆ; ಹೋಲಿಕೆ, ಬೇಕು-ಬೇಡಗಳ ತುಯ್ದಾಟ ಇತ್ಯಾದಿ ಏನೂ ಇಲ್ಲದೆ ನಾವು ಅವುಗಳೊಡನೆ ಮಾನಸಿಕವಾಗಿ, ಯಾವ ರೀತಿಯಲ್ಲೂ ತಳಕುಹಾಕಿಕೊಳ್ಳದೇನೂ ಅವು ನಮ್ಮೆದುರೇ ಇವೆ. ಇವೆಲ್ಲ ಬಾಹ್ಯ ಇಂದ್ರಿಯ ಗ್ರಹಿಕೆ ಅಥವಾ ಅರಿವು. ಇದೇ ತರಹ ಮಿನುಗುತ್ತಿರುವ

ತಾರೆ, ಆಳವಾದ ಸಾಗರ, ಉತ್ತುಂಗ ಶಿಖರ, ಅಂತಿಮ ಹಂತದಲ್ಲಿರುವ ವೈಜ್ಞಾನಿಕ ನಿರೀಕ್ಷೆ,—ಇತ್ಯಾದಿಗಳೆಲ್ಲವನ್ನೂ ಸೇರಿಸಬಹುದು. ಹೀಗೆ ವಾಸ್ತವವಾಗಿ ಮೂರ್ತರೂಪದಲ್ಲಿ ಈ ಜಗತ್ತಿನಲ್ಲಿ ಏನೇನು ' ಇವೆ 'ಯೋ ಅವೆಲ್ಲವನ್ನೂ ನಾವು ಹೀಗೇ ಗಮನಿಸಬಹುದು, ಅರಿಯಬಹುದು.

ಈಗ ಎರಡನೆಯ ಹಂತ : ಇವುಗಳೆಲ್ಲದರ ಬಗ್ಗೆ ನೀವೇನು ಯೋಚಿಸುತ್ತೀರಿ; ನಿಮ್ಮ ಅನಿಸಿಕೆ ಏನು? ಎನ್ನುವಂತಹದು ನಿಮ್ಮ ಮಾನಸಿಕ ಪ್ರತಿಸ್ಪಂದನ. ಇದಕ್ಕೇ ವಿಚಾರ ಅಥವಾ ಭಾವನೆ ಎಂದು ಕರೆಯುತ್ತೇವೆ. ವಸ್ತುವಿನ ಬಗ್ಗೆ ನಿಮ್ಮ ಇಂದ್ರಿಯಗಳ ಮೂಲಕ ಮಾಡಿದ ಗ್ರಹಿಕೆ (ಈ ಮೇಲಿನ ಪ್ಯಾರಾದಲ್ಲಿ ವಿವರಿಸಿದ ಹಾಗೆ) ಸರಳವಾದ ವಿಷಯ. ' ಬಾಗಿಲು ಇದೆ; ಆದರೆ ಆ ಬಾಗಿಲ ವರ್ಣನೆ ' ಬಾಗಿಲು ' ಅಲ್ಲ. ನೀವು ಭಾವನಾತ್ಮಕವಾಗಿ ಬಾಗಿಲ ವರ್ಣನೆಗೆ ಆರಂಭಿಸಿದರೆ, ಆಗಲ್ಲಿ ನಿಜವಾದ ' ಬಾಗಿಲು ' ಕಾಣುವುದಿಲ್ಲ. ಆ ವಿವರಣೆ— ಒಂದು ಶಬ್ದ ಅಥವಾ ವೈಜ್ಞಾನಿಕ ವರ್ಣನೆ ಅಥವಾ ಭಾವನಾತ್ಮಕ ಪ್ರತಿಕ್ರಿಯೆ— ಯಾವುದೇ ಇರಬಹುದು. ಆದರೆ ಅದಾವುದೂ ಬಾಗಿಲು ಅಲ್ಲ. ಈ ವಿಷಯವನ್ನು ಚೆನ್ನಾಗಿ ಅರಿತುಕೊಳ್ಳದಿದ್ದರೆ, ಮುಂದೆ ಹೆಚ್ಚ್ಚಿಚ್ಚು ಗೊಂದಲವೇ ಉಂಟಾಗುತ್ತದೆ; ವಿವರಣೆ ಎಂದೂ ವಿವರಿಸಿದ ವಸ್ತು ಅಲ್ಲ.

ಮರ, ಹೂ, ದುಂಬಿ, ಬಾಗಿಲು, ಹಕ್ಕಿ— ಇತ್ಯಾದಿಗಳು ಇರುವುದರ ಅರಿವು ಜ್ಞಾನೇಂದ್ರಿಯಗಳ ಮೂಲಕ ಉಂಟಾಗಿ ಮನಸ್ಸಿನಲ್ಲಿದೆ; ಅವುಗಳ ಬಗ್ಗೆ ನಮ್ಮ ಪ್ರತಿಕ್ರಿಯೆ-ಅದು ವಿಚಾರ, ಭಾವನೆ, ಅನಿಸಿಕೆ ಆಗಿ-ಕೂಡ ಇದೆ. ಈ ಪ್ರತಿಸ್ಪಂದನೆ ಅಥವಾ ಪ್ರತಿಕ್ರಿಯೆಯ ಅರಿವನ್ನು ಎರಡನೆಯ ಮಟ್ಟದ ಅರಿವು ಎನ್ನಬಹುದು. ಎಷ್ಟೋ ಬಾರಿ ನಾವು ಈ ಎರಡನೆಯ ಬಗೆಯ ಅರಿವನ್ನು ಪ್ರತಿಕ್ರಿಯೆ ಅಥವಾ ಪ್ರತಿಸ್ಪಂದನೆಯನ್ನು ಗಮನಿಸಿರುವುದಿಲ್ಲ. ಈ ಎರಡೂ ಬಗೆಯ ಅರಿವು ಒಂದೇ ಕಾಲದಲ್ಲಿ ಆಗುವಂತಹದು. ಹೊರಗಿನ ಮತ್ತು ಒಳಗಿನ ಅರಿವು ಎಂದು ವಿಂಗಡಿಸಲು ಬರದಂತಹದು. ಮರವನ್ನು ನೋಡುತ್ತಿರುವ ಅರಿವು ಮಾತ್ರ ಇದ್ದು, ಮಾನಸಿಕವಾಗಿ ಒಳಗೊಳ್ಳುವಿಕೆ ಇರದಿದ್ದಾಗ ಸಂಬಂಧದಲ್ಲಿ ಒಡಕು ಅಥವಾ ವಿಭಜನೆ ಇರುವುದಿಲ್ಲ. ಯಾವಾಗ ಆ ಮರಕ್ಕೆ ಮನಸ್ಸಿನ ಪ್ರತಿಕ್ರಿಯೆ ಇರುತ್ತದೆಯೋ,— ಆ ಪ್ರತಿಕ್ರಿಯೆ ಗತಕಾಲದ

ಸ್ಮೃತಿಯಾಗಿ, ಹಳೆಯ ಅನುಭವವಾಗಿ, ಮನಸ್ಸನ್ನು ಬಂಧಿಸುತ್ತಿರುವುದ-ರಿಂದ— ಆ ಸಂಬಂಧದಲ್ಲಿ ಒಡಕು ಅಥವಾ ವಿಭಜನೆ ಉಂಟಾಗುತ್ತದೆ. ಮರದ ಅರಿವು ಅಷ್ಟೇ ಇದ್ದಾಗ ಅದರ ಮೇಲೆ ಭಾಷ್ಯ, ಟೀಕೆ, ಏನೂ ಇರುವದಿಲ್ಲ. ಯಾವಾಗ ಮನಸ್ಸಿನ ಪ್ರತಿಕ್ರಿಯೆ ಆ ಮರದ ಬಗ್ಗೆ— ಸೇರುತ್ತದೆ / ಸೇರುವ-ದಿಲ್ಲ, ಸುಂದರವಾಗಿದೆ / ಸುಂದರವಾಗಿಲ್ಲ, ಇತ್ಯಾದಿ, ಇತ್ಯಾದಿ ಹುಟ್ಟಿ-ಕೊಂಡಿತೋ ಆಗ ಆ ಅರಿವಿನಲ್ಲಿ ' ನಾನು ' ಮತ್ತು ' ನಾನಲ್ಲದ್ದು ' ಎಂಬ ವಿಭಾಗ ಆಗುತ್ತದೆ. ' ನಾನು ' ಮನಸ್ಸಿನ ಪ್ರತಿಕ್ರಿಯೆ, ನೋಡುತ್ತಿರುವ ಮರದಿಂದ-ನಾನಲ್ಲದ್ದರಿಂದ— ಭಿನ್ನವಾಗಿರುತ್ತದೆ.

ಹೀಗೆ ಮನಸ್ಸಿನ ಪ್ರತಿಕ್ರಿಯೆಯೇ ಎಲ್ಲ ಸಂಬಂಧಗಳಲ್ಲಿಯೂ ' ನಾನು-ನಾನಲ್ಲದ್ದು ' ಎಂಬುದರ ಒಡಕಿನ ಮೂಲ. ಇದೇ ನಾವು ನಮ್ಮ ಜಗತ್ತಿ-ನೊಡನೆ ಇರಿಸಿಕೊಂಡಿರುವ ಸಂಬಂಧಗಳ ಸ್ವರೂಪ. ಇದು ವ್ಯಕ್ತಿ ಹಾಗು ಸಮುದಾಯಗಳನ್ನು ನಾವು ಸೃಷ್ಟಿಸುವ ರೀತಿ. ಜಗತ್ತನ್ನು ಅದು ಇರುವ ಹಾಗೆ ನೋಡದೇ, ಅದು ನೆನಪಿನಲ್ಲಿ, ನಮ್ಮೊಂದಿಗಿನ ವಿವಿಧ ಸಂಬಂಧಗಳಲ್ಲಿ ಇರುವ ಹಾಗೆ ನೋಡುತ್ತೇವೆ. ಈ ರೀತಿ ವಿಭಜಿತಗೊಂಡಿರುವುದನ್ನೇ ಬದುಕು ಎನ್ನುತ್ತೇವೆ. ಹಾಗು ಇದರ ಮುಂದುವರಿಕೆಯನ್ನೇ ಮಾನಸಿಕ ಅಸ್ತಿತ್ವ-ವೆನ್ನುತ್ತೇವೆ. ಇದೇ ನಮ್ಮ ಎಲ್ಲ ಅಂತರ್ದ್ವಂದ್ವಗಳ ಹಾಗು ವಿಭಜನೆಗಳ **ಮೂಲ.**

ಯಾವ ತೀರ್ಮಾನ, ಪೂರ್ವಗ್ರಹಗಳಿಲ್ಲದೇ ಮರವನ್ನು ನೋಡುವುದು, ಹಾಗು ಮರದ ಬಗೆಗಿನ ನಮ್ಮ ಪ್ರತಿಸ್ಪಂದನೆ, ಪ್ರತಿಕ್ರಿಯೆಗಳನ್ನು ಯಾವ ನಿರ್ಣಯ,ಖಂಡನೆ, ಪ್ರೋತ್ಸಾಹಗಳಿಲ್ಲದೇ ಗಮನಿಸುವುದು-ಇವೆರಡೂ ಇರುವಂಥ ಅರಿವಿನ ಸ್ಥಿತಿ ಶಕ್ಯ, ಅಲ್ಲವೆ ? ಈ ಸ್ಥಿತಿಯಲ್ಲೇ ' ನಾನು ' ಮತ್ತು 'ನಾನ-ಲ್ಲದ್ದು' ಎಂಬ ಭಿನ್ನತಾತತ್ತ್ವವನ್ನು ನಿರ್ಮೂಲ ಮಾಡಲು ಶಕ್ಯ : ಅಂದರೆ ಮರವನ್ನು ನೋಡುವುದು ಹಾಗು ಮರವನ್ನು ನೋಡುತ್ತಿರುವ ನಮ್ಮನ್ನೂ ನೋಡುವುದು, ಎರಡೂ ಶಕ್ಯ. ' ನಾನು ' ಎಂದೆಂದೂ ಈ ಮನಸ್ಸಿನದೇ, ಭೂತಕಾಲದದ್ದೇ, ಸ್ಮೃತಿಯದೇ. ' ನಾನು ' ಎಂದರೆ ಈ ಮನಸ್ಸೇ; ಈ ಮನಸ್ಸಿನಿಂದ ಪಾರಾಗುವುದು ಹೇಗೆ ಎಂದು ಪ್ರಶ್ನೆ ಕೇಳುವುದೂ ಮನಸ್ಸೇ !

ಅದಕ್ಕೆ ಮತ್ತೊಂದು ಪಲಾಯನ ಬೇಕಾಗಿದೆ. ಅದು ಮತ್ತೊಂದು ವ್ಯವಸ್ಥೆ-ಯನ್ನು ಸೃಜಿಸಲು ಸಂಕಲ್ಪಿಸುತ್ತದೆ. ಅದಕ್ಕಾಗಿ ಈ ಪ್ರಶ್ನೆಯೇ ಮನಸ್ಸು.

ಅದರಿಂದ ಪಾರಾಗುವುದು ಎಂದರೆ ಮನಸ್ಸಿನ ಪ್ರತಿಕ್ರಿಯೆಗಳನ್ನೆಲ್ಲ ಅರಿಯುವುದು. ಆಗ ತಾಟಸ್ಥ್ಯ ಬರುತ್ತದೆ; ಪ್ರಶ್ನೆ ಇರುವುದಿಲ್ಲ; ಕೇವಲ ಅರಿವು ಇರುತ್ತದೆ. ಈ ಅರಿವು ನಿಂತ ಕ್ಷಣವೆ 'ಮನಸ್ಸು' ಜನ್ಮ ತಳೆದು ಬಂದುಬಿಡುತ್ತದೆ. ಆರಂಭದಿಂದ ಕೊನೆಯ ವರೆಗೂ ಸಂಪೂರ್ಣವಾಗಿ ಗಮನ ನೀಡುವುದರಿಂದ ಮಾತ್ರ ಅರಿವು ಶಕ್ಯ. ಈ 'ಗಮನ' ನೀಡುವುದು ಶ್ರೇಷ್ಠ ದರ್ಜೆಯ ಸದ್ಗುಣ. ಆದ್ದರಿಂದ ಅದು ಪ್ರೇಮವೂ ಹೌದು; ಶ್ರೇಷ್ಠತಮ ಧೀಮಂತಿಕೆಯೂ ಹೌದು. ಮನುಷ್ಯ ನಿರ್ಮಿತ ಈ ಒಳದಾರಿ, ವರ್ತುಲ-ಗಳ ಸ್ವರೂಪ, ಸಂವಿಧಾನಗಳ ಬಗ್ಗೆ ಸಂವೇದನಾಶೀಲನಾಗಿರದೆ, ಗಮನ ನೀಡುವುದು ಶಕ್ಯವಿಲ್ಲ.

ಈ ಅರಿವನ್ನು ನಮ್ಮ ಸಂಬಂಧಗಳ ಕ್ರಿಯೆಯಲ್ಲಿ ಹೀಗೆ ಪರೀಕ್ಷಿಸಿ-ಕೊಳ್ಳಬಹುದು : ಯಾವುದರ ಜತೆಗೂ ನಮ್ಮನ್ನು 'ಅದೇ ತಾನು' ಎಂದು ಪ್ರತಿಪಾದಿಸಿಕೊಳ್ಳದೆ, ಯಾವುದರ ಜತೆಗೂ ಹೋಲಿಸಿಕೊಳ್ಳದೆ, ಯಾವುದೇ ತರಹದ ಖಂಡನೆ ಮಾಡದೇ ನಮ್ಮನ್ನೇ ನಾವು ಗಮನಿಸಬೇಕು. ಆಗ ಅಸಾಮಾನ್ಯವಾದದ್ದು ಜರುಗುತ್ತಿರುವುದು ಕಂಡುಬರುತ್ತದೆ. ಇದರಿಂದ ನಮ್ಮೆಲ್ಲ ಚಟುವಟಿಕೆಗಳನ್ನು— ಈ ಚಟುವಟಿಕೆಗಳಲ್ಲಿ ಹೆಚ್ಚಿನವುಗಳನ್ನು ನಾವು ಸಂಪೂರ್ಣ ಅರಿತುಕೊಳ್ಳದೆ, ಕುರುಡರಂತೆ ಮಾಡುತ್ತಿರುತ್ತೇವೆ— ನಿಲ್ಲಿಸುವ-ದಷ್ಟೇ ಅಲ್ಲ, ಆ ಅರಿವಿನ ಅಭಾವಕ್ಕೂ ಕೊನೆ ತರುತ್ತೇವೆ. ಈ ಎಲ್ಲ ಚಟುವಟಿಕೆಗಳ ಮೂಲದಲ್ಲಿರುವ ಉದ್ದೇಶಗಳೆಲ್ಲವೂ ಯಾವ ವಿಶೇಷ ಶೋಧನಾ-ಯತ್ನಗಳಿಲ್ಲದೇ, ಅಗೆದು ತೆಗೆಯದೇ— ತಮ್ಮಷ್ಟಕ್ಕೆ ತಾವೇ ನಮ್ಮ ಅರಿವಿಗೆ ಬರುತ್ತವೆ. ಆದರೆ ಇದು ಯಾವ ತರಹದ ಖಂಡನೆಯೂ, ವಿರೋಧವೂ ಇಲ್ಲ-ದಿದ್ದಾಗ ಮಾತ್ರ ಶಕ್ಯ. ಏಕೆಂದರೆ ನಾನು ಒಂದನ್ನು ಖಂಡಿಸುತ್ತಿದ್ದೇನೆ ಎಂದಾಗ ಅದನ್ನು ನಾನು ಅರ್ಥ ಮಾಡಿಕೊಳ್ಳುತ್ತಿಲ್ಲ ಎಂದೇ ಅರ್ಥ; ಈ ಖಂಡನೆ ಅರ್ಥ ಮಾಡಿಕೊಳ್ಳುವುದನ್ನು ತಪ್ಪಿಸಿಕೊಳ್ಳುವುದಕ್ಕೆ ಒಂದು ನೆವ ಅಷ್ಟೇ. ಖಂಡಿಸದೆ, ಅದನ್ನು ಎಚ್ಚರದಿಂದ ಅರಿತುಕೊಳ್ಳಲಾರಂಭಿಸಿದಾಗ

ಕ್ರಿಯೆಯ ಅರ್ಥ, ತಿರುಳು ತನ್ನಷ್ಟಕ್ಕೆ ತಾನೇ ಬಿಚ್ಚಿಕೊಳ್ಳುತ್ತದೆ. ತಟಸ್ಥವಾಗಿ ಖಂಡನೆ, ದೃಢೀಕರಣ, ಪ್ರತಿಪಾದನೆ, ಪ್ರಚೋದನೆ, ಏನೂ ಇಲ್ಲದೆ ಎಚ್ಚರದಿಂದ ಗ್ರಹಿಸಬೇಕು. ಇದು ನೇತ್ಯಾತ್ಮಕವಾದದ್ದು ಎನಿಸುತ್ತದೆ. ಆದರೆ ನೇತ್ಯಾತ್ಮಕವಾದದ್ದಲ್ಲ; ತದ್ವಿರುದ್ಧವಾಗಿ ಇದಕ್ಕೆ ನಿಷ್ಕ್ರಿಯತೆಯ ಗುಣವಿದ್ದು, ನಿಜವಾಗಿ ಅದು ನೇರ ಸೃಷ್ಟ್ಯಾತ್ಮಕ ಕ್ರಿಯೆ ಆಗಿರುತ್ತದೆ ಎನ್ನುತ್ತಾರೆ ಜೆ. ಕೆ. ಇದನ್ನು ಎಚ್ಚರದಿಂದ ಅರಿಯಲು ಆರಂಭಿಸಿದಾಗ ಮಾತ್ರ ಶಕ್ಯವಾಗುತ್ತದೆ. ಇದನ್ನು ಪ್ರಯೋಗಮಾಡಿಯೇ ನೋಡಬೇಕು, ಆಗ ನಿಮಗೇ ಅನುಭವಕ್ಕೆ ಬರುತ್ತದೆ— ಎನ್ನುತ್ತಾರೆ ಜೆ. ಕೆ.

ಏನನ್ನಾದರೂ ನಾವು ಅರಿಯಬೇಕೆಂದು ಹೊರಟಾಗ ಸಾಮಾನ್ಯವಾಗಿ ನಾವು ತಟಸ್ಥರಾಗಿರುವುದಿಲ್ಲ. ಆ ಅರಿಯಬೇಕು ಎನ್ನುವುದರ ಬಗ್ಗೆ ಆಲೋಚಿಸುತ್ತ, ಊಹಿಸುತ್ತ, ಪ್ರಶ್ನಿಸುತ್ತ ಇರುತ್ತೇವೆ. ಆದ್ದರಿಂದಲೇ ನಮಗೆ ಅರಿವು ಮೂಡುವುದಿಲ್ಲ. ಏನನ್ನಾದರೂ ಅರಿಯಬೇಕೆಂದಿದ್ದಾಗ ನಾವು ತಟಸ್ಥವಾಗಿ, ಸೂಕ್ಷ್ಮ ಸಂವೇದನಾಶೀಲರಾಗಿ, ಅತ್ಯಂತ ಸೂಕ್ಷ್ಮ ಫೋಟೋಗ್ರಾಫಿಕ್ ಪ್ಲೇಟ್ ಇದ್ದ ಹಾಗೆ ಇರಬೇಕು. ಒಬ್ಬನನ್ನು ಅರಿತುಕೊಳ್ಳಬೇಕಾದಾಗ ನಾವು ತಟಸ್ಥವಾಗಿ ಅವನನ್ನು ಗಮನಿಸಬೇಕು, ಅವನು ಹೇಳುವುದನ್ನು ಕೇಳಬೇಕು. ಇದಕ್ಕೆ ವಿಶೇಷ ತರಬೇತಿ ಏನೂ ಬೇಕಿಲ್ಲ. ಈ ಪ್ರಕ್ರಿಯೆಯಲ್ಲಿ ಅವನನ್ನು ಅರಿತುಕೊಳ್ಳುವುದರ ಜೊತೆಗೆ ನಮ್ಮನ್ನೂ ನಾವು ಅರಿಯಲಾರಂಭಿಸುತ್ತೇವೆ. ಕೇವಲ ಮನಸ್ಸಿನ ಹೊರವಲಯದಲ್ಲಿರುವ ಸಂಗತಿಗಳನ್ನಷ್ಟೇ ಅಲ್ಲ, ಅಂತರಾಳದಲ್ಲಿರುವ ಸಂಗತಿಗಳನ್ನೂ ಸಹ ಅರಿತುಕೊಳ್ಳತೊಡಗುತ್ತೇವೆ. ಏಕೆಂದರೆ ಅಲ್ಲಿಯೇ ನಮ್ಮೆಲ್ಲ ಉದ್ದೇಶ, ಗುಪ್ತವಾಗಿರುವ, ಗೊಂದಲದಲ್ಲಿರುವ ಅನೇಕಾನೇಕ ಒತ್ತಾಸೆ, ಆತಂಕ, ಭಯ, ಹಸಿವು— ಮುಂತಾದವುಗಳೆಲ್ಲ ಮನೆಮಾಡಿಕೊಂಡಿರುತ್ತವೆ. ಹೊರಗಿನಿಂದ ಅವೆಲ್ಲ ನಮ್ಮ ಹಿಡಿತದಲ್ಲೇ ಇರುವಂತೆ ತೋರಿದರೂ, ಅಂತರ್ಯದಲ್ಲಿ ಕುದಿಯುತ್ತಲೇ ಇರುತ್ತವೆ. ಅವನ್ನೆಲ್ಲ ಅರ್ಥಮಾಡಿಕೊಂಡ ವಿನಃ ಸ್ವಾತಂತ್ರ್ಯ, ಸಂತೋಷ, ಧೀಮಂತಿಕೆ ಯಾವುದೂ ದಕ್ಕದು. ಈ ಬಗೆಯ ಅರಿಯುವಿಕೆಯಲ್ಲಿ ಯಾವುದೇ ರೀತಿಯ ಆಯ್ಕೆ, ಸರಿ-ತಪ್ಪು, ನೀತಿ-ಅನೀತಿ, ಸುಂದರ-ಅಸುಂದರ ಇತ್ಯಾದಿ ಯಾವ ದ್ವಂದ್ವವೂ ಇರುವದಿಲ್ಲ. ತಾಟಸ್ಥ್ಯವೆಂದರೆ ನಿಷ್ಕಾಳಜಿ ಅಲ್ಲ,

ಆಲಸ್ಯವಲ್ಲ, ನಿದ್ರಾಸ್ಥಿತಿಯೂ ಅಲ್ಲ. ತಟಸ್ಥವಾಗಿ ಗಮನಿಸುವಿಕೆ ಎಂದರೆ ಅತ್ಯಂತ ಕ್ರಿಯಾಶೀಲ ಸ್ಥಿತಿ; ಅತ್ಯಂತ ಕ್ಲಿಷ್ಟದ ಕೆಲಸ. ಆ ಸ್ಥಿತಿಯಲ್ಲೇ ಪ್ರತಿ ಸಮಸ್ಯೆ ತನ್ನ ವಿಶಿಷ್ಟ ಅರ್ಥವಂತಿಕೆಯಿಂದ ಗೋಚರಿಸುತ್ತದೆ. ಆಗಲೇ ಅದು ತನ್ನನ್ನು ತಾನೇ ನಿಧಾನವಾಗಿ ಬಿಚ್ಚಿಕೊಳ್ಳುತ್ತದೆ. ಆದರೆ ಸಮಸ್ಯೆಗಳು ನಮ್ಮ ಭಾಷ್ಯ, ವಿವರಣೆಗಳಿಲ್ಲದೇ ತೆರೆದುಕೊಳ್ಳಲಿಕ್ಕೆ ನಾವು ಬಿಡುವುದೇ ಇಲ್ಲ. ಇದಕ್ಕೆ ಕಾರಣ ನಾವು ಶೀಘ್ರ ಫಲಾನ್ವೇಷಣಿಗಳು. ಆದಷ್ಟು ಬೇಗ ನಮಗೆ ಉತ್ತರಬೇಕು— ಪ್ರಶ್ನೆಗಳಿಗೆ, ಪರಿಹಾರ ಬೇಕು. ಸಮಸ್ಯೆಗಳಿಗೆ— ನಮ್ಮ ನೋವು-ನಲಿವುಗಳಿಗೆ ಅನುಗುಣವಾಗಿ ನಮ್ಮ ಸಮಸ್ಯೆಯನ್ನು ನಾವು ಭಾಷಾಂತರಿಸುತ್ತೇವೆ. ಸಮಸ್ಯೆಗಳನ್ನು ಹೇಗೆ ಪರಿಹರಿಸಬೇಕು, ಪಳಗಿಸ-ಬೇಕು ಎನ್ನುವುದರ ಬಗ್ಗೆ ನಮಗೆ ಮೊದಲೇ ನಿರ್ದಿಷ್ಟ ಉತ್ತರ ಇದೆ. ಆದ್ದರಿಂದಲೇ ಸಮಸ್ಯೆ— ಎಂದೆಂದೂ ಹೊಸದೇ ಆಗಿರುವ ಸಮಸ್ಯೆಯನ್ನು ಹಳೆಯ ಉತ್ತರಗಳಿಂದ ಬಿಡಿಸಲು ಯತ್ನಿಸುತ್ತೇವೆ. ಸವಾಲು ಯಾವತ್ತೂ ಹೊಸದೇ, ಆದರೆ ಎದುರಿಸುವ ಕ್ರಮ ನಮ್ಮದು ಓಬೀರಾಯನದು. ಸವಾ-ಲನ್ನು ಸಮರ್ಪಕವಾಗಿ, ಸಂಪೂರ್ಣವಾಗಿ ನಾವು ಎದುರಿಸುವುದೇ ಇಲ್ಲ. ಸಮಸ್ಯೆ ಯಾವಾಗಲೂ-ವಸ್ತುಗಳು, ಜನರು, ವಿಚಾರಗಳ ಸಂಬಂಧಗಳಲ್ಲಿಂಯ ಸಮಸ್ಯೆ. ಇವುಗಳೊಡನೆಯ ಸಂಬಂಧ ಸದಾ ಚಲನಶೀಲವಾಗಿರುವುದರಿಂದ ಸಮಸ್ಯೆಗಳೂ ಬದಲಾಗುತ್ತಲೇ ಹೋಗುತ್ತವಷ್ಟೇ. ಅವುಗಳನ್ನು ಸರಿಯಾಗಿ, ಸಮಗ್ರವಾಗಿ ಎದುರಿಸಲು ತಟಸ್ಥನಾಗಿ ಗಮನಿಸುವುದರ ಮೂಲಕ ಅರಿಯ-ಬೇಕಾಗುತ್ತದೆ.

ಈ ತಾಟಸ್ಥ್ಯ ದೃಢನಿರ್ಧಾರದ, ಪ್ರಬಲವಾದ ಇಚ್ಛಾಶಕ್ತಿಯ, ಕಠಿಣ ಶಿಸ್ತು— ಸಂಯಮದ ಪ್ರಶ್ನೆಯಲ್ಲ; ನಾವು ತಟಸ್ಥರಾಗಿಲ್ಲ ಎನ್ನುವುದನ್ನು ಗಮನಿಸುವುದೇ ಅರಿವಿನ ಆರಂಭ. ಒಂದು ವಿಶಿಷ್ಟ ಸಮಸ್ಯೆಗೆ ವಿಶಿಷ್ಟ ಉತ್ತರ ಬೇಕಾಗಿದೆ ಎನ್ನುವುದೇ ಅರಿವಿನ ಆರಂಭ. ಸಮಸ್ಯೆಯೊಂದಿಗಿನ ನಮ್ಮ ಸಂಬಂಧ ಏನು ? ಅದಕ್ಕೆ ನಮ್ಮ ಪ್ರತಿಕ್ರಿಯೆ ಏನು ? ಅದಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಪೂರ್ವಗ್ರಹಗಳೇನು ? ನಿರೀಕ್ಷೆ, ಅನ್ವೇಷಣೆಗಳು ಏನೇನು ? ಎನ್ನುವುದೆಲ್ಲ ವ್ಯಕ್ತವಾಗಿ ನಮ್ಮ ವಿಚಾರಕ್ರಮದ ಪ್ರಕ್ರಿಯೆ, ಅಂತರ್ಯದ ಸ್ವಭಾವ, ಎಲ್ಲವೂ ಅರಿವಿಗೆ ಬರುವುದರಿಂದ, ಬಿಡುಗಡೆ ದೊರೆಯುತ್ತದೆ.

ಮಹತ್ವದ ವಿಷಯವೆಂದರೆ ಕ್ಷಣ-ಕ್ಷಣಕ್ಕೂ ಅರಿವಿನ ಎಚ್ಚರದಲ್ಲೇ ಗಮನಿಸುತ್ತ ಹೋಗಬೇಕಾದದ್ದು. ಅರಿವಿನ ಎಚ್ಚರ ತರುವ ಅನುಭವವನ್ನು ಸಂಗ್ರಹಿಸಕೂಡದು. ಅಕಸ್ಮಾತ್ ಅನುಭವ ಸಂಗ್ರಹವಾಯಿತೆಂದರೆ, ಆ ಅನುಭವದ ಕ್ರಮಕ್ಕೆ ಅನುಗುಣವಾಗಿ ಮಾತ್ರ ಗಮನಿಸುವುದು ಆರಂಭವಾಗುತ್ತದೆ. ಅರಿವಿನೆಚ್ಚರದಲ್ಲಿ ಕೇವಲ ತಟಸ್ಥ ನಿರೀಕ್ಷಣೆ ಇಂದೆ, ಕೆಲವು ಸಲ ಒಂದು ಬಗೆಯ ಭಾಷಾಂತರ ಸುರುವಾಗುತ್ತದೆ. ಭಾಷಾಂತರ ಇರುವಲ್ಲಿ ಆಯ್ಕೆ ಇರುತ್ತದೆ; ಆಯ್ಕೆ ಇರುವಲ್ಲಿ ಸಂಘರ್ಷ; ಸಂಘರ್ಷ ಇರುವಲ್ಲಿ ಅರಿವಿನ ಅಭಾವ ಉಂಟಾಗುತ್ತದೆ.

ಬದುಕು ಎಂದರೆ ಸಂಬಂಧಗಳು. ಸದಾ ಚಲನಶೀಲವಾಗಿರುವ ಈ ಸಂಬಂಧಗಳನ್ನು ಅರಿಯಲು ಸಂವೇದನಾಶೀಲವಾದ, ಮೃದು, ಕ್ರಿಯಾಶೀಲ ತಾಟಸ್ಥ್ಯದಿಂದ ಇರುವ ಅರಿವಿನೆಚ್ಚರ ಇರಲೇಬೇಕಾಗುತ್ತದೆ. ನಮ್ಮೊಳಗಿನ ಸಂಘರ್ಷ, ಯಾತನೆ, ದುಃಖಗಳನ್ನು ನಾವೇ ಬಗೆಹರಿಸಿಕೊಳ್ಳಲು, ಅವುಗಳ ನಿಜಸ್ವರೂಪದ ದರ್ಶನ ಮಾಡಿಕೊಳ್ಳಬೇಕಿದ್ದರೆ ಈ 'ಅರಿವು' ಶ್ರೇಷ್ಠತಮ ಮಟ್ಟದ ಧೀಮಂತಿಕೆ ಮಾತ್ರ ಸಹಾಯ ನೀಡಬಲ್ಲದು.

ಪ್ರೊಫೆಸರ್, ಡಾಕ್ಟರ್, ಇಂಜನಿಯರ್, ಉದ್ಯಮಿ, ವ್ಯಾಪಾರಿ, ಪುರೋಹಿತ— ಇತ್ಯಾದಿ ಏನೇ ಆಗಲಿಕ್ಕೂ ವಿಶೇಷ ತಜ್ಞತೆ, ತರಬೇತಿ ಬೇಕಾಗುತ್ತದೆ; ಬುದ್ಧಿವಂತಿಕೆಯೂ ಬೇಕಾಗುತ್ತದೆ. ಆದರೆ ಸತ್ಯ, ದೇವರು, ಮುಂತಾದವುಗಳನ್ನು ಅರಿಯಲು ಬೇಕಾಗುವ ಈ ಶ್ರೇಷ್ಠತಮ ಧೀಮಂತಿಕೆ-ಯನ್ನು ಯಾವುದೇ ಬಗೆಯ ಶಿಸ್ತಿನಿಂದ, ರೂಢಿಯಿಂದ, ವಿಶೇಷ ತಜ್ಞತೆ ಗಳಿಸಿಕೊಳ್ಳುವುದರ ಮೂಲಕ ಕರಗತಮಾಡಿಕೊಳ್ಳಲಿಕ್ಕೆ ಆಗುವುದಿಲ್ಲ. ನಮ್ಮ ವಿಚಾರ-ಭಾವನೆಗಳನ್ನೆಲ್ಲ ಸದಾ ಎಚ್ಚರಿಕೆಯಿಂದ, ತಟಸ್ಥವಾಗಿ, ಕ್ಷಣ-ಕ್ಷಣಕ್ಕೂ ಗ್ರಹಿಸುತ್ತ ಹೋಗಬೇಕು; ಇದು ನಿದ್ರೆಯಿಂದ ಎಚ್ಚರಿರುವಾಗ ಮಾತ್ರ ಮಾಡುವಂತಹದಲ್ಲ. ಯಾಕೆಂದರೆ ಆಳಕ್ಕೆ ಹೋದಂತೆಲ್ಲ ನಾವು ಕನಸು ಕಾಣುವುದನ್ನು ಕಾಣಬಹುದು; ಕನಸೆಂದು ಭಾಷಾಂತರಿಸುವ ಎಲ್ಲ ಬಗೆಯ ಸಂಕೇತಗಳನ್ನು ಕಿತ್ತೊಗೆಯಬಹುದು. ಹೀಗೆ ಗುಪ್ತವಾಗಿ ಅವಿತಿರುವ ಎಲ್ಲವನ್ನೂ ಬಾಗಿಲು ತೆರೆದು ಅರಿಯುತ್ತೇವೆ. ಆದರೆ ಗೊತ್ತಿಲ್ಲದ್ದನ್ನು

ಅರಿಯಲು ಬಾಗಿಲಾಚೆ ಬಹುದೂರ ಹೋಗಬೇಕು. ಅದು ಖಂಡಿತ ಕಷ್ಟವಾದದ್ದು. ಇದು ಗತ ಅನುಭವದ ಸ್ಮೃತಿಯಾಗಿರುವ, ಭೂತವೇ ಆಗಿರುವ ಮನಸ್ಸಿನಿಂದ ಶಕ್ಯವಿಲ್ಲ. ಆದ್ದರಿಂದ ಸತ್ಯದ— ಗೊತ್ತಿಲ್ಲದ ಆ ಅದರ ಅರಿವು ಮನಸ್ಸಿನಿಂದ ಶಕ್ಯವಿಲ್ಲ. ಮನಸ್ಸಿನ ಸಕಲ ಪ್ರಕ್ರಿಯೆ ಅರಿತಾಗ ಮಾತ್ರ, ಗೊತ್ತಿಲ್ಲದ್ದು ವೇದ್ಯವಾಗಲು, ಅರಿವಿಗೆ ಬರಲು ಶಕ್ಯ.

* * * *

ಅರಿವು ಎಂದರೆ ಆತ್ಮನಿರೀಕ್ಷಣೆ (Introspection) ಎಂಬ ಭಾವನೆ ಉಂಟಾಗಬಹುದು. ಆದರೆ ಅವು ಬೇರೆ-ಬೇರೆ. ತನ್ನನ್ನೇ ತಾನು ಪರೀಕ್ಷಿಸಿಕೊಳ್ಳುವ ಆತ್ಮನಿರೀಕ್ಷಣೆ ಒಂದು ಸುಧಾರಣೆ ಅಥವಾ ಬದಲಾವಣೆ ತರುವ ಸಲುವಾಗಿ ಮಾಡುವ ಕ್ರಿಯೆ. ಆದ್ದರಿಂದ ಅದಕ್ಕೊಂದು ಉದ್ದೇಶವಿದೆ, ಈಡೇರಿಸಿಕೊಳ್ಳುವ ಆಸೆಯಿದೆ. ಸಿಟ್ಟುಬಂದಾಗ ಆತ್ಮನಿರೀಕ್ಷಣೆ ಆರಂಭಿಸುವುದು, ಆ ಸಿಟ್ಟಿನಿಂದ ಪಾರಾಗಬೇಕು, ಸಿಟ್ಟನ್ನು ಬದಲಾಯಿಸಬೇಕು ಎಂಬ ಉದ್ದೇಶಕ್ಕಾಗಿ. ಈ ಗುರಿ ಸಾಧ್ಯವಾಗದಿದ್ದಾಗ ಮಾನಸಿಕ ಖಿನ್ನತೆ ಅಥವಾ ಚಿಂತಾಕುಲತೆ ಉಂಟಾಗುವುದು ಸಹಜ. ನಂತರ ಇದರ ವಿರುದ್ಧ ಹೋರಾಡಬೇಕಾಗುತ್ತದೆ— ಮನಸ್ಸು. ಹೀಗೆಯೇ ಸಂಘರ್ಷ ಮುಂದುವರಿಯುತ್ತದೆ.

ಆತ್ಮನಿರೀಕ್ಷಣೆ ಒಟ್ಟಿನಲ್ಲಿ 'ಇದ್ದುದನ್ನು' ಬದಲಾಯಿಸುವ, ಬೇರೆ, 'ಇಲ್ಲದ್ದನ್ನು' ಮಾಡುವ, ತರುವ ಪ್ರಕ್ರಿಯೆ. ಇದು ಸಹಜವಾಗಿಯೇ ಈಡೇರಲಾಗದ ಆಸೆಯಾದ್ದರಿಂದ, ಮನಸ್ಸು ಆಶಾಭಂಗಕ್ಕೆ ಗುರಿಯಾಗುವುದು ಸ್ವಾಭಾವಿಕ, ಅದರ ಪರಿಣಾಮ ಚಿಂತಾಕುಲತೆ. ಕೊನೆಗೂ ಈ ಆತ್ಮನಿರೀಕ್ಷಣೆ 'ಬಿಡುಗಡೆ' ಗೊಳಿಸುವಂತಹದಲ್ಲ.

ಆತ್ಮನಿರೀಕ್ಷಣೆಯು ತನ್ನ ಪ್ರಗತಿಯಲ್ಲಿ ತೊಡಗಿಕೊಂಡಿರುವುದರಿಂದ ತನ್ನಲ್ಲೇ ಗಮನ ಕೇಂದ್ರೀಕರಿಸಿಕೊಂಡಿರುವ ಪ್ರಕ್ರಿಯೆ. ತದ್ವಿರುದ್ಧವಾಗಿ 'ಅರಿವು' ತಟಸ್ಥ ಸ್ಥಿತಿಯಲ್ಲಿ— ಖಂಡನೆ, ಪ್ರಚೋದನೆ, ದೃಢಪಡಿಸುವಿಕೆ, ಪ್ರತಿಪಾದನೆ, ವಿಮರ್ಶೆ-ಇತ್ಯಾದಿ ಏನೂ ಇಲ್ಲದೇ ಸ್ತಬ್ಧವಾಗಿ ನೋಡುವ ಪ್ರಕ್ರಿಯೆ; ತನ್ನನ್ನು ತಾನು ಕೊನೆಗೊಳಿಸುವ ಪ್ರಕ್ರಿಯೆ.

* * * *

ಅರಿವಿಗೆ, ಸತ್ಯದರ್ಶನಕ್ಕೆ 'ಜ್ಞಾನ' ಅಡ್ಡಿಯಾಗುತ್ತದೆ. ಒಂದು ಹಂತದ ವರೆಗೆ 'ಜ್ಞಾನ' ಅತ್ಯಂತ ಆವಶ್ಯಕ. ನಾವು ಭೌತಿಕ ಪ್ರಪಂಚದಲ್ಲಿ ಸಾಧಿಸಿರುವ ವೈಜ್ಞಾನಿಕ ಪ್ರಗತಿಗೆ, ವಿವಿಧ ಕ್ಷೇತ್ರಗಳಲ್ಲಿಯ 'ಜ್ಞಾನ'—ಸಾಧನೆ ಅತ್ಯಂತ ಅಮೂಲ್ಯವಾದದ್ದೇ. ಆದರೆ ಈ 'ಜ್ಞಾನ' ಬದುಕಿನ ಒಂದು 'ಅಂಶ' ಮಾತ್ರ, ಅದೇ 'ಸಮಸ್ತ' ಬದುಕಲ್ಲ. ಆದರೆ 'ಅಂಶ'ವೇ ಸಮಸ್ತವೆಂದು ಎಲ್ಲಕ್ಕಿಂತಲೂ ಮಹತ್ವದ ಸ್ಥಾನ ಕೇಳಲಾರಂಭಿಸಿದಾಗ ಬದುಕು ಟೊಳ್ಳಾಗಲಾರಂಭಿಸುತ್ತದೆ; ನಿರುತ್ಸಾಹ ತುಂಬುವ ಯಾಂತ್ರಿಕ ದಿನಚರಿಯಾಗುತ್ತದೆ. ಅವುಗಳಿಂದ ಪಾರಾಗಲು ಮನುಷ್ಯ ಎಲ್ಲ ಬಗೆಯ ಮನರಂಜನೆ ಅಥವಾ ಅಂಧಾನುಕರಣೆಗಳ ದಾರಿಯಲ್ಲಿ ಹೋಗಲೆತ್ನಿಸಿದರೂ ಪ್ರತಿಫಲ ಮಾತ್ರ ಅಂತಿಮವಾಗಿ ವಿಧ್ವಂಸಕ ಸ್ವರೂಪದ್ದಾಗಿರುತ್ತದೆ. ಆದ್ದರಿಂದ 'ಜ್ಞಾನ' ಎನ್ನುವಂಥಾದ್ದು ಎಷ್ಟೇ ವಿಶಾಲವೂ, ಜಾಣ್ಮೆಯಿಂದ ಕೂಡಿದ್ದೂ ಆಗಿದ್ದರೂ ಸಹ ಮಾನವೀಯ ಸಮಸ್ಯೆಗಳನ್ನು ಬಗೆಹರಿಸುವಲ್ಲಿ ವಿಫಲವಾಗುತ್ತದೆ. ಏಕೆಂದರೆ 'ಸತ್ಯ'ವನ್ನು ಅರಿಯುವಲ್ಲಿ ಈ 'ಜ್ಞಾನ' ಸಹಾಯ ಮಾಡುವುದಿಲ್ಲ. ಕಾರಣವಿಷ್ಟೇ : ಸತ್ಯ ಯಾವತ್ತೂ 'ಜೀವಂತ,' 'ನವನವೀನ' ವಾಗಿರುವಂತಹದು. ಈ 'ಜೀವಂತ' 'ನವನವೀನ' ಶಬ್ದಗಳು ನಿಂತಿರದಂತಹ, ಸತ್ತು ಹೋಗಿರದಂತಹ, ಮನಸ್ಸಿನಲ್ಲಿ ನೆಟ್ಟಿರುವಂತಹ ಯಾವುದೋ ನಿರ್ದಿಷ್ಟ ಸಂಗತಿ-ವಿಷಯಗಳ ಸ್ಥಿತಿಯನ್ನು ಸೂಚಿಸುವಂತಹವು, ಅಷ್ಟೇ. ಕ್ಷಣದಿಂದ ಕ್ಷಣಕ್ಕೆ ಹೊಸದಾಗಿ ಸತ್ಯವನ್ನು ಅರಿಯಬೇಕಾಗಿರುತ್ತದೆ. ಅದು ಒಂದನ್ನೇ ಪುನಃ ಪುನಃ ಅನುಭವಿಸುವಂತಹದಲ್ಲ; ನಿರಂತರತೆಯೂ ಅಲ್ಲ; ಸಾಧಿಸಬೇಕಾದ ಗುರಿಯೂ ಅಲ್ಲ; ಮನಸ್ಸು ಬೆಳೆದು ತಲುಪಬೇಕಾದ್ದ ಕೊನೆಯೂ ಅಲ್ಲ. ಅದು ಕಾಲದ ಪರಿಧಿಯ ಆಚೆಗಿನದು. ಈ ಕ್ಷಣದಲ್ಲಿ 'ಇದ್ದುದನ್ನು' ಇದ್ದ ಹಾಗೇ ಆಮೂಲಾಗ್ರ ಗಮನಿಸಿ ಅರಿಯುವಂಥದ್ದು.

* * *

೪. ಪ್ರೇಮ

ಪ್ರೇಮವೆಂದರೇನು ? ಅದು ಹೇಗಿರಬೇಕು ? ಎನ್ನುವುದರ ಬಗ್ಗೆ ಎಷ್ಟೆಲ್ಲಾ ಹೇಳಿಕೆಗಳು, ವ್ಯಾಖ್ಯೆಗಳು ಇವೆ ಎಂದರೆ, ಅಂತಿಮವಾಗಿ 'ಪ್ರೇಮ' ಎಂದರೆ ಅತ್ಯಂತ ಗೊಂದಲಮಯ ಭಾವನೆ ಎನ್ನುವ ಅನಿಸಿಕೆ ಸಾಮಾನ್ಯವಾಗಿ ಮೂಡಿಬಿಡುತ್ತದೆ.

ಆದರೆ ಜೆ. ಕೆ. ಅವರ ಪ್ರಕಾರ ಪ್ರೇಮದ ಸ್ವರೂಪವನ್ನು ಅರಿಯುವ ಪೂರ್ವದಲ್ಲಿ, ನಮಗೆ ಗೊತ್ತಿರುವ ಎಲ್ಲ ಹೇಳಿಕೆಗಳ, ವ್ಯಾಖ್ಯೆಗಳ ಯಥಾರ್ಥತೆ-ಯನ್ನು ಅರಿಯಬೇಕು. ಎಲ್ಲ ಅಭಿಪ್ರಾಯಗಳೂ ಸಾಮಾನ್ಯವಾಗಿ ಒಂದೇ ಸ್ವರೂಪದವು. ಹೇಳಿದವರು ಅಥವಾ ಹೇಳುವವರು ಯಾರೇ ಇದ್ದರೂ ಆ ಹೇಳಿಕೆಗಳೆಲ್ಲ ಪೂರ್ವಗ್ರಹಪೀಡಿತವೂ, ಅನುಭವಜನ್ಯವೂ ಸ್ವಭಾವದಿಂದ ನಿರ್ಬಂಧಿತವೂ, ಬೆಳೆದುಬಂದ ಹಿನ್ನೆಲೆಯಿಂದ ಪ್ರಭಾವಿತವೂ ಆಗಿರುತ್ತವೆ. ಆ ಹೇಳಿಕೆಗಳ ಸತ್ಯಾಸತ್ಯತೆಯನ್ನು ಅರಿಯುವ ಮೊದಲು, ಅವು ಹೇಗೆ ರೂಪುಗೊಂಡಿವೆ ಎನ್ನುವುದನ್ನು ಪರೀಕ್ಷಿಸಿದಾಗ, ಅರಿತಾಗ, ಆ ಅಭಿಪ್ರಾಯ, ಹೇಳಿಕೆಗಳ ನಿಜವಾದ ಅರ್ಥಪತ್ತತೆ ಕಾಣಲು ಶಕ್ಯ.

ಯಾಕೆಂದರೆ ವಿಚಾರವು ಪ್ರಭಾವದ ಫಲ. ಪ್ರತಿಯೊಬ್ಬನು ಬೆಳೆದು ಬಂದಂತಹ ಹಿನ್ನೆಲೆಯು ಆತನ ವಿಚಾರಕ್ರಮವನ್ನು ಹಾಗು ಅಭಿಪ್ರಾಯವನ್ನು ನಿರ್ದೇಶಿಸುತ್ತದೆ. 'ಇದು ಸರಿ' 'ಇದು ತಪ್ಪು' ಎನ್ನುವಂತಹದು ಒಬ್ಬನ ನಿರ್ದಿಷ್ಟವಾದ ಹಿನ್ನೆಲೆಯ ನೈತಿಕ ಪ್ರಜ್ಞೆಗೆ ಅನುಗುಣವಾಗಿರುತ್ತದೆ ಮತ್ತು ಈ 'ಸರಿ-ತಪ್ಪು' ಎನ್ನುವಂತಹದೆಲ್ಲ ಅಭಿಪ್ರಾಯವಲಯಕ್ಕೆ ಸೇರಿದ್ದು. ಆದರೆ 'ಸತ್ಯ' ಒಂದು ಅಭಿಪ್ರಾಯವಲ್ಲ; ವಸ್ತುಸ್ಥಿತಿ. ಒಪ್ಪಂದದ ಮೇಲೆ, ನಂಬಿಕೆಯ ಮೇಲೆ ಸತ್ಯ ನಿಂತಿರುವುದಿಲ್ಲ. ವೇಳೆ ತೋರಿಸುವ ಯಂತ್ರವನ್ನು ನಾವು 'ಗಡಿಯಾರ' ವೆಂದು ಕರೆಯುತ್ತೇವೆ. ಆದರೆ ಬೇರೆ ಹೆಸರಿನಿಂದ

ಇದನ್ನು ನಾವು ಕರೆದರೂ ಗಡಿಯಾರ ಗಡಿಯಾರವೇ ಆಗಿರುತ್ತದೆ. ಪ್ರತಿಯೊಬ್ಬನ ನಂಬಿಕೆ ಹಾಗು ಅಭಿಪ್ರಾಯಗಳು ಆತನು ಬದುಕಿರುವ ಸಮಾಜ ನೀಡಿರುವಂತಹದ್ದು. ಅದರ ವಿರುದ್ಧ ಪ್ರತಿಕ್ರಿಯೆ ವ್ಯಕ್ತಪಡಿಸಿ ಬಂಡಾಯವೆದ್ದವರು ಬೇರೆ ಅಭಿಪ್ರಾಯವನ್ನು, ಬೇರೆ ನಂಬಿಕೆಯನ್ನು ರೂಪಿಸಿಕೊಳ್ಳಬಹುದು. ಆದರೆ ಅಂಥವರ ಮಟ್ಟವೂ ಅದೇ ತರಗತಿಯದೇ. ಆದರೆ ಇಲ್ಲೂ ಕೂಡ ಮನಸ್ಸು ಅದೇ ಜ್ಞಾನ, ಸಂಪ್ರದಾಯಗಳ ವರ್ತುಲದಲ್ಲಿಯೇ ಬಂಧಿತವಾಗಿರುತ್ತದೆ. ಈ ಬಗೆಯ ಬಂಡಾಯವನ್ನು ಉತ್ತಮ ಆಹಾರ, ಬಟ್ಟೆ, ಸೌಕರ್ಯಗಳಿಗಾಗಿ ಸೆರೆಮನೆಯ ನಾಲ್ಕು ಗೋಡೆಗಳ ಮಧ್ಯೆ ನಡೆಸಿದ ಬಂಡಾಯಕ್ಕೆ ಹೋಲಿಸಬಹುದು, ಅಷ್ಟೇ.

ಹೀಗೆ ಅಭಿಪ್ರಾಯ, ಸಂಪ್ರದಾಯ, ಜ್ಞಾನ, ಪ್ರೇಮದ ಬಗೆಗಿನ ವಿಚಾರಗಳಿಂದ ನಿರ್ಬಂಧಿತವಾದ ‘ ಮನಸ್ಸು ’ ಹೇಳಿದ ಹಾಗೆ ಪ್ರತಿಯೊಬ್ಬನೂ ನಡೆದುಕೊಳ್ಳುತ್ತಿರುತ್ತಾನೆ. ಆದ್ದರಿಂದಲೇ ‘ ಪ್ರೇಮ ’ ವನ್ನು ವಿವರಿಸಲು ಹೊರಡುವುದು ಎಂದರೆ ಪುನಃ ಶಬ್ದದಲ್ಲಿ, ಅಭಿಪ್ರಾಯಗಳಲ್ಲಿ ಸಿಕ್ಕಿಕೊಳ್ಳುವುದು ಎಂದರ್ಥ. ವಿಚಾರ ಮಾಡುತ್ತ ಹೋದಂತೆ ಈ ವಿವಾದಾತ್ಮಕ ಅಭಿಪ್ರಾಯಗಳ ಗೊಂದಲದಲ್ಲಿ, ಒಂದೋ ಎರಡೋ ಅಭಿಪ್ರಾಯಗಳು ಹೆಚ್ಚುಚ್ಚು ಸ್ಪಷ್ಟವಾಗಿ ಖಚಿತ ಶಬ್ದಶರೀರ ಪಡೆದು ನಿಲ್ಲುತ್ತವೆ. ಇದನ್ನೇ ‘ ವಿಚಾರ ಸ್ಪಷ್ಟತೆ ’ ಎನ್ನುತ್ತೇವೆ. ನಿಜವಾಗಿ ನೋಡಿದರೆ ಈ ಪ್ರಕ್ರಿಯೆ ನಮ್ಮನ್ನು ಆ ಅಭಿಪ್ರಾಯಗಳಿಗೆ ಹೆಚ್ಚು ಆಳವಾಗಿ ಅಂಟಿಕೊಳ್ಳುವಂತೆ ಮಾಡುತ್ತದೆ ಅಷ್ಟೇ. ಆದರೆ ಈಗ ಉದ್ಭವಿಸುವ ಪ್ರಶ್ನೆ : ಹೆಚ್ಚು ಸ್ಪಷ್ಟವಾಗಿರುವುದು ‘ ಪ್ರೇಮವೋ ’ ಅಥವಾ ಪ್ರೇಮದ ಬಗೆಗಿನ ನಮ್ಮ ವಿಚಾರವೋ ? ವೇಳೆ ತೋರಿಸುವ ಆ ಯಂತ್ರವನ್ನು ನಾವು ‘ ಗಡಿಯಾರ ’ ಎಂದು ಕರೆಯುತ್ತೇವೆ. ಆದರೆ ‘ ಗಡಿಯಾರ ’ ಎಂಬ ಶಬ್ದದಿಂದ ಕಾಲ ತೋರಿಸುವ ಆ ಯಂತ್ರ ಭಿನ್ನವಾಗಿಯೇ ಇರುತ್ತದೆ ಅಲ್ಲವೆ ? ‘ ಗಡಿಯಾರ ’ ಎಂಬ ಶಬ್ದವೇ ಆ ‘ ಯಂತ್ರ ’ ಅಲ್ಲ, ಅಲ್ಲವೆ ? ಅದರಂತೆ ನಾವು ‘ ಪ್ರೇಮ ’ ಪ್ರೀತಿ ಎಂದು ಕರೆಯಲು ಒಪ್ಪಿಕೊಂಡಿರುವ ಅನಿಸಿಕೆ ಅಥವಾ ಭಾವನಾತ್ಮಕ ಸ್ಥಿತಿ ಇದೆ. ಆದರೆ ಆ ಶಬ್ದವೇ ‘ ಪ್ರೇಮ ’ ಅಲ್ಲ, ಅಲ್ಲವೆ ?

ಅಲ್ಲದೇ, ಪ್ರೇಮ, ಪ್ರೀತಿಗಳೆಂದರೆ ಎಷ್ಟೋ ಅರ್ಥಗಳುಂಟು. ಒಮ್ಮೆ ಲೈಂಗಿಕ ಭಾವನೆ-ಕಾಮನೆಗಳನ್ನು ವಿವರಿಸಲು ಈ ಶಬ್ದ ಉಪಯೋಗಿಸಿದರೆ, ಇನ್ನೊಮ್ಮೆ ದೈವಿಕ ಅಥವಾ ವ್ಯಕ್ತಿ ನಿರಪೇಕ್ಷ ಪ್ರೇಮ ವಿವರಿಸಲು, ಮತ್ತೊಮ್ಮೆ ಪ್ರೇಮ ಎಂದರೆ ಹೇಗಿರಬೇಕು, ಹೇಗಿರಬಾರದು ಎನ್ನುವುದನ್ನು ಪ್ರತಿಪಾದಿಸಲು, ಇತ್ಯಾದಿ. ಕೆಲವೊಮ್ಮೆ ಪ್ರೇಮ ಎನ್ನುವುದು ಮೂಲತಃ ಒಂದೇ ಆಗಿದ್ದು ಬೇರೆ-ಬೇರೆ ರೂಪಗಳಲ್ಲಿ ವ್ಯಕ್ತವಾಗುತ್ತದೆ ಎನಿಸಿದರೆ, ಮತ್ತೆ ಕೆಲವು ಸಲ ಅದಕ್ಕೆ ತದ್ವಿರುದ್ಧವಾಗಿ ಅನಿಸುತ್ತದೆ; ಮನಸ್ಸಿನಲ್ಲಿ ಎಲ್ಲವೂ ಗೊಂದಲವಾಗಿಬಿಡುತ್ತದೆ. ಇದಕ್ಕೆ ಕಾರಣ ನಮಗೆ ಪ್ರೇಮ ಎಂದರೆ 'ಇದೇನೇ' ಎಂದು ಪ್ರೇಮವೆನ್ನುವುದು ಜಾರಿಹೋಗದ ಹಾಗೆ, ನುಣಚಿಕೊಳ್ಳದ ಹಾಗೆ, ಮೊಳೆಹೊಡೆದು ಗಟ್ಟಿನಿಲ್ಲಿಸಿದ ಹಾಗೆ ನಿಶ್ಚಿತತೆ ಬೇಕು; ಪ್ರೇಮದ ಬಗ್ಗೆ ನಮಗೆ ತೀರ್ಮಾನ ಬೇಕು; ಒಪ್ಪಂದ ಬೇಕು. ನನ್ನ ಭೂಮಿ, ನನ್ನ ಮನೆ, ನನ್ನ ಸದ್ಗುಣ ಎಂದ ಹಾಗೇನೇ 'ನನ್ನ ಪ್ರೇಮ' ಎಂದೂ ಮಾತನಾಡುತ್ತೇವೆ. ಉಳಿದ ವಸ್ತು-ವಿಷಯಗಳಿಗೆ ಸುರಕ್ಷಿತವಾಗಿ ಬೀಗ ಹಾಕಿ ಭದ್ರಪಡಿಸಿಟ್ಟುಕೊಂಡ ಹಾಗೆ ಪ್ರೇಮಕ್ಕೂ ಮಾಡುತ್ತೇವೆ. ಆದರೆ ಯಾವಾಗಲೋ ಅದು ನಾವು ಸ್ವಲ್ಪವೂ ನಿರೀಕ್ಷಿಸದೇ ಇದ್ದಾಗ ಹೇಗೋ ಏನೋ ಕೈತಪ್ಪಿ ಹೋಗುತ್ತದೆ.

ಹಾಗಿದ್ದರೇನು ಪ್ರಯೋಜನ ಈ ಪ್ರೇಮದ ಅನ್ವೇಷಣೆಯಿಂದ ? ಎಂಬ ತೀರ್ಮಾನಕ್ಕೆ ಬರಬೇಡಿ. ತೀರ್ಮಾನಕ್ಕೆ, ಫಲಿತಾಂಶಕ್ಕೆ ಮನಸ್ಸು ಕಟ್ಟುಬಿದ್ದಾಗ 'ಪ್ರೇಮ'ವನ್ನು ಸರಿಯಾಗಿ ಮನಸ್ಸು ಅರಿಯಲಾರದು. ಪ್ರೇಮವನ್ನು ಅರಿಯಬೇಕಿದ್ದರೆ ನಾವು ಸಂಪೂರ್ಣ ಗಮನಕೊಡಬೇಕು. ಮನಸ್ಸಿನ ಒಂದು ಭಾಗ ಸದಾ ಫಲಗಳ ಬಗ್ಗೆ ಆಸಕ್ತವಾಗಿದ್ದು, ಮತ್ತೊಂದು ಭಾಗ 'ಪ್ರೇಮ' ಅರಿಯುವುದರಲ್ಲಿ ಆಸಕ್ತವಾಗಿದ್ದರೆ ಅಲ್ಲಿ 'ಗಮನ' ಇರುವುದಿಲ್ಲ. ಇದರಿಂದ ಮನಸ್ಸು ಗೊಂದಲಕ್ಕೆ ಈಡಾಗುತ್ತದೆ; ಯಾತನೆಗೆ ಈಡಾಗುತ್ತದೆ. ನೆನಪು ಹಾಗು ಪ್ರತಿಕ್ರಿಯೆಗಳೇ ಆಗಿರುವ ಶಬ್ದದಿಂದ ನಮ್ಮ ಅನಿಸಿಕೆಯನ್ನು ಬೇರ್ಪಡಿಸಿಕೊಳ್ಳದಿದ್ದರೆ ಆ ಶಬ್ದ 'ಅನಿಸಿಕೆ'ಯನ್ನು ನಾಶಗೊಳಿಸುತ್ತದೆ. ಆಗ ಆ ಶಬ್ದ ಅಥವಾ ನೆನಪು ಬೆಂಕಿಯಿಲ್ಲದ ಕೇವಲ ಬೂದಿ. ಸಾಮಾನ್ಯವಾಗಿ ನಾವು ಶಬ್ದಗಳೊಂದಿಗೆ, ಊಹೆ, ಕಲ್ಪನೆಗಳೊಂದಿಗೆ ಎಷ್ಟು

ತಳಕುಹಾಕಿಕೊಂಡಿರುತ್ತೇವೆ ಎಂದರೆ— ಆಳವಾದ ಸಜೀವ ಅರ್ಥವಂತಿಕೆಯಿಂದ ತುಳುಕುವ ಆ 'ಪ್ರೇಮ' ಎಂಬ ಏಕಮೇವ ಭಾವನೆ ಇಲ್ಲವಾಗಿಬಿಡುತ್ತದೆ.

* * * *

'ವಿಚಾರ' ಮತ್ತು 'ಪ್ರೇಮ':

ವಿಚಾರವಿದ್ದಲ್ಲಿ ಪ್ರೇಮ ಇರುವುದಿಲ್ಲ. ಯಾಕೆಂದರೆ ವಿಚಾರ ನೆನಪಿನ ಮೇಲೆ ನಿಂತಿದೆ; 'ಪ್ರೇಮ' ನೆನಪಲ್ಲ.

ನೀವು ಪ್ರೇಮಿಸುವ ಅಥವಾ ಪ್ರೀತಿಸುವ ಒಬ್ಬನ ಬಗ್ಗೆ ನೀವು ಯೋಚಿಸಿದರೆ, ಆ ಯೋಚನೆ ಪ್ರೇಮ–ಪ್ರೀತಿ ಅಲ್ಲ. ನಿಮ್ಮ ಸ್ನೇಹಿತನ ನಡೆ, ನುಡಿ, ವ್ಯಕ್ತಿತ್ವ–ವಿಶೇಷಗಳು ಹಾಗು ಅವನೊಂದಿಗೆ ನೀವು ಕಳೆದಾಗಿನ ಸಿಹಿ-ಕಹಿ ಘಟನೆ— ಇವುಗಳನ್ನೆಲ್ಲ ನೀವು ನೆನಪಿಸಿಕೊಳ್ಳಬಹುದು. ವಿಚಾರ ಅಂದರೆ ನೆನಪು ಸೃಷ್ಟಿಸುವ ಈ ಚಿತ್ರಗಳು ಪ್ರೀತಿಯಲ್ಲ, ಪ್ರೇಮವಲ್ಲ

ನಿಮ್ಮ ಸ್ನೇಹಿತನ ಬಗ್ಗೆ ನೀವು ಯೋಚಿಸುತ್ತಿಲ್ಲ ಎಂದಾಕ್ಷಣ ನಿಮಗೆ ಭಯವುಂಟಾಗುತ್ತದೆ. ಅವನನ್ನು ನೀವು ಪ್ರೀತಿಸುತ್ತಿಲ್ಲ. ನೀವು ಅಪ್ರಾಮಾಣಿಕರು, ಕೃತಘ್ನರು, ಪ್ರೀತಿಹೀನರು ಎಂದೆಲ್ಲ ಭಾವಿಸಿಕೊಳ್ಳತೊಡಗುತ್ತೀರಿ. ಆದ್ದರಿಂದ ಅವನ ಫೋಟೋ, ಮೂರ್ತಿ ಮುಂತಾದವುಗಳನ್ನೆಲ್ಲ ಸಂಗ್ರಹಿಸಿಡುತ್ತೀರಿ. ಹೀಗೆ ಮನಸ್ಸಿನ ಸಂಗತಿಗಳಿಂದ ಹೃದಯವನ್ನು ತುಂಬಿ, ಪ್ರೀತಿಗೆ, ಪ್ರೇಮಕ್ಕೆ ಜಾಗವೇ ಸಿಗದ ಹಾಗೆ ಮಾಡುತ್ತೇವೆ, ನಾವೆಲ್ಲ. ಮಿತ್ರನ ಜೊತೆಗೇ ಇರುವಾಗ ನೀವು ಅವನ ಬಗ್ಗೆ ಯೋಚಿಸುವುದಿಲ್ಲ. ಆತನ ಅನುಪಸ್ಥಿತಿಯಲ್ಲಿ ಆತನ ಬಗ್ಗೆ ಯೋಚನೆ ಸುರುವಾಗುತ್ತವೆ. ಗತಕಾಲಕ್ಕೆ ಸೇರಿರುವ ದೃಶ್ಯ, ಸನ್ನಿವೇಶ, ಮುಂತಾದವುಗಳನ್ನು ಪುನರ್ರಚಿಸಲಾರಂಭಿಸುತ್ತೀರಿ. ಈ 'ಭೂತ'ದ ಪುನರುಜ್ಜೀವನವನ್ನೇ 'ಪ್ರೀತಿ–ಪ್ರೇಮ' ಎನ್ನುತ್ತೇವೆ. ಆದ್ದರಿಂದ ಹೆಚ್ಚಿನ ಮಂದಿಗೆ ಪ್ರೀತಿ ಎಂದರೆ ಸಾವು, ಬದುಕಿನ ನಿರಾಕರಣೆ ಆಗಿಬಿಟ್ಟಿದೆ. ಭೂತದೊಂದಿಗೆ ಜೀವಿಸುತ್ತೇವೆ, ಸತ್ತುಹೋದುದರೊಡನೆ ಜೀವಿಸುತ್ತೇವೆ, ಅದನ್ನೇ ಪ್ರೀತಿ-ಪ್ರೇಮ ಎನ್ನುತ್ತೇವೆ !

ಸ್ವಭಾವತಃ ವಿಚಾರವು ಭಿನ್ನತೆಯನ್ನುಂಟುಮಾಡುವಂತಹದು. ' ಇದ್ದುದರ ' ಹಾಗು ' ಇರಬೇಕಾದುದರ ' ಮಧ್ಯೆ ವಿಭಜನೆಯನ್ನು ಸೃಷ್ಟಿಸುತ್ತದೆ ವಿಚಾರ. ಕಾಲ ಹಾಗು ದೇಶ, ಬೇರ್ಪಡಿಸುವಿಕೆ ಹಾಗು ದುಃಖ ಮುಂತಾದವುಗಳೆಲ್ಲ ವಿಚಾರದ ಪ್ರಕ್ರಿಯೆಯಿಂದ ಹುಟ್ಟಿದಂಥವುಗಳು. ಈ ವಿಭಜನೆಯ ಮೇಲೆಯೇ ನಿಂತಿದೆ ನೈತಿಕತೆ. ನೀತಿ ಅಥವಾ ಅನೀತಿ ಎರಡಕ್ಕೂ ಪ್ರೀತಿ ಗೊತ್ತಿಲ್ಲ. ಸಾಮಾಜಿಕ ಸಂಬಂಧಗಳನ್ನು ಹಿಡಿದಿಟ್ಟಿರುವ ಈ ನೈತಿಕ ಚೌಕಟ್ಟು ಮನಸ್ಸಿನ ಸೃಷ್ಟಿ. ಇದು ಪ್ರೀತಿಯಲ್ಲ, ಅಂತರಂಗವನ್ನು ಕಠಿಣಗೊಳಿಸುತ್ತ ಹೋಗುವ ಪ್ರಕ್ರಿಯೆ.

ವಿಚಾರವು ಅನಿವಾರ್ಯವಾಗಿ ಸ್ವಾಧೀನ ಪಡಿಸಿಕೊಳ್ಳಬೇಕೆಂಬ ಅನಿಸಿಕೆಗೆ ಕಾರಣವಾಗುತ್ತದೆ. ಅದೇ, ಅರಿವಿದ್ದೋ ಇಲ್ಲದೇನೋ ಅಸೂಯೆಗೆ ಕಾರಣವಾಗುತ್ತದೆ. ಅಸೂಯೆಯಿದ್ದಲ್ಲಿ ಪ್ರೇಮವಿರುವುದಿಲ್ಲ. ಆದರೂ ಎಷ್ಟೋ ಜನ ಅಸೂಯೆ ಪ್ರೇಮದ ಸಂಕೇತವೆಂದು ಭಾವಿಸುತ್ತಾರೆ. ವಿಚಾರದ ಭಾವನಾತ್ಮಕ ಅಂಶದ ಸ್ಪಂದನೆಯೇ ಅಸೂಯೆ. ಸ್ವಾಧೀನನಾಗುವ ಅಥವಾ ಸ್ವಾಧೀನಪಡಿಸಿಕೊಳ್ಳುವ ಅನಿಸಿಕೆಗೆ ಅಡ್ಡಿಯಾದಾಗಲೆಲ್ಲ, ನಮ್ಮೊಳಗೇ ಖಾಲಿತನ ಉಂಟಾಗಿ ಪ್ರೇಮದ ಜಾಗವನ್ನು ಅಸೂಯೆ ಆಕ್ರಮಿಸುತ್ತದೆ. ಪ್ರೇಮದ ಪಾತ್ರವನ್ನು ವಿಚಾರ ವಹಿಸುವುದರಿಂದಲೇ ಎಲ್ಲ ಗೊಂದಲ-ದುಃಮ್ಮಾನಗಳು.

ವಿಚಾರ ಪ್ರೇಮಕ್ಕೆ ಒಯ್ಯುವುದಿಲ್ಲ. ಪ್ರೇಮವನ್ನು ಬೆಳೆಸುವುದೂ ಇಲ್ಲ. ಹೂದೋಟ ಬೆಳೆಸಿದ ಹಾಗೆ ಪ್ರೇಮ-ಪ್ರೀತಿಗಳನ್ನು ಬೆಳೆಸಲಿಕ್ಕೆ ಬರುವುದಿಲ್ಲ. ಬೆಳೆಸಬೇಕೆಂಬ ಅಭಿಲಾಷೆಯೇ ವಿಚಾರದ ಚಟುವಟಿಕೆ.

ಮನಸ್ಸು ಎಚ್ಚರದಿಂದ ಇದ್ದಾಗ, ಬದುಕಿನಲ್ಲಿ ವಿಚಾರ ಎಷ್ಟೆಲ್ಲ ದೊಡ್ಡ ಪಾತ್ರವಹಿಸುತ್ತಿದೆ ಎನ್ನುವುದು ಅರಿವಿಗೆ ಬರುತ್ತದೆ. ವಿಚಾರಕ್ಕೆ ಅದರದೇ ಆದ ಸ್ಥಾನ ಉಂಟು. ಆದರೆ ಅದಕ್ಕೂ ಪ್ರೇಮಕ್ಕೂ ಸಂಬಂಧವಿಲ್ಲ. ಆದ್ದರಿಂದ ವಿಚಾರಕ್ಕೆ ಸಂಬಂಧಪಡದಂತಹ ಸಂಗತಿಯಾದ ಪ್ರೇಮವನ್ನು ವಿಚಾರದಿಂದ ಅರಿಯುಲು ಶಕ್ಯವೆ ? ವಿಚಾರವನ್ನು ಸಮಗ್ರವಾಗಿ ಗಮನಿಸಿ ಅರಿಯು-

ವುದರ ಮೂಲಕ ವಿಚಾರದಿಂದ ಬಿಡುಗಡೆ ಸಿಗುತ್ತದೆ. ವಿಚಾರದ ಆಚೆಗಿನ, ವಿಚಾರಾತೀತ, ಮುಕ್ತಸ್ಥಿತಿಯಲ್ಲಿರುವುದೇ ಪ್ರೇಮ.

'ಪ್ರೇಮ ಎಂದರೆ ಯಾವುದಲ್ಲ' ಎಂದು ತಿಳಿದುಕೊಳ್ಳುವುದರ ಮೂಲಕವೇ ಪ್ರೇಮವನ್ನು ಅರಿಯಬೇಕಾಗಿದೆ. ಅಂದರೆ ಪ್ರೇಮದ ಅಜ್ಞಾತ-ರೂಪವನ್ನು ಅರಿಯಲು ಜ್ಞಾತವಾದದ್ದನ್ನು, ಗೊತ್ತಿರುವುದನ್ನು ತಿರಸ್ಕರಿಸಿಯೇ ಅರಿಯಬೇಕಾಗಿದೆ. ಇನ್ನೂವರೆಗೂ ಗೊತ್ತಿಲ್ಲದೆ ಇದ್ದುದನ್ನು, ಗೊತ್ತಿರುವ ಸಂಗತಿಗಳಿಂದ ತುಂಬಿರುವ ಮನಸ್ಸಿನಿಂದ ಅರಿಯಲು ಶಕ್ಯವಿಲ್ಲವಷ್ಟೇ. ಗೊತ್ತಿ-ರುವುದರತ್ತ ತಟಸ್ಥವಾಗಿ, ನಿರ್ಲಿಪ್ತವಾಗಿ ಪೂರ್ಣ ಗಮನಕೊಟ್ಟು ಅರಿಯು-ವುದರ ಮೂಲಕ ಪ್ರೇಮದ ನೈಜಸ್ವರೂಪವನ್ನು ಅರಿಯಬಹುದು. ಅಂದರೆ ಪ್ರೇಮವನ್ನು ನೇತ್ಯಾತ್ಮಕವಾಗಿಯೇ, ಇತ್ಯಾತ್ಮಕವಾಗಿಯಲ್ಲ— ಅರಿಯಲು ಶಕ್ಯ.

ಪ್ರೇಮವೆಂದರೆ ಒಬ್ಬ ವ್ಯಕ್ತಿಯ ಮೇಲೆ ಅಧಿಕಾರ ಸ್ವಾಮ್ಯ ಹೊಂದುವ-ದಲ್ಲ. ಆತನನ್ನು ಸ್ವಾಧೀನಪಡಿಸಿಕೊಳ್ಳುವದಲ್ಲ. ಏಕೆಂದರೆ ಸಾಮಾನ್ಯವಾಗಿ ನಾವು, ಒಬ್ಬ ವ್ಯಕ್ತಿಯನ್ನು ಪ್ರೀತಿಸುತ್ತೇವೆ ಎಂದಾಗ ಆ ವ್ಯಕ್ತಿಯನ್ನು ನಮ್ಮ ಸ್ವಾಧೀನ ಪಡಿಸಿಕೊಂಡಿದ್ದೇವೆ ಅಥವಾ ಪಡಿಸಿಕೊಳ್ಳಲು ಯತ್ನಿಸು-ತ್ತಿದ್ದೇವೆ ಎಂಬರ್ಥವನ್ನು ಧ್ವನಿಸುತ್ತೇವೆ. ಈ ಸ್ವಾಧೀನಪಡಿಸುಕೊಳ್ಳು-ವಿಕೆಯೇ ಅಸೂಯೆಗೆ ಕಾರಣವಾಗುತ್ತದೆ. ಆತ ಅಥವಾ ಆಕೆಯನ್ನು ಕಳೆದು-ಕೊಂಡುಬಿಟ್ಟರೆ ನಾನು ಖಾಲಿಯಾಗಿಬಿಡುತ್ತೇನೆ; ಕಳೆದುಹೋಗುತ್ತೇನೆ ಎಂಬ ಕಾರಣಕ್ಕಾಗಿ ನಾವು ಬಿದಷು, ಕಾನೂನುಬದ್ಧವಾಗಿಯೇ ಆತ ಅಥವಾ ಆಕೆಯನ್ನು ಸ್ವಾಧೀನಪಡಿಸಿಕೊಳ್ಳುತ್ತೇವೆ. ಈ ಸ್ವಾಧೀನಪಡಿಸಿಕೊಳ್ಳು-ವಿಕೆಯಿಂದ ಅಸೂಯೆ, ಭಯ ಇತ್ಯಾದಿ ಅಸಂಖ್ಯ ಸಂಘರ್ಷಗಳು ಉದ್ಭ-ವಿಸುತ್ತವೆ. ಆದ್ದರಿಂದ ಈ ಸ್ವಾಧೀಫಪಡಿಸಿಕೊಳ್ಳುವಿಕೆ ಪ್ರೀತಿ-ಪ್ರೇಮ ಅಲ್ಲವೆಂಬುದು ಸ್ಪಷ್ಟವಾಗುತ್ತದೆಯಷ್ಟೇ.

ಪ್ರೀತಿ-ಪ್ರೇಮ ಎಂದರೆ ಭಾವುಕತೆಯೂ ಅಲ್ಲ. ಭಾವನಾಮಯತೆಯೂ ಅಲ್ಲ. ಏಕೆಂದರೆ ಭಾವುಕತೆ ಹಾಗು ಭಾವನಾಮಯತೆ ಎರಡೂ ಭಾವೋದ್ರೇಕಗಳೇ. ಆದರೆ ಪ್ರೇಮ ಭಾವೋದ್ರೇಕವಲ್ಲ. ತನ್ನ ದೇವರಿಗಾಗಿ, ಗುರುವಿಗಾಗಿ ಅಥವಾ

ಇಸ್ಕಾರಿಗಾಗಿಯೋ ಅಳುವ ಧಾರ್ಮಿಕ ವ್ಯಕ್ತಿ ಕೇವಲ ಭಾವುಕನಾಗಿರು-ತ್ತಾನೆ. ವಿಚಾರದ ಪ್ರಕ್ರಿಯೆಯಾದ ಭಾವೋದ್ರೇಕದಲ್ಲಿ ಆತ ಮುಳುಗಿರು-ತ್ತಾನೆ. ಆದ್ದರಿಂದ ಆತ ಪ್ರೇಮವನ್ನು ಅರಿಯಲಾರ. ಈ ಭಾವುಕತೆ, ಭಾವನಾಮಯತೆ, ಭಾವಪರವಶತೆ ಎಲ್ಲವೂ ಒಂದು ರೀತಿಯ ಅಹಂಕಾರ ವಿಸ್ತರಿಸುವಂತಹದು. ಭಾವುಕನಾದ ವ್ಯಕ್ತಿ ತನ್ನ ಭಾವನೆಗಳಿಗೆ ಸರಿಯಾಗಿ ಪ್ರತಿಕ್ರಿಯೆ, ಪ್ರತಿಸ್ಪಂದನೆ ಸಿಗದಿದ್ದಾಗ, ಭಾವನೆಗಳ ಅಭಿವ್ಯಕ್ತಿಗೆ ಹೊರ ದಾರಿ ದೊರೆಯದಿದ್ದಾಗ, ಆತ ಕ್ರೂರಿಯಾಗುವುದರಿಂದ ಈ ಭಾವುಕತೆ ಪ್ರೇಮವಲ್ಲ.

ಪ್ರೇಮದಲ್ಲಿ ಕ್ಷಮಾಗುಣ ಉಂಟೆ ? ಕ್ಷಮೆ ಏನನ್ನು ಸೂಚಿಸುತ್ತದೆ ? ನಿಮ್ಮನ್ನು ಒಬ್ಬಾತ ಅವಮಾನಗೊಳಿಸುತ್ತಾನೆ. ನೀವು ವ್ಯಗ್ರಗೊಳ್ಳುತ್ತೀರಿ; ಸಿನಪಿಟ್ಟುಕೊಳ್ಳುತ್ತೀರಿ. ನಂತರ ಒಂದು ಬಗೆಯ ಒತ್ತಾಯಕ್ಕೋ, ಪಶ್ಚಾ-ತ್ತಾಪದ ಮೂಲಕವೋ ' ನಾನು ಅವನನ್ನು ಕ್ಷಮಿಸುತ್ತೇನೆ ' ಎನ್ನುತ್ತೀರಿ. ನೀವು ಮೊದಲು ರೊಚ್ಚು ಇಟ್ಟುಕೊಂಡು (ಹಗೆತನ ಇಟ್ಟುಕೊಂಡು) ನಂತರ ತ್ಯಜಿಸುತ್ತೀರಿ. ಇಲ್ಲಿ ನಿಮಗೆ ' ನಾನು ' ಎನ್ನುವಂಥಾದ್ದೇ ಕೇಂದ್ರ. ಇನ್ನೊಬ್ಬನನ್ನು ಕ್ಷಮಿಸುವ ಈ ' ನಾನು ' ಮಹತ್ವದ್ದು. ಕ್ಷಮಿಸುವ ಧೋರಣೆ ಇರುವ ವರೆಗೂ ಕ್ಷಮಿಸಲ್ಪಡುವ ಅವನಲ್ಲ, ಕ್ಷಮಿಸುವ ನಿಮ್ಮ ' ನಾನು ' ಮಹತ್ವದ್ದಾಗಿರುತ್ತದೆ. ಅಸಮಾಧಾನಕ್ಕೆ, ರೋಷಕ್ಕೆ ಮೊದಲು ಎಡೆಕೊಟ್ಟು ನಂತರ ಅವುಗಳನ್ನು ತ್ಯಜಿಸುವುದನ್ನೇ ' ಕ್ಷಮೆ ' ಎನ್ನುವಂತಹ-ವರಲ್ಲಿ ಪ್ರೇಮ ಉಂಟೆ ?

ಪ್ರೇಮಿಸುವವನಿಗೆ ವೈರಿಗಳೇ ಇಲ್ಲ. ಅನುಕಂಪ, ಕ್ಷಮೆ, ಸ್ವಾಧೀನ-ತೆಯ ಸಂಬಂಧಮಾಲೆ, ಅಸೂಯೆ, ಭಯ ಇವಾವೂ ಪ್ರೇಮವಲ್ಲ. ಇವೆಲ್ಲ ಮನಸ್ಸಿನ ಪರಿಕರಗಳೇ. ಆದ್ದರಿಂದ ಇವು ಪ್ರೇಮಕ್ಕೆ, ತನ್ಮೂಲಕ ಸೌಂದ-ರ್ಯಕ್ಕೆ ಜನ್ಮನೀಡಲಾರವು, ಪ್ರೇಮದ ಬಗ್ಗೆ ಕವಿತೆ ಕೂಡ ಬರೆಯಬಹುದು. ಆದರೆ ಅದೇ ಪ್ರೇಮವಾಗಿರುವುದಿಲ್ಲ.

ಎಲ್ಲಿ ಆದರವಿಲ್ಲವೋ ಅಲ್ಲಿ ಪ್ರೇಮವಿರುವುದಿಲ್ಲ. ಸಾಮಾನ್ಯವಾಗಿ ನಮಗಿಂತ ಕೆಳಗಿನವರ ಬಗ್ಗೆ ನಮಗೆ ಆದರ, ಉದಾರತೆ ಇರದಿರುವುದು,

ನಮ್ಮನ್ನೇ ನಾವು ಗಮನಿಸಿಕೊಂಡಾಗ ಕಂಡುಬರುತ್ತದೆ. ನಮಗಿಂತ ಮೇಲಿ
ನವರ ಬಗ್ಗೆ—ಆತ ಹಿರಿಯ ಅಧಿಕಾರಿಯೋ, ಲಕ್ಷಾಧೀಶನೋ ಅಥವಾ ಹೇರ
ಆಸ್ತಿ-ಕೀರ್ತಿ ಇರುವಂಥ 'ದೊಡ್ಡ ಮನುಷ್ಯನೋ' ಇರಬಹುದು—ನಮ
ಆದರ ಇರುತ್ತದೆ ಕೆಳಗಿನವರೊಂದಿಗೆ ಬೇರೆಯದೇ ಆದ ಭಾಷೆಯನ್ನು ಉಪ
ಯೋಗಿಸುತ್ತೇವೆ. ಕೆಳಗಿನವರನ್ನು ಒದೆಯುತ್ತೇವೆ, ಅವರ ಬಗ್ಗೆ ಆದರ
ಕರುಣೆ, ಉದಾರತೆ ಇಲ್ಲದಿರುವುದರಿಂದ ಪ್ರೇಮ ಶಕ್ಯವಾಗುವದಿಲ್ಲ. ಮೇಲಿನವ
ಬಗ್ಗೆ ನಮಗೆ ಯಾಕೆ ಆದರವಿದೆ? ಆತ ನಮಗೊಂದು ಉತ್ತಮ ಸ್ಥಾ
ಅಥವಾ ಕೆಲಸ ಅಥವಾ ಇನ್ನೇನಾದರೂ (ಅದು ಅತ್ಯಂತ ಸೂಕ್ಷ್ಮರೂಪದಲ್ಲ
ಇರಬಹುದು)— ಕೊಡಬಹುದೆಂಬ ಕಾರಣಕ್ಕಾಗಿಯಲ್ಲವೆ? ಈ ಬಗೆಯ
ಆದರ ನಿಜವಾದ ಆದರ ಅಲ್ಲ. ಈ ಆದರ ನಮಗೆ ಬೇಕಾದ್ದನ್ನು ಸಾಧಿಸಲ
ಬಳಸಿಕೊಳ್ಳಬೇಕಾದ ಆಯುಧ. ಭಯದಿಂದ ಬಂದಂತಹದು ಈ ಆಯುಧ.

ನಮ್ಮಲ್ಲಿ ನಿಜವಾಗಿಯೂ ಆದರವಿದ್ದರೆ, ಕೆಳಗಿನವರಿಗೆ ಹಾಗು ಮೇಲಿ-
ನವರಿಗೆ—ಇಬ್ಬರೊಂದಿಗೂ ಸರಿಸಮನಾಗಿ ಆದರದಿಂದ ನಡೆದುಕೊಳ್ಳುತ್ತೇವೆ
ನಮಗೆ ಲಾಭವಾಗುವಾಗ ಮಾತ್ರ ಉದಾರರೂ, ದಯಾಳುಗಳೂ ಆಗುವಂತ
ನಡೆವಳಿಕೆ ಸ್ವಾಧೀನಪಡಿಸಿಕೊಳ್ಳುವ ಆಶೆಯಿಂದ ಪ್ರೇರಿತವಾದದ್ದು. ಯಾವು-
ದನ್ನೂ ಹೊಂದುವ ಆಶೆ ಮನಸ್ಸಿನಲ್ಲಿ ಇರದಿದ್ದಾಗ, ಯಾವುದರ ಆರಾಧಕರೂ
ನಾವು ಆಗದೇ ಇದ್ದಾಗ ಪ್ರೇಮ ಇರುತ್ತದೆ. ಪ್ರಾರ್ಥನೆ, ಆರಾಧನೆಗಳೂ
ಸಹ ಅತ್ಯಂತ ಸೂಕ್ಷ್ಮರೂಪದಲ್ಲಿ ಏನನ್ನೋ ಹೊಂದುವ ಸಲುವಾಗಿ
ಹೊರಟಂತಹವು. ಇವೆಲ್ಲವೂ ಮನಸ್ಸಿನಿಂದ ಕಣ್ಮರೆಯಾದಾಗ, ಹೃದಯ-
ಮನಸ್ಸಿನ ಸಂಗತಿಗಳಿಂದ ತುಂಬದೇ ಇದ್ದಾಗ ಪ್ರೇಮ ಇರುತ್ತದೆ.

ಈ ಬಗೆಯ ನಿಜವಾದ ಪ್ರೇಮ-ಪ್ರೀತಿ ಒಂದೇ ಈ ಜಗತ್ತನ್ನು ಸದ್ಯದ
ಹುಚ್ಚಾಟ, ಅವಿವೇಕಗಳಿಂದ ಬದಲಾಯಿಸಬಲ್ಲುದು. ಯಾವ ಎಡ-ಬಲ
ಸಿದ್ಧಾಂತಗಳಾಗಲಿ, ಪದ್ಧತಿಗಳಾಗಲಿ ಇದನ್ನು ಮಾಡಲಾರವು.

ಪ್ರೇಮ ಸಂವೇದನಾಪೂರ್ಣವಾದದ್ದು. ನಿಸರ್ಗಕ್ಕೆ ಮುಕ್ತವಾಗಿ ತೆರೆದು-
ಕೊಂಡು ಸಂವೇದನಾಶೀಲನಾಗಿರುವುದು ಪ್ರೇಮದ ಒಂದಂಶ. ಕೆಲವರು
ನಿಸರ್ಗವನ್ನು ಪ್ರೀತಿಸುತ್ತಾರೆ; ದಯಾಂತಃಕರಣದವರಾಗಿ ಒಳ್ಳೆಯ ಕೆಲಸ-
ಗಳನ್ನು ಮಾಡುತ್ತಾರೆ; ಅಂಥ ಕಾರ್ಯಗಳನ್ನು ಪ್ರೀತಿಸುತ್ತಾರೆ. ಆದರೆ

ಸರ್ಗಕ್ಕೆ ಸ್ಪಂದಿಸುತ್ತಿರುವುದಾಗಲಿ, ಕರುಣಾಳುಗಳಾಗಿ ಸತ್ಕಾರ್ಯಶೀಲ-
ರಾಗಿರುವುದಾಗಲಿ ಪ್ರೇಮದ ಅಂಶಗಳು, ಅಷ್ಟೇ; ಪ್ರೇಮದ ಸಮಗ್ರತೆ
ಯಲ್ಲಿಲ್ಲ.

ಪ್ರೇಮದ ಸಮಗ್ರತೆ ಮನಸ್ಸಿನ ಅಳವಿಗೆ ಸಿಗುವಂತಹದಲ್ಲ. ಅದನ್ನು ಅರಿಯಲು ಮನಸ್ಸು ಎಷ್ಟೇ ಉದಾತ್ತವಾಗಿದ್ದರೂ ಸಹ ತನ್ನಿಂದ ತಾನೇ ಮುಕ್ತವಾಗಿ, ಸ್ವತಂತ್ರವಾಗಿರಬೇಕು ಮನಸ್ಸು. ಆದರೆ ನಮ್ಮ ಮನಸ್ಸನ್ನು ನಾವು ಎಚ್ಚರಿಕೆಯಿಂದ ಬೆಳೆಸಿದ್ದಾರೆಂದರೆ ನಮ್ಮ ಹೃದಯದ ತುಂಬ ಮನಸ್ಸಿನ ಸಂಗತಿಗಳೇ ತುಂಬಿವೆ. ಜೀವನಾಧಾರಕ್ಕೆ, ಜ್ಞಾನಸಂಗ್ರಹಕ್ಕೆ ನಂಬಿಕೆಗಳ ಸಂವರ್ಧನೆಗೆ, ನಾಡು-ನುಡಿಗಳ ಆರಾಧನೆಗೆ, ಸಮಾಜಸುಧಾರಣೆಯ ಚಟುವಟಿಕೆಗಳಿಗೆ, ಆದರ್ಶ ಹಾಗು ಸದ್ಗುಣಗಳ ಸಾಧನೆಗೆ ಇತ್ಯಾದಿ, ಇತ್ಯಾದಿ— ಹಲವು ಹದಿನೆಂಟು ಸಂಗತಿಗಳಿಗೆ ನಾವು ನಮ್ಮ ಶ್ರಮ ಹಾಗು ವೇಳೆಗಳನ್ನು ವ್ಯಯಿಸುತ್ತೇವೆ; ಮನಸ್ಸು ಸದಾ 'ನಿರತ'ವಾಗಿರುವಂತೆ ನೋಡಿಕೊಂಡಿರುತ್ತೇವೆ. ಇದರಿಂದ ಹೃದಯ ಬರಿದೋ ಬರಿದಾಗಿರುತ್ತದೆ. ಮನಸ್ಸು ತನ್ನ ಧೂರ್ತತೆಯಲ್ಲಿ ಶ್ರೀಮಂತವಾಗುತ್ತ ಹೋಗುತ್ತದೆ. ಇದು ಸಂವೇದನಾಶೂನ್ಯತೆಗೆ ದಾರಿ ಮಾಡಿಕೊಡುತ್ತದೆ. ಹೀಗೆ ಬದುಕಿಗೆ ಎದುರಾಗಿ ರಕ್ಷಣೆ ಕಟ್ಟಿಕೊಂಡಂಥ ಮನಸ್ಸು ಪ್ರೇಮಿಸುವುದನ್ನೇ ಬಿಟ್ಟುಬಿಡುತ್ತದೆ.

ಹಾಗಾದರೆ ಮನಸ್ಸನ್ನು ಖಾಲಿ ಮಾಡುವುದು ಹೇಗೆ? ಸ್ವಾರ್ಥದಿಂದ ಬಿಡುಗಡೆ ಪಡೆಯುವುದು ಹೇಗೆ? ಎಂಬ ಪ್ರಶ್ನೆ ಸಹಜವಲ್ಲವೆ? ಆದರೆ ಹೀಗೆ ಪ್ರಶ್ನಿಸುವುದೇ, ಒಂದು ವಿಧಾನದ ಶೋಧಕ್ಕೆ ಆರಂಭ. ಅಂದರೆ ಮತ್ತೆ ಮನಸ್ಸು ಕಾರ್ಯೋನ್ಮುಖನಾಗುವುದು; ಪುನಃ 'ನಾನು' ಕೇಂದ್ರಕ್ಕೆ ಅಂಟಿಕೊಳ್ಳುವುದು, ಹೀಗೆ ಎಲ್ಲೀವರೆಗೆ 'ನಾನು' ಇರುತ್ತದೆಯೋ ಅಲ್ಲಿಯವರೆಗೆ ಪ್ರೇಮ ಇರುವುದಿಲ್ಲ.

ನಿಜವಾದ ಪ್ರೀತಿ-ಪ್ರೇಮವನ್ನು ಯೋಚಿಸಿ ತಿಳಿಯಲಾರೆವು. ಅದನ್ನು ಪ್ರಯತ್ನಪಟ್ಟು ಬೆಳಸಿಕೊಳ್ಳಲೂ ಶಕ್ಯವಿಲ್ಲ; ರೂಢಿ ಮಾಡಿಕೊಳ್ಳಲೂ ಆಗುವುದಿಲ್ಲ. ರೂಢಿ, ಆಚರಣೆ-ಅದು ಪ್ರೀತಿ-ಪ್ರೇಮದ್ದಿರಲಿ, ವಿಶ್ವ-ಭ್ರಾತೃತ್ವದ್ದೇ ಇರಲಿ— ಮನಸ್ಸಿನ ಸೀಮೆಯಲ್ಲೇ ಬರುವಂತಹದು. ಆದ್ದ-ರಿಂದ ಅವು ನಿಜವಾದ ಪ್ರೀತಿ-ಪ್ರೇಮ ಅಲ್ಲ.

ಸಂವೇದನಾಶೂನ್ಯತೆ, ನೆನಪು, ವಿಚಾರ, ಕಾರ್ಯೋನ್ಮುಖತೆ, ಶಬ್ದ-ದೊಡನೆ ಆಟ, ಇತ್ಯಾದಿ— ಎಲ್ಲವುಗಳನ್ನೂ ಸಮಗ್ರವಾಗಿ ಗಮನಿಸಿ ಅರಿತು-ಕೊಂಡಾಗ, ಮನಸ್ಸು ಬರಿದಾದಾಗ, ಖಾಲಿಯಾದಾಗ ಪ್ರೇಮ ಪಲ್ಲವಿಸು-ತ್ತದೆ. ಆಗ ಪ್ರೇಮಕ್ಕೆ 'ಪ್ರಮಾಣ' ಪ್ರಧಾನವಾಗಿರುವುದಿಲ್ಲ; ಗುಣ-ಪ್ರಧಾನವಾಗಿರುವುದಿಲ್ಲ. ಆಗ ಇಡೀ ಜಗತ್ತನ್ನೇ ಪ್ರೀತಿಸುತ್ತೇನೆ ಎನ್ನದೆ ಒಂದನ್ನೇ ಹೇಗೆ ಪ್ರೀತಿಸುವುದು ಎಂಬುದು ತಿಳಿಯುತ್ತದೆ. ಅದರ ಮೂಲ ಇಡೀ ವಿಶ್ವವನ್ನು ಪ್ರೀತಿಸುವುದು ಹೇಗೆ ಎನ್ನುವುದು ಕೂಡ ತಿಳಿಯುತ್ತದೆ ಏಕೆಂದರೆ ನಮಗೆ ಒಂದನ್ನು ಅಥವಾ ಒಬ್ಬ ವ್ಯಕ್ತಿಯನ್ನು ನಿಜವಾಗಿ ಪ್ರೀತಿ-ಸುವುದು ಹೇಗೆ ಎನ್ನುವುದೇ ಗೊತ್ತಿಲ್ಲ! ಇಡೀ ಮಾನವ ಜನಾಂಗದ ಪ್ರೇಮ ಎನ್ನುವುದೆಲ್ಲ ಕಾಲ್ಪನಿಕವಾದದ್ದು. ಪ್ರೀತಿಸುವಾಗ ಅಲ್ಲಿ ಒಂದೂ ಇರುವುದಿಲ್ಲ ಹಲವೂ ಇರುವುದಿಲ್ಲ. ಕೇವಲ ಪ್ರೀತಿ ಮಾತ್ರ ಇರುತ್ತದೆ. ಏಕೆಂದ ಪ್ರೀತಿಗೆ ಅದರದೇ ಆದ ಕ್ರಿಯಾಶೀಲತೆ ಇದೆ, ಅನುಗ್ರಹಶಕ್ತಿ ಇದೆ. ಇವನ್ನು ಅರಿಯಬೇಕಿದ್ದರೆ ಹೀಗೆ ನಿಜವಾಗಿ ಪ್ರೀತಿಸಿ, ಪ್ರೇಮಿಸಿ ನೋಡಿ. ಆ ನಿಮಗೇ ಅನುಭವಕ್ಕೆ ಬರುತ್ತದೆ. ಆಗ ಮಾತ್ರ ನಮ್ಮೆಲ್ಲ ಸಮಸ್ಯೆಗಳನ್ನೂ ಬಗೆಹರಿಸಬಹುದು ಎನ್ನುತ್ತಾರೆ—ಜೆ. ಕೆ.

* *

೫. ಕಾಮ–ಲೈಂಗಿಕತೆ

ಪ್ರೇಮ–ಕಾಮಗಳ ಸಂಬಂಧ ಎಷ್ಟು ವಿಶಿಷ್ಟವಾಗಿದೆ ಎಂದರೆ, ಕೆಲವರು ಒಂದನ್ನೇ ಮತ್ತೊಂದು ಎಂದು ಸಮೀಕರಿಸಿ ಮಾತನಾಡುವ ಪರಮಾವಧಿಗೆ ಹೋದರೆ, ಮತ್ತೆ ಕೆಲವರು ಅವೆರಡೂ ಕತ್ತಲೆ–ಬೆಳಕಿನಷ್ಟು ಪರಸ್ಪರ ಭಿನ್ನ–ವಾದುವು, ವಿರೋಧವಾದವು ಎಂದು ವಾದ ಮಾಡುತ್ತಾರೆ. ಆದರೆ ಇಬ್ಬರೂ ಒಪ್ಪುವ ಸಾಮಾನ್ಯ ಅಂಶ : ಅವೆರಡೂ ಪರಸ್ಪರ ಸಂಬಂಧಪಟ್ಟವು ಎನ್ನು–ವುದು. ಆದ್ದರಿಂದ ಇಲ್ಲಿ ಕಾಮದ ಬಗ್ಗೆ ಜೆ. ಕೆ. ಯವರ ವಿಚಾರಗಳನ್ನು ಎತ್ತಿಕೊಳ್ಳಲಾಗಿದೆ.

ಕಾಮ ಅಥವಾ ಲೈಂಗಿಕತೆ ನಮ್ಮ ಬದುಕಿನಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಇದಕ್ಕೆ ಕಾರಣ ಬಹುಶಃ ಇಲ್ಲಿ ಮಾತ್ರ ಪ್ರತಿಯೊಬ್ಬನೂ ಸ್ವತಃ ತನ್ನದೇ ಆದ, ಆಳವಾದ ಅನುಭವ ಪಡೆಯುತ್ತಾನೆ ಎನ್ನುವದು. ಇಂದು ಪ್ರತಿಯೊಬ್ಬನು ಬೌದ್ಧಿಕವಾಗಿ, ಕೌಟುಂಬಿಕವಾಗಿ, ಸಾಮಾಜಿಕವಾಗಿ, ನೈತಿಕ–ಧಾರ್ಮಿಕ ಸಂಕೋಲೆಗಳ ಮೂಲಕ ಎಷ್ಟೊಂದು ಸುತ್ತುವರಿಯಲ್ಪ–ಟ್ಟಿದ್ದಾನೆ ಎಂದರೆ, ಈ ಲೈಗಿಂಕ ಸಂಬಂಧದಲ್ಲಿ ಮಾತ್ರ ಆತ ಬಿಡುಗಡೆ ಹಾಗು ಉತ್ಕಟತೆಯನ್ನು ಅನುಭವಿಸಬಲ್ಲ. ಬೌದ್ಧಿಕವಾಗಿ ಹಾಗು ಭಾವ–ನಾತ್ಮಕವಾಗಿ ಇತರರೊಡನೆ ನಾವು ಹೊಂದಿಕೊಳ್ಳುತ್ತೇವೆ, ಅನುಸರಿಸುತ್ತೇವೆ, ಹಿಂಬಾಲಿಸುತ್ತೇವೆ, ವಿಧೇಯರಾಗಿರುತ್ತೇವೆ. ಎಲ್ಲ ಸಂಬಂಧಗಳಲ್ಲೂ ನೋವು ಸಂಘರ್ಷ ಇದ್ದೇ ಇದೆ. ಆದರೆ ಕಾಮದಲ್ಲಿ ಮಾತ್ರ ಹಾಗಿಲ್ಲ. ಇದು ತುಂಬ ವಿಭಿನ್ನ ಹಾಗು ಸುಂದರವಾದ ಕ್ರಿಯೆ. ಮನಸ್ಸನ್ನು ಮುಕ್ತಗೊಳಿಸುವ ಕ್ರಿಯೆ. ನಮ್ಮನ್ನು ನಾವು ಸಂಪೂರ್ಣ ಮರೆಯುವ ದಾರಿ ಅದು. ಕನಿಷ್ಟ ಕೆಲವೇ ಕ್ಷಣವಾದರೂ ನಮ್ಮನ್ನು ನಾವು ಮರೆಯುವ ಮಾರ್ಗ ಅದು.

ಬದುಕಿನಲ್ಲಿ ಮಾಡುವ ಉಳಿದೆಲ್ಲ ಸಂಗತಿಗಳೂ ' ನಾನು ' ವನ್ನು ಪುಷ್ಟೀಕರಿಸುತ್ತವೆ. ನಮ್ಮ ವ್ಯವಹಾರ, ಧರ್ಮ, ರಾಜಕೀಯ, ದೇವರು,

ಮುಂದಾಳುಗಳು, ಮನರಂಜನೆ, ಸಾಮಾಜಿಕ ಸೇವೆಗಳು—ಎಲ್ಲವೂ 'ನಾನು' ವನ್ನು ಪ್ರಬಲಗೊಳಿಸುವಂತಹವು.

ಲೈಂಗಿಕ ಕ್ರಿಯೆಯಲ್ಲಿ ಮಾತ್ರ 'ನಾನು'ವಿಗೆ ಪ್ರಾಧಾನ್ಯವಿಲ್ಲ. ನಮ್ಮನ್ನು ಕೆಲವೇ ಕ್ಷಣವಾದರೂ ಮರೆತು, ಆನಂದಹೊಂದಲು ಇರುವ ಏಕ-ಮೇವ ಸಾಧನ ಇದಾಗಿರುವುದರಿಂದ ಅದಕ್ಕೆ ಅಂಟಿಕೊಳ್ಳಲು ಮನಸ್ಸು ತವಕಿಸುತ್ತದೆ.

ಹಾಗೆ ಅಂಟಿಕೊಳ್ಳಲು ಯತ್ನಿಸಿದಾಗ ಈ ಸುಂದರ ಕ್ರಿಯೆಯೇ ಭೀಕರ ದುಃಸ್ವಪ್ನದಂತೆ ಆಗಿಬಿಡುತ್ತದೆ ಏಕೆಂದರೆ ಆಗ ಮನಸ್ಸು ಅದರ ದಾಸನಾಗದೇ ಇರಲೂ ಹೋರಾಡಲಾರಂಭಿಸುತ್ತದೆ. ಅದಕ್ಕಾಗಿ ಅದು ಪಾತಿವ್ರತ್ಯ, ಬ್ರಹ್ಮ-ಚರ್ಯ ಮುಂತಾದವುಗಳನ್ನೆಲ್ಲ ಸೃಜಿಸುತ್ತದೆ. ಹಾಗೆ ಪಾತಿವ್ರತ್ಯದಿಂದ, ಬ್ರಹ್ಮಚರ್ಯದಿಂದ ಇರಲು ಒತ್ತಾಯಪೂರ್ವಕವಾಗಿ ಪ್ರಯತ್ನಿಸಲು ತೊಡಗಿದಾಗ, ವಾಸ್ತವಿಕ ಸತ್ಯದಿಂದ ಕಡಿದುಕೊಳ್ಳುವುದು ಸ್ವಾಭಾವಿಕ. ಈ ಯತ್ನ ಅಹಂಕಾರಕ್ಕೆ ಒತ್ತು ನೀಡುತ್ತದೆ. ಏನೋ ಸಾಧಿಸಲು, ಏನೋ ಆಗಲು ನಿರತವಾಗುತ್ತದೆ. ಹೀಗೆ ಪುನಃ ಪ್ರಯತ್ನ. ಯಾತನೆಗಳ ಚಕ್ರವ್ಯೂಹದಲ್ಲಿ ಸಿಲುಕುತ್ತದೆ ಮನಸ್ಸು.

ಹಾಗೆ ನೋಡಿದರೆ ಕಾಮ ಅಥವಾ ಲೈಂಗಿಕತೆ ಸಮಸ್ಯೆಯೇ ಅಲ್ಲ. ತಿನ್ನುವುದು ಉಣ್ಣುವುದು ಹೇಗೆ ಸಹಜವೋ ಅಷ್ಟೇ ಸಹಜ ಲೈಂಗಿಕತೆ ಸಹ. ಆದರೆ ಅದು ಸಮಸ್ಯೆ ಆಗುವುದು ಅದರ ಬಗ್ಗೆ ನಾವು ಆಲೋಚಿಸತೊಡಗಿ-ದಾಗ. ಇಡೀ ದಿನ ಏನೂ ಆಲೋಚನೆ ಮಾಡಲು ಇಲ್ಲದಿದ್ದಾಗ, ತಿನ್ನುವುದು, ಲೈಂಗಿಕತೆ— ಎಲ್ಲವೂ ಸಮಸ್ಯೆ ಆಗುತ್ತವೆ.

ಲೈಂಗಿಕ ಕ್ರಿಯೆ ಸಮಸ್ಯೆ ಅಲ್ಲ; ಅದರ ಬಗ್ಗೆ ಯೋಚನೆ ಮಾಡು-ತ್ತಿರುವುದು ಸಮಸ್ಯೆ. ಸಾಕಷ್ಟು ಲೈಂಗಿಕ ಸ್ವಾತಂತ್ರ್ಯ ನೀಡದೇ ಇದ್ದುದ-ರಿಂದಲೋ, ಲೈಂಗಿಕ ಸ್ವಾತಂತ್ರ್ಯವನ್ನು ವಿಪರೀತ ನೀಡಿದ್ದರಿಂದಲೋ ಅಥವಾ ಲೈಗಿಂಕ ತೃಪ್ತಿ ಹೊಂದುವಲ್ಲಿ ಸಾಮಾಜಿಕ ರೀತಿ–ನೀತಿ ಮೀರಿ ಹೋದ ಅಪ-ರಾಧಿ ಪ್ರಜ್ಞೆಯಿಂದಲೋ, ಇತ್ಯಾದಿ ಹಲವಾರು ಕಾರಣಗಳಿಂದ ಲೈಂಗಿ-ಕತೆಯನ್ನು ನಾವು ಸಮಸ್ಯೆಯನ್ನಾಗಿ ಮಾಡಿಕೊಂಡಿದ್ದೇವೆ. ಜೊತೆಗೆ

ನಾವು ನೋಡುವ ಸಿನೇಮಾ, ಓದುವ ಪುಸ್ತಕ, ಪತ್ರಿಕೆ, ಸ್ತ್ರೀಯರ ವೇಷ-ಭೂಷಣಗಳು— ಇವೆಲ್ಲವೂ ಲೈಂಗಿಕತೆಯ ವಿಚಾರವನ್ನು ಹೆಚ್ಚು ಪ್ರಚುರ-ಗೊಳಿಸಿ, ಜೀವನದಲ್ಲಿ ಎಷ್ಟೆಲ್ಲ ವಿಷಯಗಳು, ಸಂಗತಿಗಳು ತುಂಬಿರುವಾಗಲೂ ಈ ಲೈಂಗಿಕತೆ ನಮ್ಮ ಗಮನದ ಬಹ್ವಂಶವನ್ನು ನುಂಗುವಂತೆ ಮಾಡಿರುವುದೂ ಒಂದು ಸಮಸ್ಯೆಯೇ. ಇವಕ್ಕೆಲ್ಲ ಕಳಸವಿಟ್ಟಂತೆ ಸಮಸ್ಯೆಯ ಬಗ್ಗೆ ಯೋಚನೆ ಮಾಡುವ ಮನಸ್ಸನ್ನೇ ಸರಿಯಾಗಿ ನಾವು ಅರ್ಥಮಾಡಿಕೊಳ್ಳದೇ ಇರುವುದ-ರಿಂದ ಈ ಲೈಂಗಿಕತೆ-ಸಮಸ್ಯೆ ಅತ್ಯಂತ ಕ್ಲಿಷ್ಟವೂ, ಸಂಕೀರ್ಣವೂ ಆಗಿ ಪರಿಣಮಿಸುತ್ತದೆ.

ಲೈಂಗಿಕ ಕ್ರಿಯೆಯ ಕುರಿತಾದ ಯೋಚನೆ—ಲೈಂಗಿಕ ಕ್ರಿಯೆ ಅಲ್ಲ—ಸಮಸ್ಯೆ ಆಗುತ್ತದೆ. ಯಾಕೆಂದರೆ ಆ 'ಕ್ರಿಯೆ'ಯನ್ನು ನಾವು ಸಂರಕ್ಷಿಸು-ತ್ತೇವೆ. ತುಂಬ ಅನೈತಿಕವಾಗಿ ಬಾಳುತ್ತೇವೆ. ಅಥವಾ ಲಗ್ನವಾಗುತ್ತೇವೆ, ಅದರ ಮೂಲಕ ಮಡದಿಯನ್ನೇ ಅತ್ಯಂತ ಗೌರವಾನ್ವಿತ ವೇಶ್ಯೆಯನ್ನಾಗಿ ಪರಿವರ್ತಿಸುತ್ತೇವೆ. ನಾನು, ನನ್ನದು, ನನ್ನ ಮಡದಿ-ಮಕ್ಕಳು, ನನ್ನ ಆಸ್ತಿ— ಇತ್ಯಾದಿಗಳ ಸಮಗ್ರ ಕಾರ್ಯವಿಧಾನವನ್ನು ಅರಿತಾಗ ಮಾತ್ರ ಸಮಸ್ಯೆಯನ್ನು ಪರಿಹರಿಸಬಹುದು. ಎಲ್ಲಿಯ ವರೆಗೆ ಅಹಂಕಾರವನ್ನು ವರ್ಧಿ-ಸುವ ರಾಜಕೀಯ, ಧಾರ್ಮಿಕ ಅಥವಾ ಯಾವುದೇ ಬಗೆಯ ಮಹತ್ವಾಕಾಂಕ್ಷೆ ಇರುತ್ತದೆಯೋ, ಅಲ್ಲಿಯ ವರೆಗೆ ಅಹಂಕಾರವನ್ನು ಹಿಗ್ಗಿಸುವ ಚಟುವಟಿಕೆ ಇದ್ದೇ ಇರುತ್ತದೆ; ಅಲ್ಲಿಂದ ಅಲ್ಲಿಯ ವರೆಗೆ ಲೈಂಗಿಕತೆ ಸಮಸ್ಯೆಯಾಗಿ ಉಳಿದೇ ಉಳಿಯುತ್ತದೆ.

ಒಂದುಕಡೆ ನಮ್ಮನ್ನು ಹಿಗ್ಗಿಸಿಕೊಳ್ಳಲು ನೀರೆರೆಯುತ್ತ, ಅಹಂಕಾರ-ವನ್ನು ಅರೈಕೆಮಾಡಿ ಬೆಳೆಸುತ್ತ ಇರುತ್ತೇವೆ; ಮತ್ತೊಂದು ಕಡೆ ಅಂಥ ನಾವು ಕೆಲವೇ ಕ್ಷಣವಾದರೂ ನಮ್ಮನ್ನು, ನಮ್ಮ ಅಹಂಕಾರವನ್ನು ಸಂಪೂರ್ಣ ಮರೆಯಲು ಯತ್ನಿಸುತ್ತಿರುತ್ತೇವೆ. ಹೀಗೆ ನಮ್ಮ ಬದುಕೇ ಪರಸ್ಪರ ವಿರುದ್ಧ ಯತ್ನಗಳ ರಂಗಸ್ಥಳವಾಗಿದೆ. ಸಮಸ್ಯೆ ಇಲ್ಲಿದೆ; ಲೈಂಗಿಕತೆಯಲ್ಲಲ್ಲ.

ಈ ಪರಸ್ಪರ ಗುದ್ದಾಟದ ಮಧ್ಯೆ ಸೇತುವೆ ನಿರ್ಮಿಸಲು ಮನಸ್ಸಿಗೆ ಶಕ್ಯವಿಲ್ಲ. ಏಕೆಂದರೆ ಮನಸ್ಸೇ ಅಂಥ ಒಂದು ಪರಸ್ಪರ ವಿರೋಧಿಶಕ್ತಿಗಳ ಕಾದಾಟದ ಕ್ಷೇತ್ರ. ಇದನ್ನು, ನಮ್ಮ ಇಡೀ ದಿನದ ಚಟುವಟಿಕೆಗಳನ್ನು ಸೂಕ್ಷ್ಮ

ವಾಗಿ ಗಮನಿಸಿದಾಗ ಅರಿಯಲು ಶಕ್ಯವಾಗುತ್ತದೆ. ಮನೋರಂಜನೆಗೆಂದು ಕೀಳು ಅಭಿರುಚಿಯ ಲೈಂಗಿಕತೆ ತುಂಬಿರುವಂಥ ಚಲನಚಿತ್ರ ನೋಡುವುದು, ಲೈಂಗಿಕ ವಿಚಾರ ಪ್ರಚೋದಿಸುವ ಪುಸ್ತಕಗಳನ್ನು ಓದುವುದು, ಅರೆನಗ್ನ ಯುವತಿಯರ ಚಿತ್ರ ತುಂಬಿರುವ ಪತ್ರಿಕೆಗಳನ್ನು ಓದುವುದು, ಓಡಾಡುವಾಗ ನಮ್ಮ ಕಣ್ಣು ಸಂಧಿಸುವ ಕಳ್ಳನೋಟಗಳು, ನಾವು ಸ್ತ್ರೀಯರನ್ನು ನೋಡುವ ರೀತಿ— ಎಲ್ಲವೂ ' ಅಹಂಕಾರ 'ವನ್ನು ಎತ್ತಿಹಿಡಿಯುವ ಮನಸ್ಸನ್ನು ಬಿಂಬಿಸುತ್ತವೆ. ಅದೇ ಕ್ಷಣದಲ್ಲಿಯೇ ನಾವು ಪ್ರೀತಿ ತುಂಬಿದವರೂ, ದಯಾರ್ದ್ರರೂ, ಮೃದು-ಮೃದುಲ ಅಂತಃಕರಣದವರೂ ಆಗಿರಲು ಯತ್ನಿಸುತ್ತೇವೆ. ಇನೆರಡೂ ಒಟ್ಟಿಗೇ ಹೋಗಲು ಶಕ್ಯವಿಲ್ಲ. ಆಧ್ಯಾತ್ಮಿಕವಾಗಿ ಅಥವಾ ಯಾವುದೇ ರೀತಿಯಲ್ಲೂ ಒಬ್ಬ ಮಹತ್ವಾಕಾಂಕ್ಷಿಯಾಗಿದ್ದರೆ ಆತ ಸಮಸ್ಯೆಯಿಂದ ಬಿಡುಗಡೆ ಹೊಂದಲಾರ. ' ಅಹಂ ' ಮರೆತಾಗ ಮಾತ್ರ ' ಅಹಂ ' ನಿಲ್ಲುತ್ತದೆ. ' ಅಹಂ ' ಇಲ್ಲದ ಸ್ಥಿತಿ ಇಚ್ಛಾಶಕ್ತಿಯ ಕ್ರಿಯೆ ಅಲ್ಲ; ಪ್ರತಿಕ್ರಿಯೆಯೂ ಅಲ್ಲ.

ಮನಸ್ಸು ಲೈಂಗಿಕತೆಯ, ಸಮಸ್ಯೆಯನ್ನು ಬಗೆಹರಿಸಲು ಆರಂಭಿಸಿದಾಗ ಲೈಂಗಿಕತೆ ಪ್ರತಿಕ್ರಿಯೆಯ ರೂಪ ತಾಳುತ್ತದೆ. ಇದರಿಂದ ಸಮಸ್ಯೆ ಇನ್ನಷ್ಟು ಸಂಕೀರ್ಣವೂ, ಗೊಂದಲಮಯವೂ ಆಗುತ್ತದೆ. ಆದ್ದರಿಂದಲೇ ಪರಿಶುದ್ಧತೆಯಿಂದ—ಪಾತಿವ್ರತ್ಯ ಅಥವಾ ಬ್ರಹ್ಮಚರ್ಯದಿಂದ ಇರಬೇಕೆಂದು ಮನಸ್ಸು ಹೇಳುತ್ತದೆ. ಈ ಪರಿಶುದ್ಧತೆ ಮನಸ್ಸಿನದಲ್ಲ. ಏಕೆಂದರೆ ಮನಸ್ಸು ತನ್ನ ಚಟುವಟಿಕೆಗಳನ್ನು ಮಾತ್ರ ಹತ್ತಿಕ್ಕಬಲ್ಲದು. ಮತ್ತು ಈ ಬಗೆಯ ಹತ್ತಿಕ್ಕುವಿಕೆ ಪರಿಶುದ್ಧತೆ ಅಲ್ಲ. ಪರಿಶುದ್ಧತೆಯನ್ನು ರೂಢಿಸಿಕೊಳ್ಳಲಾರಂಭಿಸಿದಾಗ ಪರಿಶುದ್ಧತೆಯಿರುವುದಿಲ್ಲ. ಅಂಥ ಬೆಳೆಯಿಸಿಕೊಂಡ ಪರಿಶುದ್ಧತೆ ನಿಜವಾಗಿ ಸದ್ಗುಣವಾಗಿರುವುದಿಲ್ಲ. ಏಕೆಂದರೆ ' ವಿನಯ ' ವನ್ನು ಬೆಳೆಸಿಕೊಳ್ಳುವವ ' ವಿನಯಿ 'ಯಲ್ಲ; ಆತ ಸ್ವಭಾವತಃ ಗರ್ವಿಷ್ಠ. ಆದ್ದರಿಂದಲೇ ವಿನಯಿಯಾಗಲು ಯತ್ನಿಸುತ್ತಿದ್ದಾನೆ. ಹೇಗೆ ಗರ್ವ ವಿನಯ ಆಗಲಾರದೋ, ಹಾಗೆ ಪರಿಶುದ್ಧತೆ ಎನ್ನುವಂಥದು ಮನಸ್ಸಿಲ್ಲದ ಕಾರಣ ಈ ಪರಿಶುದ್ಧತೆಯನ್ನು ಸಾಧಿಸಲಾಗುವುದಿಲ್ಲ. ಪರಿಶುದ್ಧತೆ ಪ್ರೇಮಕ್ಕೆ ಸಂಬಂಧಪಟ್ಟದ್ದು. ಆದ್ದರಿಂದ ಪ್ರೇಮವಿರುವಾಗ ಪರಿಶುದ್ಧತೆ ತಾನೇ ತಾನಾಗಿರುತ್ತದೆ.

ಲೈಂಗಿಕ ಕ್ರಿಯೆಯ ಬಗ್ಗೆ ಸದಾ ಯೋಚಿಸುತ್ತಿರುವುದು ಕಾಮುಕತೆ–ಯಾಗುತ್ತದೆ. ಅದು ಲೈಂಗಿಕ ಕ್ರಿಯೆಗಿಂತ ಸಂಪೂರ್ಣ ಭಿನ್ನವಾದದ್ದು. ಹೆಚ್ಚಿನ ಜನರು ಕಾಮುಕ ಭಾವೋದ್ವೇಗವನ್ನೇ ಪ್ರೇಮವೆಂದು ತಿಳಿದುಕೊಂಡಿ-ರುತ್ತಾರೆ. ಲೈಂಗಿಕ ಕ್ರಿಯೆಯ ಮೊದಲು ಹಾಗು ಅನಂತರ ಅದರ ಬಗ್ಗೆಯೇ ಜಪಾಪಿಸುತ್ತಿರುವುದು ಲಂಪಟತನವಾಗುತ್ತದೆ. ಈ ಲಂಪಟತನವೇ ವಿಚಾರ.

ವಿಚಾರ ಅಥವಾ ಆಲೋಚನೆ ನಿಲ್ಲಿಸುವುದು ಸುಲಭವಲ್ಲ; ಯೋಚಿಸು–ವವ ಇಲ್ಲದಾದಾಗಲೇ ಆಲೋಚನೆ ನಿಲ್ಲುವುದು- ಯೋಚಿಸುವವ ಮಾಯ–ವಾಗುವುದು ಆಲೋಚನೆಯ ಸಂಪೂರ್ಣ ಕಾರ್ಯವಿಧಾನವನ್ನು ಸರಿಯಾಗಿ ಅರಿತಾಗ ಮಾತ್ರ. ಯೋಚಿಸುವವ ಮತ್ತು ಯೋಚನೆ ಇವುಗಳ ಮಧ್ಯೆ ವಿಭಜನೆ ಉಂಟಾದಾಗ ಭಯ ಹುಟ್ಟುತ್ತದೆ. ಯೋಚಿಸುವವ ಇಲ್ಲದಿದ್ದಾಗ ವಿಚಾರ ಸಂಘರ್ಷವಿರುವುದಿಲ್ಲ; ಇದ್ದುದನ್ನು ಇದ್ದಂತೆ ಅರಿಯಲು ಪ್ರಯತ್ನ ಬೇಕಾಗುವುದಿಲ್ಲ. ಯೋಚನೆಯ ಮೂಲಕ ಯೋಚಕ ಬರುತ್ತಾನೆ. ಆಗ ಯೋಚಕ ಯೋಚನೆಗೆ ರೂಪ, ಆಕಾರ ನೀಡಲು, ಅವುಗಳನ್ನು ನಿಯಂತ್ರಿ–ಸಲು ಅಥವಾ ಅವುಗಳಿಗೆ ವಿದಾಯ ಹೇಳಲೂ ಉದ್ಯುಕ್ತನಾಗುತ್ತಾನೆ. ಈ ಯೋಚಕ ಅಥವಾ ಯೋಚಿಸುವವ ಮನಸ್ಸಿನ ಒಂದು ಭ್ರಮೆ, ಕಾಲ್ಪನಿಕ ವ್ಯಕ್ತಿ. ಯಾವಾಗ ವಿಚಾರ ಅಥವಾ ಯೋಚನೆ ವಸ್ತುಸ್ಥಿತಿಯಾಗಿಯೇ ಮನದಟ್ಟಾಗುತ್ತದೆಯೋ, ಆಗ ಆ ವಸ್ತುಸ್ಥಿತಿಯ ಬಗ್ಗೆ ಯೋಚನೆ ಮಾಡುವ ಆವಶ್ಯಕತೆಯೇ ಇರುವುದಿಲ್ಲ. ಯಾವಾಗ ಸರಳವಾದ, ಆಯ್ಕೆಯೇ ಇಲ್ಲದ ಎಚ್ಚರವಿರುತ್ತದೆಯೋ ಆಗ ವಸ್ತುಸ್ಥಿತಿಯಲ್ಲಿಯೇ ಅಂತರ್ಗತವಾದ ಸತ್ಯ ತನ್ನಷ್ಟಕ್ಕೇ ಬಿಚ್ಚಿಕೊಳ್ಳುತ್ತದೆ ! ವಿಚಾರವು ವಸ್ತುಸ್ಥಿತಿರೂಪದಲ್ಲಿ ನಿಲುಗಡೆ–ಯಾಗುತ್ತದೆ. ಆಗ ನಮ್ಮ ಹೃದಯ, ಮನಸ್ಸುಗಳನ್ನು ತಿನ್ನುತ್ತಿರುವ ಸಾಮಾಜಿಕ ವ್ಯವಸ್ಥೆಯ ಸಮಸ್ಯೆಗಳನ್ನು ಪರಿಹರಿಸಬಹುದು. ಆಗ ಲೈಂಗಿಕತೆ ಒಂದು ಸಮಸ್ಯೆ ಆಗಿರುವುದಿಲ್ಲ. ಅದಕ್ಕೆ ಉಚಿತವಾದ ಸ್ಥಾನ ಸಿಕ್ಕೇ ಸಿಗುತ್ತದೆ.

ಕಾಮ ಅಥವಾ ಲೈಂಗಿಕತೆ ಪವಿತ್ರವೂ ಅಲ್ಲ, ಅಪವಿತ್ರವೂ ಅಲ್ಲ. ಮನಸ್ಸನ್ನು ಅನುಕರಣೆ, ವಿಧೇಯತೆ, ಧಾರ್ಮಿಕ ಅನುಸರಣೆಗಳಿಂದ ಬಿಡುಗಡೆ

ಗೊಳಿಸುವಲ್ಲಿ ಲೈಂಗಿಕತೆಗೆ ಅದರದೇ ಆದ ಸ್ಥಾನ ಇದ್ದೇ ಇದೆ. ಆದರೆ ಮನಸ್ಸು ಅದಕ್ಕೆ ಅತಿ ಹೆಚ್ಚಿನ ಸ್ಥಾನ ನೀಡಿದಾಗ ಸಮಸ್ಯೆ ಆರಂಭ. ಮನಸ್ಸು ಲೈಂಗಿಕತೆಗೆ ಹಾಗೆ ಸ್ಥಾನ ನೀಡಲಿಕ್ಕೆ ಕಾರಣವೆಂದರೆ, ಅದು ಸಂತೋಷವಿಲ್ಲದೇ ಇರಲಾರದು; ಇದರಿಂದ ಲೈಂಗಿಕತೆ ಸಮಸ್ಯೆಯಾಗಿಯೇ ಉಳಿಯುತ್ತದೆ.

ಯಾವಾಗ ಮನಸ್ಸು ತನ್ನೆಲ್ಲ ಸ್ವರೂಪ, ಪ್ರಕ್ರಿಯೆಗಳನ್ನು ಅರಿತು ತಾನೇ ಅಂತ್ಯಗೊಳ್ಳುತ್ತದೆಯೋ, ಅಂದರೆ ಆಲೋಚನೆ ಮಂಗಲ ಹಾಡುತ್ತದೆಯೋ ಆಗ ' ಸೃಷ್ಟಿ ' ಆರಂಭವಾಗುತ್ತದೆ. ಈ ಸೃಷ್ಟಿಕಾರ್ಯವೇ ನಮಗೆ ಆನಂದ ನೀಡುವಂತಹದು. ತನ್ನ ' ಅಹಂ ' ಅನ್ನು ಸಂಪೂರ್ಣ ಮರೆಯುವ ಈ ಕ್ರಿಯೆಯಲ್ಲಿ ' ಅಹಂ 'ನ ಪ್ರತಿಕ್ರಿಯೆ ಇರುವುದಿಲ್ಲ. ಈ ಸೃಷ್ಟಿಕಾರ್ಯದಲ್ಲಿರುವುದೆಂದರೆ ಆತ್ಮಾನಂದದಲ್ಲಿರುವುದು. ಇದು ದಿನನಿತ್ಯದ ಸಮಸ್ಯೆಯಾದ ಲೈಂಗಿಕತೆಗೆ ಅಮೂರ್ತ ಉತ್ತರವಲ್ಲ.

* * *

೬. ಕಾಲ ಮತ್ತು ಕಾಲಾತೀತತೆ

ಸತ್ಯದ ಸೌಂದರ್ಯ, ಅರ್ಥಪೂರ್ಣತೆ ಹಾಗು ಸಂಪನ್ನತೆಗಳನ್ನು ಅರಿಯಲು, ಅದರ ಮತ್ತೊಂದು ಮಹತ್ವದ ಅಂಶವಾದ ಕಾಲಾತೀತತೆಯನ್ನು ಅರಿಯಲು ಕಾಲದ ಸಮಗ್ರ ಪ್ರಕ್ರಿಯೆ ತಿಳಿದುಕೊಳ್ಳುವುದು ಅವಶ್ಯ. ನಾವೆಲ್ಲರೂ ಒಂದಲ್ಲ ಒಂದು ರೂಪದಲ್ಲಿ ಅರಸುತ್ತಿರುವ ಆನಂದದ ಬದುಕು, ನಿಜವಾದ ಸಂತೋಷಪೂರ್ಣ ಸಂಪನ್ನತೆ ಕಾಲದ ಪರಿಮಿತಿಗೆ ಒಳಪಟ್ಟಿದ್ದಲ್ಲ; ಪ್ರೇಮದ ಹಾಗು ಕಾಲಾತೀತಕ್ಕೆ ಸೇರಿದಂತಹದು. ಆ ಕಾಲಾತೀತವಾದದ್ದನ್ನು ಅರಿಯಲು ಕಾಲದ ಮೂಲಕ ಪ್ರಯತ್ನಿಸದೇ, ಕಾಲವನ್ನೇ ಅರಿಯುವುದರ ಮೂಲಕ ಅರಿತುಕೊಳ್ಳಬೇಕಾಗಿದೆ. ಕಾಲಾತೀತವಾದದ್ದನ್ನು ಸಾಕ್ಷಾತ್ಕರಿಸಿಕೊಳ್ಳಲು, ಸಂಪಾದಿಸಲು, ಅರಿಯಲು ನಾವು ಕಾಲವನ್ನು ಸಾಧನವನ್ನಾಗಿ ಉಪಯೋಗಿಸಬಾರದು. ಆದರೆ ಬದುಕಿನಲ್ಲಿ ನಾವು ಹೆಚ್ಚು ಜನರು ಮಾಡುತ್ತಿರುವುದು ಮಾತ್ರ ಇದನ್ನೇ. ಕಾಲಾತೀತವಾದದ್ದನ್ನು ಅರಿಯುವುದರಲ್ಲಿ ಕಾಲ ವ್ಯಯಿಸುವುದು. ಕಾಲ ಎಂದರೇನು ಎನ್ನುವುದನ್ನು ಸಮಗ್ರವಾಗಿ ಅರಿಯಬೇಕಾಗಿದೆ. ಅದರ ಮೂಲಕ ಕಾಲದಿಂದ ಬಿಡುಗಡೆ ಪಡೆಯಬಹುದು.

ಕಾಲ ಅತ್ಯಂತ ವಿಚಿತ್ರವಾದ ಸಂಗತಿ. ಸ್ಥಳ ಮತ್ತು ಕಾಲ ಒಂದೇ; ಅವು ಒಂದನ್ನೊಂದು ಬಿಟ್ಟಿಲ್ಲ. ನಮ್ಮಲ್ಲಿ ಪ್ರತಿಯೊಬ್ಬರೂ ಕಾಲಕ್ಕೆ ನಮ್ಮದೇ ಆದ ಅರ್ಥ ಕೊಡುತ್ತೇವೆ. ಅನಾಗರಿಕರಿಗೆ ಕಾಲ ಏನೂ ಅರ್ಥವಿಲ್ಲದ್ದು; ಆದರೆ ನಾಗರಿಕರಿಗೆ ಅದು ಅತ್ಯಂತ ಅರ್ಥಪೂರ್ಣ ಸಂಗತಿ. ಅನಾಗರಿಕನು ದಿನಗಳನ್ನು ಮರೆತು ಬದುಕಬಲ್ಲ; ಆದರೆ ನಾಗರಿಕ ಹಾಗೆ ಮಾಡಿದರೆ ತನ್ನ ಧಂದೆ, ಉದ್ಯೋಗ ಕಳೆದುಕೊಳ್ಳಬೇಕಾಗುತ್ತದೆ. ವಿಜ್ಞಾನಿಗಳಿಗೆ ಕಾಲ ಒಂದು ವಸ್ತು; ಸಾಮಾನ್ಯನಿಗೆ ಅದು ಮತ್ತೊಂದು ಬಗೆಯ ವಸ್ತು; ಇತಿಹಾಸಜ್ಞನಿಗೆ ಕಾಲ ಎಂದರೆ ಗತಕಾಲದ ಅಭ್ಯಾಸ; ಸ್ಟಾಕ್ ಮಾರ್ಕೆಟಿನಲ್ಲಿ ವ್ಯವಹಾರ ಮಾಡುವವ-

ನಿಗೆ ಗಡಿಯಾರದ ಟಿಕ್-ಟಿಕ್ ಶಬ್ದವೇ ಕಾಲ: ತಾಯಿಗೆ ಕಾಲ: ಮಗನ ನೆನಪು. ದಣಿದ ವ್ಯಕ್ತಿಗೆ ಕಾಲ: ಮರದ ನೆರಳಿನ ವಿಶ್ರಾಂತಿ....ಹೀಗೆ ಪ್ರತಿಯೊಬ್ಬನೂ ತನ್ನ ಅಗತ್ಯ ಹಾಗು ಸಮಾಧಾನಗಳಿಗೆ ಅನುಗುಣವಾಗಿ, ತನ್ನ ಮನಸ್ಸಿನ ನೈಪುಣ್ಯಕ್ಕೆ, ಶಿಷ್ಟತೆಗೆ ಅನುಗುಣವಾಗಿ ಕಾಲಕ್ಕೆ ರೂಪ, ಆಕಾರ ಕಲ್ಪಿಸಿ ಕಾಲವನ್ನು ಭಾಷಾಂತರಿಸುತ್ತಾನೆ. ನಮಗೆ ಬದುಕಲಿಕ್ಕೆ ಋತುಗಳಷ್ಟೇ ಅನಿವಾರ್ಯ— ಬೆಳಿಗ್ಗೆ, ಮಧ್ಯಾಹ್ನ, ಸಂಜೆಗಳ ಹೊತ್ತಿನ ಸ್ವರೂಪದ ಕಾಲ, ಹುಟ್ಟುವ ಕಾಲ, ಸಾಯುವ ಕಾಲ, ಬಿತ್ತುವ ಕಾಲ, ಕೊಯ್ಯುವ ಕಾಲ, ಇತ್ಯಾದಿ. ಇದು 'ಬೆಳವಣಿಗೆ'ಯ ರೂಪದಲ್ಲಿ, ವ್ಯಕ್ತವಾಗುವ ಕಾಲ. 'ಇಂದು' ನಿನ್ನೆಯ ಪರಿಣಾಮ, ನಾಳೆಯ ಕಾರಣ, ಚಲನರೂಪದಲ್ಲಿ ವ್ಯಕ್ತವಾಗುವ, ನಿರಂತರ ಪ್ರವಾಹರೂಪೀ ಕಾಲ ಇದು. ಇದನ್ನೇ 'ಕಾರಣ-ಪರಿಣಾಮ' (Cause & effect) ರೂಪೀ ಕಾಲ ಎಂದೂ ಕರೆಯಬಹುದು. ಭೌತಿಕ ಪ್ರಪಂಚದ ಉದಾಹರಣೆ ಕೊಡಬೇಕೆಂದರೆ ಯಾವುದೇ ರೋಗ, ಅದರ ಕಾರಣ ಹಾಗು ಪರಿಣಾಮ. ಆದರೆ ಈ ಹೊತ್ತಿನ ರೂಪದ ಹೊರತಾಗಿ ಕಾಲವನ್ನು ಪರಿಭಾವಿಸಲು ಶಕ್ಯವುಂಟೆ? ಕಾಲವನ್ನು ಒಂದು ಅಮೂರ್ತ ಎಂದು ಭಾವಿಸುವುದು ಕೇವಲ ಒಂದು ಊಹೆ. ಆದರೆ ಎಲ್ಲ ಊಹೆಗಳೂ ನಿಷ್ಪ್ರಯೋಜಕವಲ್ಲವೆ— ಸತ್ಯ, ಆನಂದಗಳ ಹುಡುಕಾಟದಲ್ಲಿ ?

ಆದರೆ ಕಾಲ ಮಾನಸಿಕವಾಗಿಯೂ ಉಂಟಲ್ಲವೆ ? ಕಾರಣ ಹಾಗು ಪರಿಣಾಮಗಳ ಮಧ್ಯಂತರವನ್ನು ' ಕಾಲ ' ಎಂದು ಕರೆಯುವುದರ ಪ್ರಸ್ತಾಪ ಮೇಲೆಯೇ ಬಂದಿದೆ. ಅದು ಭೌತಿಕ ಪ್ರಪಂಚದ ಮಟ್ಟಿಗೆ ಹೌದಾದರೂ, ಮಾನಸಿಕ ಪ್ರಪಂಚದಲ್ಲೂ ಅದನ್ನೇ ಅನುಸರಿಸುವುದು ಎಷ್ಟರ ಮಟ್ಟಿಗೆ ಸರಿ ? ಮಾನಸಿಕವಾಗಿ ಕಾರಣ-ಪರಿಣಾಮಗಳ ಮಧ್ಯೆ ಅಂತರ ಉಂಟೆ ? ಕಾರಣ-ಪರಿಣಾಮ ಎರಡೂ ಒಂದೇ, ಅವುಗಳ ಮಧ್ಯೆ ಅಂತರವೇ ಇಲ್ಲ ಎನ್ನುತ್ತಾರೆ ಜೆ. ಕೆ. ನಿನ್ನೆಯ ಪರಿಣಾಮ ಇಂದು, ಇಂದಿನ ಪರಿಣಾಮ ನಾಳೆ ಎಂದು ಭಾವಿಸಿದರೂ, ಮೂಲತಃ ಅದು ಒಂದೇ ಚಲನೆ, ನಿರಂತಕ ಪ್ರವಾಹ ಅಲ್ಲವೆ ? ವಾಸ್ತವವಾಗಿ ಅವುಗಳಲ್ಲಿ ಭಿನ್ನತೆ ಇಲ್ಲ; ಆದರೆ ಆಂತರಿಕವಾಗಿ ಸಾಧಿಸುವುದಕ್ಕೆ, ಆಗುವುದಕ್ಕೆ ನಾವು ಹಾಗೆ ಬೇರ್ಪಡಿಸುತ್ತೇವೆ.

ಹೀಗೆ ಮಾನಸಿಕವಾದ ಕಾಲ ಮನಸ್ಸಿನ ಸೃಷ್ಟಿ. ವಿಚಾರದ ತಳಹದಿ ಇಲ್ಲದೇ ಕಾಲ–ನಿನ್ನೆಯ ಸ್ಮೃತಿರೂಪದ ಕಾಲ—ಇಂದಿನೊಂದಿಗೆ ಸೇರಿಕೊಂಡು ನಾಳೆಯದನ್ನು ರೂಪಿಸುವುದು ಶಕ್ಯವಿಲ್ಲ. ಇಂದಿನದಕ್ಕೆ ಪ್ರತಿಸ್ಪಂದನ ರೂಪದಲ್ಲಿರುವ ನಿನ್ನೆಯ ಅನುಭವದ ಸ್ಮೃತಿ ಭವಿಷ್ಯವನ್ನು ಸೃಷ್ಟಿಸುತ್ತಿರುವಲ್ಲಿ ವಿಚಾರದ ಪ್ರಕ್ರಿಯೆ ಇದೆ. ಅದು ಮನಸ್ಸಿನ ದಾರಿಯೇ. ಈ ವೈಚಾರಿಕ ಪ್ರತಿಕ್ರಿಯೆ ಕಾಲದಲ್ಲಿ ಮಾನಸಿಕ ಪ್ರಗತಿಯನ್ನು ತಂದರೂ, ಅದು ಹೊತ್ತಿನ ರೂಪದಲ್ಲಿರುವ ಕಾಲದಲ್ಲಿನ ಪ್ರಗತಿಯಂತಹದಲ್ಲ. ಕಾಲಾತೀತವಾದದ್ದನ್ನು ಕಾಲದ ಮೂಲಕ ಅರಿತುಕೊಳ್ಳಲು ಶಕ್ಯವೇ ? ಆನಂದ ನಿನ್ನೆಯದಲ್ಲ, ಕಾಲದ ಉತ್ಪತ್ತಿ ಅಲ್ಲ; ಅದು ಯಾವತ್ತೂ ಈ ಕ್ಷಣದ್ದು, ವರ್ತಮಾನದ್ದು, ಕಾಲಾ-ತೀತ ಸ್ಥಿತಿಯದು. ನೀವು ಸೃಷ್ಟ್ಯಾತ್ಮಕ ಆನಂದದಲ್ಲಿ ಆನಂದೋತ್ಕರ್ಷದಲ್ಲಿ, ಕಪ್ಪುಮೋಡಗಳಿಂದ ಸುತ್ತುವರಿಯಲ್ಪಟ್ಟ ಆ ರೋಮಾಂಚಕಾರಿ ಉಜ್ವಲ ಮೋಡಗಳ ಸರಮಾಲೆ, ಮಿಂಚಿನ ಗೊಂಚಲು ಕಾಣುತ್ತಿರುವ ಕ್ಷಣದಲ್ಲಿ ಕಾಲ ಇರುವುದಿಲ್ಲ; ಕೇವಲ ವರ್ತಮಾನವಿರುತ್ತದೆ. ಆ ವರ್ತಮಾನದ ಅನುಭವದ ಬಳಿಕ ಬಂದ ಮನಸ್ಸು ಅದನ್ನು ನೆನಪಿಸಿಕೊಂಡು, ಅದನ್ನೇ ಮುಂದುವರಿಸಲು ಬಯಸುತ್ತದೆ. ಹೆಚ್ಚು-ಹೆಚ್ಚನ್ನು ಸಂಗ್ರಹಿಸುತ್ತ ಕಾಲವನ್ನು ಸೃಷ್ಟಿಸುತ್ತದೆ. ಕಾಲ ಹೀಗೆ ' ಇನ್ನೂ ಹೆಚ್ಚು 'ವಿನಿಂದ ಸೃಷ್ಟಿಗೊಂಡಿದ್ದು, ಕಾಲ ಎಂದರೆ ಸಂಪಾದಿಸಿ ಪಡೆದುಕೊಳ್ಳುವುದು. ಹಾಗೆಯೇ ಕೆಲವೊಂದನ್ನು ಬಿಟ್ಟುಬಿಡು-ವುದು. ವೈರಾಗ್ಯದಲ್ಲಿ ತ್ಯಜಿಸುವುದೂ ಸಹ ಮನಸ್ಸಿನ ಮತ್ತೊಂದು ಬಗೆಯ ಸಂಪಾದಿಸಿಕೊಳ್ಳುವ ಕ್ರಮ. ಆದ್ದರಿಂದ ಕಾಲದಲ್ಲಿ ಮನಸ್ಸನ್ನು ಶಿಸ್ತಿಗೆ ಒಳಪಡಿಸುವುದು, ಕಾಲದ ಚೌಕಟ್ಟಿನಲ್ಲಿ ವಿಚಾರಕ್ಕೆ ನಿರ್ಬಂಧ ಹಾಕುವುದು, ಅಂದರೆ ನೆನಪು ಕಾಲಾತೀತವನ್ನು ಬಿಚ್ಚಿತೋರಿಸುವುದಿಲ್ಲ.

ಮಾನಸಿಕ ಪರಿವರ್ತನೆ ಕಾಲದ ಸಂಗತಿ ಖಂಡಿತ ಅಲ್ಲ. ಪರಿವರ್ತನೆಗೆ ಅಥವಾ ಬದಲಾವಣೆಗೆ ಕಾಲ ಬೇಕೇ ಬೇಕು ಎಂಬ ವಿಚಾರಕ್ಕೆ ನಾವೆಲ್ಲ ಅಂಟಿ-ಕೊಂಡಿದ್ದೇವೆ. ನಾನು ಈಗ ' ಹೀಗೆ ' ಇದ್ದೇನೆ; ಹೀಗಿದ್ದವನು ' ಹಾಗೆ ' ಆಗಲಿಕ್ಕೆ ಕಾಲ ಬೇಕೇಬೇಕು ಎಂಬುದು ನಮ್ಮಲ್ಲನೇಕರ ವಿಚಾರ. ನಾನು ಆಸೆಬುರುಕ; ಆಸೆಬುರುಕತನ ತರುವ ಗೊಂದಲ, ವೈರತ್ವ, ಸಂಘರ್ಷ, ನರ-

ಆಟ ಎಲ್ಲ ನನ್ನಲ್ಲಿದೆ. ಆಸೆಬುರುಕತನದಿಂದ ಮುಕ್ತನಾಗಲು ನನಗೆ ಕಾಲ ಅತ್ಯಂತ ಅವಶ್ಯ ಎಂಬುದು ನಮ್ಮ ವಿಚಾರ. ಹೀಗೆ ಕಾಲ ಇನ್ನೂ ಹೆಚ್ಚಿನ-ದನ್ನು ಸಾಧಿಸಲು, ಏನೋ ಆಗಲು ಒಂದು ಮಾಧ್ಯಮ ಎಂಬ ಅಭಿಪ್ರಾಯ. ಆದರೆ ಇಲ್ಲಿ ಸಮಸ್ಯೆ ಇದು : ಒಬ್ಬಾತ ಕ್ರೂರಿ, ದ್ವೇಷಿ, ಕೋಪಿಷ್ಠ, ದುಷ್ಟ, ಭಾವೋದ್ವೇಗಿ ಇದ್ದಾನೆ. ಈ 'ಇದ್ದುದನ್ನು' ಪರಿವರ್ತಿಸಲು ಕಾಲ ಅಗತ್ಯವೆ ? ಪ್ರಥಮತಃ ಇದ್ದುದನ್ನು ಬದಲಾಯಿಸಲು, ಪರಿವರ್ತಿಸಲು ನಾವೇಕೆ ಬಯಸುತ್ತೇವೆ ? ನಾವು ಇದ್ದುದರಿಂದ ಅತೃಪ್ತರಾಗಿರುವುದಕ್ಕಲ್ಲವೆ ? ಈ ಅತೃಪ್ತಿ, ಸಂಘರ್ಷ, ಗೊಂದಲ-ಸೃಷ್ಟಿಸಿ, ಆ ಸ್ಥಿತಿಯನ್ನು ನಾವು ಮೆಚ್ಚದಂತೆ ಮಾಡಿ, ಇನ್ನೂ ಉತ್ತಮವಾದ ಹೆಚ್ಚು ಆದರ್ಶವಾದದ್ದನ್ನು ಬಯಸುವಂತೆ ಮಾಡುತ್ತದೆ ಎಂಬ ಕಾರಣಕ್ಕಾಗಿ ಅಲ್ಲವೆ ? ಇಲ್ಲಿ ನೋವು, ಅಸುಖ, ಸಂಘರ್ಷ ಇರುವುದರಿಂದ ನಾವು ಬದಲಾವಣೆ ಬಯಸುತ್ತೇವೆ. ಆದರೆ ಈ ಸಂಘರ್ಷ-ವನ್ನು ಕಾಲದಿಂದ ಗೆಲ್ಲಬಲ್ಲೆವೆ ? 'ಹೌದು' ಎಂದರೆ ಇನ್ನೂ ಕಾಲದ ಮಿತಿ-ಯಲ್ಲಿದ್ದಂತೆ. ಇನ್ನು ಇಪ್ಪತ್ತು ದಿನ ಅಥವಾ ಇಪ್ಪತ್ತು ವರ್ಷಗಳಲ್ಲಿ ಈ ಸಂಘರ್ಷದಿಂದ ಪಾರಾಗುತ್ತೇನೆ; ನಾನು 'ಹೀಗಿದ್ದವನು' 'ಹಾಗೆ' ಆಗು-ತ್ತೇನೆ ಎಂದರೂ ಆ ಅವಧಿಯಲ್ಲಿ ನೀವಿನ್ನೂ ಸಂಘರ್ಷದಲ್ಲೇ ಇರುವುದರಿಂದ, ಕಾಲ ಬದಲಾವಣೆ ತರುವುದಿಲ್ಲ, ಕಾಲವನ್ನು ಒಂದು ಗುಣ ಅಥವಾ ಸ್ಥಿತಿಯನ್ನು ಗಳಿಸುವ ಸಾಧನವಾಗಿ ಬಳಸುವಾಗ ನಾವು ಇದ್ದುದನ್ನು, ಸತ್ಯವನ್ನು ಕೇವಲ ನಿರಾಕರಿಸುತ್ತೇವೆ; ಮುಂದೆ ಹಾಕುತ್ತಿರುತ್ತೇವೆ. ಸಂಘರ್ಷದಲ್ಲೇ, ಅಂದರೆ ಕಾಲದ ಚೌಕಟ್ಟಿನಲ್ಲೇ ಇದ್ದು, ಸಂಘರ್ಷವಿಲ್ಲದ, ಕಾಲಾತೀತವಾದದ್ದನ್ನು ಸಾಧಿಸಲು ಪ್ರಯತ್ನ ನಡೆಯುತ್ತಿರುತ್ತದೆ. ಆದರೆ ಈ ಸಂಘರ್ಷವಿಹೀನ ಸ್ಥಿತಿ ಕಾಲದ ಉತ್ಪತ್ತಿ ಅಲ್ಲವಾದ್ದರಿಂದ, ಸಂಘರ್ಷವನ್ನು ಮೀರಲು ಸಂಘರ್ಷ-ದಲ್ಲೇ ಇದ್ದು, ಸಂಘರ್ಷ ನಡೆಸುತ್ತಿರುವ ಪ್ರಯತ್ನಸ್ಥಿತಿಯಾಗಿರುತ್ತದೆ. ಉದಾಹರಣೆಗೆ ಈ ಅವಧಿಯಲ್ಲಿ ಅಹಿಂಸೆಯನ್ನು ಸಾಧಿಸುತ್ತೇನೆ ಎಂದು ಹೊರಟವನ ಸಾಧನೆಯಲ್ಲೇ ಸಂಘರ್ಷವಿದೆ. ಸಂಘರ್ಷವನ್ನು ಪ್ರತಿರೋಧಿಸದೇ ಹೋದರೆ ಅಹಿಂಸಾ-ಸಾಧನೆ ಆಗುವುದಿಲ್ಲ. ಸಂಘರ್ಷವನ್ನು ಗೆಲ್ಲಲು ಪ್ರತಿ-ರೋಧ ಅಗತ್ಯ. ಪ್ರತಿರೋಧಕ್ಕೆ ಕಾಲ ಬೇಕೇ ಬೇಕು. ಆದರೆ ಈ ಸಂಘರ್ಷ-ವನ್ನು ಪ್ರತಿರೋಧಿಸುವುದೇ ಮತ್ತೊಂದು ಬಗೆಯ ಸಂಘರ್ಷ. ಹಿಂಸೆ, ದುರಾಸೆ,

ದ್ವೇಷಗಳ ರೂಪದಲ್ಲಿ ಸಂಘರ್ಷವನ್ನು ಪ್ರತಿರೋಧಿಸುವಾಗ ನಮ್ಮ ಶಕ್ತಿ-ಸಾಮರ್ಥ್ಯ ವ್ಯಯವಾಗುತ್ತಿರುತ್ತದೆ. ಈ ಸ್ಥಿತಿಯಲ್ಲಿ ಮನಸ್ಸು ಸಂಘರ್ಷ-ದಲ್ಲಿರುತ್ತದೆ. ಹೀಗೆ ಹಿಂಸೆ, ದ್ವೇಷ, ಇತ್ಯಾದಿ ಯಾವುದನ್ನೇ ಆದರೂ ಕಾಲದ ಮೂಲಕ ಗೆಲ್ಲುತ್ತೇನೆ, ಸ್ವತಂತ್ರನಾಗುತ್ತೇನೆ ಎನ್ನುವುದರ ಕಾರ್ಯಸಿದ್ಧಾಂತದ ಸಾಧನಾ ಪ್ರಕ್ರಿಯೆಯ ಮಿಥ್ಯೆಯನ್ನು ಅರಿತುಕೊಳ್ಳುವುದು ಅತ್ಯಂತ ಮಹತ್ವದ್ದು.

ವಿಚಾರವು ಕಾಲದ ಉತ್ಪತ್ತಿ ಅಥವಾ ಫಲ. ಗೊತ್ತಿರುವುದು, ಗೊತ್ತಿದ್ದುದು—ಕಾಲದ ಮುಂದುವರಿಕೆ; ಕಾಲ ಅಂದರೆ ಮುಂದುವರಿಕೆಯಷ್ಟೇ ಕಾಲದ ಮುಂದುವರಿಕೆ ಎಂದರೇನು ? ಅದು ಹೇಗಾಗುತ್ತದೆ ? ಕರಿಮಣಿ ಸರದಲ್ಲಿ ಕರಿಮಣಿಯನ್ನು ಒಂದು ದಾರದಲ್ಲಿ ಪೋಣಿಸಿದ ಹಾಗೆ. ಕ್ಷಣ ಕ್ಷಣವನ್ನೂ ಪೋಣಿಸುವುದು, ಕೂಡಿಸುವುದು ಯಾವುದು ? ಈ 'ಕ್ಷಣ' ಹೊಚ್ಚ ಹೊಸದಾಗಿರುತ್ತದೆ; ಆದರೆ ಈ ಹೊಸದನ್ನು ಹಳೆಯದು ಹೀರಿಕೊಂಡು, ಮುಂದುವರಿಕೆಯ ಸರಪಳಿ ಸೃಷ್ಟಿಯಾಗುತ್ತದೆ. ಹೊಚ್ಚ ಹೊಸದು ನಿಜವಾ-ಗಿಯೂ ಇರುತ್ತದೆಯೆ ಅಥವಾ ಹಳೆಯದರಿಂದ ಹೊಸದರ ಗುರುತಿಸುವಿಕೆ ಮಾತ್ರ ಇರುತ್ತದೆಯೋ ? ಹಳೆಯದು ಹೊಸದನ್ನು ಗುರುತಿಸಿದರೆ ಅದು ಹೊಸದೆ ? ಹಳೆಯದು ತಾನೇ ಕಲ್ಪಿಸಿಕೊಂಡಿದ್ದನ್ನು, ಸೃಷ್ಟಿಸಿದ್ದನ್ನು ಮಾತ್ರ ಗುರುತಿಸ-ಬಲ್ಲದು; ಅದನ್ನೇ ಹೊಸದು ಎಂದು ಹೇಳಿದರೂ ಅದು ಹೊಸದಾಗಿರುವುದಿಲ್ಲ; ಏಕೆಂದರೆ ಹೊಸದನ್ನು ಗುರುತಿಸಲಿಕ್ಕೆ ಆಗುವುದಿಲ್ಲ; ಗುರುತಿಸಲಾಗದಂತಹ ಇತರ ವಸ್ತುಗಳೊಂದಿಗೆ ಜೋಡಿಸಲಾರದಂತಹದು ಹೊಸದರ ಸ್ಥಿತಿ. ಹೊಸ-ದನ್ನು ಹಳೆಯದರೊಂದಿಗೆ ಭಾಷಾಂತರಿಸಬಹುದಾದರೂ ಹೊಸದು ಹಳೆಯದ ರೊಂದಿಗೆ ಇರಲಾರದು. ಹೊಸದನ್ನು ಅನುಭವಿಸುವುದೆಂದರೆ ಹಳೆಯದು ಇಲ್ಲದಾಗುವಿಕೆ- ಅನುಭವ ಮತ್ತು ಅದರ ಅಭಿವ್ಯಕ್ತಿ ಎಂದರೆ ವಿಚಾರ, ಆಲೋಚನೆ. ವಿಚಾರ ಹೊಸದನ್ನು ಹಳೆಯದರ ಭಾಷೆಯಲ್ಲಿ ಅನುವಾದಿಸು-ತ್ತದೆ. ಹಳೆಯದೇ ಮುಂದುವರಿಸುವ ಕಾರ್ಯ ಮಾಡುವಂತಹದು. ಹಳೆಯದು ಎಂದರೆ ನೆನಪು, ಶಬ್ದ, ಕಾಲ.

ಈ ನೆನಪು— ಕಾಲದಿಂದ ಮುಕ್ತನಾಗುವದು ಹೇಗೆ ಎಂದು ಬಯಸುವುದು— ಯೋಚಿಸುವುದೂ ನೆನಪೇ. ಇದೇ ಕಾಲ, ಮನಸ್ಸು ಆಸೆ ಎಂದರೆ ವಿಚಾರ. ನೆನಪಿನ ಸರಣಿಯನ್ನು ಸೃಷ್ಟಿಸುವುದು ಆಸೆ. ಆಸೆ ಎಂದರೆ ಪ್ರಯತ್ನ— ಇಚ್ಛಾಶಕ್ತಿಯ ಕಾರ್ಯ. ಸಂಗ್ರಹಣೆ ಆಸೆಯ ಕಾರ್ಯವಿಧಾನ. ಸಂಗ್ರಹಿಸುವುದು ಎಂದರೆ ಮುಂದುವರಿಕೆ, ಅನುಭವ, ಜ್ಞಾನ, ಅಧಿಕಾರ. ವಿವಿಧ ವಸ್ತುಗಳನ್ನೆಲ್ಲ ಸಂಗ್ರಹಿಸುವುದು ಎಂದರೆ ಮುಂದುವರಿಕೆ. ಇವುಗಳನ್ನೆಲ್ಲ ತಿರಸ್ಕರಿಸುವುದು ಎಂದರೆ ನೇತ್ಯಾತ್ಮಕವಾಗಿ ಮುಂದುವರಿಯುವುದು, ಇತ್ಯಾತ್ಮಕ ಹಾಗು ನೇತ್ಯಾತ್ಮಕ ಮುಂದುವರಿಕೆಗಳು ಎರಡೂ ಒಂದೇ. ಆಸೆಯೇ ಇವೆರಡರ ಮೂಲ ಕೇಂದ್ರ. ಈ ಕೇಂದ್ರವೇ ' ನಾನು '. ' ನಾನು ' ಪ್ರತಿಯೊಬ್ಬನ ಮಾನಸಿಕ ನಿರ್ಬಂಧಗಳ ಮೇಲೆ ವಿವಿಧಸ್ತರಗಳಲ್ಲಿ ಇಡಲ್ಪಡುತ್ತದೆ. ಈ ಕೇಂದ್ರದ ಯಾವುದೇ ಚಟುವಟಿಕೆ ಈ ಕೇಂದ್ರದ ಮುಂದುವರಿಕೆಯನ್ನಷ್ಟೇ ತರುತ್ತದೆ. ಮನಸ್ಸಿನ ಯಾವುದೇ ಚಟುವಟಿಕೆ ಕಾಲಬಂಧಿತವಾದದ್ದು. ಸೃಜನಶೀಲತೆಯನ್ನು ಅದು ಪ್ರತಿಬಂಧಿಸುತ್ತದೆ. ಕಾಲಾತೀತವಾದದ್ದು ಸ್ಮೃತಿಯ ಕಾಲಬಂಧಿತ ಲಕ್ಷಣಗಳಿಂದ ದೂರಾಗಿರುತ್ತದೆ. ಅನುಭವ, ಜ್ಞಾನ ಅಥವಾ ನೆನಪಿನಿಂದ ಅಪಾರವಾದದ್ದನ್ನು ಅಳೆಯಲು ಶಕ್ಯವಿಲ್ಲ; ಅನುಭವ, ಜ್ಞಾನ, ಸಂಪೂರ್ಣ ನಿಂತಾಗಲೇ ಕಾಲಾತೀತವಾದದ್ದು ಅರಿವಿಗೆ ಬರಲು ಶಕ್ಯ.

ಕಾಲಾತೀತವಾದದ್ದೆಂದರೆ ಶಾಶ್ವತವಾದದ್ದಲ್ಲ, ಈ ಶಾಶ್ವತವಾದದ್ದು, ಚಿರಂತನವಾದದ್ದು ಎನ್ನುವುದೇನೂ ಇಲ್ಲ. ನಮ್ಮೊಳಗಿನ ಹಾಗು ನಮ್ಮ ಹೊರಗಿನ ಪ್ರತಿಯೊಂದೂ–ನಮ್ಮ ಸಂಬಂಧಗಳು, ವಿಚಾರಗಳು, ಭಾವನೆಗಳು–ಅಶಾಶ್ವತವಾದದ್ದು, ಸದಾ ಬದಲಾವಣೆ ಹೊಂದುತ್ತಲೇ ಇರುತ್ತವೆ. ಇದನ್ನರಿತ ಮನಸ್ಸು ಶಾಂತಿ, ಪ್ರೇಮ, ಮಂಗಲ, ಇತ್ಯಾದಿ ರೂಪಗಳಲ್ಲಿ ಕಾಲವಾಗಲಿ ಅಥವಾ ಯಾವುದೇ ಘಟನೆಯಾಗಲಿ ವಿನಾಶ ಮಾಡದಂಥ ಸಂರಕ್ಷಣೆಯನ್ನು, ಶಾಶ್ವತವನ್ನು ಉತ್ಕಟವಾಗಿ ಇಚ್ಛಿಸುತ್ತಿರುತ್ತದೆ. ಆದ್ದರಿಂದಲೇ ಅದು ಆತ್ಮವನ್ನು ಶಾಶ್ವತ ಸ್ವರ್ಗದ ಭ್ರಮೆ-ಕಲ್ಪನೆಗಳನ್ನು ಸೃಷ್ಟಿಸುತ್ತದೆ. ಆದರೆ ಈ ಶಾಶ್ವತತ್ವ ಅಶಾಶ್ವತತೆಯಲ್ಲಿ ಹುಟ್ಟಿದ್ದು. ಆದ್ದರಿಂದ ಈ ಶಾಶ್ವತತೆಯಲ್ಲೇ ಅಶಾಶ್ವತತೆಯ ಬೀಜಗಳಿವೆ. ಅಶಾಶ್ವತತೆ ಒಂದೇ

ವಾಸ್ತವ ಸತ್ಯ. ದೇಹದ ಅಣು-ಅಣುವೂ ಸದಾ ಬದಲಾಗುತ್ತಲೇ ಇರುತ್ತದೆ ಎಂಬುದನ್ನು ಬಲ್ಲ ನಾವು, ಈ ನಿರಂತರ ಬದಲಾವಣೆಯಿಂದ ಮುಕ್ತವಾದ ಒಂದು ಸ್ಥಿತಿ ಇದೆ, ಎಂದೆಲ್ಲ ಯೋಚಿಸುತ್ತೇವೆ. ಆದರೆ ಇವೆಲ್ಲ ಊಹಾ-ಪೋಹವೇ ಹೊರತು ವಾಸ್ತವ ಸತ್ಯವಲ್ಲ. ವಿಚಾರಕ್ಕೆ ತನ್ನ ಅಶಾಶ್ವತತೆಯು ಅರಿವಿದೆ. ಮನಸ್ಸಿನ ಸಂಗತಿಗಳು ಎಷ್ಟೇ ಶಾಶ್ವತವೆಂದು ಒತ್ತಿ-ಒತ್ತಿ ಹೇಳಿದರೂ ಅವು ಅಶಾಶ್ವತ ಸ್ವರೂಪದವಷ್ಟೇ. ಈ ಮನಸ್ಸು ಕಾಲದ ಫಲ. ಕಾಲದ ಮೂಲಕ ಒಂದು ರೂಪ ಪಡೆದಿದೆ ಅದು. ಕಾಲದ ಮೂಲಕವೇ ಅದು ತೆಗೆದುಕೊಳ್ಳಲೂಬಹುದು. ಶಾಶ್ವತತೆ 'ಇದೆ' ಅಥವಾ 'ಇಲ್ಲ' ಎಂದು ಎರಡೂ ಬಗೆಯಲ್ಲಿ ಮನಸ್ಸು ವಿಚಾರಿಸುವಂತೆ ಮನಸ್ಸನ್ನು ನಿರ್ಬಂಧಪಡಿಸಬಹುದು. ಈ ನಿರ್ಬಂಧವೇ ಅಶಾಶ್ವತವಾದದ್ದೆಂದು ದೈನಂದಿನ ಅವಲೋಕನ ಸಾರುತ್ತದೆ. ಆದರೆ ವಾಸ್ತವ ಸತ್ಯ ಎಂದರೆ ಅಶಾಶ್ವತತೆ. ಆದರೆ ಮನಸ್ಸು ತನ್ನೆಲ್ಲ ಸಂಬಂಧಗಳಲ್ಲೂ ಶಾಶ್ವತತೆಯನ್ನು ಬೆಳೆಸಲು ಯತ್ನಿಸುತ್ತದೆ— ಮೊಮ್ಮಕ್ಕಳಿಗೆ ಅಜ್ಜನ ಹೆಸರಿಡುವುದು— ಇತ್ಯಾದಿ ರೂಪಗಳಲ್ಲಿ. ತನ್ನ ಅನಿಶ್ಚಿತತೆಯನ್ನು ತಾನೇ ಭರಿಸಿಕೊಳ್ಳಲಾರದ ಮನಸ್ಸು ನಿಶ್ಚಲವಾದದ್ದನ್ನು ಸೃಷ್ಟಿಸಲು ಹಾತೊ-ರೆಯುತ್ತದೆ. ತನ್ನ ಅಶಾಶ್ವತ ಸ್ಥಿತಿಯಲ್ಲಿ ಯಾವುದರದೋ ಒಂದರ ತಾತ್ಕಾಲಿಕ ಅನುಭವವಾಗಿ ಅದನ್ನೇ 'ಶಾಶ್ವತ'ವೆಂದು ಕರೆಯುತ್ತದೆ. ಒಂದು ಸಾರಿ ಅದನ್ನು ಅನುಭವಿಸಿದ್ದರಿಂದ ಅದನ್ನು ನೆನಪಿಸಿಕೊಂಡು ಪುನಃ ಅದನ್ನೇ ಇಚ್ಛಿಸುತ್ತದೆ. ಹೀಗೆ ತನಗೆ ಗೊತ್ತಿರುವುದರ, ಹಾಗು ನೆನಪಿನ ಮೂಲಕ ಆ ಶಾಶ್ವತತೆ ಎನ್ನುವಂತಹದನ್ನು ಪರಿಕಲ್ಪಿಸುತ್ತದೆ. ಆದರೆ ಆ ಪರಿಕಲ್ಪನೆ ಮನ-ಸ್ಸಿನ ನಿರಂತರ ಬದಲಾವಣೆಯು ಪ್ರಪಂಚಕ್ಕೇ ಸೇರಿರುತ್ತದೆ. ನೆನಪಿನ ಮೂಲಕ ಮನಸ್ಸಿನ ಅಂಗವಾದ ಆ ಅನುಭವ ಪುನರುಜ್ಜೀವನಗೊಳ್ಳಬೇಕೆನ್ನುತ್ತದೆ. ಆದರೆ ಈ ಪುನರುಜ್ಜೀವನವು ಅಶಾಶ್ವತವಾದದ್ದಷ್ಟೇ.

ನೆನಪುಗಳಿಗೆ, ಅನುಭವಗಳಿಗೆ ಇತ್ಯಾದಿ ಮನಸ್ಸಿನ ಎಲ್ಲ ಗೊತ್ತಿರುವ ರೂಪಗಳಿಗೆ ಮನಸ್ಸು ಮೃತವಾಗಬೇಕು ಶಾಶ್ವತವಾದದ್ದನ್ನು ಹುಡುಕಾ-ಡದೇ ಅಶಾಶ್ವತವಾದದ್ದಕ್ಕೆ ಮೃತವಾಗಬೇಕು. ಗೊತ್ತಿರುವಂಥದಕ್ಕೆ ಮೃತ-ವಾಗುವುದು ಎಂದರೆ ನಿನ್ನೆಯದೆಲ್ಲವನ್ನು ಮುಂದುವರಿಸದೇ ಇರುವುದು. ಮಾನಸಿಕವಾಗಿ ಮುಂದುವರಿಸುವಂತಹದೆಲ್ಲವೂ ನೆನಪು. ಯಾವುದಕ್ಕೆ

ಮುಂದುವರಿಕೆ ಇಲ್ಲವೋ ಅದು ಶಾಶ್ವತವಾದದ್ದೂ ಅಲ್ಲ, ಅಶಾಶ್ವತವಾದದ್ದೂ ಅಲ್ಲ. ಶಾಶ್ವತತೆ ಅಥವಾ ಮುಂದುವರಿಕೆ ತಾತ್ಪೂರ್ತಿಕತೆಯ ಭಯವಿರುವಾಗ ಮಾತ್ರ ಬರುವಂತಹದು. ಮುಂದುವರಿಕೆ-ರೂಪದ ಪ್ರಜ್ಞೆಯನ್ನು ಅಂತ್ಯಗೊಳಿಸುವುದು ಶಕ್ಯವೆ? ಏನೋ ಆಗುವ ಪ್ರಕ್ರಿಯೆಯನ್ನೇ ನಿಲ್ಲಿಸಬಹುದಲ್ಲವೆ? ಈಗಾಗಲೇ ಏನೋ ಇರುವುದು ಹಾಗು ಏನೋ ಆಗಬೇಕು ಎನ್ನುವುದರ ನೆನಪು ಇರುವಾಗ ವರ್ತಮಾನವನ್ನು ಆ ಸಾಧನೆಗೆ ಬಳಸಿಕೊಳ್ಳುವುದಿರುತ್ತದೆ. ಗೊತ್ತಿರುವುದಕ್ಕೆ ಮೃತನಾಗುವುದು ಎಂದರೆ ಮನಸ್ಸು ಸಂಪೂರ್ಣ ಸ್ತಬ್ಧವಾಗುವುದು. ಆಸೆಯ ಒತ್ತಡಕ್ಕೆ ಸಿಕ್ಕಿದ ವಿಚಾರ ಎಂದೆಂದೂ ಸ್ತಬ್ಧವಾಗದು.

ಯಾವುದೇ ಸಮಸ್ಯೆ, ಸಂಗತಿಗಳನ್ನು ಅರಿತುಕೊಳ್ಳಲು ಮುಖ್ಯವಾಗಿ ಬೇಕಾದದ್ದು ಪ್ರಶಾಂತ ಮನಸ್ಸು, ಅರಿಯಲು ಉತ್ಸುಕವಾದ ಮನಸ್ಸು. ಆದರೆ ಒಂದರಲ್ಲಿ ಏಕಾಗ್ರತೆ ನೆಡಲು ಬಯಸಿ, ಉಳಿದೆಲ್ಲವನ್ನೂ ಉಪೇಕ್ಷಿಸುವಂಥ ಮನಸ್ಸಲ್ಲ. ಯಾಕೆಂದರೆ ಈ ಏಕಾಗ್ರತೆಯನ್ನು ಸಾಧಿಸುವಲ್ಲಿ ಸಂಘರ್ಷ ಸುರುವಾಗುತ್ತದೆ. ನಾವು ಪ್ರೀತಿಸುವ ಚಿತ್ರವನ್ನು ನೋಡುವಾಗ, ಸಂಗೀತವನ್ನು ಕೇಳುವಾಗ ನಮ್ಮ ಮನಸ್ಸು ತಕ್ಷಣ ಪ್ರಶಾಂತ ಸ್ಥಿತಿಗೆ ಬಂದುಬಿಡುತ್ತದೆ. ಸಂಗೀತ ಆಸ್ವಾದಿಸುವಾಗ ಮನಸ್ಸು ಎಲ್ಲೆಲ್ಲೋ ಹರಿದಾಡುತ್ತಿರದೇ ಸುಮ್ಮನೆ ಕೇಳುತ್ತಿರುತ್ತದೆ. ಅದೇ ತರಹ ಅಂತರಂಗದ ಸಂಘರ್ಷವನ್ನು ಅರಿಯುವಾಗ, ಕಾಲದ ಮೇಲೆ ಅವಲಂಬಿಸಿರದೆ, ನೇರವಾಗಿ ಇದ್ದುದರೊಡನೆ, ಸಂಘರ್ಷರೂಪದಲ್ಲಿರುವ ವಾಸ್ತವ ಸತ್ಯದೊಡನೆ ಮುಖಾಮುಖಿಯಾಗುತ್ತೇವೆ. ಆ ಕೂಡಲೆ ಮನಸ್ಸಿಗೆ ಒಂದು ಬಗೆಯ ಪ್ರಶಾಂತತೆ, ಸ್ತಬ್ಧತೆ ಬರುತ್ತದೆ. ಇದ್ದುದನ್ನು ಪರಿವರ್ತಿಸಲು ಕಾಲವನ್ನು ಸಾಧನವಾಗಿ ಉಪಯೋಗಿಸುವ, ಕಾಲವನ್ನು ಅವಲಂಬಿಸುವ ಇಡೀ ವಿಚಾರ, ಪ್ರಕ್ರಿಯೆಯೇ ಹುಸಿ ಎಂದು ತಿಳಿದಿರುವುದರಿಂದ, ಕಾಲದ ಮೇಲೆ ಅವಲಂಬಿಸಿರದೆ, ಇದ್ದುದನ್ನು ಅರಿಯುವುದೇ ಪ್ರಧಾನ ಆಸಕ್ತಿಯಾಗಿರುವುದರಿಂದ, ಇದ್ದುದನ್ನು ಗಮನಿಸುತ್ತ ಇರುವ ಮನಸ್ಸು ಶಾಂತವಿರುತ್ತದೆ. ಆ ಚುರುಕು, ಆದರೆ ನಿಷ್ಕ್ರಿಯ ಮನಸ್ಸಿನ ಸ್ಥಿತಿಯಲ್ಲಿ ಅರಿವು ಇರುತ್ತದೆ. ಎಲ್ಲಿಯ ವರೆಗೆ ಮನಸ್ಸು ಸಂಘರ್ಷದಲ್ಲಿ, ಬೈಯುತ್ತ-ವಿರೋಧಿಸುತ್ತ ಅಥವಾ ಹೊಗಳುತ್ತ, ಮೆಚ್ಚುತ್ತ ಇರುತ್ತದೆಯೋ ಅಲ್ಲಿಯ

ವರೆಗೆ ಅರಿಯುವುದು ಇರುವುದಿಲ್ಲ. ಈ ಪ್ರಶಾಂತ ಮನಸ್ಸು, ಈ ಸ್ತಬ್ಧ ಮನಸ್ಸು ಪರಿವರ್ತನೆಯನ್ನು ತರುವಂತಹದು. ಯಾವಾಗ ಮನಸ್ಸು ಇದ್ದುದನ್ನು ಪ್ರತಿರೋಧಿಸದೆ, ನಿರಾಕರಿಸದೆ, ಉಪೇಕ್ಷಿಸದೇ, ಬೈಯದೇ, ಸರಳವಾಗಿ, ನಿಷ್ಕ್ರಿಯವಾಗಿ ಅರಿವಿನೆಚ್ಚರದಲ್ಲಿರುತ್ತದೆಯೋ, ಆ ನಿಷ್ಕ್ರಿಯ ಸ್ಥಿತಿಯ ಮನಸ್ಸಿನಲ್ಲಿ, ನಿಜವಾಗಿಯೂ ಸಮಸ್ಯೆಯನ್ನು ಆಮೂಲಾಗ್ರ ಗಮನಿಸುತ್ತ ಹೋದರೆ ಪರಿವರ್ತನೆ ಸಹಜವಾಗಿಯೇ ಬರುತ್ತದೆ.

ಕ್ರಾಂತಿ ಈಗ, ಈ ಕ್ಷಣದಲ್ಲಿ ಮಾತ್ರ ಸಾಧ್ಯ; ಭವಿಷ್ಯದಲ್ಲಲ್ಲ. ಪುನರುಜ್ಜೀವನ ಇಂದೇ ಸಾಧ್ಯ, ನಾಳೆಯಲ್ಲ— ಎನ್ನುವ ಜೆ. ಕೆ. ಹೇಳುತ್ತಾರೆ : 'ನಾನು' ಹೇಳಿದ್ದನ್ನು ನೀವು ಈಗಲೇ ಪ್ರಯೋಗಮಾಡಿ ನೋಡಿದರೆ ನಿಮಗೇ ಅನುಭವಕ್ಕೆ ಬರುತ್ತದೆ— ಈ ತತ್‌ಕ್ಷಣದ ಪುನರುಜ್ಜೀವನ, ಹೊಸತನ, ಹೊಚ್ಚ ಹೊಸದರ ಗುಣ. ಯಾಕೆಂದರೆ ಮನಸ್ಸು ಏನನ್ನಾದರೂ ಅರಿಯುವುದನ್ನು ಅಪೇಕ್ಷಿಸಿದಾಗ ಅದು ಯಾವತ್ತೂ ಶಾಂತವಾಗಿರುತ್ತದೆ. ಆದರೆ ನಮ್ಮ ಕಷ್ಟ ಎಂದರೆ ನಮಗೆ ಅರಿಯುವುದರ ಬಗ್ಗೆ ಆಸಕ್ತಿಯೇ ಇಲ್ಲ. ಯಾಕೆಂದರೆ ಅಕಸ್ಮಾತ್ ಅರಿತುಬಿಟ್ಟರೆ, ಆ ಅರಿವು ನಮ್ಮ ಬದುಕಿನಲ್ಲಿ ಮೂಲಭೂತವಾದ ಕ್ರಾಂತಿಕಾರಿ ಕ್ರಿಯೆಯನ್ನು ತಂದುಬಿಡುತ್ತದೆ ಎಂಬ ಹೆದರಿಕೆ ನಮಗೆ. ಆದ್ದರಿಂದ ನಾವು ಪ್ರತಿರೋಧಿಸುತ್ತೇವೆ. ಕಾಲವನ್ನು, ಆದರ್ಶವನ್ನು ನಿಧಾನ ಪರಿವರ್ತನೆಯ ಸಾಧನವನ್ನಾಗಿ ಬಳಸಿಕೊಳ್ಳುವುದು ಈ ಪ್ರತಿರೋಧದ, ನಮ್ಮ ಒಳಗಿನ ಆಸೆಯ ರಕ್ಷಾಕವಚ, ಅಷ್ಟೇ.

* * *

೭. ವ್ಯಕ್ತಿ ಮತ್ತು ಸಮಾಜ

ವ್ಯಕ್ತಿ ಸಮಾಜದ ಸಾಧನವೇ (ಉಪಕರಣ) ಅಥವಾ ಸಮಾಜದ ಗುರಿಯೋ ಎನ್ನುವ ಸಮಸ್ಯೆ ನಮ್ಮಲ್ಲನೇಕರಿಗೆ. ನಿಮ್ಮನ್ನು ಮತ್ತು ನನ್ನನ್ನು ವ್ಯಕ್ತಿಗಳಾಗಿ ಸರಕಾರ, ಸಮಾಜ, ತನಗೆ ಬೇಕಾದ ಹಾಗೆ ನಿಯಂತ್ರಿಸುತ್ತ ಶಿಕ್ಷಣ ನೀಡುತ್ತ, ನಿರ್ದೇಶಿಸುತ್ತ ಇರಬೇಕೇ ಅಥವಾ ವ್ಯಕ್ತಿಗಾಗಿ ಸರಕಾರ, ಸಮಾಜ ಅಸ್ತಿತ್ವದಲ್ಲುಂಟೆ ? ವ್ಯಕ್ತಿ ಸಮಾಜದ ಗುರಿಯೆ ? ಅಥವಾ ಆತ-ನನ್ನು ಒಂದು ಗೊಂಬೆಯ ಹಾಗೆ ಕುಣಿಸುತ್ತ, ನಿಯಂತ್ರಿಸುತ್ತ, ಶೋಷಿಸುತ್ತ, ಯುದ್ಧದ ಸಾಧನವನ್ನಾಗಿ ಮಾಡಿ ಬಲಿಕೊಡಬೇಕೆ ? ಬೇಕಾದ ಹಾಗೆ ಬದ-ಲಾಯಿಸಬಲ್ಲ ಪ್ರಭಾವಗಳ ಆಟಿಗೆಯ ವಸ್ತುವಾಗಿ; ಸಮಾಜದ ಸಾಧನವಾಗಿ (ಉಪಕರಣ) ಆ ವ್ಯಕ್ತಿ ಇದ್ದಾನೆಯೋ, ಇರಬೇಕೆ ? ಅಥವಾ ವ್ಯಕ್ತಿಗಾಗಿ ಸಮಾಜ ಉಂಟೆ ?— ಎಂಬ ಪ್ರಶ್ನೆ ಇಡೀ ವಿಶ್ವದ ಸಮಸ್ಯೆಯಾಗಿ ಇಂದು ನಿಂತಿದೆ, ಅಲ್ಲವೆ ?

ಈ ಗಂಭೀರ ಸಮಸ್ಯೆಗೆ ಉತ್ತರ ಹುಡುಕುವುದು, ಹೇಗೆ ? ವ್ಯಕ್ತಿ ಸಮಾಜದ ಕೇವಲ ಒಂದು ಸಾಧನ, ಉಪಕರಣ— ಎಂದು ಭಾವಿಸಿದಾಗ, ವ್ಯಕ್ತಿಗಿಂತ ಸಮಾಜ ಬಹು ಮುಖ್ಯವೆಂದಾಯಿತು. ಹಾಗೆಂದಾಗ ನಾವು ನಮ್ಮ ವ್ಯಕ್ತಿತ್ವ-ವಿಶೇಷವನ್ನು ತೊರೆದು, ಸಮಾಜಕ್ಕಾಗಿ ದುಡಿಯಬೇಕಾಗುತ್ತದೆ. ಅದಕ್ಕೆ ನಮ್ಮ ಸಮಗ್ರ ವಿದ್ಯಾಭ್ಯಾಸ ಕ್ರಮವನ್ನೇ ಕ್ರಾಂತಿಕಾರಕ ರೂಪದಲ್ಲಿ ಬದಲಾಯಿಸಿ, ವ್ಯಕ್ತಿಯನ್ನು ಸಾಧನವನ್ನಾಗಿ ಉಪಯೋಗಿಸಿ, ಹಾಗೆ ಜೀವನ-ವನ್ನು ನವೆಸಿ ಹಾಳು ಮಾಡುವಂತಹ ಒಂದು ಉಪಕರಣ–ಸಾಧನವನ್ನಾಗಿ ಮಾಡುವುದಕ್ಕೆ ತೊಡಗಬೇಕು. ಆದರೆ ಸಮಾಜವು ವ್ಯಕ್ತಿಗಾಗಿ ಇದೆ ಎಂದಾಗ, ಸಮಾಜದ ಕೆಲಸವು ತನ್ನ ಆವಶ್ಯಕತೆಗೆ ಅನುಗುಣವಾಗಿ ವ್ಯಕ್ತಿಯನ್ನು ರೂಪಿಸು ವುದಲ್ಲ; ಅವನಿಗೆ ಬಿಡುಗಡೆಯ ಭಾವನೆ, ಒತ್ತಡ ಪಡೆಯಲು ಬಿಡುವುದು, ಇವೆರಡರಲ್ಲಿ ಯಾವುದು ಸುಳ್ಳು ಎನ್ನುವುದನ್ನು ನೋಡಬೇಕು.

ಈ ಜೀವಂತ ಸಮಸ್ಯೆಯನ್ನು ಅರಿಯುವ ಬಗೆ ಹೇಗೆ? ಎಡ ಪಂಥೀಯ ಅಥವಾ ಬಲಪಂಥೀಯ ತತ್ತ್ವಪ್ರಣಾಳಿಕೆಗಳನ್ನು ಅವಲಂಬಿಸಿಕೊಂಡಿರುವಂತಹದ್ದಲ್ಲ ಅದು. ಅಕಸ್ಮಾತ್ ಹಾಗೇನಾದರೂ ಅದು ಅವಲಂಬಿಸಿಕೊಂಡಿದೆ ಎಂದಾಗ ಅದು ಕೇವಲ ಅಭಿಪ್ರಾಯದ ಮಾತಾಗಿಬಿಡುತ್ತದೆ. ವಿಚಾರಗಳು ಯಾವಾಗಲೂ ಗೊಂದಲ, ವೈಮನಸ್ಸು, ಸಂಘರ್ಷಗಳನ್ನು ಹುಟ್ಟಿಸುತ್ತವೆ. ಎಡ ಅಥವಾ ಬಲಪಂಥ ಅಥವಾ ಯಾವುವೋ ಧರ್ಮಗ್ರಂಥಗಳ ಮೇಲೆ ನಾವು ಅವಲಂಬಿಸಿಕೊಂಡಿರುವಾಗ, ನಾವು ಕೇವಲ ಅಭಿಪ್ರಾಯದ ಮೇಲೆಯೇ ಇದ್ದೇವೆ ಎಂದು ಅರ್ಥವಾಗುತ್ತದೆ. ಅಭಿಪ್ರಾಯಗಳು ಹೇಳಿಕೆಗಳು— ಬುದ್ಧ, ಕ್ರಿಸ್ತ, ಕಮ್ಯೂನಿಜಂ-ಬಂಡವಾಳಶಾಹಿ ಇತ್ಯಾದಿ ಯಾರದೇ ಅಥವಾ ಯಾವುದರದೇ ಇದ್ದರೂ ಅವು ಅಭಿಪ್ರಾಯಗಳೇ ಹೊರತು ಸತ್ಯವಲ್ಲ. ವಸ್ತುಸ್ಥಿತಿ ಸತ್ಯವನ್ನು ಎಂದೂ ನಿರಾಕರಿಸಲು ಬರುವದಿಲ್ಲವಷ್ಟೇ. ವಸ್ತುಸ್ಥಿತಿಯ ಮೇಲಿನ ಅಭಿಪ್ರಾಯವನ್ನು ನಿರಾಕರಿಸಬಹುದು. ವಸ್ತುಸ್ಥಿತಿಯ ಸತ್ಯ ಏನೆಂಬುದನ್ನು ನಾವೇ ಕಂಡುಕೊಂಡಾಗ ಅಭಿಪ್ರಾಯದಿಂದ ಸ್ವತಂತ್ರರಾಗಿ ನಾವು ನಡೆದುಕೊಳ್ಳಲಿಕ್ಕೆ ಆಗುತ್ತದೆ. ಆದ್ದರಿಂದ ಇನ್ನೊಬ್ಬರು ಏನು ಹೇಳುತ್ತಾರೆ ಎನ್ನುವುದನ್ನು ಬಿಟ್ಟುಬಿಡುವುದು ಅತ್ಯಂತ ಅವಶ್ಯವಲ್ಲವೆ? ಎಡ ಪಂಥೀಯರ ಅಥವಾ ಇನ್ನಾವ ಗುಂಪಿನ ನಾಯಕರ ಮಾತೇ ಇರಲಿ, ಅದು ಅವರ ಹಿನ್ನೆಲೆ ಹಾಗು ಪೂರ್ವಗ್ರಹಗಳ ನಿರ್ಬಂಧದ ಫಲವಾದ್ದರಿಂದ, ಅದರ ಮೇಲೆ ನಾವು ನಮ್ಮ ಹುಡುಕಾಟವನ್ನು ಅವಲಂಬಿಸಿಕೊಂಡಿದ್ದರೆ ಕೇವಲ ಅಭಿಪ್ರಾಯಗಳಲ್ಲೇ ಸಿಲುಕಿಕೊಳ್ಳುತ್ತೇವೆ.

ಇದರ ಸತ್ಯತೆಯನ್ನು ಹುಡುಕಿ ಅರಿಯಲಿಕ್ಕೆ ಮೊಟ್ಟಮೊದಲು ಎಲ್ಲ ಬಗೆಯ ಪ್ರಚಾರ, ಘೋಷಣೆಗಳಿಂದ ಮುಕ್ತರಾಗಿ, ನಾವೇ, ಅಭಿಪ್ರಾಯದ ಅವಲಂಬನೆಯಿಲ್ಲದೇ ನೇರವಾಗಿ ಸಮಸ್ಯೆಯನ್ನು ಅರಿಯಲು ಸಮರ್ಥರಾಗಬೇಕು. ವಿದ್ಯಾಭ್ಯಾಸದ ಸಮಗ್ರ ಉದ್ದೇಶವೇ ವ್ಯಕ್ತಿಯನ್ನು ಎಚ್ಚರಿಸುವುದು, ಇದರ ಸತ್ಯ ಕಾಣಲು. ಯಾವುದೇ ನೇತಾರನ ಅವಲಂಬನೆಯಿರದೇ, ಸ್ವಚ್ಛವಾಗಿ ನೋಡಲು ಸಮರ್ಥರಾಗಬೇಕು. ಹಲವು ಗೊಂದಲಗಳಲ್ಲಿರುವುದರಿಂದ ನೀವು ನಾಯಕನನ್ನು ಆಯ್ಕೆ ಮಾಡುತ್ತೀರಿ. ಆ ನಾಯಕರೂ ಹಾಗೇ ಗೊಂದಲದಲ್ಲಿರುತ್ತಾರೆ. ಹೀಗೆ ಗೊಂದಲಮಯವಾಗಿಯೇ ಸಾಗಿದೆ ಬದುಕು— ಇಡೀ

ವಿಶ್ವದ ತುಂಬ. ಆದ್ದರಿಂದ ಮಾರ್ಗದರ್ಶನಕ್ಕಾಗಿ, ಸಹಾಯಕ್ಕಾಗಿ ನೀವು ಯಾವ ನೇತಾರನನ್ನೂ ನೋಡಕೂಡದು.

ಒಂದು ಸಮಸ್ಯೆಯನ್ನು ಅರಿಯಬೇಕೆನ್ನುವ ಮನಸ್ಸು ಆ ಸಮಸ್ಯೆಯನ್ನು ಸಮಗ್ರವಾಗಿ, ಸಂಪೂರ್ಣವಾಗಿ ಗಮನಿಸಿ ಅರಿತುಕೊಳ್ಳುವುದಷ್ಟೇ ಅಲ್ಲ, ಆ ಸಮಸ್ಯೆಯ ತೀವ್ರ ವೇಗದ ಜತೆ ಸಾಗುವಂತೆಯೂ ಇರಬೇಕು. ಏಕೆಂದರೆ ಸಮಸ್ಯೆ ಎಂದೆಂದೂ ಚಲನಶೀಲ. ಯಾವುದೇ ಸಮಸ್ಯೆ, ಅದು ಹಸಿವೆಯದಿರಲಿ, ಮನಸ್ಸಿನದಿರಲಿ, ಯಾವುದರದೇ ಇರಲಿ—ಅದು ಎಂದೆಂದೂ ಹೊಸದೇ. ಯಾವುದೇ ಬಿಕ್ಕಟ್ಟು ಎಂದೆಂದೂ ಹೊಸದಾಗೇ ಇರುತ್ತದೆ. ಆದ್ದರಿಂದ ಅದನ್ನು ಅರಿಯಲು ಮನಸ್ಸು ಯಾವಾಗಲೂ ತನ್ನ ಶೋಧದಲ್ಲಿ ಹೊಚ್ಚಹೊಸದಾಗಿ, ಸ್ವಚ್ಛವಾಗಿ, ಚುರುಕಾಗಿ ಇರಬೇಕು. ಸಮಾಜದ ಮೂಲಭೂತ ಪರಿವರ್ತನೆ ಉಂಟುಮಾಡುವಲ್ಲಿ, ಅಂತರಂಗದಲ್ಲಿ ಆಗಬೇಕಾದ ಕ್ರಾಂತಿಯ ಅತ್ಯಂತ ತೀವ್ರ ಆವಶ್ಯಕತೆಯಿರುವುದನ್ನು ನಮ್ಮಲ್ಲನೇಕರು ಅರಿತುಕೊಂಡಿರಬಹುದು. ಆ ಅಂತರಂಗದ ಕ್ರಾಂತಿ ಮತ್ತು, ಸಮಾಜದ ಮೂಲಭೂತ ಪರಿವರ್ತನೆ ಉಂಟುಮಾಡುವಲ್ಲಿ ಅತ್ಯಂತ ಅವಶ್ಯವೆನ್ನಬಹುದು. ಇದರ ಬಗ್ಗೆಯೇ ನಾನು (ಜೆ. ಕೆ.) ಹಾಗು ನನ್ನಂತಹ ಗಂಭೀರ ಉದ್ದೇಶ ಹೊಂದಿರುವ ಜನರು ಸದ್ಯ ನಿರತರಾಗಿರುವುದು. ಆಮೂಲಾಗ್ರವಾಗಿ ಸಮಾಜದ ಮೂಲಭೂತ ಬದಲಾವಣೆಯನ್ನು ಹೇಗೆ ತರಬಹುದು ಎನ್ನುವುದು ನಮ್ಮ ಸಮಸ್ಯೆ. ಅಂತರಂಗದ ಕ್ರಾಂತಿ ಇಲ್ಲದೇನೇ ಬಹಿರಂಗದ ಕ್ರಾಂತಿ ಇರಲು ಶಕ್ಯವಿಲ್ಲ; ಯಾಕೆಂದರೆ ಸಮಾಜವು ಸದಾ ನಿಶ್ಚಲವಾಗಿರುತ್ತದೆ. ಈ ಅಂತರಂಗದ ಕ್ರಾಂತಿಕಾರಿ ಬದಲಾವಣೆ ಇರದೆ ಉಂಟುಮಾಡುವ ಯಾವುದೇ ಸುಧಾರಣೆ, ಕ್ರಿಯೆ ಸಮಾಜದ ಹಾಗೆ ನಿಶ್ಚಲರೂಪದಲ್ಲೇ ಇದ್ದುಬಿಡುತ್ತದೆ. ಆದ್ದರಿಂದ ಈ ಅಂತರಂಗದ ನಿರಂತರ ಕ್ರಾಂತಿ ಇರದೆ ಯಾವ ಆಶೆಯೂ ಇಲ್ಲ. ಇದಿಲ್ಲದೆ ಕೇವಲ ಬಾಹ್ಯಕ್ರಿಯೆ ಪುನರಾವರ್ತನೆಗೊಳ್ಳುತ್ತ, ಚಟವಾಗಿ ಪರಿಣಮಿಸುತ್ತದೆ. ನಿಮ್ಮ ಹಾಗು ಇನ್ನೊಬ್ಬನ, ನನ್ನ ಹಾಗು ನಿಮ್ಮ ನಡುವಿನ ಸಂಬಂಧಗಳ ಕ್ರಿಯೆಯೇ ಸಮಾಜ. ಸೃಜನಾತ್ಮಕವಾದ, ಮಾನಸಿಕ ಬದಲಾವಣೆಯ ಸ್ವರೂಪದ, ಅಂತರಂಗದ ನಿರಂತರ ಕ್ರಾಂತಿ ಇರದ ವರೆಗೆ ಆ ನಿಶ್ಚಲ ಸಮಾಜಕ್ಕೆ ಜೀವದಾನ ಮಾಡುವ ಸಾಮರ್ಥ್ಯವಿರುವುದಿಲ್ಲ. ಈ

ಅಂತರಂಗದ ನಿರಂತರ ಕ್ರಾಂತಿ ಇರದೇ ಇದ್ದುದರಿಂದಲೇ ಸಮಾಜವು ನಿಶ್ಚಲವಾಗಿ ಹರಳುಗಟ್ಟಿಕೊಂಡಿರುತ್ತದೆ.

ನಮ್ಮೊಳಗಿನ ಹಾಗು ನಮ್ಮ ಸುತ್ತುಮುತ್ತಲಿನ ಯಾತನೆ, ಗೊಂದಲಗಳಿಗೂ ನಮಗೂ ಮಧ್ಯೆ ಇರುವ ಸಂಬಂಧದ ಸ್ವರೂಪ ಏನು? ಖಂಡಿತವಾಗಿಯೂ ಈ ಗೊಂದಲ, ಯಾತನೆಗಳು ತಮ್ಮಷ್ಟಕ್ಕೆ ತಾವೇ ಹುಟ್ಟಿಕೊಂಡಿಲ್ಲ. ಒಬ್ಬ ಬಂಡವಳಶಾಹಿ ಅಥವಾ ಕಮ್ಯುನಿಸ್ಟ್ ಅಥವಾ ಒಬ್ಬ ಸರ್ವಾಧಿಕಾರಿ ಸೃಷ್ಟಿಮಾಡಿದುವಲ್ಲ ಇವು; ನೀವು ಮತ್ತು ನಾನು — ನಮ್ಮಲ್ಲಿಯ ಪರಸ್ಪರ ಸಂಬಂಧಗಳ ಮೂಲಕ ಹುಟ್ಟಿಸಿದ್ದು ಇವು. ನಮ್ಮೊಳಗೆ ಇರುವಂಥಾದ್ದೇ ಬಹಿರ್ರೂಪ ಪಡೆದು ಈ ಜಗತ್ತಿನಲ್ಲಿದೆ. ನಾವೇನಿದ್ದೇವೆ? ಏನು ಯೋಚಿಸುತ್ತೇವೆ? ಭಾವಿಸುತ್ತೇವೆ? ನಮ್ಮ ದೈನಂದಿನ ಅಸ್ತಿತ್ವದಲ್ಲಿ ಏನು ಮಾಡುತ್ತೇವೆ?— ಇವೆಲ್ಲ ನಮ್ಮಿಂದ, ನಮ್ಮ ಹೊರಗೆ ಬಹಿರ್ರೂಪ ಪಡೆದು, ಈ ಜಗತ್ತು ರೂಪುಗೊಂಡಿದೆ. ನಮ್ಮೊಳಗೆ ನಾವು ಗೊಂದಲದಿಂದ, ಯಾತನೆಯಿಂದ, ಅಸ್ತವ್ಯಸ್ತತೆಯಿಂದ ಇದ್ದುದ್ದೇ ಬಹಿರ್ರೂಪ ಪಡೆದ ನಮ್ಮ ಸಮಾಜ—ವಿಶ್ವ ಸೃಷ್ಟಿಗೊಂಡಿದೆ. ನಮ್ಮ-ನಮ್ಮಲ್ಲಿನ ಪರಸ್ಪರ ಸಂಬಂಧಗಳ ಹಂದರವೇ ಈ ಸಮಾಜ, ಈ ವಿಶ್ವ.

ಹೀಗೆ ನಾವೇನಿದ್ದೇವೆಯೋ ಅದೇ ಜಗತ್ತು. ಆದ್ದರಿಂದ ನಮ್ಮ ಸಮಸ್ಯೆಯೇ ಈ ಜಗತ್ತಿನ ಸಮಸ್ಯೆ. ಇದು ಅತ್ಯಂತ ಸರಳ ಹಾಗು ಮೂಲಭೂತ ವಾಸ್ತವ. ಇನ್ನೊಬ್ಬನೊಂದಿಗಿನ ಅಥವಾ ಹಲವಾರು ಅಂಥ ಜನರೊಂದಿಗಿನ ನಮ್ಮ ಸಂಬಂಧಗಳಲ್ಲೆಲ್ಲ ಈ ವಾಸ್ತವ ಸಂಗತಿಯನ್ನು ನಾವು ಸಾಮಾನ್ಯವಾಗಿ ಕಡೆಗಣಿಸುತ್ತೇವೆ. ನಾವು ಬದುಕುತ್ತಿರುವ ರೀತಿಯಿಂದ ನಿಮ್ಮ ಹಾಗು ನನ್ನಿಂದ ಸೃಷ್ಟಿಗೊಂಡ ಈ ಸಮಾಜದಲ್ಲಿ ಗೊಂದಲ, ಅವ್ಯವಸ್ಥೆ ಉಂಟಾಗಿದೆ ಎನ್ನುವುದನ್ನು ಮರೆತು ಒಂದು ಪದ್ಧತಿಯ ಮೂಲಕ, ವಿಚಾರಗಳ ಕ್ರಾಂತಿಯ ಮೂಲಕ, ಭಿನ್ನಮೌಲ್ಯಾಧಾರಿತ ಪದ್ಧತಿಯ ಮೂಲಕ ಬದಲಾವಣೆ ತರಲು ನಾವು ಇಚ್ಛಿಸುತ್ತೇವೆ. ನಮ್ಮ ದೈನಂದಿನ ಅಸ್ತಿತ್ವದ ಬಗ್ಗೆ ಕಳಕಳಿ ವಹಿಸಬೇಕು, ತನ್ಮೂಲಕ ಆ ಮೂಲಭೂತ ಆಂತರಿಕ ಕ್ರಾಂತಿಯನ್ನು ಹತ್ತಿರದಿಂದಲೇ ಆರಂಭಿಸಬೇಕು ನಮ್ಮ ವಿಚಾರ, ಭಾವನೆ, ಅನಿಸಿಕೆ, ಕ್ರಿಯೆಗಳು— ನಮ್ಮ ಅನ್ನಸಂಪಾದನಾ ಕಾರ್ಯದಲ್ಲಿ, ವಿಚಾರ-ನಂಬಿಕೆಗಳ ಸಂಬಂಧದಲ್ಲಿ ವ್ಯಕ್ತವಾಗುವ ಕ್ರಮವನ್ನು, ವಿಧಾನವನ್ನು ಕಳಕಳಿ ಹಾಗು

ಎಚ್ಚರಿಕೆಗಳಿಂದ ಗಮನಿಸಬೇಕು. ಈ ನಮ್ಮ ದೈನಂದಿನ ಅಸ್ತಿತ್ವವನ್ನು ಗಮನಿಸಿ, ಪರೀಕ್ಷಿಸಿದರೆ, ಇವೆಲ್ಲವೂ ಮೂಲಭೂತವಾಗಿ ಅಸೂಯೆಯ ಮೇಲೆ ನಿಂತಿವೆ— ಕೇವಲ ಬದುಕು ನಡೆಸುವುದಕ್ಕೆ ಒಂದು ಮಾರ್ಗವಾಗಿ ಮಾತ್ರವಲ್ಲ ಎನ್ನುವುದು ಗಮನಕ್ಕೆ ಬರುತ್ತದೆ. ನಿರಂತರ ಹೋರಾಟ ಹಾಗು ಏನೋ ಆಗುವ ಪ್ರಕ್ರಿಯೆಯ ರೂಪದಲ್ಲಿ ಸಮಾಜ ನಿರ್ಮಾಣಗೊಂಡಿದೆ. ದುರಾಸೆಯ ಮೇಲೆ, ಅಸೂಯೆ— ನಿಮಗಿಂತ ಮೇಲಿನವರ ಮೇಲಿನ ಅಸೂಯೆಯ ಮೇಲೆ ನಿಂತಿದೆ ಸಮಾಜ. ಕ್ಲಾರ್ಕ್‌ನು ಮ್ಯಾನೇಜರ್‌ನಾಗುವ ಇಚ್ಛೆಯಿಂದ ಕೆಲಸ ಮಾಡುತ್ತಾನೆ. ಅಂದರೆ ಆತನ ಕೆಲಸ ಕೇವಲ ಉದರಂಭರಣಕ್ಕಾಗಿ ಅಷ್ಟೇ ಅಲ್ಲ; ಸ್ಥಾನಮಾನ ಗಳಿಸುವುದಕ್ಕಾಗಿಯೂ ಇದೆ— ಎಂದಂತಾಯಿತು. ಈ ಧೋರಣೆ ಸಮಾಜದಲ್ಲಿ, ಸಂಬಂಧಗಳಲ್ಲಿ ವಿಧ್ವಂಸಕತೆ ಹಾಗು ಅನಾಹುತಗಳನ್ನು ಸೃಷ್ಟಿಸುತ್ತದೆ. ನಿಮ್ಮ ಹಾಗು ನನ್ನ ಕಾಳಜಿ ಕೇವಲ ಉದರಂಭರಣದ ಒಂದು ಥಂಪೆ ಅಷ್ಟೇ ಆಗಿದ್ದರೆ, ಅದಕ್ಕೆ ಯೋಗ್ಯವಾದ ದಾರಿಯನ್ನು ಅಂದರೆ ಅಸೂಯೆಯ ಮೇಲೆ ಅವಲಂಬನವಿರದಂತಹ ದಾರಿಯನ್ನು ಕಂಡುಹಿಡಿ-ಯೋಣ. ಸಂಬಂಧಗಳನ್ನು ವಿಧ್ವಂಸಗೊಳಿಸುವ ಹಲವು ಘಟಕಗಳಲ್ಲಿ ಅಸೂಯೆಯೂ ಒಂದು. ಈ ಅಸೂಯೆ ಅಧಿಕಾರ, ಅಂತಸ್ತುಗಳ ಇಚ್ಛೆಯನ್ನು ಸೂಚಿಸುವುದರಿಂದ ಅಂತಿಮವಾಗಿ ಅದು ರಾಜಕೀಯ ಪ್ರವೇಶಿಸುತ್ತದೆ. ಇವೆ-ರಡೂ ಅತ್ಯಂತ ನಿಕಟವಾದಂಥವು. ಮ್ಯಾನೇಜರ್ ಆಗಲು ಬಯಸುವ ಕ್ಲಾರ್ಕ್, ಯುದ್ಧವನ್ನು ಸೃಷ್ಟಿಸುವ, ಅಧಿಕಾರ—ಕೇಂದ್ರಿತ ರಾಜಕೀಯ ಸೃಷ್ಟಿಸುವ ಹಲವು ಘಟಕಗಳಲ್ಲಿ ಒಬ್ಬನಾಗಿರುತ್ತಾನೆ. ಆದ್ದರಿಂದ ಯುದ್ಧಕ್ಕೆ ಆತ ನೇರವಾಗಿ ಜವಾಬ್ದಾರನಾಗುತ್ತಾನೆ.

ಯಾವುದರ ಮೇಲೆ ನಮ್ಮ ಸಂಬಂಧ ನಿಂತಿದೆ? ನಿಮ್ಮ ಮತ್ತು ನನ್ನ, ನಿಮ್ಮ ಮತ್ತು ಮತ್ತೊಬ್ಬನ ಮಧ್ಯದ ಸಂಬಂಧ ಅಂದರೆ ಸಮಾಜ ಯಾತರ ಮೇಲೆ ನಿಂತಿದೆ? 'ಪ್ರೀತಿ' ಎಂದು ನಾವು ತುಂಬ ಮಾತನಾಡಿದರೂ, ಪ್ರೀತಿಯ ಮೇಲೆ ಖಂಡಿತ ನಿಂತಿಲ್ಲ, ಪ್ರೀತಿ ಇದ್ದದ್ದೇ ಆದರೆ ವ್ಯವಸ್ಥೆ, ಶಾಂತಿ, ಸಂತೋಷ ನಮ್ಮ-ನಿಮ್ಮ ಮಧ್ಯೆ ಇದ್ದೇ ಇರುತ್ತಿತ್ತು. ಆದರೆ ಈ ನಿಮ್ಮ-ನನ್ನ ನಡುವೆ ಸಾಕಷ್ಟು ವೈಮನಸ್ಸಿದ್ದು ಅದು 'ಗೌರವ' ಎಂಬ ಶಬ್ದರೂಪ ಪಡೆದಿದೆ ಅಷ್ಟೇ. ವಿಚಾರದಲ್ಲಿ, ಭಾವನೆಯಲ್ಲಿ ನಾವಿಬ್ಬರೂ ಸರಿಸಮಾನರಿದ್ದಾಗ ಅಲ್ಲಿ ಗೌರವ-ವಾಗಲಿ, ವೈಮನಸ್ಸಾಗಲಿ ಇರುವುದಿಲ್ಲ. ಯಾಕೆಂದರೆ ಇಲ್ಲಿ ಸಂಧಿಸುವ

ಇಬ್ಬರು ವ್ಯಕ್ತಿಗಳು ಗುರು-ಶಿಷ್ಯರೂಪದಲ್ಲಾಗಲಿ, ಪರಸ್ಪರ ದಬ್ಬಾಳಿಕೆ ನಡೆ-ಸುವ ಗಂಡ-ಹೆಂಡತಿಯರ ರೂಪದಲ್ಲಾಗಲಿ, ಇರದೇ ಕೇವಲ ಎರಡು ವ್ಯಕ್ತಿ-ಗಳಾಗಿ ಸಂಧಿಸುತ್ತಾರೆ. ಎಲ್ಲಿ ವೈಮನಸ್ಸಿರುತ್ತದೆಯೋ ಅಲ್ಲಿ ದಬ್ಬಾಳಿಕೆ ನಡೆಸುವ ಇಚ್ಛೆ ಇರುತ್ತದೆ. ಆ ಇಚ್ಛೆ, ಹೊಟ್ಟೆಕಿಚ್ಚು, ಸಿಟ್ಟು, ಭಾವೋ-ದ್ರೇಕತೆ ಇತ್ಯಾದಿಗಳನ್ನು ಹುಟ್ಟಿಸಿ ನಮ್ಮ ಸಂಬಂಧಗಳಲ್ಲಿ ನಿರಂತರ ಸಂಘರ್ಷಕ್ಕೆ ಕಾರಣವಾಗುತ್ತದೆ. ಆ ಸಂಘರ್ಷದಿಂದ ಪಾರಾಗಲು ನಾವು ಪ್ರಯತ್ನಿಸು-ತ್ತೇವೆ. ಹಾಗೆ ಪ್ರಯತ್ನ ನಡೆಸಿದಂತೆಲ್ಲ ಇನ್ನೂ ಹೆಚ್ಚಿನ ಗೊಂದಲ, ಯಾತನೆ ಸೃಷ್ಟಿಯಾಗುತ್ತದೆ.

ನಮ್ಮ ದೈನಂದಿನ ಅಸ್ತಿತ್ವದ ಅಂಗವಾದ ವಿಚಾರ, ನಂಬಿಕೆ ಇತ್ಯಾದಿ ನಮ್ಮ ಮನಸ್ಸನ್ನು ವ್ಯತ್ಯಸ್ತಗೊಳಿಸುತ್ತದೆ. ಮೂರ್ಖತನವೆಂದರೇನು? ಮನಸ್ಸು ಸೃಷ್ಟಿಸುವ ಹಾಗು ಕೈ ನಿರ್ಮಿಸುವ ವಸ್ತುಗಳಿಗೆ ತಪ್ಪು ಮೌಲ್ಯಗಳನ್ನು ಕೊಡುವದಲ್ಲವೆ ? ಆತ್ಮ ಸಂರಕ್ಷಣೆಯ ಪ್ರವೃತ್ತಿ ನಮ್ಮ ಬಹುತೇಕ ವಿಚಾರ-ಗಳ ಹಿನ್ನೆಲೆಯಲ್ಲಿರುತ್ತದೆ. ನಮ್ಮಲ್ಲಿಯ ಎಷ್ಟೋ ವಿಚಾರಗಳು ತಪ್ಪು ಅರ್ಥವಂತಿಕೆ ಪಡೆಯುತ್ತವೆ, ತಮಗೆ ಸಲ್ಲದ ಮರ್ಯಾದೆ ಪಡೆಯುತ್ತವೆ. ಆದ್ದರಿಂದಲೇ ನಾವು ನಂಬುವ ಧಾರ್ಮಿಕ, ರಾಜಕೀಯ, ಆರ್ಥಿಕ—ಯಾವುದೇ ನಂಬಿಕೆಗಳು ಅವು ದೇವರ ಕುರಿತಾಗಿರಲಿ, ಸಾಮಾಜಿಕ ಪದ್ಧತಿಯ ಕುರು-ತಾಗಿರಲಿ, ಮನುಷ್ಯನಿಂದ ಮನುಷ್ಯನನ್ನು ಬೇರ್ಪಡಿಸುತ್ತಿದ್ದರೂ, ತಪ್ಪು ಅರ್ಥವಂತಿಕೆ ಪಡೆದುಕೊಂಡಿವೆ. ಇದೇ ನಮ್ಮ ಮೂರ್ಖತನಕ್ಕೆ ಸಾಕ್ಷಿಯಾ-ಗಿದೆ. ಹೀಗೆ ನಾವು ಬದುಕುವ ರೀತಿಯಿಂದಲೇ ವ್ಯವಸ್ಥೆ ಅಥವಾ ಅವ್ಯವಸ್ಥೆ, ಶಾಂತಿ ಅಥವಾ ಅಶಾಂತಿ, ಸಂತೋಷ ಅಥವಾ ಯಾತನೆಯನ್ನು ಸೃಷ್ಟಿಸ-ಬಲ್ಲೆವೆಂಬುದನ್ನು ಕಾಣಬಹುದು.

ಈಗ ನಮ್ಮ ಸಮಸ್ಯೆ : ನಿಶ್ಚಲವಾದ ಸಮಾಜವಿದ್ದೂ ಅಂತರಂಗ-ದಲ್ಲಿ ನಿರಂತರ ಕ್ರಾಂತಿ ನಡೆಯುತ್ತಿರುವಂತಹ ವ್ಯಕ್ತಿ ಇರಲು ಶಕ್ಯವೇ ಎನ್ನು-ವುದು ಅಂದರೆ ಸಮಾಜದ ಕ್ರಾಂತಿ ವ್ಯಕ್ತಿಯ ಆಂತರಿಕ, ಮಾನಸಿಕ ಪರಿ-ವರ್ತನೆಯ ಮೂಲಕ ಆರಂಭವಾಗಬೇಕು ಎಂಬುದು. ನಮ್ಮಲ್ಲಿ ಅನೇಕರು ಈ ಮೂಲಭೂತ ಬದಲಾವಣೆಯು ಸಾಮಾಜಿಕ ರಚನೆಯಿಂದ ಆರಂಭ-

ವಾಗಬೇಕು ಎನ್ನುತ್ತಾರೆ. ಇದೇ ಇಂದು ವಿಶ್ವದಾದ್ಯಂತ ನಡೆಯುತ್ತಿರುವುದು. ಕಮ್ಯುನಿಜಂ ಅಥವಾ ಇನ್ನಾವುದೋ ದಾರಿಯ ಮೂಲಕ ಸಾಮಾಜಿಕ ಕ್ರಾಂತಿಯನ್ನು ತರುವ ಪ್ರಯತ್ನ ಇಂದು ವಿಶ್ವದಾದ್ಯಂತ ಜರುಗುತ್ತಿದೆ. ಒಂದು ವೇಳೆ ಸಮಾಜಕ್ರಾಂತಿ— ಮನುಷ್ಯನ ಬಹಿರ್ ಆವರಣದ ರಚನೆಯ ಕ್ರಾಂತಿ, ಅದು ಎಷ್ಟೇ ಮೂಲಭೂತ ಸ್ವರೂಪದ್ದಾದರೂ— ವ್ಯಕ್ತಿಯ ಅಂತರಂಗದ, ಮಾನಸಿಕ ಬದಲಾವಣೆಗೆ ಒತ್ತುಕೊಡದೇ ಇದ್ದರೆ— ಅದು ನಿಷ್ಫಲ ಸ್ವರೂಪದ್ದಾಗುತ್ತದೆ. ಆದ್ದರಿಂದ ನಿಶ್ಚಲವಲ್ಲದ ಸದಾ ಚಲನಶೀಲ-ವಾದ, ಮರುಕಳಿಕೆ ಇರದ, ಶಿಥಿಲಗೊಳ್ಳುತ್ತಹೋಗದಿರದ, ಸದಾ ಚೈತನ್ಯ-ಶೀಲವಾದ ಜೀವಂತ ಸಮಾಜರಚನೆ ಆಗಬೇಕು. ಅಂತಿದ್ದರೆ ವ್ಯಕ್ತಿಯ ಅಂತರಂಗದ, ಮನಸ್ಸಿನ ಸಂವಿಧಾನದಲ್ಲೂ ಕ್ರಾಂತಿಯಾಗಬೇಕಾದದ್ದು ಅತ್ಯಂತ ಅವಶ್ಯ. ಯಾಕೆಂದರೆ ಈ ಅಂತರಂಗದ, ಮಾನಸಿಕ ಕ್ರಾಂತಿ ಇಲ್ಲದಿದ್ದರೆ, ಕೇವಲ ಹೊರವಲಯದಲ್ಲಿಯ ಬದಲಾವಣೆ ಸ್ವಲ್ಪವೂ ಅರ್ಥವಿಲ್ಲದ್ದು. ಯಾವಾಗಲೂ ಸಮಾಜವು ನಿಶ್ಚಲವಾಗುತ್ತ. ಹರಳುಗಟ್ಟುತ್ತ ಹೋಗುವುದರಿಂದ ಸದಾ ಶಿಥಿಲಗೊಳ್ಳುತ್ತಲೇ ಹೋಗುವಂತಹದು. ಎಷ್ಟೇ ಶೀಘ್ರವಾಗಿ, ಜಾಣ್ಮೆ ಯಿಂದ ಕಾಯ್ದೆಗಳನ್ನು ಜಾರಿಗೆ ತಂದರೂ, ಸಮಾಜ ನಶಿಸಿಹೋಗುವ ಪ್ರಕ್ರಿಯೆಯಲ್ಲಿರುವ ಕಾರಣ ಆ ಕ್ರಾಂತಿ ಅಂತರಿಕವಾಗಿ ಜರುಗದೇ, ಕೇವಲ ಬಹಿರಂಗದಲ್ಲಿ ಮಾತ್ರ ಜರುಗಿದ್ದಾಗಿರುತ್ತದೆ.

ಬಹಿರಂಗದ ಕ್ರಿಯೆ ನೆರವೇರಿದ ನಂತರ ನಿಶ್ಚಲವಾಗುತ್ತದೆ. ಸಮಾಜ ವೆಂದು ಕರೆಯುವ ವ್ಯಕ್ತಿ-ವ್ಯಕ್ತಿಗಳ ನಡುವಿನ ಸಂಬಂಧ, ಅವರ ಅಂತರಂಗದ ಕ್ರಾಂತಿಯ ಪ್ರತಿಫಲವಾಗಿರದಿದ್ದರೆ ಚಲನಹೀನ ಸಮಾಜರಚನೆ ಆ ವ್ಯಕ್ತಿ-ಯನ್ನು ಹೀರಿಕೊಂಡು ಆ ವ್ಯಕ್ತಿಯನ್ನು ಅಷ್ಟೇ ಚಲನಹೀನನನ್ನಾಗಿ, ಮಾಡಿ ದ್ದನ್ನೇ ಮಾಡುವ ಮರುಕಳಿಕೆ ಪ್ರವೃತ್ತಿಯುವನನ್ನಾಗಿ ಮಾಡುತ್ತದೆ. ಈ ವಸ್ತುಸ್ಥಿತಿ ಸ್ವರೂಪದ, ಸತ್ಯದ ಅಸಾಮಾನ್ಯವಾದ ಅರ್ಥವಂತಿಕೆಯನ್ನು ಅರಿತಾಗ ಒಪ್ಪುವ ಅಥವಾ ಒಪ್ಪದಿರುವ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಸಮಾಜ ಸದಾ ಹರಳುಗಟ್ಟುತ್ತ, ವ್ಯಕ್ತಿಗಳನ್ನು ಹೀರಿಕೊಳ್ಳುತ್ತಿರುತ್ತದೆ. ನಿರಂತರವಾದ ಸೃಜನಶೀಲ ಕ್ರಾಂತಿ ವ್ಯಕ್ತಿಯ ಅಂತರಂಗದಲ್ಲಿ ಮಾತ್ರ ಶಕ್ಯ ಹೊರತು, ವ್ಯಕ್ತಿಯ ಹೊರಗೆ, ಸಮಾಜದಲ್ಲಿ ಅಲ್ಲ ಎನ್ನುವುದು ವಾಸ್ತವಿಕ

ಸತ್ಯ ಸಮಾಜವೆನ್ನುವ ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳಲ್ಲಿ ಮಾತ್ರ ಸೃಜನಾತ್ಮಕ ಕ್ರಾಂತಿ ಶಕ್ಯ. ಯುರೋಪ್, ಭಾರತ, ಅಮೇರಿಕಾ, ಇತ್ಯಾದಿ ಪ್ರಪಂಚದ ಪ್ರತಿ ಭಾಗದಲ್ಲೂ ಸದ್ಯ ಸಮಾಜದ ಸಂವಿಧಾನರಚನೆ ತೀವ್ರ ಶಿಥಿಲತೆಯನ್ನು ಪಡೆಯುತ್ತ ಹೋಗುತ್ತಿದೆ. ಅದು ನಮ್ಮ ಅಂತರಂಗದಲ್ಲೂ ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ದಾರಿಯ ಮೇಲೆ ಹೋಗುತ್ತಿರುವಾಗ ಸಹ ಇದನ್ನು ನಾವು ಕಾಣುತ್ತಿದ್ದೇವೆ. ನಮ್ಮ ಸಮಾಜ ಕುಸಿದುಬೀಳುತ್ತಿದೆ. ಹೊಸ ಸಮಾಜ-ರಚನೆಗೆ ಹೊಸ ಶಿಲ್ಪಿಗಳು, ಹೊಸ ಕುಶಲಕರ್ಮಿಗಳು ಬೇಕಾಗಿದ್ದಾರೆ ಎಂಬ ವಾಸ್ತವವನ್ನು ತಿಳಿಸಲು ನಮಗೆ ದೊಡ್ಡ ಇತಿಹಾಸಕಾರ ಬೇಕಿಲ್ಲ. ಹೊಸದಾಗಿ ಕಂಡುಹಿಡಿದ ವಸ್ತುಸ್ಥಿತಿ ಸತ್ಯ ಹಾಗು ಮೌಲ್ಯಗಳ ಹೊಸ ತಳಪಾಯದ ಮೇಲೆ ಹೊಸ ಸಂವಿಧಾನವನ್ನು ಕಟ್ಟಬೇಕು. ಸಂವಿಧಾನ ಕುಸಿದು ಬೀಳ್ತಾ ಇದೆ ಎಂಬುದನ್ನು ಅವಲೋಕಿಸುತ್ತ, ಅದರ ಅರಿವುಂಟಾಗಿ ತಮ್ಮನ್ನೇ ತಾವು ಶಿಲ್ಪಿಗಳನ್ನಾಗಿ ಪರಿವರ್ತಿಸಿಕೊಳ್ಳುವ ಕರ್ತಾರರು ಯಾರೂ ಇಂದು ಕಾಣುತ್ತಿಲ್ಲ. ಇದು ನಮ್ಮ ಸಮಸ್ಯೆ ಸಮಾಜ ಕುಸಿದು, ಶಿಥಿಲಗೊಳ್ಳುತ್ತ ಇರುವುದನ್ನು ನೋಡುತ್ತ ಇದ್ದೇವೆ. ನಾವು-ನೀವು ಮತ್ತು ನಾನು— ಈಗ ಶಿಲ್ಪಿಗಳಾಗಬೇಕಾಗಿದೆ. ನೀವು ಮತ್ತು ನಾನು ಹೊಸ ಮೌಲ್ಯಗಳನ್ನು ಪುನಃ ಕಂಡುಹಿಡಿಯಬೇಕು. ಮೂಲಭೂತವಾದ ಭದ್ರ ತಳಹದಿಯ ಮೇಲೆ ಅದನ್ನು ಕಟ್ಟಬೇಕು. ಯಾಕೆಂದರೆ ಅದೇ ದಂಧೆ ಮಾಡುವ ಶಿಲ್ಪಿಗಳನ್ನು ಅಂದರೆ ರಾಜಕೀಯ ಹಾಗು ಧಾರ್ಮಿಕ ನೇತಾರರನ್ನು— ನಂಬಿಕೊಂಡರೆ ಮೊದಲಿದ್ದಲ್ಲೇ ಇರುವ ಸಂಭವವಿದೆ.

ಯಾಕೆಂದರೆ ನಾವು ಸೃಜನಶೀಲರಾಗಿರದೆ ಸಮಾಜವನ್ನು ಒಂದು ಗೊಂದಲಪುರವನ್ನಾಗಿ ಮಾಡಿದ್ದೇವೆ. ಸಮಸ್ಯೆ ಅತ್ಯಂತ ತುರ್ತಿನದಾಗಿದ್ದರಿಂದ ನಾವೆಲ್ಲ ಈಗ ಸೃಜನಶೀಲರಾಗಬೇಕಾಗಿದೆ. ಸಮಾಜದ ಅವನತಿಯ ಕಾರಣವನ್ನು ಅರಿಯಬೇಕು. ಹಾಗು ಸೃಜನಶೀಲ ತಿಳಿವಳಿಕೆಯ ಮೇಲೆ ಹೊಸ ಸಂಘರ್ಷವನ್ನು ರಚಿಸಬೇಕು. ಇದು ನೇತ್ಯಾತ್ಮಕ ಚಿಂತನೆಯನ್ನು ಸೂಚಿಸುತ್ತದೆ. ನೇತ್ಯಾತ್ಮಕವಾಗಿ ವಿಚಾರ ಮಾಡುವುದು ಉನ್ನತ ರೀತಿಯ ಅರಿವಿನ ರೀತಿ. ಸೃಜನಾತ್ಮಕವಾಗಿ ವಿಚಾರಮಾಡುವುದೆಂದರೇನು ಎನ್ನುವುದನ್ನು

ಅರಿಯಲು ಸಮಸ್ಯೆಯನ್ನು ನೇತ್ಯಾತ್ಮಕವಾಗಿಯೇ ನೋಡಬೇಕು. ಏಕೆಂದರೆ ಸಮಾಜದ ಹೊಸ ಸಂವಿಧಾನ ನಿರ್ಮಾಣಕ್ಕೆ ನೀವು ಮತ್ತು ನಾನು ಸೃಜನಶೀಲರಾಗಬೇಕು, ಎಂದರೆ ಇತ್ಯಾತ್ಮಕವಾಗಿ ಸಮಸ್ಯೆಯನ್ನು ಸಮೀಪಿಸಿದಾಗ ನಾವು ಅನುಕರಣಶೀಲರಾಗುತ್ತೇವೆ. ಕುಸಿದುಬೀಳುತ್ತಿರುವುದನ್ನು ಅರಿಯಲು ಇತ್ಯಾತ್ಮಕ ಪದ್ಧತಿ, ಸೂತ್ರ ಅಥವಾ ತೀರ್ಮಾನಗಳಿಂದ ಯತ್ನಿಸದೇ ನೇತ್ಯಾತ್ಮಕ ಧೋರಣೆಯಿಂದ ಅನ್ವೇಷಿಸಬೇಕು, ಪರೀಕ್ಷಿಸಬೇಕು.

ಸಮಾಜ ಯಾಕೆ ಕುಸಿಯುತ್ತಿದೆ? ಮುರುಟುತ್ತಿದೆ? ಮುಖ್ಯತಃ ಒಬ್ಬ ವ್ಯಕ್ತಿಯಾಗಿ ನೀವು ಸೃಜನಶೀಲರಾಗದೇ ಇರುವುದು ಅನೇಕ ಮೂಲಭೂತ ಕಾರಣಗಳಲ್ಲಿ ಒಂದು. ಅದರ ಅರ್ಥ: ನಾನು ಮತ್ತು ನೀವು ಅನುಕರಣಶೀಲರಾಗಿಬಿಟ್ಟಿದ್ದೇವೆ. ಬಹಿರಂಗದಲ್ಲಿ ಹಾಗು ಅಂತರಂಗದಲ್ಲಿ ಎರಡೂ ಕಡೆ ನಾವು ನಕಲು ಮಾಡುತ್ತಿದ್ದೇವೆ. ಬಹಿರಂಗದಲ್ಲಿ— ಒಂದು ತಂತ್ರವನ್ನು ಕಲಿಯಬೇಕಿದ್ದರೆ, ಶಬ್ದದ ಮೂಲಕ ಪರಸ್ಪರರಲ್ಲಿ ವಿಚಾರ-ವಿನಿಮಯ ಮಾಡಿಕೊಳ್ಳಬೇಕಿದ್ದರೆ ಸಹಜವಾಗಿಯೇ ಅನುಕರಣೆ— ಅಲ್ಲಿ ಅನಿವಾರ್ಯ. ಇಂಜನಿಯರ್ ಆಗಲಿಕ್ಕೆ, ಮೊದಲು ಆ ತಂತ್ರ ಕಲಿಯಬೇಕು; ನಂತರ ಸೇತುವೆ ಕಟ್ಟುವಲ್ಲಿ ಆ ತಂತ್ರ ಉಪಯೋಗಿಸಬೇಕು. ಹೀಗೆ ಬಹಿರಂಗದಲ್ಲಿ ಕೆಲ ಮಟ್ಟಿಗೆ ಅನುಕರಣೆ, ನಕಲು ಮಾಡುವುದು ಇದ್ದೇ ಇದೆ. ಆದರೆ ಅಂತರಂಗದಲ್ಲಿ ಮಾನಸಿಕ ಮಟ್ಟದಲ್ಲಿ ಅನುಕರಣೆ ಇದ್ದಾಗ, ಖಂಡಿತ ಸೃಜನಶೀಲತೆ ನಿಂತುಹೋಗುತ್ತದೆ. ನಮ್ಮ ಶಿಕ್ಷಣ, ನಮ್ಮ ಸಾಮಾಜಿಕ ಸಂವಿಧಾನ, ನಮ್ಮ ಧಾರ್ಮಿಕತೆ ಎನಿಸಿಕೊಳ್ಳುವಂತಹ ವಿಧಿ-ವಿಧಾನಗಳೆಲ್ಲವೂ ಅನುಕರಣೆಯ ಮೇಲೇ ನಿಂತಿವೆ. ಅಂದರೆ ಒಂದು ವಿಶಿಷ್ಟ ಸಾಮಾಜಿಕ ಅಥವಾ ಧಾರ್ಮಿಕ ಬದುಕಿನ ಚೌಕಟ್ಟಿಗೆ ಸರಿ ಹೊಂದುವಂತೆ ನಾನಿದ್ದೇನೆ. ನಾನು ನಿಜವಾದ ವ್ಯಕ್ತಿಯಾಗಿಲ್ಲ. ಮಾನಸಿಕವಾಗಿ ಹೇಳಿದ್ದನ್ನೇ ಹೇಳುವ, ಕೆಲವು ನಿರ್ಬಂಧಿತ ಪ್ರತಿಸ್ಪಂದನೆ-ಹಿಂದುವಾಗಿಯೋ, ಕ್ರೈಸ್ತನಾಗಿಯೋ, ಬೌದ್ಧನಾಗಿಯೋ, ಜರ್ಮನ್‌ನಾಗಿಯೋ ಅಥವಾ ಇಂಗ್ಲೀಷ್ ಮನುಷ್ಯನಾಗಿಯೋ- ನೀಡುವ ಯಂತ್ರವಾಗಿಬಿಟ್ಟಿದ್ದೇನೆ. ನಮ್ಮ ಪ್ರತಿಸ್ಪಂದನೆಗಳೆಲ್ಲವೂ ಹೀಗೆ ಒಂದು ವಿಶಿಷ್ಟ ಸಾಮಾಜಿಕ ರೂಪಕ್ಕೆ— (ಅದು ಪಾಶ್ಚಿಮಾತ್ಯ ಅಥವಾ ಪೌರ್ವಾತ್ಯವಾಗಿರಬಹುದು; ಧಾರ್ಮಿಕ ಅಥವಾ ಭೌತಿಕವಾಗಿರಬಹುದು)—

ಅನುಗುಣವಾಗಿರುತ್ತವೆ. ಆದ್ದರಿಂದ ಸಮಾಜ ಖಂಡ-ಖಂಡವಾಗಿ, ಶಿಥಿಲ-ವಾಗುತ್ತಿರುವ ಹಲವಾರು ಮೂಲಭೂತ ಕಾರಣಗಳಲ್ಲಿ ಈ ಅನುಕರಣೆ ಒಂದಾದರೆ, ಇನ್ನೊಂದು ಈ ಅನುಕರಣೆಯ ಪರಿಪಾಕದ ಮೂರ್ತರೂಪವಾದ ನಾಯಕ ಅಥವಾ ನೇತಾರ ಮತ್ತೊಂದು ಕಾರಣ.

ಸಮಾಜದ ಶಿಥಿಲತೆಯ ಸ್ವರೂಪವನ್ನು ಅರಿಯುವಲ್ಲಿ ನೀವು ಮತ್ತು ನಾನು ವ್ಯಕ್ತಿಯಾಗಿ ಸೃಜನಶೀಲರಾಗಲು ಶಕ್ಯವೇ ಎನ್ನುವುದನ್ನು ವಿಚಾರಿ-ಸುವುದು ಮಹತ್ವದ್ದಲ್ಲವೆ? ಅನುಕರಣೆ ಎಲ್ಲಿರುತ್ತದೆಯೋ ಅಲ್ಲಿ ಶಿಥಿಲತೆ ಇದ್ದೇ ಇರುತ್ತದೆ. ಎಲ್ಲಿ ಅಧಿಕಾರಶಾಹಿ ಇರುತ್ತದೆಯೋ ಅಲ್ಲಿ ನಕಲು ಮಾಡುವುದು ಇರುತ್ತದೆ. ನಮ್ಮ ಮಾನಸಿಕ ಅಸ್ತಿತ್ವವು ಅಧಿಕಾರಶಾಹಿಯ ಮೇಲೆ ಅವಲಂಬಿಸಿರುವುದರಿಂದ ಸೃಜನಶೀಲರಾಗಲು ಈ ಅಧಿಕಾರಶಾಹಿಯಿಂದ ಬಿಡುಗಡೆ ಹೊಂದಬೇಕಾಗುತ್ತದೆ. ಅತ್ಯಂತ ಜೀವಂತ ಆಸಕ್ತಿಯ ಆನಂದ-ಕ್ಷಣ-ಗಳ ಆ ಸೃಜನಶೀಲ ಕ್ಷಣಗಳಲ್ಲಿ, ಹೇಳಿದ್ದನ್ನೇ ಹೇಳುವ, ನಕಲು ಮಾಡು-ತ್ತಿರುವ ಭಾವನೆ ಇಲ್ಲದಿರುವುದನ್ನು ಗುರುತಿಸಿರಬೇಕಲ್ಲವೆ? ಆ ಕ್ಷಣಗಳು ಹೊಚ್ಚಹೊಸ ಆನಂದದ ಸೃಜನಶೀಲ ಕ್ಷಣಗಳು.

* * *

೮. ನಂಬಿಕೆ

ನಂಬಿಕೆಯನ್ನು ನಾವು ವಿಶೇಷ ಉತ್ಸುಕತೆಯಿಂದ ಸ್ವೀಕರಿಸುತ್ತೇವೆ. ಅದು ಪ್ರಶ್ನಾತೀತವೆಂದೂ ಭಾವಿಸುತ್ತೇವೆ. ನಾವೇಕೆ ನಂಬಿಕೆಗಳನ್ನು ಸ್ವೀಕರಿ-ಸುತ್ತೇವೆ ? ಅದರ ಉದ್ದೇಶವೇನು ? ಕಾರಣಗಳೇನು ? ಎನ್ನುವುದನ್ನು ನಾವು ಅರಿತರೆ, ನಂಬಿಕೆಯನ್ನು ಸಂಪೂರ್ಣ ಅರಿಯುವುದರ ಜೊತೆಗೆ ಅದರಿಂದ ಬಿಡುಗಡೆಯನ್ನೂ ಪಡೆಯುತ್ತೇವೆ.

ನಂಬಿಕೆ ಹಲವು ಸಂಗತಿಗಳನ್ನು ಒಳಗೊಳ್ಳುತ್ತದೆ. ಕೆಲವು ವಾಸ್ತವ ಸಂಗತಿಗಳನ್ನು ನಾವು ನೋಡಿರದಿದ್ದರೂ, ಪ್ರಮಾಣೀಕರಿಸುವ ಹಲವು ವಿಧಾನ ಗಳಿಂದ ನಂಬಬಹುದು. ಉದಾ : ದಿಲ್ಲಿ, ಟೋಕಿಯೋ, ಚಿಕಾಗೋ ನಗರಗಳು ಇರುವ ಸಂಗತಿ.

ಅನಂತರ, ನಿಮ್ಮ ಪತ್ನಿ ನಿಮಗೆ ನಿಷ್ಠಳಾಗಿದ್ದಾಳೆ ಎಂದು ನಿಮಗೆ ಖಚಿತವಾಗಿ ಗೊತ್ತಿಲ್ಲದಿದ್ದರೂ ನೀವು ನಂಬಬಹುದು. ಆಂತರಂಗಿಕವಾಗಿ ಅವಳು ನಿಷ್ಠಳಾಗಿರದಿದ್ದರೂ, ಅವಳು ಯಾರ ಸಂಗಡವೋ ಓಡಿ ಹೋಗಿಲ್ಲ, ಹೋಗುತ್ತಿಲ್ಲ ಎಂಬ ಕಾರಣಕ್ಕಾಗಿ, ನೀವು ಅವಳನ್ನು ನಂಬಬಹುದು. ಅವಳು ನಿಮ್ಮನ್ನು ಹಾಗೆ ವಂಚಿಸಿದರೆ, ನೀವೂ ಹಾಗೇ ಅವಳನ್ನು ವಂಚಿಸುತ್ತಿರ-ಬಹುದು.

ರಾಜಕೀಯ, ಧಾರ್ಮಿಕ, ರಾಷ್ಟ್ರೀಯ ಇತ್ಯಾದಿ ವಿವಿಧ ಬಗೆಯ ನಂಬಿಕೆಗಳು ಹೇಗೆ ಮನುಷ್ಯರನ್ನು ಬೇರೆ-ಬೇರೆ ಮಾಡಿ ಗೊಂದಲ, ಸಂಘರ್ಷ, ವೈಮನಸ್ಸುಗಳನ್ನು ಸೃಷ್ಟಿಸುತ್ತಿವೆ ಎನ್ನುವುದು ಎಲ್ಲರ ಗಮನಕ್ಕೂ ಬಂದ ಸಂಗತಿ.

ಅದೇ ತರಹ ಪುನರ್ಜನ್ಮ ನಿಜವಾಗಿಯೂ ಉಂಟೋ ಇಲ್ಲವೋ ಎಂದು ಖಚಿತವಾಗಿ ನಿಮಗೆ ಗೊತ್ತಿಲ್ಲದಿದ್ದರೂ, ಸಿದ್ಧಮಾಡಿ ತೋರಿಸಲಾಗದ್ದರಿಂದ

ಪುನರ್ಜನ್ಮವನ್ನು ನೀವು ನಂಬಬಹುದು. ತಮ್ಮ ಧರ್ಮದವರೆಲ್ಲರೂ ಒಬ್ಬರನ್ನೊಬ್ಬರು ಪ್ರೀತಿಸಲೇ ಬೇಕು ಎಂಬುದನ್ನು ಎಲ್ಲರೂ ನಂಬಿದ್ದರೂ ದೈಹಿಕ ಹಾಗು ಮಾನಸಿಕವಾಗಿ ಕೊಲ್ಲಲು ಇತರರಂತೆ ಧಾವಿಸಬಹುದು. ಆದರೆ ದೇವರನ್ನು ನಂಬದೇ ಇದ್ದವರು, ಇತರರಿಗೆ ಒಳ್ಳೆಯದನ್ನು ಮಾಡಬಹುದು. ಅದೇ ತರಹ ದೇವರನ್ನು ನಂಬಿ, ಆ ನಂಬಿಕೆಗಾಗಿಯೇ ಕೊಲ್ಲುವವರೂ ಇದ್ದಾರೆ— ಶಾಂತಿಗಾಗಿಯೇ ಯುದ್ಧಮಾಡುವ ತಯಾರಿಯಲ್ಲಿರುವವರಂತೆ. ಅದಕ್ಕಾಗಿ ಅತ್ಯಂತ ಮಹತ್ವದ ಪ್ರಶ್ನೆ : ನಾವು ಯಾಕಾಗಿ ಯಾವುದಾದರೂ ಒಂದು ನಂಬಿಕೆಗೆ ಆತುಕೊಂಡಿರುತ್ತೇವೆ ? ಈ ಪ್ರಶ್ನೆಯಿಂದ ನಾವು ಬದುಕಿನ ನಿಗೂಢತೆಯನ್ನು ಅಲ್ಲಗಳೆದಂತಾಗುವುದಿಲ್ಲ. ನಂಬಿಕೆ ಒಂದಾದರೆ, ಇದ್ದದ್ದು ಅಥವಾ ಸದ್ಯ, ಪ್ರತ್ಯಕ್ಷ ಬೇರೆ ಇರುತ್ತದೆ. ನಂಬಿಕೆ ಒಂದು ಶಬ್ದ. ವಿಚಾರ. ಇರುವ ಸತ್ಯವಲ್ಲ. ನಮ್ಮ ಹೆಸರೇ 'ನಾವು' ಹೇಗೆ ಆಗುವುದಿಲ್ಲವೋ ಹಾಗೆ.

ನಂಬಿಕೆ ಹೇಳುವ ಸತ್ಯವನ್ನು ಅನುಭವದ ಮೂಲಕ ತಲುಪಲು ಆಸೆ, ಯತ್ನ ಇರುತ್ತದೆ. ಆದರೆ ಈ ನಂಬಿಕೆಯೇ ಅನುಭವವನ್ನು ನಿರ್ಬಂಧಿಸು-ತ್ತದೆ. ಅನುಭವ ನಂಬಿಕೆಯನ್ನು ಸಿದ್ಧಪಡಿಸುವ ಬದಲಾಗಿ, ನಂಬಿಕೆ ಅನು-ಭವವನ್ನು ಸೃಷ್ಟಿಸುತ್ತದೆ. ದೇವರಲ್ಲಿಯ ನಿಮ್ಮ ವಿಶಿಷ್ಟ ನಂಬಿಕೆ ನೀವು ಹೇಳುವ ದೇವರ ಅನುಭವ ನೀಡುತ್ತದೆ. ನೀವು ನಂಬುವದನ್ನೇ, ನಿಮ್ಮ ನಂಬಿಕೆಯನ್ನೇ ನೀವು ಅನುಭವಿಸುತ್ತೀರಿ, ನಿಮ್ಮ ಅನುಭವದಲ್ಲಿ ಕಾಣುತ್ತೀರಿ. ಕ್ರೈಸ್ತರು ಬ್ರಹ್ಮಚಾರಿಣಿಯರನ್ನು, ದೇವದೂತರನ್ನು, ಏಸುಕ್ರಿಸ್ತನನ್ನು ಕಂಡರೆ, ಹಿಂದುಗಳು ತಮ್ಮ ೩೩ ಕೋಟಿ ದೇವತೆಗಳನ್ನು ಕಾಣುತ್ತಾರೆ; ಮುಸ್ಲಿಂರು, ಬೌದ್ಧರು, ಯಹೂದಿಗಳು, ಕಮ್ಯುನಿಸ್ಟರು ಎಲ್ಲರೂ ಹೀಗೆಯೇ.

ಇಲ್ಲಿ ಮುಖ್ಯವಾದದ್ದು ನೀವು ಏನನ್ನು ನಂಬುತ್ತೀರಿ ಎನ್ನುವುದಕ್ಕಿಂತ ನೀವು ಯಾತಕ್ಕೆ ನಂಬುತ್ತೀರಿ ಎನ್ನುವುದು. ಈ ನಂಬಿಕೆ, ಇರುವ ಸತ್ಯ-ಕ್ಕಿಂತ, ಸದ್ಯ; ಪ್ರತ್ಯಕ್ಷಕ್ಕಿಂತ ಯಾವ ರೀತಿಯಿಂದ ಭಿನ್ನತೆ ತರುತ್ತದೆ ಎನ್ನು-ವುದು. ವಾಸ್ತವಿಕ ಸತ್ಯ, ಸದ್ಯ; ಪ್ರತ್ಯಕ್ಷ— ನಂಬಿಕೆ ಅಥವಾ ಅಪನಂಬಿಕೆ-ಯಿಂದ ಯಾವತ್ತೂ ಪ್ರಭಾವಿತವಾಗುವುದಿಲ್ಲ. ಅದಕ್ಕಾಗಿ, ಮನುಷ್ಯ ಯಾಕಾಗಿ ಏನನ್ನೋ ನಂಬುತ್ತಾನೆ ? ಈ ನಂಬಿಕೆಯ ಮೂಲಾಧಾರ ಏನು ಎನ್ನುವುದನ್ನು ಅರಿಯಬೇಕು.

ನಂಬಿಕೆಯೊಡನೆ ನಮ್ಮ ಸಂಬಂಧವನ್ನು ಅರ್ಥಮಾಡಿಕೊಂಡಾಗ ಅದು ಶಕ್ಯ. ಇದ್ದ ನಂಬಿಕೆಗಳನ್ನು ತೊರೆದು ಆ ಜಾಗದಲ್ಲಿ ಬೇರೆ ನಂಬಿಕೆಗಳನ್ನು ಬೆಳೆಸಿಕೊಳ್ಳುವುದರಿಂದ ಅಲ್ಲ ಎಲ್ಲ ಬಗೆಯ ನಂಬಿಕೆಗಳಿಂದಲೂ ಬಿಡುಗಡೆ ಪಡೆದು, ಬದುಕಿನ ಪ್ರತಿ ನಿಮಿಷವನ್ನು ಹೊಚ್ಚಹೊಸದಾಗಿ ನೋಡಲು, ಅನುಭವಿಸಲು ಶಕ್ಯ. ಕ್ಷಣ-ಕ್ಷಣಕ್ಕೂ ಪ್ರತಿಯೊಂದನ್ನೂ ಹೊಸದಾಗಿ ಭೇಟಿ ಮಾಡುವ ಸಾಮರ್ಥ್ಯ--ಭೂತದ ಪ್ರತಿಕ್ರಿಯೆಯ ನಿರ್ಬಂಧವಿಲ್ಲದೇ— ಇದ್ದುದರ ಹಾಗು ವ್ಯಕ್ತಿಯ ಮಧ್ಯೆ ಯಾವುದೇ ಬಗೆಯ ಅಡ್ಡಿ ಆತಂಕವಿಲ್ಲದೇ ನೇರ ಅರಿವು ಇರುವ ಸ್ಥಿತಿಯೇ ಸತ್ಯ.

ನಮ್ಮನ್ನು ನಾವೇ ಸರಿಯಾಗಿ ಗಮನಿಸಿಕೊಂಡರೆ, ನಂಬಿಕೆಯನ್ನು ಸ್ವೀಕರಿಸುವ ಆಸೆಗೆ ಕಾರಣ--ಭಯ ಎನ್ನುವುದು ಅರಿವಿಗೆ ಬರುತ್ತದೆ. ನಮಗೆ ನಂಬಿಕೆಯೇ ಇಲ್ಲದಿದ್ದರೆ ಏನಾಗುತ್ತದೆ ? ದೇವರು, ಕಮ್ಯುನಿಜಂ, ಸಮಾಜ-ವಾದ, ಸಾಮ್ರಾಜ್ಯವಾದ ಅಥವಾ ಧರ್ಮ ಇತ್ಯಾದಿ ಯಾವುದೇ ನಂಬಿಕೆಗಳ ಆಧಾರದ ಮೇಲೆ ಸೃಷ್ಟಿಗೊಂಡ ಕ್ರಿಯೆಗಳ ಮಾದರಿ, ಸೂತ್ರ ನಿಮಗಿಲ್ಲದಿದ್ದರೆ ನಾವು ದಿಕ್ಕುತಪ್ಪಿದವರಂತೆ ಪರಿತಪಿಸುತ್ತೇವಲ್ಲವೆ ? ಅಂದರೆ ಈ ನಂಬಿಕೆಯ ಸ್ವೀಕಾರ 'ನಾವೇನೂ ಅಲ್ಲ, ಖಾಲಿ, ಟೊಳ್ಳು' ಎಂಬ ಭಯ. ನಂಬಿಕೆ ಈ ಭಯವನ್ನು ಮುಚ್ಚುವ ತೆರೆ ಎಂದಾಯಿತು. ಖಾಲಿಯಾಗಿರುವ ಪಾತ್ರೆ ಪ್ರಯೋಜನಕಾರಿಯಾಗಿರುವಂತೆ, ಖಾಲಿಯಾದ ಮನಸ್ಸು ಉಪಯುಕ್ತ. ನಂಬಿಕೆ, ಸಿದ್ಧಾಂತ, ಹೇಳಿಕೆಗಳು— ಇವುಗಳಿಂದ ತುಂಬಿ ತುಳುಕುತ್ತಿರುವ ನಮ್ಮ ಮನಸ್ಸು ತನ್ನ ಸೃಜನಶೀಲತೆಯನ್ನು ಕಳೆದುಕೊಂಡು, ಗಿಳಿಯ ಹಾಗೆ ಹೇಳಿದ್ದನ್ನೇ ಹೇಳುವ ಯಂತ್ರವಾಗಿಬಿಟ್ಟಿದೆ. ಈ ಖಾಲಿತನದ ಭಯ, ನಿಂತಲ್ಲೇ ನಿಂತುಹೋಗುವ ಭಯ, ಏಕಾಂಗಿತನದ ಭಯ, ಗೆಲ್ಲಲಾರೆನೆಂಬ ಭಯ, ಏನೋ ಆಗಲಾರೆನೆಂಬ ಭಯ ಇತ್ಯಾದಿ ಹಲವಾರು ರೂಪಧರಿಸಿ ಮೆರೆವ ಭಯದಿಂದ ಪಾರಾಗಲು, ನಾವು ಆತುರಾತುರವಾಗಿ ನಂಬಿಕೆಗಳನ್ನು ಸ್ವೀಕರಿಸುತ್ತೇವೆ. ಇವುಗಳ ಜತೆ ಬದುಕಿನ ಅನಿಶ್ಚಿತತೆ, ಸದಾ ಬದಲಾಗು-ತ್ತಿರುವ ಈ ಪ್ರಪಂಚದಲ್ಲಿ ಸಂರಕ್ಷಣೆಯ ಅಭಾವ. ಸಂಬಂಧಗಳಲ್ಲಿಯ ಅಭದ್ರತೆ ಅಥವಾ ಬದುಕಿನ ಅಗಾಧತೆಯನ್ನು ಕಂಡು ಕಂಗಾಲಾಗಿ, ಎದು-ರಿಸಲು, ಅರ್ಥಮಾಡಿಕೊಳ್ಳಲು ವಿಫಲಗೊಂಡು, ಆಶ್ರಯವನ್ನು ಅರಸುತ್ತಿರುವ

ಮನಸ್ಸು—ಹೀಗೆ ಅನೇಕಾನೇಕ ಕಾರಣಗಳು ಇರಬಹುದು—ನಾವು ನಂಬಿಕೆಗೆ ಅತುಕೊಳ್ಳಲಿಕ್ಕೆ, ಜೋತುಬೀಳಲಿಕ್ಕೆ.

ಈ ನಂಬಿಕೆಗಳ ಮೂಲಕವೇ ನಮ್ಮನ್ನು ನಾವು ಅರಿಯುವುದು ಸಾಧ್ಯವಿಲ್ಲವೆ? ಎಂಬ ಪ್ರಶ್ನೆಗೆ ಜೆ. ಕೆ. 'ಸಾಧ್ಯವಿಲ್ಲ' ಎನ್ನುತ್ತಾರೆ. ತದ್ವಿರುದ್ಧವಾಗಿ, ನಂಬಿಕೆ— ಅದು ಧಾರ್ಮಿಕವಾಗಿರಲಿ, ರಾಜಕೀಯವಾಗಿರಲಿ, ನಮ್ಮನ್ನು ನಾವು ಅರ್ಥಮಾಡಿಕೊಳ್ಳುವಲ್ಲಿ ಸಹಾಯ ನೀಡದು. ನಮ್ಮನ್ನೇ ನಾವು ಗಮನಿಸುವಾಗ ಅದು ಒಂದು ಪರದೆಯಂತೆ ತಡೆಯೊಡ್ಡುತ್ತದೆ. ನಾವು ಅತುಕೊಂಡಿರುವ ಹಲವಾರು ಬಗೆಯ ನಂಬಿಕೆಗಳನ್ನು ಅರಿತು, ಬಿಡುಗಡೆ ಪಡೆದರೆ, ಕೊನೆಗೆ ಉಳಿಯುವುದೇ ನಮ್ಮ ಮನಸ್ಸು. ತನ್ನೊಡನೆ ಸಮೀಕರಿಸಿಕೊಂಡಿರುವ ನಂಬಿಕೆಗಳನ್ನೆಲ್ಲ ಬದಿಗಿರಿಸಿದಾಗ ಮನಸ್ಸು ತನ್ನನ್ನೇ ತಾನು ನೋಡಿಕೊಳ್ಳುತ್ತದೆ. ಆಗಲೇ ಆರಂಭ ತನ್ನನ್ನು ತಾನು ಅರಿಯುವ ಪ್ರಕ್ರಿಯೆ.

ನಂಬಿಕೆ ಭಯದಲ್ಲಿ ಜನ್ಮತಾಳಿದ್ದರಿಂದ ಅದು ಅತ್ಯಂತ ವಿಧ್ವಂಸಕ ಸ್ವರೂಪದ್ದು. ನಂಬಿಕೆ ಜನರನ್ನು ವಿಭಜಿಸುತ್ತದೆ. ಕಠಿಣ ಹಾಗು ಕ್ರೂರ ಹೃದಯಿಗಳನ್ನಾಗಿ ಮಾಡುತ್ತದೆ; ಪರಸ್ಪರ ದ್ವೇಷಿಸಲು ಹಚ್ಚುತ್ತದೆ; ಯುದ್ಧಕ್ಕೆ ಸನ್ನದ್ಧರಾಗುವಂತೆ ಪ್ರೇರೇಪಿಸುತ್ತದೆ. ಆದ್ದರಿಂದ ನಂಬಿಕೆ ಹಾಗು ಅದಕ್ಕೆ ಕಾರಣವಾದ ಭಯ–ಇವುಗಳಿಂದ ಬಿಡುಗಡೆ ಪಡೆಯಬೇಕು. ಭಯದ ವಾಸ್ತವತೆಯನ್ನು ಎದುರಿಸಲು, ನಂಬಿಕೆಯಿಂದ ಬಿಡುಗಡೆ ಅಗತ್ಯ. ಆದರ್ಶಗಳಂತೆ ನಂಬಿಕೆ ಸಹ 'ಇದ್ದುದರಿಂದ' ಸದ್ಯ ಪ್ರತ್ಯಕ್ಷದಿಂದ ಪಲಾಯನ ಮಾಡುವಂತಹದು. ಭಯ ಇರದಿದ್ದಾಗ ಮನಸ್ಸು ಬೇರೆಯದೇ ಆದ ಸ್ಥಿತಿಯಲ್ಲಿರುತ್ತದೆ. ಆಗಲೇ ದೇವರು, ಸತ್ಯ, ಸೌಂದರ್ಯ ಇತ್ಯಾದಿಗಳನ್ನು ಅರಿಯಲು ಶಕ್ಯ. ಭಯ, ನಂಬಿಕೆ ಇತ್ಯಾದಿಗಳಿಂದ ಕವಿಯಲ್ಪಟ್ಟ ಮನಸ್ಸು ಕೇವಲ ಭ್ರಮೆಯಲ್ಲಿರುತ್ತದೆಯೇ ಹೊರತು ಸತ್ಯದರ್ಶನಕ್ಕೆ. ಆ ಅತ್ಯಂತ ಶ್ರೇಷ್ಠತಮವಾದುದನ್ನು ಅರಿಯಲು ಪಕ್ವವಾಗುವುದಿಲ್ಲ.

ಈ ನಂಬಿಕೆ ನಮ್ಮ ಬದುಕಿನಲ್ಲಿ ಅಸಾಧಾರಣ ಪಾತ್ರವಹಿಸುತ್ತದೆ. ನಾವು ಹೆಚ್ಚೆಚ್ಚು ಬುದ್ಧಿಜೀವಿಗಳು, ಸುಸಂಸ್ಕೃತರು, ಅಧ್ಯಾತ್ಮವಾದಿಗಳು

ಅಂತೆಲ್ಲ ಆಗುತ್ತ ಹೋದಂತೆ ' ಅರಿಯುವ ಶಕ್ತಿ ' ಕಡಿಮೆ ಆಗುತ್ತ ಹೋಗುತ್ತದೆ. ಇಂದಿನ ಆಧುನಿಕ ಪ್ರಪಂಚದಲ್ಲಿ ಸಹ ಅಸಂಖ್ಯ ಅನಾಗರಿಕ ಮೂಢನಂಬಿಕೆಗಳಿವೆ. ಹೆಚ್ಚು ವಿಚಾರ ಮಾಡುವವರು, ಹೆಚ್ಚು ಎಚ್ಚರಗೊಂಡವರು, ಹೆಚ್ಚು ಜಾಗ್ರತರಾದವರು ನಂಬುವುದು ಕಡಿಮೆ. ಕಾರಣವಿಷ್ಟೇ : ನಂಬಿಕೆ ಬಂಧಿಸುತ್ತದೆ, ಬೇರ್ಪಡಿಸುತ್ತದೆ. ಇದು ಪ್ರಪಂಚದ ಆರ್ಥಿಕ-ರಾಜಕೀಯ ಜಗತ್ತಿನಲ್ಲಷ್ಟೇ ಅಲ್ಲ, ಆಧ್ಯಾತ್ಮಿಕ ಪ್ರಪಂಚದಲ್ಲಿಯೂ ಹಾಗೆಯೇ.

* * *

೯. ಧರ್ಮ

ಒಂದೆಡೆ ಜೆ. ಕೆ. ಹೀಗೆ ಬರೆದಿದ್ದಾರೆ :

ಒಮ್ಮೆ ಒಬ್ಬ ಸಂನ್ಯಾಸಿ ನನ್ನನ್ನು ನೋಡಲು ಬಂದಿದ್ದ. ಆತ ತುಂಬ ದುಃಖದಿಂದಿದ್ದ. ಆತನೇ ಹೇಳಿದಂತೆ ಆತನ ಕಥೆ ಹೀಗಿದೆ : ಹಿಂದೆ ಆತ ಬ್ರಹ್ಮಚರ್ಯದ ಬದುಕನ್ನೇ ನಡೆಸುವುದಾಗಿ ಪ್ರತಿಜ್ಞೆಗೈದು, ಈ ಜಗತ್ತನ್ನು ತ್ಯಜಿಸಿದ್ದ. ಒಬ್ಬ ಭಿಕ್ಷುವಾಗಿ ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತಿದ್ದ. ಆದರೆ ಅತನ ಕಾಮದ ಬಯಕೆ ತುಂಬ ತೀವ್ರವಾಗಿದ್ದು, ಎಷ್ಟು ತ್ರಾಸು ಕೊಡುತ್ತಿತ್ತೆಂದರೆ : ಒಂದು ದಿನ ಆತ ತನ್ನ ಜನನೇಂದ್ರಿಯವನ್ನೇ ಶಸ್ತ್ರಕ್ರಿಯೆಯ ಮೂಲಕ ತೆಗೆಸಿಹಾಕಿಬಿಡಲು ನಿರ್ಧರಿಸಿದ. ಹಾಗೆ ಮಾಡಿದ ನಂತರ ಹಲವಾರು ತಿಂಗಳುಗಳ ಕಾಲ ನಿರಂತರ ಯಾತನೆಯಲ್ಲೇ ಆತ ಬಳಲಿದ. ಆದರೂ ನಂತರ ಅದು ನಿಧಾನವಾಗಿ ಗುಣವಾಯಿತು (ವಾಸಿಯಾಯಿತು). ಮತ್ತು ಹಲವಾರು ವರ್ಷಗಳ ನಂತರವೇ ತಾನು ಮಾಡಿದುದರ ಸಂಪೂರ್ಣ ಅರಿವು ಅವನಿಗಾಯಿತು. ಆ ನಂತರ ಆತ ನನ್ನನ್ನು ನೋಡಲು ಬಂದಿದ್ದ. ಆ ಸಣ್ಣ ಕೊಠಡಿಯಲ್ಲಿ ನನ್ನೊಡನೆ ಕುಳಿತು ದೈಹಿಕವಾಗಿಯಲ್ಲ, ಆಂತರಿಕವಾಗಿ ವಿಕೃತಗೊಂಡ ತಾನು ಮತ್ತೆ ಸಾಮಾನ್ಯನಂತಾಗಲು ಏನು ಮಾಡಬಹುದು ಎಂದು ಪ್ರಶ್ನಿಸಿದ. ಲೈಂಗಿಕ ಚಟುವಟಿಕೆ ಧಾರ್ಮಿಕ ಬದುಕಿಗೆ ವಿರೋಧವಾದದ್ದು ಎಂಬ ಗ್ರಹಿಕೆ ಇರುವುದರಿಂದ ಆತ ಹಾಗೆ ಮಾಡಿಕೊಂಡಿದ್ದ. ಅದು ಸಂತೋಷ ಬಯಸುವ ಲೌಕಿಕ ಜಗತ್ತಿಗೆ ಸೇರಿದ್ದರಿಂದ, ಅತ್ಯಂತ ಸಾಮಾನ್ಯವಾದ್ದರಿಂದ ನಿಜವಾದ ಸಂನ್ಯಾಸಿ ಅವುಗಳಿಂದ ಹೇಗಾದರೂ ದೂರವಾಗಲೇ ಬೇಕಿತ್ತು. " ಈಗ ನನ್ನನ್ನೇ ಸಂಪೂರ್ಣ ಕಳೆದುಕೊಂಡು, ನನ್ನ ಪುರುಷತ್ವವನ್ನೇ ನಾಶಪಡಿಸಿಕೊಂಡಿದ್ದೇನೆ. ನನ್ನ ಲೈಂಗಿಕ ಬಯಕೆಗಳ ವಿರುದ್ಧ ಎಷ್ಟೆಲ್ಲ ಉಗ್ರವಾಗಿ ಹೋರಾಟ ಮಾಡಿದೆ, ಕಾಮವನ್ನು

ನಿಯಂತ್ರಿಸಿಕೊಳ್ಳಲು ಪ್ರಯತ್ನಪಟ್ಟೆ. ಆದರೂ ಅಂತಿಮವಾಗಿ ಆ ಭಯಂಕ ಘಟನೆ ನಡೆದುಬಿಟ್ಟಿತು. ನಾನೀಗ ಏನು ಮಾಡಲಿ ? ನಾನು ಮಾಡಿದ್ದು ತಪ್ಪು ಎಂಬುದು ನನಗೆ ಗೊತ್ತಿದೆ. ನನ್ನ ಚೈತನ್ಯ ಸಂಪೂರ್ಣ ಬತ್ತಿ-ಹೋಗಿದೆ. ಕರಾಳ ಕಗ್ಗತ್ತಲಿನಲ್ಲಿ ನನ್ನ ಬದುಕನ್ನು ನಾನು ಕೊನೆಗೊಳಿಸಿ-ಕೊಳ್ಳುವಂತೆ ಕಾಣುತ್ತದೆ." ಎಂದು ನುಡಿದು ನನ್ನ ಕೈಹಿಡಿದುಕೊಂಡ ಸ್ವಲ್ಪಕಾಲ ನಾವಿಬ್ಬರೂ ಮೌನವಾಗಿ ಕುಳಿತಿದ್ದೆವು.

ಈ ದುರಂತ ಘಟನೆಯನ್ನು ಹೇಳಿ ಜೆ. ಕೆ. ಪ್ರಶ್ನಿಸುತ್ತಾರೆ : ಇದ ಧಾರ್ಮಿಕ ಬದುಕೇ ? ಸಂತೋಷವನ್ನು, ಸೌಂದರ್ಯವನ್ನು ನಿರಾಕರಿಸಿ ಉಪೇಕ್ಷಿಸಿ ಸಾಗುವ ದಾರಿ ಧಾರ್ಮಿಕ ಬದುಕಿಗೆ ಒಯ್ಯುತ್ತದೆಯೆ ? ಮುಗಿ-ಲಿನ ಸೌಂದರ್ಯ, ಗುಡ್ಡ-ಬೆಟ್ಟಗಳ ಅಂದ, ಮನುಷ್ಯಾಕೃತಿಯ ಚೆಲುವು— ಎಲ್ಲವನ್ನೂ ನಿರಾಕರಿಸುವುದು ಧಾರ್ಮಿಕ ಬದುಕಿಗೆ ತಲುಪಿಸೀತೆ ಹೌದೆನ್ನುತ್ತಾರೆ— ನಮ್ಮ ಅನೇಕಾನೇಕ ಸಾಧುಗಳು, ಸಂನ್ಯಾಸಿಗಳು; ಇ ನಂಬಿಕೆಯಿಂದಲೇ ತಮ್ಮನ್ನು ತಾವೇ ದಂಡಿಸಿಕೊಳ್ಳುತ್ತಾರೆ. ಆದರೆ ಹೀ ದಂಡಿಸಲ್ಪಟ್ಟ, ವಿಕೃತಗೊಂಡ, ತಿರುಚಿದ ಮನಸ್ಸು ಧಾರ್ಮಿಕ ಬದುಕನ ಕಂಡುಕೊಳ್ಳಲು ಸಮರ್ಥವಾದೀತೆ ? ಆದರೆ ಎಲ್ಲ ಧರ್ಮಗಳೂ ದೇವರನ ಕಾಣಲು, ಸತ್ಯದ ದರ್ಶನ ಮಾಡಲು ದಂಡನೆಯ, ಹಿಂಸೆಯ ಮೂಲಕ ಮಾತ್ರ ಶಕ್ಯ ಎಂದು ಒತ್ತಿ-ಒತ್ತಿ ಹೇಳುತ್ತಾರೆ. ಅವರೆಲ್ಲರೂ ಸಾಮಾನ್ಯವಾ ಧಾರ್ಮಿಕ ಅಥವಾ ಆಧ್ಯಾತ್ಮಿಕ ಬದುಕು ಹಾಗು 'ಇಹ'ದ ಅಥವ ಲೌಕಿಕದ ಬದುಕು ಎಂದು ವಿಂಗಡಿಸುತ್ತಾರೆ.

ತುಂಬ ಜಾಣನಾಗಿ, ವಿದ್ವಾಂಸನೂ ಆಗಿ, ಇನ್ನೊಬ್ಬರ ಅಥವ ತನ್ನದೇ ವಿಚಾರಗಳಿಂದ ತನ್ನ ಬದುಕನ್ನು ತುಂಬಿಕೊಂಡು, ತನ್ನ ಇಡಿ ಬದುಕನ್ನು ಕೇವಲ ಸಂತೋಷ-ಮನೋರಂಜನೆಗಾಗಿ ಮೀಸಲಾಗಿರುವವ ಆಗೀಗ ಕ್ವಚಿತ್ತಾಗಿ ದುಃಖ ಮತ್ತು ಧಾರ್ಮಿಕತೆಗಳ ಸೆಳೆಮಿಂಚು ಮಿನುಗಿ ದರೂ, ಸಂತೋಷಕ್ಕಾಗಿಯೇ ಬದುಕುವುದರಿಂದ ಆತ 'ಇಹ'ದ ವ್ಯಕ್ತಿಯೆ ಅದೇ ತರಹ ಪ್ರತಿಭಾನ್ವಿತನೊಬ್ಬ ತನ್ನ ಪ್ರತಿಭೆಯನ್ನು ಸಮಾಜದ ಲಾಭ ಕ್ಕಾಗಲಿ ಅಥವಾ ತನ್ನ ಸಂತೋಷಕ್ಕೇ ಆಗಲಿ ದುಡಿಸಿಕೊಂಡು, ಪ್ರಸಿದ

ಸಾಧಿಸುವುದರ ಮೂಲಕ ಪ್ರತಿಭೆಯನ್ನು ಸಾರ್ಥಕಪಡಿಸಿಕೊಳ್ಳುವವನೂ 'ಇಹ'ದ ವ್ಯಕ್ತಿಯೇ. ಅದೇ ಬಗೆಯಲ್ಲೇ ಚರ್ಚ್‌ಗೆ, ದೇವಾಲಯಕ್ಕೆ ಅಥವಾ ಮಸೀದೆಗೆ ಹೋಗುವುದು, ಪ್ರಾರ್ಥನೆ ಸಲ್ಲಿಸುವುದು, ಅವುಗಳ ಮತಾಂಧತೆ, ಪೂರ್ವಗ್ರಹಗಳಲ್ಲಿ ಮುಳುಗಿರುವುದು ಹಾಗು ಅವುಗಳ ಪಾಶ-ವೀಯತೆಗಳ ಬಗ್ಗೆ ಕಿಂಚಿತ್ ಅರಿವೂ ಇಲ್ಲದೇ ಇರುವುದೂ 'ಇಹ'ದ ಬದುಕೇ, ಲೌಕಿಕವೇ. ಸ್ವದೇಶಾಭಿಮಾನ, ರಾಷ್ಟ್ರೀಯ ಮನೋಭಾವ, ಆದರ್ಶಸಾಧನೆ–ಇವೂ ಐಹಿಕವೇ. ಅದೇ ತರಹ ಮಠದಲ್ಲಿ ತನ್ನನ್ನು ತಾನೇ ಮುಚ್ಚಿ ಅವಿತಿಟ್ಟುಕೊಂಡು—ದಿನಾಲು ಒಂದು ಹೊತ್ತಿಗೆ ಕೈಯಲ್ಲಿ ಪುಸ್ತಕ ಹಿಡಿದುಕೊಂಡೇ ಎದ್ದು, ಓದುತ್ತ, ಪ್ರಾರ್ಥನೆ ಮಾಡುತ್ತ ಬದುಕುವುದೂ 'ಇಹ'ದ ಬದುಕೇ, ಕೇವಲ ಲೌಕಿಕವೇ. ಒಳ್ಳೆಯ ಕೆಲಸ ಮಾಡಲೆಂದೇ ಮನೆಯ ಹೊರ-ಹೊರಟ ಸಮಾಜ ಸುಧಾರಕನಿರಲಿ, ಕ್ರೈಸ್ತ ಮಿಶನರಿ ಇರಲಿ, ಈ ಜಗತ್ತಿನೊಡನೆ ಆತನ ಸಂಬಂಧ ರಾಜಕಾರಣಿಗೆ ಈ ಜಗತ್ತಿನೊಂದಿಗೆ ಇರುವ ಸಂಬಂಧದಂತೆಯೇ. ಈ ಲೌಕಿಕ ಹಾಗು ಧಾರ್ಮಿಕ ಬದುಕಗಳ ಮಧ್ಯೆ ವಿಭಜನೆ ಇರುವುದು ಈ ಲೌಕಿಕತೆಯ ಅಂತರ್ಯದ ಸಾರಕ್ಕೆ ಸಂಬಂಧಪಟ್ಟಹಾಗೆ. ಈ ಸಾಧು-ಭಿಕ್ಷುಗಳು, ಮಠಾಧಿಪತಿಗಳು ಸಮಾಜ ಸುಧಾರಕರು— ಇವರುಗಳ ಮನಸ್ಸು, ಕೇವಲ ಸಂತೋಷವೇ ಉದ್ದೇಶ-ವಾಗಿಯುಳ್ಳ ಜನರ ಮನಸ್ಸಿಗಿಂತ ಯಾವ ತರಹದಲ್ಲೂ ಭಿನ್ನವಲ್ಲ.

ಆದ್ದರಿಂದ ಲೌಕಿಕ, ಅಲೌಕಿಕ ಎಂದು ವಿಭಾಗಿಸದೆ ಇರುವುದು ಮುಖ್ಯ. 'ಐಹಿಕ-ಧಾರ್ಮಿಕ' ಎಂದು ಬದುಕನ್ನು ವಿಭಜನೆ ಮಾಡದೇ ಇರುವುದು ಮಹತ್ವದ್ದು. ಯಾಕೆಂದರೆ ಈ ಭೌತಿಕ ಪ್ರಪಂಚ, ಲೌಕಿಕ ಬದುಕು ಇರದೇ ನಮ್ಮಗ್ಯಾರಿಗೂ ಇಲ್ಲಿ ಇರಲು ಶಕ್ಯವೇ ಇಲ್ಲ. ಈ ಗಗನದ ಹಾಗು ಆ ಗುಡ್ಡದ ತಲೆಯ ಒಂಟಿಮರದ ಸೌಂದರ್ಯವಿಲ್ಲದೇ, ಮಹಿಳೆಯ ಆ ಓಡಾಟವಿಲ್ಲದೇ, ಆ ಪುರುಷನ ಕುದುರೆ ಸವಾರಿ ಇಲ್ಲದೇ ಬದುಕೇ ಸಾಧ್ಯವಾಗುವುದಿಲ್ಲ. ಬದುಕಿನ ಯಾವುದೋ ವಿಶಿಷ್ಟಭಾಗವನ್ನು ಉಳಿದ ಭಾಗದಿಂದ ವಿರುದ್ಧವೆಂದು ಭಾವಿಸಿ ಧಾರ್ಮಿಕ ಎಂದು ಕರೆಯುವುದು, ಅಷ್ಟನ್ನೇ 'ಬದುಕು' ಎಂದು ಭಾವಿಸು-ವುದು ಸರಿಯಲ್ಲ. ನಮ್ಮ ಕಾಳಜಿ ಬದುಕಿನ ಕೇವಲ ಒಂದು ಭಾಗಕ್ಕಷ್ಟೇ

ಸೀಮಿತವಾಗಿರದೆ, ಅದರ ಸಮಗ್ರತೆಯೊಡನೆ ಇರಬೇಕು. ನಿಜವಾದ ಧಾರ್ಮಿಕ ಬದುಕು ಸಮಗ್ರತೆಯ ಬಗ್ಗೆ ಕಾಳಜಿ ವಹಿಸುತ್ತದೆ.

ಸಮಗ್ರವಾಗಿ ಬದುಕುವುದು ಎಂದರೆ ಯಾವುದೇ ವಿಭಜನೆ ಇಲ್ಲದೇ, ಲೌಕಿಕ-ಧಾರ್ಮಿಕ, ಇದ್ದದ್ದು — ಇರಬೇಕಾದ್ದು, ನಾನು-ನೀನು, ಇಷ್ಟ-ಕಷ್ಟ ಇತ್ಯಾದಿ ಭೇದ-ಭಾವ ಇಲ್ಲದೇ ಬದುಕುವುದು, ಈ ಬಗೆಯ ವಿಭಜ-ನೆಯೇ ಸಂಘರ್ಷಕ್ಕೆ ಮೂಲ. ಈ ಸಂಘರ್ಷದ, ಅಂತರ್ಯುದ್ಧದ ಬದುಕು ಧಾರ್ಮಿಕ ಬದುಕಲ್ಲ, ಈ ಅರಿವೇ ಧೀಮಂತಿಕೆ. ಈ ಧೀಮಂತಿಕೆ ಮಾತ್ರ ಯೋಗ್ಯರೀತಿಯಲ್ಲಿ ಕ್ರಿಯಾನಿರತವಾಗಬಲ್ಲದು. ಜನರು ಧೀಮಂತಿಕೆ ಎನ್ನು-ವುದು, ಕೇವಲ ತಾಂತ್ರಿಕ ಕೌಶಲ್ಯಕ್ಕೆ, ಉದ್ಯಮದಲ್ಲಿಯ ಕಪಟತನಕ್ಕೆ, ರಾಜಕೀಯ ಕುತಂತ್ರಕ್ಕೆ.

ಹೆಚ್ಚಿನ ಅಂತಸ್ಸಂಘರ್ಷ ಇಲ್ಲದೇ, ಹಳ್ಳಿಯಲ್ಲೋ ಅಥವಾ ಪವಿತ್ರ ಬೆಟ್ಟದಡಿಯ ಗವಿಯಲ್ಲೋ ಕನಸು ಕಾಣುತ್ತ ಇರುವ ವ್ಯಕ್ತಿ ನಿಜವಾದ ಅರ್ಥದಲ್ಲಿ ಧಾರ್ಮಿಕ ಬದುಕನ್ನು ಬದುಕುತ್ತಿರುವುದಿಲ್ಲ.

ಸಂಘರ್ಷವನ್ನು ಅಂತಗೊಳಿಸುವುದು ಅತ್ಯಂತ ಸಂಕೀರ್ಣವಾದ ಕೆಲಸ. ಅದಕ್ಕೆ ಅತ್ಯಗತ್ಯವಾದದ್ದು ಹೊರಗಿನ ಹಾಗು ಒಳಗಿನ ವಿದ್ಯಮಾನಗಳೆಲ್ಲವನ್ನೂ ನಿರೀಕ್ಷಿಸುವ ಅರಿವಿನ ಎಚ್ಚರದ ಆತ್ಮನಿರೀಕ್ಷಣೆ ಹಾಗು ಸಂವೇದನಾಶೀಲತೆ. ತನ್ನಲ್ಲಿಯ ಈ ಬಗೆಯ ಅಂತರ್ದ್ವಂದ್ವಗಳ ಅರಿವು ಯಾವಾಗ ಉಂಟಾಗು-ವುದೋ ಆಗಲೇ ಈ ಸಂಘರ್ಷಕ್ಕೆ ಅಂತ್ಯ. ಜ್ಞಾತ ಅಥವಾ ಗೊತ್ತಿರುವುದ-ರಿಂದ, ಅಂದರೆ ಭೂತದಿಂದ ಬಿಡುಗಡೆ ಸಿಗದಿದ್ದರೆ, ಈ ಅಂತರ್ದ್ವಂದ್ವ ಯಾವತ್ತೂ ಇದ್ದೇ ಇರುತ್ತದೆ. ಭೂತದಿಂದ (ಭೂತಕಾಲದಿಂದ) ಬಿಡುಗಡೆ ಪಡೆಯುವುದೆಂದರೆ ಕಾಲಬದ್ಧವಲ್ಲದ ಈ ವರ್ತಮಾನದಲ್ಲಿ ಬದುಕುವುದು. ಈ ವರ್ತಮಾನದ ಕ್ಷಣದಲ್ಲೇ, ಜ್ಞಾತದ, ಅರ್ಥಾತ್ ಭೂತಕಾಲದ ಬಂಧನದ ಸ್ಪರ್ಶವಿರದ ಮುಕ್ತತೆಯ ಚಲನೆಯಿರುತ್ತದೆ. ಭೂತವೆಂದರೆ ನಮ್ಮೆಲ್ಲ ನೆನಪಿನ ಮೊತ್ತ. ಅದು ಈ ವರ್ತಮಾನದ ಮೇಲೆ ಚಟುವಟಿಕೆ ನಡೆಸಿ, ನಮ್ಮ ಭವಿಷ್ಯದ ಬಗ್ಗೆ ಆಸೆ, ಭಯಗಳನ್ನು ಸೃಷ್ಟಿಸುತ್ತದೆ. ಆದ್ದರಿಂದ ಈ ವರ್ತ-ಮಾನ-ಭೂತದ ಕ್ರಿಯೆ ಹಾಗು ಮನಸ್ಸು ಈ ಭೂತದ ಚಲನೆಯಾಗಿರುತ್ತದೆ. ವರ್ತಮಾನದ ಮೇಲೆ ಭೂತದ ಕಾರುಭಾರು ಜರುಗಿ, ಭವಿಷ್ಯ ಎಂಬುದು

ಸೃಷ್ಟಿಯಾಗುತ್ತದೆ. ಭೂತದ ಈ ಸ್ಪಂದನೆ ಅಪ್ರಜ್ಞಾಪೂರ್ವಕವಾದದ್ದು. ನಾವು ಅದನ್ನು ಆಹ್ವಾನಿಸಬೇಕೆಂದಿಲ್ಲ, ಇಚ್ಛಿಸಬೇಕೆಂದಿಲ್ಲ; ನಾವರಿಯುವ ಮೊದಲೇ ಅದು ನಮ್ಮ ಮೇಲೆ ಬಿದ್ದಿರುತ್ತದೆ.

ಭೂತದಿಂದ ಬಿಡುಗಡೆ ಪಡೆಯಲಿಕ್ಕೆ, ಮನಸ್ಸಿನ ಈ ಬಗೆಯ ಚಲನ-ವಲನದ ಬಗ್ಗೆ ಅರಿವಿನ ಎಚ್ಚರದಲ್ಲಿ, ಯಾವ ಆಯ್ಕೆಯೂ ಇಲ್ಲದೇ, ಭೂತದ ಚಟುವಟಿಕೆಗಳನ್ನೆಲ್ಲ ಸಮಗ್ರವಾಗಿ ಗಮನಿಸಬೇಕು. ವಿಚಾರದ ಪ್ರತಿಮೆ ಇಲ್ಲದೆ ಭೂತವನ್ನು ಅವಲೋಕಿಸುವ ಕ್ರಿಯೆಯಲ್ಲೇ ಭೂತ ಇಲ್ಲವಾಗುತ್ತದೆ. ಯಾವ ವಿಚಾರವೂ ಇಲ್ಲದೇ ಒಂದು ಮರವನ್ನು ಗಮನಿಸುವುದು ಭೂತವಿ-ಲ್ಲದೇ ನಡೆಯುವ ಒಂದು ಕ್ರಿಯೆ. ಇಲ್ಲಿ ನೋಡುತ್ತಿರುವ ವಸ್ತುವಿಗಿಂತ ನೋಡುತ್ತಿರುವ ಸ್ಥಿತಿ ಮುಖ್ಯವಾದದ್ದು. ಆಯ್ಕೆಯಿಲ್ಲದ ಅವಲೋಕನದಲ್ಲಿ ಭೂತದ ಬಗ್ಗೆ ಅರಿವಿನಿಂದ ಇರುವುದು ಎಂದರೆ ಬೇರೆ ರೀತಿಯಲ್ಲಿ ಕ್ರಿಯಾಮಗ್ನ-ರಾಗಿರುವುದಷ್ಟೇ ಅಲ್ಲ, ಬೇರೆ ಬಗೆಯ ವ್ಯಕ್ತಿಯೂ ಆಗುವುದು. ಈ ಅರಿವಿನಲ್ಲಿ ಯಾವ ಅಡೆ- ತಡೆಯಿಲ್ಲದೆ ಸ್ಮೃತಿಯು ಸಮರ್ಥವಾಗಿರುವದಷ್ಟೇ ಅಲ್ಲ, ಕ್ರಿಯಾ ನಿರತವಾಗಿಯೂ ಇರುತ್ತದೆ. ಧಾರ್ಮಿಕತೆಯಿಂದಿರುವುದು ಎಂದರೆ ಜ್ಞಾತದಿಂದ ಬಿಡುಗಡೆ ಪಡೆಯುವುದರ ಜೊತೆಗೆ, ಎಲ್ಲೆಲ್ಲಿ ಜ್ಞಾತ ಕಾರ್ಯಪ್ರವೃತ್ತವಾಗ-ಬೇಕೋ, ಅಲ್ಲೆಲ್ಲ ಕಾರ್ಯಪ್ರವೃತ್ತವಾಗಿರುವುದರ ಬಗೆಗೂ, ಯಾವ ಆಯ್ಕೆಯೂ ಇಲ್ಲದೇ ಅರಿವಿನಿಂದ ಗಮನಿಸುತ್ತಿರುವುದು.

ಜ್ಞಾತದಿಂದ ಬಿಡುಗಡೆ ಪಡೆಯುವುದೇ ನಿಜವಾದ ಧಾರ್ಮಿಕ ಬದುಕು. ಇದರರ್ಥ ಜ್ಞಾತವನ್ನು, ಅಂದರೆ ಗೊತ್ತಿರುವುದನ್ನೆಲ್ಲ ಸಂಪೂರ್ಣ ಅಳಿಸಿ-ಹಾಕುವುದಲ್ಲ; ಇನ್ನೂ ವರೆಗೆ ಗಮನಿಸಿರದ ಜ್ಞಾತದ ವಿಭಿನ್ನವಾದ ಆಯಾಮ ವನ್ನೂ ಪ್ರವೇಶಿಸುವುದು. ಈ ಆಯ್ಕೆಯಿಲ್ಲದೇ ನೋಡುತ್ತ ಹೋಗುವ ಕ್ರಿಯೆ ಪ್ರೀತಿ–ಪ್ರೇಮದ ಕಾರ್ಯವಿಧಾನ. ಧಾರ್ಮಿಕ ಬದುಕು ಎಂದರೆ ಈ ಕ್ರಿಯೆ, ಎಲ್ಲರ ಬದುಕೂ ಇದೇ ಕ್ರಿಯೆ. ಧಾರ್ಮಿಕ ಮನಸ್ಸೆಂದರೂ ಈ ಕ್ರಿಯೆಯೇ. ಆದ್ದರಿಂದ ಧರ್ಮ, ಮನಸ್ಸು, ಬದುಕು ಮತ್ತು ಪ್ರೇಮ, ಎಲ್ಲವೂ ಒಂದೇ.

* * *

೧೦. ಭಯ

ಜಗತ್ತಿನಲ್ಲಿ ಪ್ರತಿಯೊಬ್ಬರೂ— ಚಿಕ್ಕವರಿರಲಿ, ದೊಡ್ಡವರಿರಲಿ— ಒಂದಲ್ಲ ಒಂದು ಬಗೆಯ ಭಯದಿಂದ ಪೀಡಿತರಾಗೇ ಇರುತ್ತಾರೆ. ಚಿಕ್ಕವರಿಗೆ ತಂದೆ-ತಾಯಿಗಳ ಭಯ, ಗುರುಗಳ ಭಯ, ತರಗತಿಯಲ್ಲಿ ನಪಾಸಾಗುವ, ಹಿಂದೆ ಬೀಳುವ ಭಯ, ಆಟ-ಸ್ಪರ್ಧೆಗಳಲ್ಲಿ ಸೋಲಾಗುವ ಭಯ, ಇತ್ಯಾದಿ-ಗಳಾದರೆ, ದೊಡ್ಡವರಿಗೆ ಸಮಾಜದ ಭಯ, ಸುತ್ತು-ಮುತ್ತಲಿನವರ ಟೀಕೆ, ನಿಂದೆಗಳ ಭಯ, ದಿವಾಳಿ ಆದೇನೆಂಬ ಭಯ, ಮರ್ಯಾದೆ ಹೋದೀತೆಂಬ ಭಯ, ರೋಗ-ರುಜಿನಗಳ ಭಯ—ಸಾವಿನ ಭಯ, ಇತ್ಯಾದಿ, ಇತ್ಯಾದಿ.

ಭಯ, ಎಂದರೇನು ? ಭಯ ತನ್ನಷ್ಟಕ್ಕೇ ಒಂಟಿಯಾಗಿರದು; ಬೇರೊಂದರ ಸಂಬಂಧದಲ್ಲಿ ಮಾತ್ರ ಅದರ ಅಸ್ತಿತ್ವ ಇರುವುದು ಶಕ್ಯ. ನನಗೆ ಗೊತ್ತಿಲ್ಲದಿದ್ದುದರ ಬಗ್ಗೆ ಭಯ ಹೇಗೆ ಸಾಧ್ಯ ? ಉದಾ : ಸಾವಿನ ಬಗ್ಗೆ ? ಯಾವುದೇ ಬಗೆಯ ಭಯ ಗೊತ್ತಿದ್ದುದರ ಬಗ್ಗೆ ಮಾತ್ರ ಇರುವಂಥಾದ್ದು. ಸಾವಿನ ಬಗ್ಗೆ ಭಯ ಎಂದಾಗ, ಸಾವು ಎಂದರೇನು ಎಂದು ಗೊತ್ತಿಲ್ಲದ, ಅಜ್ಞಾತದ ಭಯಕ್ಕಿಂತ ಗೊತ್ತಿರುವಂಥದನ್ನು ಕಳೆದುಕೊಳ್ಳುವುದರ ಭಯವೇ ಅಲ್ಲಿದೆ. ಯಾವತ್ತೂ ಭಯವು ಗೊತ್ತಿರುವ ಸಂಗತಿಗಳಿಗೆ ಸಂಬಂಧಪಟ್ಟದ್ದೇ ಹೊರತು, ಗೊತ್ತಿರದಂತಹದಕ್ಕೆ ಅಲ್ಲವೇ ಅಲ್ಲ. ಭಯ ಅಂತಃಸಾಕ್ಷಿಯಿಂದ ಹುಟ್ಟಿದ್ದು ಎಂದರೆ, ಆ ಅಂತಃಸಾಕ್ಷಿ ಸಹ ಗೊತ್ತಿರುವುದರ ಫಲಿತಾಂಶವೇ. ಈ ಗೊತ್ತಿರುವಂಥದಾದರೂ ಏನು ? ವಿಚಾರಗಳು, ವಿವಿಧ ಸಂಗತಿಗಳ ಬಗ್ಗೆ ಅಭಿಪ್ರಾಯ ಹೊಂದಿರುವುದರ, ಗೊತ್ತಿರುವುದರ ಜೊತೆಗಿನ ಸಂಬಂಧಗಳಲ್ಲಿ ಮುಂದುವರಿಯುತ್ತಿರುವ ಭಾವನೆಯಿಂದಿರುವುದೇ ಜ್ಞಾನ; ಅಲ್ಲವೆ ? ವಿಚಾರ ಎಂದರೆ ನೆನಪು, ಅನುಭವದ ಫಲ. ಅದೇ ಈ ಕ್ಷಣದ ಸವಾಲಿಗೆ ಬಂದ ತತ್-ಕ್ಷಣದ ಪ್ರತಿಕ್ರಿಯೆ. ನನಗೆ ಭಯ ಗೊತ್ತಿರುವಂತಹದರಿಂದ ಎಂದರೆ ಜನ-ರನ್ನೋ, ವಸ್ತುಗಳನ್ನೋ, ವಿಚಾರಗಳನ್ನೋ ಕಳೆದುಕೊಳ್ಳುವ ಭಯ.

ನಾನು ಏನು ಎನ್ನುವುದನ್ನು ಕಂಡುಕೊಳ್ಳುವ ಭಯ, ಹಾನಿ-ಲುಕ್ಸಾನ ಮಾಡಿಕೊಳ್ಳುವ ಭಯ, ಒಟ್ಟನಲ್ಲಿ ಯಾವುದೇ ರೂಪದಿಂದಲೂ ಬರಬಹುದಾದ ನೋವಿನ ಭಯ.

ನೋವಿನ ಭಯದಲ್ಲೂ—ದೈಹಿಕ ನೋವು-ನರಗಳ ಪ್ರತಿಕ್ರಿಯೆಯಾದದರೆ, ನನಗೆ ಅಂಟಿಕೊಂಡಿರುವ ' ನಾನು 'ವಿಗೆ ಸಮಾಧಾನ ನೀಡದಂತಹ ಸಂಗತಿ-ಗಳಿಂದ ಮಾನಸಿಕ ನೋವು ಹುಟ್ಟುತ್ತದೆ. ಏಕೆಂದರೆ ಆಗ ಮಾತ್ರ ಆ ವಸ್ತು-ಗಳನ್ನು ನನ್ನಿಂದ ಕಸಿದುಕೊಂಡುಬಿಟ್ಟರೆ—ಎಂಬ ಭಯವಿರುತ್ತದೆ. ಮಾನಸಿಕ ಸಂಗ್ರಹಗಳನ್ನು ಪ್ರಕ್ಷುಬ್ಧಗೊಳಿಸುವ ವರೆಗೆ ಅದು ಮಾನಸಿಕ ಭಯದಿಂದ ರಕ್ಷಿಸುತ್ತದೆ. ಅನುಭವಗಳ ಹಾಗು ಈ ಮೇಲೆ ತಿಳಿಸಿದಂತಹವುಗಳ ಸಂಗ್ರಹ-ವಾದ ' ನಾನು ' ಯಾವುದೇ ರೀತಿಯಲ್ಲೂ ' ನಾನು ' ಪ್ರಕ್ಷುಬ್ಧನಾಗದಂತೆ ಕಾಪಾಡುತ್ತದೆ. ಆದ್ದರಿಂದ ನಮ್ಮನ್ನು ಪ್ರಕ್ಷುಬ್ಧಗೊಳಿಸುವ ಯಾವುದನ್ನೇ ಕಂಡರೂ ನಮಗೆ ಭಯ. ಹೀಗೆ ನನಗೆ ಭಯವು ಗೊತ್ತಿರುವಂತಹದರದ್ದೇ-ನನ್ನನ್ನು ನೋವಿನಿಂದ ರಕ್ಷಿಸಿಕೊಳ್ಳಲು, ದುಃಖದಿಂದ ಕಾಪಾಡಿಕೊಳ್ಳಲು ನಾನು ಸಂಗ್ರಹಿಸಿರುವ ದೈಹಿಕ ಹಾಗು ಮಾನಸಿಕ ಸಂಗತಿಗಳದೇ ಭಯ. ಆದರೆ ಮಾನಸಿಕ ದುಃಖವನ್ನು ತಡೆಗಟ್ಟಲು ಮಾಡುವ ಸಂಗ್ರಹಣದ ಪ್ರಕ್ರಿಯೆಯಲ್ಲೇ ಇದೆ ದುಃಖ. ಜ್ಞಾನವು ಸಹ ಈ ದುಃಖವನ್ನು ತಡೆಗಟ್ಟಲು ಸಹಾಯ ಮಾಡು ತ್ತದೆ. ವೈದ್ಯಕೀಯ ಜ್ಞಾನವು ದೈಹಿಕ ನೋವನ್ನು ತಡೆಗಟ್ಟುವಲ್ಲಿ ಸಹಾಯ ಮಾಡುವಂತೆ, ನಂಬಿಕೆಗಳು ಮನಸ್ಸಿನ ನೋವನ್ನು ತಡೆಗಟ್ಟುವಲ್ಲಿ ಸಹಕರಿಸು-ತ್ತವೆ. ಆದ್ದರಿಂದ ನಮ್ಮ-ನಮ್ಮ ನಂಬಿಕೆಗಳು ಹೇಳುವ ಸತ್ಯಗಳನ್ನು ಸಂಪೂರ್ಣ ನಂಬಲು ಪ್ರಮಾಣಗಳಾವವೂ ಇಲ್ಲದಿದ್ದರೂ, ಆ ನಂಬಿಕೆಗಳ ಬಗ್ಗೆ ಸರಿಯಾದ ಜ್ಞಾನವಿಲ್ಲದಿದ್ದರೂ, ಆ ನಂಬಿಕೆಗಳನ್ನು ಕಳೆದುಕೊಳ್ಳುವ ಭಯ ನಮಗೆ. ನಮ್ಮದೇ ಅನುಭವ, ನಿರೀಕ್ಷೆಗಳ ಅರಿವಿನ ಮೇಲೆ ಕೆಲವು ಸಾಂಪ್ರದಾಯಿಕ ನಂಬಿಕೆಗಳನ್ನು ನಾವು ತಿರಸ್ಕರಿಸಿದರೂ, ನಮ್ಮನ್ನು ನೋವಿನಿಂದ ರಕ್ಷಿಸಲು ಕಟ್ಟಿಕೊಂಡ, ರೂಪಿಸಿಕೊಂಡ ಬೇರೆ ಬಗೆಯ ನಂಬಿಕೆಗಳು ಮೂಲಭೂತವಾಗಿ ಅದೇ ಸ್ವರೂಪದವುಗಳಾಗಿರುತ್ತವೆ.

ಗೊತ್ತಿರುವುದನ್ನು ಸಂಗ್ರಹಿಸುವಿಕೆ ಎಲ್ಲಿಯ ವರೆಗೆ ಇರುವುದೋ ಅಲ್ಲಿಯ ವರೆಗೆ ಅದೇ ಸೃಷ್ಟಿಸಿರುವ ಭಯ ಇರುವಂಥಾದ್ದೇ. ಅಂದರೆ ಅಜ್ಞಾತವಾದುದರ

ಭಯ ಎಂದರೆ ಗಳಿಸಿಕೊಂಡಿರುವ ಜ್ಞಾತವಾದದ್ದನ್ನು, ಗೊತ್ತಿರುವಂಥಾದ್ದನ್ನು ಕಳೆದುಕೊಳ್ಳುವ ಭಯ, ಅಷ್ಟೇ. ಸಂಗ್ರಹಿಸುವಿಕೆ ಎಂದರೇ ಭಯ, ನೋವು ನಾನು ಕಳೆದುಕೊಳ್ಳಕೂಡದು ಎಂದು ಹೇಳಿಕೊಂಡ ಕ್ಷಣದಲ್ಲೇ ಇದೆ—ಭಯ ನೋವಿನಿಂದ ರಕ್ಷಿಸಿಕೊಳ್ಳಲೆಂದೇ ಸಂಗ್ರಹಿಸುವಿಕೆ ಇದ್ದರೂ, ಆ ಸಂಗ್ರಹಣ ಪ್ರಕ್ರಿಯೆಯಲ್ಲೇ ನೋವು ಅಂತರ್ಗತವಾಗಿದೆ.

ಭದ್ರತೆಯ ಬೀಜವೇ ಅಭದ್ರತೆಯನ್ನು ತರುತ್ತದೆ. ನನಗೆ ದೈಹಿಕ ಭದ್ರತೆ ಬೇಕು; ಅದಕ್ಕೆ ಸಾರ್ವಭೌಮತ್ವ-ಆಡಳಿತವನ್ನು ಸೃಷ್ಟಿಸುತ್ತೇನೆ. ಅ ಸೈನ್ಯ ಅಗತ್ಯವೆನಿಸುತ್ತದೆ. ಸೈನ್ಯ ಎಂದರೆ ಯುದ್ಧ; ಯುದ್ಧ ಭದ್ರತೆಯನ್ನು ನಾಶಗೊಳಿಸುತ್ತದೆ ಆತ್ಮಸಂರಕ್ಷಣೆಯ ಆಕಾಂಕ್ಷೆ ಎಲ್ಲೆಲ್ಲಿ ಉಂಟೋ ಅಲ್ಲ ಇದೆ—ಭಯ. ಈ ರಕ್ಷಣೆ ಕೇಳುವ ತಪ್ಪು ಭ್ರಮೆಯನ್ನು ಅರಿತಾಗ, ಸಂಗ್ರಹ ಣೆಯ ಅಗತ್ಯವಿರುವುದಿಲ್ಲ. ' ನನಗೆ ಇವೆಲ್ಲ ಗೊತ್ತಾಗುತ್ತದೆ; ಆದರೆ ಸಂಗ್ರಹಣ ಕ್ರಿಯೆಯನ್ನು ಮಾಡದೇ ಇರಲಾರೆ, ಅಂತೆಂದರೆ ನಿಮಗೆ ಅದರಲ್ಲಿ ನೋವು ಅಂತರ್ಗತವಾಗಿದ್ದೇ ಇದೆ ಎಂಬುದು ಗೊತ್ತಾಗಿಲ್ಲ ಎಂದೇ ಅರ್ಥ.

ನಂಬಿಕೆ ಸಹ ಈ ಸಂಗ್ರಹಣ ಪ್ರಕ್ರಿಯೆಯ ಭಾಗವೇ. ಸಾವು ಇದೆ ಆದರೆ ಸಾವು ತರುವ ದುಃಖ, ನೋವು ಸಹಿಸಲೆಂದೇ, ತಡೆಗಟ್ಟಲೆಂದೆ ಪುನರ್ಜನ್ಮದಲ್ಲಿ ನಂಬಿಕೆ ಸೃಷ್ಟಿಸುತ್ತೇವೆ. ಆದರೆ ಈ ವಿಶ್ವಾಸದ ಪ್ರಕ್ರಿಯೆ-ಯಲ್ಲೇ ಸಂದೇಹವಿದೆ. ಬಹಿರಂಗದಲ್ಲಿ ಎಲ್ಲವನ್ನು ಸಂಗ್ರಹಿಸಿ, ಸಂಗ್ರಹಿ ಯುದ್ಧ ಬರಿಸುತ್ತೇವೆ; ಅಂತರಂಗದಲ್ಲಿ ನಂಬಿಕೆಗಳನ್ನು ಸಂಗ್ರಹಿಸಿ, ಸಂಗ್ರಹಿ ನೋವನ್ನು ತಂದುಕೊಳ್ಳುತ್ತೇವೆ. ಎಲ್ಲಿಯ ವರೆಗೆ ನಾನು ಸುರಕ್ಷಿತನಾಗಿರ ಬೇಕು, ಬ್ಯಾಂಕಿನಲ್ಲಿ ಹಣ ಸಾಕಷ್ಟಿರಬೇಕು, ಸಂತೋಷದಲ್ಲಿರಬೇಕ ಇತ್ಯಾದಿ, ಬಯಸುತ್ತಿರುತ್ತೇನೋ, ದೈಹಿಕವಾಗಿ ಅಥವಾ ಮಾನಸಿಕವಾ ಎಲ್ಲಿಯ ವರೆಗೆ ಏನೋ ಆಗಲು ಪ್ರಯತ್ನಿಸುತ್ತಿರುತ್ತೇನೋ, ಅಲ್ಲಿಯ ವರೆ ನೋವು ಇದ್ದದ್ದೇ. ನೋವನ್ನು ತಡೆಗಟ್ಟಲು ಕಟ್ಟಿಕೊಂಡಂಥಾದ್ದೇ ನೋವು ಭಯಗಳನ್ನು ತರುತ್ತದೆ.

ಒಂದು ವಿಶಿಷ್ಟ ಚೌಕಟ್ಟಿನಲ್ಲಿ, ಮಾದರಿಯಲ್ಲಿ ನಾನಿರಬಯಸಿದಾಗ ಭಯ ಸುರುವಾಗುತ್ತದೆ- ಭಯವಿಲ್ಲದೇ ಬದುಕುವುದು ಎಂದರೆ ಯಾವ ಮಾದರಿ

ದರ್ಶ ಇಲ್ಲದೇ ಬದುಕುವುದು. ಏಕೆಂದರೆ ಆ ಆದರ್ಶವೇ, ಮಾದರಿಯೇ
ಯದ ಮೂಲ ಚಿಲುಮೆ. ವಿಶಿಷ್ಟ ಚೌಕಟ್ಟಿನಲ್ಲಿ ಬದುಕುವ ಇಚ್ಛೆಯೇ ನಮ್ಮ
ಷ್ಟ. ಆ ಚೌಕಟ್ಟನ್ನು ಅರಿತಾಗಲೇ ಸಮಗ್ರವಾಗಿ ನಾವದನ್ನು ಮುರಿಯ-
ಲ್ಲೆವು. ಈ ಚೌಕಟ್ಟನ್ನು ಭಯ ಸೃಷ್ಟಿಸುತ್ತಿದೆ ಮತ್ತು ಈ ಭಯವೇ
ಚೌಕಟ್ಟನ್ನು ಬಲಿಷ್ಠಗೊಳಿಸುತ್ತಿದೆ ಎಂಬ ಅರಿವು ಮೂಡಬೇಕು. ಚೌಕಟ್ಟನ್ನು
ುರಿಯಬೇಕೆಂದು ಉದ್ದೇಶಪೂರ್ವಕವಾಗಿ ಹೊರಟಾಗ ಇನ್ನೊಂದು ಚೌಕ-
ಟ್ಟನ್ನು, ಆದರ್ಶವನ್ನು ಅನುಸರಿಸುವುದರಿಂದ— ಅದು ಪ್ರತಿಕ್ರಿಯೆಯ ರೂಪ-
ದ್ದಾಗಿರುವುದರಿಂದ— ಅದು ಇನ್ನಷ್ಟು ಭಯವನ್ನು ಸೃಷ್ಟಿಸುತ್ತದೆ. ಒಂದು
ಚೌಕಟ್ಟನ್ನು ಮುರಿಯುವ ಉದ್ದೇಶವುಳ್ಳ ಯಾವುದೇ ಕ್ರಿಯೆ, ಕಾರ್ಯ
ುತ್ತೊಂದು ಬಗೆಯ ಚೌಕಟ್ಟು, ಆದರ್ಶವನ್ನು ಸೃಷ್ಟಿಸುವುದರಿಂದ ಭಯ-
ನ್ನೇ ತರುತ್ತದೆ.

ಜಾಗ್ರತ ಹಾಗು ಸುಪ್ತ ಮನಸ್ಸುಗಳ ಯಾವುದೇ ಬಗೆಯ ಕ್ರಿಯೆಗಳ
ೂಲಕ ಭಯವನ್ನು ಹುಟ್ಟಿಸದೆ, ಆ ಚೌಕಟ್ಟನ್ನು ಮುರಿಯುವುದು ಹೇಗೆ?
ದರರ್ಥ ನಾನು ಏನನ್ನೂ ಮಾಡಬಾರದು. ಚೌಕಟ್ಟನ್ನು ಮುರಿಯುವಂಥ
ಾವುದೇ ಚಲನೆ, ಚಟುವಟಿಕೆಗಳನ್ನೂ ನಾನು ಮಾಡಬಾರದು. ಏನೂ
ಾಡದೆ ಆ ಚೌಕಟ್ಟನ್ನು ಸುಮ್ಮನೆ ಗಮನಿಸುತ್ತ ಹೋದರೆ ನನಗೆ
ೊತ್ತಾಗುತ್ತದೆ. ನನ್ನ ಮನಸ್ಸೇ ಆ ಚೌಕಟ್ಟು; ಆ ಆದರ್ಶ. ತಾನೇ
ನಗಾಗಿಯೇ ನಿರ್ಮಿಸಿಕೊಂಡ ಚಟಸ್ವರೂಪದ ಆದರ್ಶದಲ್ಲಿ ಬದುಕುತ್ತದೆ ಅದು.
ದ್ದರಿಂದ ಮನಸ್ಸೇ ಭಯ. ಈ ಕಾರಣದಿಂದ ಮನಸ್ಸು ಏನೇ ಮಾಡಿದರೂ
ಹಳೆಯ ಮಾದರಿಯನ್ನು ಪ್ರಬಲಪಡಿಸುವಲ್ಲಿ ನೆರವಾಗುತ್ತದೆ. ಅಂದರೆ
ದರರ್ಥ: ಭಯದಿಂದ ಪಾರಾಗಬೇಕೆಂದು ಮನಸ್ಸು ಮಾಡುವುದೆಲ್ಲವೂ
ಯವನ್ನೇ ಹುಟ್ಟಿಸುತ್ತದೆ.

ಸಂಬಂಧಗಳ ಬಗ್ಗೆ ನಮ್ಮ ತಿಳಿವಳಿಕೆ ಸಮಗ್ರವಾಗಿರದಿದ್ದಾಗ ಭಯ
ುತ್ತದೆ. ಸಂಬಂಧ ಕೇವಲ ವ್ಯಕ್ತಿ-ವ್ಯಕ್ತಿಗಳ ಮಧ್ಯೆ ಮಾತ್ರ ಅಷ್ಟೇ
ಲ್ಲದೇ, ನಾವು ಹಾಗು ನಿಸರ್ಗ, ನಾವು ಹಾಗು ಸಂಪತ್ತು, ನಾವು ಹಾಗು
ಚಾರಗಳ ಮಧ್ಯೆಯೂ ಇರುವಂಥದು. ಈ ಎಲ್ಲ ಸಂಬಂಧಗಳನ್ನು ನಾವು

ಸರಿಯಾಗಿ ಅರ್ಥಮಾಡಿಕೊಳ್ಳದೇ ಇದ್ದಾಗ ಭಯ ಅಲ್ಲಿರುತ್ತದೆ. ಬದುಕು ಎಂದರೆ ಸಂಬಂಧಗಳು. ಇರುವುದು ಎಂದರೆ ಸಂಬಂಧಗಳಲ್ಲಿರುವುದು. ಸಂಬಂಧಗಳಿಲ್ಲದೆ ಜೀವನವೇ ಇರದು. ಯಾವುದೂ ಬೇರೆಯೇ ಆಗಿರಲು ಶಕ್ಯವಿಲ್ಲ. ಬೇರೆ ಆಗಿರಲು ಮನಸ್ಸು ಯತ್ನಿಸುವ ವರೆಗೂ ಭಯ ಇದ್ದೇ ಇರುವುದು. ಭಯ ಒಂದು ಅಮೂರ್ತತೆ ಅಲ್ಲ; ಬೇರೊಂದರ ಸಂಬಂಧದಲ್ಲಿ ಮಾತ್ರ ಇರಬಲ್ಲದು ಭಯ.

ಹಾಗಾದರೆ ಭಯ ಎಂದರೇನು ? ಅಂತಿಮವಾಗಿ ನಾವೇನೋ ಆಗಿರದ ಅಥವಾ ಆಗಲಾರದ ಬಗ್ಗೆ ಭಯ ನಮಗೆ, ಅಲ್ಲವೆ ? ಯಾವಾಗ ಏನೋ ಆಗಿರದ, ಆಗಲಾರದ ಭಯ ಅಥವಾ ಗೊತ್ತಿಲ್ಲದುದರ ಅಥವಾ ಸಾವಿನ ಭಯ ಇರುವಾಗ ಯಾವುದೇ ಆಯ್ಕೆ, ತೀರ್ಮಾನ ಅಥವಾ ಸಂಕಲ್ಪಗಳಿಂದ ಆ ಭಯ-ವನ್ನು ಗೆಲ್ಲಬಹುದೆ ? ಶಕ್ಯವಿಲ್ಲ, ಅಲ್ಲವೆ ? ಅದೇ ರೀತಿ ಕೇವಲ ಹತ್ತಿಕ್ಕು-ವಿಕೆ, ಪರಿವರ್ತನೆ ಅಥವಾ ಬದಲಿ ಕ್ರಮ ಇನ್ನೂ ಹೆಚ್ಚಿನ ಪ್ರತಿಭಟನೆಯನ್ನು ಮಾತ್ರ ಸೃಷ್ಟಿಸುತ್ತದೆ. ಆದ್ದರಿಂದ ಯಾವುದೇ ರೀತಿಯ ಶಿಸ್ತು ಅಥವಾ ಪ್ರತಿಭಟನಾರೂಪದಲ್ಲಿ ಭಯವನ್ನು ಗೆಲ್ಲಲಾರೆವಷ್ಟೆ. ಇದನ್ನು ಚೆನ್ನಾಗಿ ಮನದಟ್ಟು ಮಾಡಿಕೊಳ್ಳಬೇಕು ಮೊದಲು— ಜೊತೆಗೆ ಅದಕ್ಕೆ ಉತ್ತರ ಶೋಧಿಸುವುದರ ಮೂಲಕ ಅಥವಾ ಬೌದ್ಧಿಕ ಇಲ್ಲವೆ ವಿಶಿಷ್ಟ ಪಾರಿಭಾಷಿಕ ಸಮುಚ್ಚಯದ ಮೂಲಕ ವಿವರಣೆ ನೀಡುವುದರಿಂದಲೂ ಭಯದಿಂದ ಮುಕ್ತಿ ಪಡೆಯುವುದು ಶಕ್ಯವಿಲ್ಲ ಎನ್ನುವುದನ್ನೂ ಸ್ಪಷ್ಟ ಅರಿತಿರಬೇಕು.

ನಮಗೆ ಭಯ ಯಾತರದು ? ಅದು ವಾಸ್ತವ ಸತ್ಯದ್ದೋ ಅಥವಾ ವಾಸ್ತವತೆ ಬಗೆಗಿನ ವಿಚಾರದ್ದೋ ? ಒಂದು ವಾಸ್ತವ ಸಂಗತಿಯ ನೈಜ-ಸ್ಥಿತಿಯ ಬಗ್ಗೆ ಭಯವೋ ಅಥವಾ ನೈಜಸ್ಥಿತಿ ಎಂದು ನಾವು ತಿಳಿದುಕೊಂಡಿರು-ವುದರ ಬಗ್ಗೆ ನಮಗೆ ಭಯವೋ ? ಉದಾ : ಸಾವಿನ ಬಗ್ಗೆ ಭಯ. ಸಾವಿನ ವಾಸ್ತವತೆ ಬಗ್ಗೆ ನಮಗೆ ಭಯವೋ ಅಥವಾ ಸಾವಿನ ವಿಚಾರವಾಗಿಯೋ ಭಯ. ವಾಸ್ತವತೆ ಮತ್ತು ವಾಸ್ತವತೆ ಬಗೆಗಿನ ವಿಚಾರ ಎರಡೂ ಭಿನ್ನ-ಭಿನ್ನವಾದವು. ' ಸಾವು ' ಎಂಬ ಶಬ್ದದ ಬಗೆಗೋ ಅಥವಾ ಸಾವಿನ ವಾಸ್ತ-ವತೆ ಬಗ್ಗೆಯೋ— ನಮಗೆ ಭಯ ಎನ್ನುವುದನ್ನು ಸ್ಪಷ್ಟ ಅರಿತಿರಬೇಕು. ಏಕೆಂದರೆ ನಮಗೆ ' ಸಾವು ' ಎನ್ನುವ ಆ ಶಬ್ದದ ಬಗ್ಗೆ, ವಿಚಾರದ ಬಗ್ಗೆ

ಭಯುವೇ ಹೊರತು, ಆ ವಸ್ತುಸ್ಥಿತಿಯ ನೇರ ಸಂಬಂಧ ನಮಗಿನ್ನೂ ಇಲ್ಲವಾದ್ದರಿಂದ, ಸಾವಿನ ವಾಸ್ತವತೆಯು, ನೈಜಸ್ಥಿತಿಯು ಪರಿಚಯುವಾಗಲಿ, ಅನುಭವವಾಗಲಿ ನಮಗಿಲ್ಲ. ನಮಗೆ ವಸ್ತುಸ್ಥಿತಿಯ ಜೊತೆಗೆ ಸಂಪೂರ್ಣ ಸಂಬಂಧ ಇರುವಾಗ ಮಾತ್ರ ಭಯುವಿರುವುದಿಲ್ಲ. ವಸ್ತುಸ್ಥಿತಿಯ ಜೊತೆಗೆ ಸಂಬಂಧವಿರದಿದ್ದಾಗ ಭಯ ಹುಟ್ಟುತ್ತದೆ. ನಮಗೆ ವಸ್ತುಸ್ಥಿತಿಯ ಬಗ್ಗೆ ಒಂದು ಸಿದ್ಧಾಂತ, ಅಭಿಪ್ರಾಯ ಅಥವಾ ವಿಚಾರ ಇರುವ ವರೆಗೆ ವಸ್ತುಸ್ಥಿತಿ ಸತ್ಯದ ಜೊತೆಗೆ ಸಂಬಂಧವಿರುವದಿಲ್ಲ. ಆದ್ದರಿಂದ ನಮಗೆ ಭಯ ವಸ್ತುಸ್ಥಿತಿಯದೋ ಅಥವಾ ವಸ್ತುಸ್ಥಿತಿಯ ಬಗೆಗಿನ ವಿಚಾರ, ಸಿದ್ಧಾಂತ, ಹೇಳಿಕೆ, ಅಭಿಪ್ರಾಯಗಳದ್ದೋ— ಎನ್ನುವುದನ್ನು ಸ್ಪಷ್ಟಮಾಡಿಕೊಳ್ಳಬೇಕು. ನಾವು ವಾಸ್ತವತೆಗೆ ಮುಖಾಮುಖಿಯಾಗಿರುವಾಗ ಅಲ್ಲಿ ಅರಿಯುವಂಥಾದ್ದು ಏನೂ ಇರುವುದಿಲ್ಲ. ನೇರವಾಗಿ ನಾವು ಅದರೊಂದಿಗೆ ವ್ಯವಹರಿಸಬಹುದು. ನನಗೆ ಆ ಶಬ್ದದ ಬಗ್ಗೆ ಭಯುವಿದ್ದರೆ, ಆ ಶಬ್ದವನ್ನು ಅರಿತು, ಆ ಶಬ್ದವು ಧ್ವನಿಸುವಂತಹ ಎಲ್ಲ ಸಂಗತಿವಿಶೇಷಗಳ ಸಮಗ್ರ ಪ್ರಕ್ರಿಯೆಯನ್ನು ಅರಿಯಬೇಕು.

ಉದಾ : ಏಕಾಂಗಿತನದ ನೋವು, ಯಾತನೆಯ ಭಯ. ಏಕಾಂಗಿತನವನ್ನು ಸರಿಯಾಗಿ ನೋಡಿ. ಅರಿಯದೇ ಇದ್ದುದರಿಂದ, ಅದರೊಡನೆ ಸಮಗ್ರವಾಗಿ ಸಂಬಂಧ ಸಾಧ್ಯವಾಗದೇ ಹೋದದ್ದರಿಂದ ಭಯ ಅಲ್ಲಿದೆ. ಏಕಾಂಗಿತನದ ವಾಸ್ತವತೆಗೆ ಮುಕ್ತವಾಗಿ-ಸಮಗ್ರವಾಗಿ ಮನಸ್ಸು, ತೆರೆದುಕೊಂಡಿರುವಾಗ ಅದು ಏನು ಎನ್ನುವುದರ ಅರಿವು ಶಕ್ಯವಾಗುತ್ತದೆ. ಆದರೆ ಗತ ಅನುಭವದ ಆಧಾರದ ಮೇಲೆ ಸೃಷ್ಟಿಗೊಂಡ ವಿಚಾರ, ಅಭಿಪ್ರಾಯ ಏಕಾಂಗಿತನದ ಬಗ್ಗೆ ಇರುವುದರಿಂದಲೇ ಭಯ ಅಲ್ಲಿ ಉದ್ಭವಿಸುತ್ತಿದೆ. ಹೀಗೆ ಸ್ವಾಭಾವಿಕವಾಗಿ ಒಂದು ವಸ್ತುಸ್ಥಿತಿಯನ್ನು ಪ್ರತಿನಿಧಿಸಲು ಉಪಯೋಗಿಸುವ ಸಂಕೇತ, ನಾಮಕರಣ, ಹೆಸರಿಟ್ಟು ಗುರುತಿಸುವುದು ಇತ್ಯಾದಿಗಳಿಂದಲೇ ಭಯ ಹುಟ್ಟುತ್ತದೆ. ಈ ಶಬ್ದ, ಹೆಸರುಗಳಿಂದ ಬೇರೆಯಾಗಿಲ್ಲ–ಭಯ.

ಏಕಾಂಗಿತನದ ಬಗ್ಗೆ ನನಗೆ ಪ್ರತಿಕ್ರಿಯೆ ಇದೆ; ಏನೂ ಆಗಿಲ್ಲದೇ ಇರುವುದು ಭಯದ ಸಂಗತಿ ಎನ್ನುತ್ತೇನೆ. ಈಗ ನಾನಿಲ್ಲಿ ನಿಜವಾಗಿ ವಸ್ತುಸ್ಥಿತಿಯ ಬಗ್ಗೆ ಭಯುಗೊಂಡಿದ್ದೇನೆಯೆ ? ಅಥವಾ ಶಬ್ದ ಸಂಕೇತ, ವಿಚಾರಗಳ ರೂಪದಲ್ಲಿ

ವಸ್ತುಸ್ಥಿತಿಯ ಬಗ್ಗೆ ಇರುವ ಪೂರ್ವಜ್ಞಾನದ ಮೂಲಕ ಆ ಭಯ ಹುಟ್ಟಿ-ದೆಯೆ ? ವಸ್ತುಸ್ಥಿತಿಯ ಬಗ್ಗೆ ಭಯ ಹೇಗೆ ಇರಬಲ್ಲದು ? ನಾನು ವಸ್ತು ಸ್ಥಿತಿಯ ಜೊತೆಗೆ ಮುಖಾಮುಖಿಯಾಗಿರುವಾಗ, ವಾಸ್ತವ ಸತ್ಯದೊಡನೆ ನೇರ ಸಂಬಂಧ ಹೊಂದಿರುವಾಗ ಅದನ್ನು ನೋಡಬಲ್ಲೆ, ನಿರೀಕ್ಷಿಸಬಲ್ಲೆ. ಆದ್ದ-ರಿಂದ ವಸ್ತುಸ್ಥಿತಿಯ ಬಗ್ಗೆ ಭಯವಿಲ್ಲ. ನನ್ನಲ್ಲಿ ಭಯ ಉಂಟುಮಾಡುವುದು ಆ ವಸ್ತುಸ್ಥಿತಿಯ ಬಗೆಗಿನ ವಿಚಾರಗಳು, ಹೇಳಿಕೆಗಳು. ಆ ವಸ್ತುಸ್ಥಿತಿ ಏನಾಗಿರಬಹುದು, ಏನೇನು ಮಾಡಬಲ್ಲದು ಇತ್ಯಾದಿ ಊಹೆಗಳು ತರುವ ಭಯ.

ಹೀಗೆ ವಸ್ತುಸ್ಥಿತಿಯ ಬಗ್ಗೆ ನನ್ನ ಅಭಿಪ್ರಾಯ ಅಥವಾ ಅನುಭವ ಅಥವಾ ವಿಚಾರ, ಜ್ಞಾನ ಭಯವನ್ನು ಸೃಷ್ಟಿಸುತ್ತದೆ. ಎಲ್ಲಿಯ ವರೆಗೆ ವಾಸ್ತವತೆಯನ್ನು ಶಬ್ದದಲ್ಲಿರಿಸುವ ಪ್ರಕ್ರಿಯೆ ಇರುತ್ತದೆಯೋ, ತನ್ಮೂಲಕ ಸಮೀಕರಿಸಿಕೊಳ್ಳುವ (ಅಂದರೆ ಗುರುತಿಸಿ ತಾನೇ ಅದೆಂದು ಏಕೀಭವಿಸಿ-ಕೊಳ್ಳುವ) ಅಥವಾ ಖಂಡಿಸುವ ಕಾರ್ಯಗಳು ಇರುತ್ತವೆಯೋ, ಎಲ್ಲಿಯ ವರೆಗೆ ವಿಚಾರ, ನಿರೀಕ್ಷಕನಾಗಿ ವಸ್ತುಸ್ಥಿತಿಯನ್ನು ತೀರ್ಮಾನಿಸುತ್ತಿರುತ್ತ-ದೆಯೋ ಅಲ್ಲಿಯ ವರೆಗೂ ಭಯ ತಪ್ಪಿದ್ದಲ್ಲ. ವಿಚಾರ ಗತಕಾಲದ ಅವಶೇಷ. ಅದು ಶಬ್ದ, ಸಂಕೇತ, ಪ್ರತಿಮೆಗಳ ರೂಪದಲ್ಲಿ ಅಸ್ತಿತ್ವದಲ್ಲಿರಬಲ್ಲುದು. ಎಲ್ಲಿಯ ವರೆಗೆ ಈ ವಿಚಾರವು ವಸ್ತುಸ್ಥಿತಿಯನ್ನು ತನ್ನ ಭಾಷೆಯಲ್ಲಿ, ಅಂದರೆ ಭೂತಕಾಲದ ಅನುಭವದ ಮಿತಿಯಲ್ಲೇ ಅನುವಾದಿಸುತ್ತ ಇರುತ್ತದೆಯೋ ಅಲ್ಲಿಯ ವರೆಗೆ ಭಯವಿದ್ದೇ ಇರುತ್ತದೆ.

ಅಂದರೆ ವಿಚಾರದ ಪ್ರಕ್ರಿಯೆಯೇ ಆಗಿರುವ ಮನಸ್ಸು, ತಾನೇ ಭಯ-ವನ್ನು ಸೃಷ್ಟಿಸುತ್ತದೆ. ವಿಚಾರ ಮಾಡುವುದೆಂದರೆ ಶಬ್ದೀಕರಣ. ಶಬ್ದ, ಸಂಕೇತ, ಪ್ರತಿಮೆಗಳಿರದೆ ವಿಚಾರ ಮಾಡಲು ಸಾಧ್ಯವಿಲ್ಲ. ಗತಕಾಲದ ಜ್ಞಾನ, ಪೂರ್ವಗ್ರಹದ, ಅನುಭವ, ಅವುಗಳಿಂದ ಸೃಷ್ಟಿಗೊಂಡ ಮನಸ್ಸಿನ ಊಹೆ— ಇವುಗಳ ಮೂಲಕವೇ ವಸ್ತುಸ್ಥಿತಿಯನ್ನು ಅರಿಯಲು ಮನಸ್ಸು ಯತ್ನಿಸು-ತ್ತದೆ. ಆದ್ದರಿಂದಲೇ ಭಯ ಹುಟ್ಟುತ್ತದೆ. ವಸ್ತುಸ್ಥಿತಿಯನ್ನು ಯಾವ ಹೆಸರು, ತಲೆಪಟ್ಟಿ, ಹಣೆಬರಹ ನೀಡದೆ, ತನ್ನ ಭಾಷೆಗೆ ವಸ್ತುಸ್ಥಿತಿಯನ್ನು

ಭಾಷಾಂತರಿಸದೆ, ನೇರವಾಗಿ ವಸ್ತುಸ್ಥಿತಿಯನ್ನು ನೋಡಲು ಸಾಮರ್ಥ್ಯ ಬಂದಾಗ ಮನಸ್ಸು ಭಯದಿಂದ ಮುಕ್ತವಾಗುತ್ತದೆ. ನಮ್ಮಲ್ಲಿರುವ ಭಯ, ಆತಂಕ, ಪ್ರತಿಕ್ರಿಯೆಗಳೆಲ್ಲವನ್ನೂ ಮನಸ್ಸು ತತ್‌ಕ್ಷಣ ತನ್ನೊಡನೆ ತನ್ನಲ್ಲೇ ಏಕೀಭವಿಸಿಕೊಂಡು (ಅಂದರೆ ತಾನೇ ಅವೆಲ್ಲವು ಎಂದು ಭಾವಿಸಿಕೊಂಡು) ಹೆಸರು ಕೊಟ್ಟುಬಿಡುವುದರಿಂದ ವಸ್ತುಸ್ಥಿತಿಯನ್ನು ನೇರವಾಗಿ, ಮೌನವಾಗಿ ಅರಿಯುವುದು ಅದಕ್ಕೆ ತುಂಬ ಕ್ಲಿಷ್ಟವಾದ ಕೆಲಸ. ' ಹೊಟ್ಟೆಕಿಚ್ಚು ' ಎಂಬ ಭಾವನೆ ಆ ಶಬ್ದದೊಡನೆ ಏಕೀಭಾವಿಸಿಕೊಂಡುಬಿಟ್ಟಿದೆ. ಒಂದು ಅನಿಸಿಕೆಯನ್ನು ಯಾವ ಹೆಸರನ್ನೂ ಕೊಡದೆ ನೋಡಲಿಕ್ಕೆ ಶಕ್ಯವಿಲ್ಲವೆ ? ಒಂದು ಭಾವನೆಗೆ ಹೆಸರು ಕೊಟ್ಟ ಕೂಡಲೆ ಆ ಭಾವನೆ ಪುಷ್ಟಿಗೊಂಡುಬಿಡುತ್ತದೆ, ಪ್ರಬಲವಾಗಿ-ಬಿಡುತ್ತದೆ, ತನ್ಮೂಲಕ ಜೀವದಾನ ಪಡೆಯುತ್ತದೆ. ಭಯವೆಂದು ಕರೆಯುವ ಭಾವನೆಯನ್ನು ಹೆಸರಿಡದೆ, ಆ ಭಾವನೆಯನ್ನು ನೋಡುತ್ತಲೇ ಮುಂದುವರಿ-ದರೆ ಆ ಭಾವನೆ ತನ್ನಷ್ಟಕ್ಕೆ ತಾನೇ ಬತ್ತಿಹೋಗುತ್ತದೆ. ಇಲ್ಲವಾಗುತ್ತದೆ. ಅದೇ ಭಾವನೆಯನ್ನು 'ಭಯ' ಎಂದು ಹೆಸರಿಟ್ಟು ಗುರುತಿಸಿದ ತಕ್ಷಣ, ಅದು ಪ್ರಬಲ-ವಾಗಿ ಬೇರೂರಿ ಜೀವದಾನ ಪಡೆಯುತ್ತವೆ. ಹೀಗೆ ಭಯದಿಂದ ಸಂಪೂರ್ಣ ಬಿಡುಗಡೆ ಪಡೆಯಲಿಚ್ಛಿಸುವವನು ವಸ್ತುಸ್ಥಿತಿ ಸತ್ಯಕ್ಕೆ ಹೆಸರು ಕೊಡುವ, ಅದಕ್ಕೆ ಸಂಕೇತ, ಪ್ರತಿಮೆಗಳನ್ನು ಆರೋಪಿಸುವ, ಶಬ್ದದಲ್ಲಿಟ್ಟು ಗುರುತಿಸುವ ಸಮಗ್ರ ಪ್ರಕ್ರಿಯೆಯನ್ನು ಅರಿಯಬೇಕಾಗುತ್ತದೆ.

' ಭಯ ' ಹಲವಾರು ಪಲಾಯನಗಳನ್ನು ಕಂಡುಕೊಂಡಿದೆ. ಅವುಗಳಲ್ಲಿ ಅತ್ಯಂತ ಸಾಮಾನ್ಯವಾದದ್ದು— ಬೇರೊಂದರಲ್ಲಿ ತನ್ನನ್ನು ಗುರುತಿಸಿಕೊಳ್ಳು-ವುದು (Identify) ಅಥವಾ ಸಮೀಕರಿಸಿಕೊಳ್ಳುವುದು. ದೇಶ, ಸಮಾಜ, ವಿಚಾರಗಳೊಡನೆ ಗುರುತಿಸಿಕೊಳ್ಳುವುದು. ಒಂದು ಮೆರವಣಿಗೆಯನ್ನೋ, ಸೈನಿಕ-ಕವಾಯತನ್ನೋ, ಧಾರ್ಮಿಕ ಮೆರವಣಿಗೆಯನ್ನೋ ಕಂಡಾಗ. ದೇಶ ಪರರ ಆಕ್ರಮಣದ ಅಪಾಯಲ್ಲಿ ಸಿಲುಕಿರುವಾಗ ನಾವು ಪ್ರತಿಸ್ಪಂದಿಸುವ ರೀತಿ ಯಲ್ಲಿ ಇದು ವ್ಯಕ್ತವಾಗುತ್ತಿರುತ್ತದೆ. ಇದೇ ತರಹ ಮಗ, ಹೆಂಡತಿ, ಮನೆ, ವಿಶಿಷ್ಟಬಗೆಯ ಕ್ರಿಯೆ ಅಥವಾ ನಿಷ್ಕ್ರಿಯೆಗಳಲ್ಲೂ ಬೇರೆ-ಬೇರೆ ಬಗೆಯಲ್ಲಿ ನಮ್ಮನ್ನು ಗುರುತಿಸಿಕೊಳ್ಳುತ್ತೇವೆ— ಆ ಮತ್ತೊಂದು ವಸ್ತು— ವ್ಯಕ್ತಿಯೇ

ನಾವು ಎಂದು ಪರಿಭಾವಿಸಿಕೊಳ್ಳುವುದು ಅಥವಾ ಗುರುತಿಸಿಕೊಳ್ಳುವುದು ತನ್ನನ್ನು ತಾನೇ ಮರೆಯುವ ಪ್ರಕ್ರಿಯೆ. ನನ್ನ ಬಗ್ಗೆ ನನಗೆ ಪ್ರಜ್ಞೆ ಇರುವ ವರೆಗೂ ನೋವಿರುವುದು, ಹೋರಾಟವಿರುವುದು, ನಿರಂತರ ಭಯವಿರುವುದು ನನಗೆ ಗೊತ್ತಿದೆ. ಆದರೆ ತಾತ್ಕಾಲಿಕವಾಗಿಯಾದರೂ ನನಗಿಂತ ಮಿಗಿಲಾದವ—ರೊಡನೆ, ಯೋಗ್ಯವಾದುದರೊಡನೆ—ಸೌಂದರ್ಯ, ಬದುಕು, ಸತ್ಯ, ನಂಬಿಕೆ, ಜ್ಞಾನ— ಇತ್ಯಾದಿಗಳೊಡನೆ ಗುರುತಿಸಿಕೊಂಡಾಗ ನನ್ನಿಂದ ನಾನು ಪಲಾಯನ ಮಾಡುತ್ತೇನೆ. ನನ್ನ ದೇಶದ ಬಗ್ಗೆ ನಾನು ಮಾತನಾಡಲಾರಂಭಿಸಿದಾಗ ತಾತ್ಕಾಲಿಕವಾಗಿ ನನ್ನನ್ನು ಮರೆಯುತ್ತೇನೆ. ದೇವರ ಬಗ್ಗೆ ಮಾತನಾಡು—ವಾಗಲೂ ಅಷ್ಟೇ. ನನ್ನ ಕುಟುಂಬ, ಸಮಾಜ, ವಿಶಿಷ್ಟ ಪಕ್ಷ, ಕೆಲವೊಂದು ಆದರ್ಶಗಳೊಡನೆ ನನ್ನನ್ನು ತಾತ್ಕಾಲಿಕವಾಗಿ ಗುರುತಿಸಿಕೊಂಡಾಗಲೂ ಅಷ್ಟೇ, ನನಗೆ ತಾತ್ಕಾಲಿಕವಾಗಿ ಪಲಾಯನ ಸಿಗುತ್ತದೆ.

ಗುರುತಿಸಿಕೊಳ್ಳುವಿಕೆ ನನ್ನಿಂದ ಪಲಾಯನ ಮಾಡುವ ವಿಧಾನದಂತೆ, ಸದ್ಗುಣವೂ ಒಂದು ಬಗೆಯ ಪಲಾಯನ. ಸದ್ಗುಣಗಳ ಬೆನ್ನು ಹತ್ತಿದವನು ತನ್ನಿಂದ ಪಲಾಯನ ಮಾಡಲು ಯತ್ನಿಸುತ್ತಿರುತ್ತಾನೆ; ತುಂಬ ಸಂಕುಚಿತ ಮನಸ್ಸನ್ನೂ ಹೊಂದಿರುತ್ತಾನೆ. ಸದ್ಗುಣವೆನ್ನುವುದು ಬೆನ್ನುಹತ್ತಲು ಬರು—ವಂತಹದ್ದಲ್ಲವಾದ್ದರಿಂದ ಸದ್ಗುಣಿಯ ಮನಸ್ಸು ಸದ್ಗುಣ ಸಂಪನ್ನ ಮನಸ್ಸಲ್ಲ. ನಾವು ಹೆಚ್ಚೆಚ್ಚು ಸದ್ಗುಣಭರಿತರಾಗಲು ಯತ್ನಿಸಿದಂತೆಲ್ಲ ನಮ್ಮಲ್ಲಿಯ 'ಅಹಂ' ಪ್ರಬಲವಾಗುತ್ತ ಹೋಗುತ್ತದೆ. ಹಲವಾರು ರೂಪಗಳಲ್ಲಿ ನಮ್ಮಲ್ಲಿನ ಸಾಮಾನ್ಯವಾಗಿರುವ ಭಯ ಒಂದಲ್ಲ ಒಂದು ಬಗೆಯ ಬದಲೀ ವಸ್ತುವನ್ನು ಹುಡುಕಲೇ ಬೇಕು. ತನ್ಮೂಲಕ ನಮ್ಮ ಹೋರಾಟವನ್ನು ಹೆಚ್ಚಿಸಲೇ ಬೇಕು. ಅಂಥ ಬದಲಿ ವಸ್ತು / ವಿಷಯಗಳೊಡನೆ ಹೆಚ್ಚೆಚ್ಚು ಗುರುತಿಸಿಕೊಂಡಂತೆಲ್ಲ ಭಯ ಅದರ ಹಿಂದೆ ಇರುವುದರಿಂದ, ಅದಕ್ಕಾಗಿ (ಆ ವಸ್ತು / ವಿಷಯಕ್ಕಾಗಿ) ಸಾಯುವ ವರೆಗೂ ಹೋರಾಟ ನಡೆಸಲು ಸಿದ್ಧವಾಗುವಷ್ಟರ ಮಟ್ಟಿಗೆ ಅದು ಪ್ರಬಲವಾಗುತ್ತದೆ.

ಒಟ್ಟಿನಲ್ಲಿ ಭಯವೆಂದರೇನು ? ಇದ್ದುದನ್ನು ಸ್ವೀಕರಿಸದೇ ಇರುವುದೇ ಅಲ್ಲವೇ ಭಯ ? 'ಸ್ವೀಕಾರ' ಎಂಬ ಶಬ್ದವನ್ನು ಸ್ವೀಕರಿಸಲು ನಡೆಸುವ

ಪ್ರಯತ್ನ ಎಂಬರ್ಥದಲ್ಲಿ ಉಪಯೋಗಿಸಲಿಲ್ಲ ಇಲ್ಲಿ, ಇರುವುದನ್ನು ನಾನು ಕಂಡಾಗ ಸ್ವೀಕರಿಸುವ ಪ್ರಶ್ನೆಯೇ ಉದ್ಭವಿಸುವದಿಲ್ಲ. ಇರುವುದನ್ನು ನಾನು ಸರಿಯಾಗಿ ನೋಡದೇ ಇದ್ದಾಗ ಸ್ವೀಕಾರದ ಪ್ರಕ್ರಿಯೆಯನ್ನು ತರುತ್ತೇನೆ. ಆದ್ದರಿಂದ ' ಇರುವುದನ್ನು ' ಸ್ವೀಕರಿಸದೇ ಇರುವುದೇ ಭಯ.

ಹಾಗಾದರೆ ಪ್ರತಿಕ್ರಿಯೆ, ನಂಬಿಕೆ, ಆಸೆ-ನಿರಾಸೆ, ಇತ್ಯಾದಿಗಳ ಜೊತೆಯಾದ ' ನಾನು ' ಇವನ್ನು ಮೀರಿ ಹೋಗುವುದು ಹೇಗೆ ? ಇವುಗಳ ಅಡ್ಡಿ, ನಿರ್ಬಂಧಗಳಿಲ್ಲದೇ ನಾನು ಜಾಗ್ರತನಿರಬಲ್ಲೆನೆ ? ಯಾವುದೇ ಬಗೆಯ ಅಡ್ಡಿ, ಆತಂಕ, ನಿರ್ಬಂಧ ಇಲ್ಲದಿದ್ದಾಗ, ಅಸಾಧಾರಣವಾದ ಆನಂದ ಅಲ್ಲಿರುತ್ತದೆ. ದೇಹ ಅತ್ಯಂತ ಆರೋಗ್ಯದಲ್ಲಿರುವಾಗ ಒಂದು ಬಗೆಯ ಖುಶಿ ಇರುತ್ತದೆ. ಅದೇ ರೀತಿಯಲ್ಲಿ ' ನಾನು ' ಕೇಂದ್ರವಿಲ್ಲದೆ, ಗುರುತಿಸುವಿಕೆ, ಯಾವ ಅಡ್ಡಿ-ಆತಂಕಗಳಿಲ್ಲದೇ ಮನಸ್ಸು ಸಂಪೂರ್ಣ ಸ್ವತಂತ್ರವಾಗಿರುವಾಗ ವಿಶಿಷ್ಟ ಬಗೆಯ ಸಂತೋಷ ಅಲ್ಲಿರುತ್ತದೆ.

ಭಯವನ್ನು ಗೆಲ್ಲುವುದು ಅಂತಿಲ್ಲ. ಗೆದ್ದಿರುವಂತಹದನ್ನು ಪುನಃ ಪುನಃ ಗೆಲ್ಲುತ್ತಲೇ ಇರಬೇಕಾಗುತ್ತದೆ. ಆದ್ದರಿಂದ ಯಾವುದನ್ನೂ ಸಂಪೂರ್ಣವಾಗಿ ಅಂತಿಮವಾಗಿ ಗೆಲ್ಲುವುದು ಎಂದು ಇಲ್ಲವೇ ಇಲ್ಲ. ಏನನ್ನಾದರೂ ನಾವು ಅರ್ಥ ಮಾಡಿಕೊಳ್ಳಬಹುದು, ಅರಿತುಕೊಳ್ಳಬಹುದು, ಅಷ್ಟೇ. ಈ ಗೆಲ್ಲುವುದು ಹಾಗು ಅರಿಯುವುದು ಎರಡೂ ಪರಸ್ಪರ ವಿರುದ್ಧ ಪ್ರಕ್ರಿಯೆಗಳು. ಗೆಲ್ಲುವ ಕ್ರಿಯೆ ಇನ್ನೂ ಹೆಚ್ಚಿನ ಗೊಂದಲಕ್ಕೆ ಕಾರಣವಾಗಿ ಭಯವನ್ನು ಹೆಚ್ಚಿಸುತ್ತದೆ. ಪ್ರತಿಭಟಿಸುವುದು, ಅಧಿಕಾರ ಸ್ಥಾಪಿಸುವುದು, ಸಮಸ್ಯೆಯೊಂದಿಗೆ ಯುದ್ಧ ಮಾಡುವುದು ಅಥವಾ ಸಮಸ್ಯೆಯ ವಿರುದ್ಧ ಕೋಟೆ ಕಟ್ಟಿಕೊಳ್ಳುವುದು— ಎಲ್ಲವೂ ಸಂಘರ್ಷವನ್ನು ಇನ್ನೂ ಹೆಚ್ಚಿಸುವಂತಹವು. ಆದರೆ ಭಯವನ್ನು ನಾವು ಅರಿಯಬಹುದು; ಹಂತ-ಹಂತವಾಗಿ ಅದರ ಸಮಗ್ರತೆಯನ್ನು ಶೋಧಿಸಿದಾಗ. ಭಯ ಇನ್ನಾವ ರೂಪದಲ್ಲೂ ಪುನಃ ಗೋಚರಿಸದು.

ಭಯವು ಮನುಷ್ಯನ ಸೃಜನಶೀಲತೆಯನ್ನು ನಾಶಪಡಿಸುತ್ತದೆ. ಭಯ ಅವನನ್ನು ಅನುಕರಣಶೀಲನನ್ನಾಗಿ ಮಾಡುತ್ತದೆ. ತನ್ಮೂಲಕ ಆತ ಸಂಪ್ರದಾಯ, ಪದ್ಧತಿ, ಮಕ್ಕಳು, ಸಮಾಜ, ಇತ್ಯಾದಿಗಳಿಗೆ ಅಂಟಿಕೊಂಡಿರು-

ತ್ತಾನೆ. ಒಂದು ಮರದ ಚಿತ್ರವನ್ನು ಬಿಡಿಸಬೇಕಾದರೆ ಕೇವಲ ಅನುಕರಣೆ ಅಲ್ಲಿರುವುದಿಲ್ಲ. ಇದ್ದ ಹಾಗೇ ಫೋಟೋ ತೆಗೆಯಲಿಕ್ಕಾದಂತೆ ಚಿತ್ರ ಬಿಡಿಸಲಿಕ್ಕೆ ಆಗುವುದಿಲ್ಲ. ಒಂದು ಮರ, ಹಕ್ಕಿ, ಸೂರ್ಯಾಸ್ತ ಇತ್ಯಾದಿ ಏನನ್ನೇ ಬಿಡಿಸ-ಬೇಕಾದರೂ ಮುಕ್ತತೆಯಿರಬೇಕು. ಮುಕ್ತತೆಯಿದ್ದಾಗ ಮಾತ್ರ ಆ ಮರ, ಹಕ್ಕಿ, ಸೂರ್ಯಾಸ್ತ ಇತ್ಯಾದಿಗಳ ಬಗ್ಗೆ ನಿಮಗೇನು ಅನಿಸುತ್ತದೆ? ಅದರ ಅಂತರಾರ್ಥ ಏನು ಎಂದು ನಿಮ್ಮ ಅನಿಸಿಕೆ? ಅಲ್ಲಿರುತ್ತದೆ ಜಾಗ್ರತಗೊಂಡ ಸೃಜನಶೀಲಶಕ್ತಿ. ಆಗ ಮಾತ್ರ ನೀವು ನೋಡಿದ್ದುದರ ಅರ್ಥವಂತಿಕೆಯನ್ನು ಅಭಿವ್ಯಕ್ತಗೊಳಿಸಲು ಶಕ್ಯ. ಎಲ್ಲಿಯ ವರೆಗೆ ಮನಸ್ಸು ಭಯದಿಂದ, ಹಲವಾರು ಸಂಗತಿಗಳಿಂದ ತುಂಬಿಕೊಂಡಿರುತ್ತದೆಯೋ ಅಲ್ಲಿಯ ವರೆಗೆ ಮುಕ್ತತೆ ಶಕ್ಯವಿಲ್ಲ. ಸೃಜನಶೀಲರಾಗಿರುವುದು ಎಂದರೆ ಅತ್ಯಂತ ಅನನ್ಯವಾದುದನ್ನು ಮಾಡುವ ಶಕ್ತಿ; ಯಾವ ಒತ್ತಡ, ಆಗ್ರಹ, ಮಾರ್ಗದರ್ಶನ, ನಿಯಂತ್ರಣಗಳಿಲ್ಲದೆ ಅತ್ಯಂತ ಸಹಜ ಸ್ಫೂರ್ತಿಯಿಂದ ಮಾಡುವಂತಹ ಶಕ್ತಿ ಉದಾ : ಅತ್ಯಂತ ನಿರ್ಗತಿಕನನ್ನು ಕಂಡಾಗ ಅನುಕಂಪದಿಂದ ಮಾಡುವ ಅನಿಯೋಜಿತ ಸಹಾಯ. ಅಂತರಂಗದಲ್ಲಿ ಭಯ ತುಂಬಿರುವಾಗ ಇಂಥವಕ್ಕೆಲ್ಲ ಎಲ್ಲಿ ಅವಕಾಶ? ಏಕೆಂದರೆ ಭಯ ತುಂಬಿದ ಮನಸ್ಸು ಸಂವೇದನಾಹೀನವಾಗಿ, ತನ್ನ ಸುತ್ತುಮುತ್ತು ಇರುವ ವಾಸ್ತವಕ್ಕೆ ಸ್ಪಂದಿಸದಂತಹ ನಿರ್ಜೀವ ಸ್ಥಿತಿಯಲ್ಲಿರುತ್ತದೆ. ಏನೋ ಆಗುವ, ಸಾಧಿಸುವ ಗುರಿ, ಆಸೆ ಇರುವ ವರೆಗೂ ಬಂಧಿತ ಮನಸ್ಸು ಹೀಗೆ ವಿಚಾರಮಾಡದ, ಸೃಜನಶೀಲತೆ ಬತ್ತಿಹೋದ ಸ್ಥಿತಿಯಲ್ಲಿರುತ್ತದೆ. ಭಯಕ್ಕೆ ಕಾರಣ ಆಸೆಯಾದುದರಿಂದ, ಆಸೆಯಿಲ್ಲದಿದ್ದಾಗ ಭಯ ಇಲ್ಲದಾಗಿ ಮನಸ್ಸು ಸ್ವತಂತ್ರವಾಗುತ್ತದೆ.

ಸೂಕ್ಷ್ಮ ಸಂವೇದನಾಶೀಲರಾದ ಕೆಲವರು ಅತ್ಯಂತ ಶಾಂತ ಹಾಗು ಬೆಚ್ಚಗಿನ ಸ್ನೇಹಮಯ ಪರಿಸರವನ್ನು ಬಯಸುತ್ತಾರೆ. ಅವರು ಅಂಥದನ್ನು ತಾವೇ ಸೃಷ್ಟಿಸಿಕೊಳ್ಳುತ್ತಾರೆ ಅಥವಾ ಅದನ್ನು ನೀಡುವಂತಹ ಕುಟುಂಬ / ಗೆಳೆಯರ ಮೇಲೆ ಅವಲಂಬಿಸಿಕೊಂಡಿರುತ್ತಾರೆ. ಸಾಮಾನ್ಯವಾಗಿ ಈ ಸೂಕ್ಷ್ಮ ಸಂವೇದನಾಶೀಲತೆ ಹಾಗು ಅವಲಂಬನೆ ಜತೆ-ಜತೆಗೇ ಇರುತ್ತವೆ. ಒಬ್ಬನನ್ನು ಅವಲಂಬಿಸಿರುವುದು ಎಂದರೆ ಆತ ಕಳೆದುಹೋದಾನೆಂಬ ಭಯದಿಂದ. ಆದ್ದ-ರಿಂದ ಹೆಚ್ಚೆಚ್ಚು ಅವಲಂಬನೆ ಇದ್ದ ಹಾಗೆ ಭಯದ ಪ್ರಮಾಣವೂ ಅಷ್ಟೇ

ಹೆಚ್ಚಿರುತ್ತದೆ. ಅದೊಂದು ವಿಷವರ್ತುಲ. ದೈಹಿಕವಾಗಿ ಅವಲಂಬನ ಕೆಲವು ಮಟ್ಟಿಗೆ ಇರುವುದು ಸ್ವಾಭಾವಿಕ, ಅನಿವಾರ್ಯ. ಅದೇ ತರಹ ಸಾಮಾಜಿಕ ಅವಲಂಬನೆ ಸಹ, ಅಲ್ಪ ಪ್ರಮಾಣದಲ್ಲಿ. ಆದರೆ ನಾವು ಮಾನಸಿಕವಾಗಿ ಸಹ ಅವಲಂಬನೆಯಲ್ಲಿರುತ್ತೇವೆ. ಅದು ತೃಪ್ತಿ ನೀಡುವಂತಹದ್ದಾದರೂ ಭಯ ಹುಟ್ಟಿಸುತ್ತದೆ; ಯಾಕೆ? ಈ ಮಾನಸಿಕ ಅವಲಂಬನೆ ಎಂದರೆ ಸ್ವಾತಂತ್ರ್ಯದ ನಿರಾಕರಣೆ- ಮನೆ ಮಠ, ಮಡದಿ-ಮಕ್ಕಳು, ಆಸ್ತಿ-ಪಾಸ್ತಿ ಎಲ್ಲವನ್ನೂ ಒಂದೊಂದಾಗಿ ತೆಗೆಯುತ್ತ ಹೋದರೆ ಅಂತಿಮವಾಗಿ ಮನುಷ್ಯ ಏನಿರುತ್ತಾನೆ? ತನ್ನೊಳಗೆ ತಾನು ಖಾಲಿಯಾಗಿ, ಕಳೆದುಹೋದಂಥವನಾಗುತ್ತಾನೆ. ಈ ಖಾಲಿತನದ ಭಯದಿಂದಾಗಿ ಆತ ಆಸ್ತಿ, ಜನ, ನಂಬಿಕೆಗಳ ಮೇಲೆ ಅವಲಂಬಿ- ಸಿರುತ್ತಾನೆ. ನೀವು ಅವಲಂಬಿಸಿರುವಂತಹದರ ಬಗೆಗೆ ನಿಮಗೆ ನೂರಕ್ಕೆ ನೂರರಷ್ಟು ಕಳೆದುಕೊಳ್ಳಲಾರೆನೆಂಬ ವಿಶ್ವಾಸ-ನಂಬಿಕೆ ಇರಬಹುದು. ಆದರೂ ಸಹ ಭಯ ಯಾಕೆ ಮುಂದುವರಿಯುತ್ತದೆ? ಇದಕ್ಕೆ ಕಾರಣ ಯಾವುದೇ ಬಗೆಯ ಮಾನಸಿಕ ಅವಲಂಬನವು, ಅದು ಎಷ್ಟೇ ಅವಿನಾಶಿ ಎಂದೆನಿಸಿದರೂ ಭಯವನ್ನು ಹುಟ್ಟಿಸುತ್ತಲೇ ಇರುತ್ತದೆ ಎಂಬ ವಾಸ್ತವ ಸತ್ಯ. ಯಾಕೆಂದರೆ ಭಯ ಹುಟ್ಟಿರುವುದು ಅಂತರಂಗದ ಖಾಲಿತನ, ದಾರಿದ್ರ್ಯ, ಕೊರತೆಗಳಿಂದ ಸೂಕ್ಷ್ಮ ಸಂವೇದನಾಶೀಲನಾಗಿದ್ದೂ ಅವಲಂಬಿತನಾಗದೇ ಇರುವುದು ಹೇಗೆ. ಮಾನಸಿಕವಾಗಿ ಮುಕ್ತನಾಗಿದ್ದೂ ಯಾತನೆಗೆ ಗುರಿಯಾಗದೇ ಇರುವುದು ಹೇಗೆ?— ಎನ್ನುವುದನ್ನು ಅರಿಯದಿದ್ದಾಗ ಸೂಕ್ಷ್ಮ ಸಂವೇದನಾಶೀಲತೆ ಅವಲಂಬನೆಯನ್ನು ಬಯಸುತ್ತದೆ. ಅವಲಂಬನೆ ಹೆಚ್ಚಾದಂತೆಲ್ಲ ಭಯ, ತನ್ಮೂಲಕ ಸ್ವಾತಂತ್ರ್ಯದ ಬಯಕೆ ಹೆಚ್ಚಾಗುತ್ತಲೇ ಹೋಗುತ್ತದೆ. ಸ್ವಾತಂತ್ರ್ಯದ ಬಯಕೆ ಪ್ರತಿಕ್ರಿಯಾ-ಸ್ವರೂಪದ್ದಾದ್ದರಿಂದ ಭಯವನ್ನು ಪ್ರೋತ್ಸಾಹಿಸುತ್ತದೆಯೇ ಹೊರತು, ಅವಲಂಬನೆಯಿಂದ ಬಿಡುಗಡೆ ನೀಡದು.

ಹೀಗೆ ಅಂತರಂಗದ ಖಾಲಿತನ, ಒಂಟಿತನ, ದಾರಿದ್ರ್ಯಗಳ ಅರಿವಿನಲ್ಲಿ ಮತ್ತು ಅವುಗಳೊಂದಿಗೆ ಏನೂ ಮಾಡಲಾರೆವಲ್ಲ ಎಂಬ ಅಸಹಾಯಕತೆಯಲ್ಲಿ ಹುಟ್ಟಿದ್ದು ಭಯ. ಈ ಬಗೆಯ ಭಯ ಅಗತ್ಯವಾಗಿಸುವ ಅವಲಂಬನೆ ಪುನಃ ಭಯವನ್ನೇ ಸೃಷ್ಟಿಸುವಂತಹದು. ಇವನ್ನು ಅರಿಯಲು ಸಂವೇದನೆ ಬೇಕಾಗು-

ತ್ತದೆ. ಸಂವೇದನಾಶೀಲನಾಗಿದ್ದಾಗ ತನ್ನೊಳಗಿನ ಈ ಅಸಾಧಾರಣವಾದ ಖಾಲಿತನ— ಕ್ಷುದ್ರ ಮನೋರಂಜನೆಗಳಿಂದ ಅಥವಾ ಧಾರ್ಮಿಕ ಚಟುವಟಿಕೆ-ಗಳಿಂದ, ಮಾದಕ ವಸ್ತುಗಳಿಂದ ಇತ್ಯಾದಿ ಯಾವುದರಿಂದಲೂ ತುಂಬಲಾರ-ದಂತಹ, ತಳವೇ ಇಲ್ಲದ ಪಾತಾಳ ಸ್ವರೂಪದಲ್ಲಿರುವ ಅಗಾಧ ಖಾಲಿತನದ ಅರಿವು, ಅನುಭವ ಉಂಟಾಗುತ್ತದೆ. ಇದು ಗೊತ್ತಾದ ತಕ್ಷಣ, ಭಯ ಮತ್ತಷ್ಟು ಹೆಚ್ಚುತ್ತದೆ. ಇದು ಅವಲಂಬನೆಗೆ ಎಳಸುತ್ತದೆ. ಆದರೆ ಈ ಅವಲಂಬನೆ ಹೆಚ್ಚೆಚ್ಚು ಸಂವೇದನಾಶೂನ್ಯನನ್ನಾಗಿ ಮಾಡುತ್ತದೆ. ಇದನ್ನು ಪರಿಹರಿಸುವುದು ಹೇಗೆ ?

ಅಂತರಂಗದ ಅಗಾಧವಾದ ಖಾಲಿತನದಿಂದ ಸರಿಯುವ ಯಾವ ಚಲ-ನೆಯೂ ಪಲಾಯನವೇ, 'ಇರುವುದರಿಂದ' ಪಲಾಯನ ಮಾಡುವುದೇ ಭಯ. 'ಇರುವುದು' ಭಯವಲ್ಲ; ಸತ್ಯ. ಆದುದರಿಂದ ಇರುವುದರಿಂದ ಓಡುವ ಕ್ರಿಯೆ ಭಯ. ಈ ಭಯ ನಮ್ಮನ್ನು ಹುಚ್ಚನನ್ನಾಗಿಯೂ ಮಾಡುತ್ತದೆ.

ಈ ಅಂತರಂಗದ ಖಾಲಿತನ, ಏಕಾಂಗಿತನ ಯಾತರದು ? ಅದು ಹುಟ್ಟಿಕೊಂಡಿದ್ದಾದರೂ ಹೇಗೆ ? ಅದು ಬರುವುದು ಹೋಲಿಕೆಯಿಂದ, ಅಳತೆ ಮಾಡುವುದರ ಮೂಲಕ. ಸಂತರು, ಗುರುಗಳು, ಖ್ಯಾತ ಸಂಗೀತಗಾರರು, ಜ್ಞಾನಿಗಳು. ವಿದ್ವಾಂಸರು, ಸಿದ್ಧಪುರುಷರು— ಇವರುಗಳೊಂದಿಗೆ ನನ್ನನ್ನು ನಾನು ಹೋಲಿಸಿಕೊಳ್ಳುತ್ತೇನೆ. ನಾನು ಪ್ರತಿಭಾನ್ವಿತನಲ್ಲ, ನಾನು ಸಾಕ್ಷಾ-ತ್ಕರಿಸಿಕೊಂಡಿಲ್ಲ, ನಾನು ಅತ್ಯಂತ ಸಾಮಾನ್ಯ— ಇತ್ಯಾದಿ ನನ್ನ ಖಾಲಿತನ, ಕೊರತೆ ನನಗೆ ಕಾಣುತ್ತದೆ. ಇಲ್ಲಿಯೇ ಎದುರಾಗುತ್ತದೆ ನನ್ನೊಳಗಿನ ಅಗಾಧ ವಾದ ಖಾಲಿ ಗುಹೆ. ಅಲ್ಲಿಂದ ಕಾಲುಕೀಳುವುದೇ ಭಯ. ಈ ಭಯವೇ ಆ ಒಳಗಿನ ತಳವಿರದ, ಪಾತಾಳಸದೃಶ ಪ್ರಪಾತವನ್ನು ಅರಿಯಲು ಬಿಡುವು-ದಿಲ್ಲ. ತನ್ನನ್ನು ತಾನೇ ತಿನ್ನುವ ಮನೋವ್ಯಾಧಿ ಇದೇ.

ಚಿಕ್ಕವರಿರುವಾಗಿನಿಂದ ಎಲ್ಲ ಹಂತದಲ್ಲಿಯೂ ಈ ಹೋಲಿಕೆಗಳ ಮೂಲಕ ನಿರ್ಬಂಧಿಸಲ್ಪಟ್ಟು ಬೆಳೆದುಬಂದಂತಹ ನಮಗೆ, ಈ ಮಾನಸಿಕ ಹೋಲಿಕೆ ಇರದೇ ಬದುಕುವುದರ ಅರ್ಥ ಮಾಡಿಕೊಳ್ಳುವುದು ಕ್ಲಿಷ್ಟವಾದದ್ದೇ. ಹೋಲಿಕೆ-

ಇಲ್ಲದೇ ಬದುಕುವುದೆಂದರೆ ಅವಲಂಬನೆಯಿಲ್ಲದೇ, ಆತ್ಮಸಂತೃಪ್ತಿಯಿಲ್ಲದೇ, ಹುಡುಕಾಟವಿಲ್ಲದೇ, ಪ್ರಶ್ನೆಗಳಿಲ್ಲದೇ ಬದುಕುವುದು. ಹಾಗೆ ಇರುವುದು ಎಂದರೆ ಪ್ರೇಮದಲ್ಲಿರುವುದು. ಪ್ರೇಮದಲ್ಲಿ ಹೋಲಿಕೆಯಿಲ್ಲವಾದ್ದರಿಂದ ಅಲ್ಲಿ ಭಯವೂ ಇಲ್ಲ. ಶಬ್ದವೇ ಆ ಶಬ್ದ ನಿರ್ದೇಶಿಸುವ ವಸ್ತು, ವಿಷಯ, ಸಂಗತಿ ಅಲ್ಲ-ವಾದ್ದರಿಂದ, ಪ್ರೇಮಕ್ಕೆ ತಾನು ಪ್ರೇಮವೆಂಬ ಅರಿವೂ ಇರುವುದಿಲ್ಲ.

ನಮ್ಮ ಖಾಲಿತನದ ಬಗ್ಗೆ, ಟೊಳ್ಳುತನದ ಬಗ್ಗೆ ನಾವೇನೂ ಮಾಡ-ಲಾರೆವು. ಏನೇ ಮಾಡಿದರೂ ಅದು ಪಲಾಯನ ಮಾಡುವ ವಿಧಾನವಾಗು-ತ್ತದೆ, ಅಷ್ಟೇ. ಇದು ಚೆನ್ನಾಗಿ ಜ್ಞಾಪಕದಲ್ಲಿ ಇಡಬೇಕಾದ ಅಂಶ ನಮ್ಮೊಳಗಿನ ಖಾಲಿತನವನ್ನು ನೋಡುತ್ತ ಹೋದಂತೆಲ್ಲ-ನನ್ನ ಮತ್ತು ಖಾಲಿತನದ ಮಧ್ಯೆ ಅಂತರವಿಲ್ಲದಿರುವುದು ಅರಿವಿಗೆ ಬರುತ್ತದೆ. ಆಗ ವೀಕ್ಷಕನೇ ವೀಕ್ಷಿ-ತನೂ ಆಗುತ್ತಾನೆ. ಇದಕ್ಕೂ ಮುಂದುವರಿದರೆ ಏಕಾಂಗಿತನವೆಂದು ಕರೆಯು-ವಂಥಾದ್ದೇ ಇಲ್ಲವಾಗುತ್ತದೆ. ಹೆಸರಿಸುವುದೇ ಇಲ್ಲವಾದಂತಹ ಸ್ಥಿತಿ ಅದು. ಇನ್ನೂ ಮುಂದುವರಿದರೆ ಏಕಾಂಗಿತನ ಎನ್ನುವುದೇ ಇರುವುದಿಲ್ಲ. ಒಂಟಿತನ, ಖಾಲಿತನ ಸಂಪೂರ್ಣವಾಗಿ ನಿಂತುಬಿಟ್ಟ ಸ್ಥಿತಿ. ವಿಚಾರ ಹಾಗು ವಿಚಾರ ಮಾಡುವವ ಇಬ್ಬರೂ ಇಲ್ಲವಾದಂತಹ ಸ್ಥಿತಿ. ಆಗ ಮಾತ್ರ ಭಯ ಇಲ್ಲ-ವಾಗುತ್ತದೆ.

* * *

೧೧. ಸಾವು

ಮನುಷ್ಯನಿಗೆ ಸಾಮಾನ್ಯವಾಗಿ ಸಾವಿನ ಭಯ ಹಾಗು ಸಾವಿನ ನಂತ ಏನಾಗುತ್ತದೆ ಎಂಬ ಕುತೂಹಲ — ಎರಡೂ ಜೊತೆ-ಜೊತೆಗೇ ಇರುತ್ತವೆ. ಪ್ರ ಧರ್ಮವೂ ತನ್ನದೆ ಆದ ಉತ್ತರ ಹಾಗು ವಿವರಣೆಗಳನ್ನು ನೀಡುತ್ತದೆ.

ಸಾವು ಏನು ಎನ್ನುವುದನ್ನು ಅರಿಯುವ ಮೊದಲು ಸಾವು ಮೊತ್ತ ಮೊದಲು ಮಾಡಬೇಕಾದ ಕೆಲಸ ಎಂದರೆ— ಪುನರ್ಜನ್ಮ, ಜನ್ಮಾಂತರ ಇತ್ಯಾದಿ ನಂಬಿಕೆಗಳ ಹಾಗು ಸರಳ ವಿಚಾರವಾದಗಳ ಮೂಲಕ, ಸಾವಿನ ವಾಸ್ತವತೆಯಿಂದ ಪಾರಾಗುವ ಒತ್ತಾಸೆಯಿಂದ ಮುಕ್ತರಾಗುವುದು. ಸಾವಿನ ಬಗ್ಗೆ ತರ್ಕಬುದ್ಧಿಗೆ ಒಪ್ಪುವಂಥ ವಿಚಾರಗಳನ್ನೋ ಅಥವಾ ತೃಪ್ತಿನೀಡು-ವಂಥ ಉತ್ತರಗಳನ್ನೋ ಕಾಣಲು ಮನಸ್ಸು ಎಷ್ಟೊಂದು ತವಕಿಸುತ್ತಿರುತ್ತದ ಎಂದರೆ, ಅದು ಅತ್ಯಂತ ಸುಲಭವಾಗಿ ಒಂದಲ್ಲ ಒಂದು ರೀತಿಯ ಭ್ರಮೆಗ ಜಾರಿಬಿಡುತ್ತದೆ. ಇದರ ಬಗ್ಗೆ ಸದಾ ಜಾಗ್ರತನಾಗಿರಬೇಕಾಗುತ್ತದೆ.

ಯಾಕೆಂದರೆ ಈ ಬಗೆಯ ಪಲಾಯನ ಎಷ್ಟೇ ತೃಪ್ತಿನೀಡುವಂಥಾದ್ದಾ-ದರೂ ಸಮಸ್ಯೆಯ ಬಗ್ಗೆ ಅರಿವನ್ನುಂಟುಮಾಡುವುದಿಲ್ಲ. ಈ ಪಲಾಯನವೇ ಭಯಕ್ಕೆ ಮೂಲ. ಇರುವ ವಾಸ್ತವ ಸತ್ಯದಿಂದ ದೂರ ಹೋದಂತೆಲ್ಲ ಭಯ ಬರುತ್ತದೆ. ಎಷ್ಟೇ ಸಮಾಧಾನ ನೀಡುವಂತಹ ನಂಬಿಕೆಯಾಗಿರಲಿ, ಅದರ ಗರ್ಭದಲ್ಲಿ ಭಯದ ಬೀಜಗಳಿದ್ದೇ ಇವೆ. ಅದು ಸಾವಿನ ಸತ್ಯತೆಯನ್ನು ನೋಡಲು ಬಯಸದೇ ಇದ್ದುದರಿಂದ, ಸಾವಿನ ವಸ್ತುಸ್ಥಿತಿಯೊಂದಿಗೆ ಮುಖಾ-ಮುಖಿಯಾಗಲು ಇಚ್ಛಿಸುವುದಿಲ್ಲ. ನಂಬಿಕೆಗಳು, ಸಿದ್ಧಾಂತಗಳ ಮನಸ್ಸಿಗೆ ಸುಲಭವಾಗಿ ಹೊರದಾರಿಗಳನ್ನು ನೀಡುತ್ತವೆ. ಆದ್ದರಿಂದ ಸಾವಿನ ಅಸಾಧಾ-ರಣ ಅರ್ಥವಂತಿಕೆಯನ್ನು ಕಾಣಲು ಬಯಸುವ ಮನಸ್ಸು ಯಾವುದೇ ಬಗೆಯ

ರವಸೆ ತುಂಬುವ, ಸಮಾಧಾನ ನೀಡುವಂಥ ಅಮಿಷಗಳನ್ನು ಪ್ರತಿಭಟನೆ-
ಇಲ್ಲದೇ ಸುಲಭವಾಗಿ ನಿರಾಕರಿಸಬೇಕು.

ಇದರರ್ಥ ನಾವು ನಿರಾಸೆಯಲ್ಲೇ ಇರಬೇಕೆಂದಲ್ಲ. ಯಾಕೆಂದರೆ ಆಸೆ
ಇಲ್ಲದಂಥ ಸ್ಥಿತಿ ಎಂದರೆ ನಿರಾಸೆಯಲ್ಲ. ನಿರಾಸೆಯ ವಿರುದ್ಧವಾದದ್ದು
ಆಸೆಯೆ ? ಉತ್ತರ 'ಹೌದು' ಎಂದಾದರೆ, ಅಂಥ ಆಸೆಯ ಗರ್ಭದಲ್ಲಿ
ನಿರಾಸೆಯ ಬೀಜವಿರುತ್ತದೆ. ಭಯ-ಸಿಂಚಿತವಾದ ಆಸೆ ಅದು. 'ಅರಿವು'
ಮಾಡಿಕೊಳ್ಳಬೇಕಾದರೆ, ಈ ಬಗೆಯ, ಪರಸ್ಪರ ವಿರೋಧವಾದುದರಿಂದ ಮನಸ್ಸು
ಮುಕ್ತವಾಗಿರಬೇಕಾಗುತ್ತದೆ. ಈ ಆಸೆ-ನಿರಾಸೆಗಳ ಚಟುವಟಿಕೆ ಸಾವಿನ
ಅನುಭವ ಅಥವಾ ಅರಿವು ಪಡೆಯಲು ತಡೆಯನ್ನುಂಟುಮಾಡುತ್ತವೆ. ಸಾವಿನ
ಸಮಸ್ಯೆಯನ್ನು, ಮನಸ್ಸು ಗುರುತಿಸುವಂತಹ ಕ್ರಮಕ್ಕೆ, ಕ್ರಿಯೆಗೆ ಸಂಪೂರ್ಣ,
ಭಿನ್ನವಾಗಿ, ನವೀನವಾಗಿರುವಂಥ ಅರಿವಿನಲ್ಲೇ ನೋಡಬೇಕಾಗುತ್ತದೆ. ಏಕೆಂದರೆ
ಗುರುತಿಸುವಿಕೆ ಜ್ಞಾತಪ್ರಪಂಚದ ಪ್ರಕ್ರಿಯೆ, ಗತ ಅನುಭವದ ಫಲ.
ಇದ್ದರಿಂದಲೇ ಗೊತ್ತಿಲ್ಲದುದರ ಬಗ್ಗೆ ಮನಸ್ಸಿಗೆ ಭೀತಿ. ಸಾವು 'ಏನು'
ಎಂದು ನಮಗೆ ಗೊತ್ತಿದ್ದರೆ ಅದರ ಭಯವಿರುತ್ತಿರಲಿಲ್ಲ. ಯಾವ ವಿಸ್ತಾರವಾದ
ವಿವರಣೆಗಳ ಆವಶ್ಯಕತೆಯೂ ಇರುತ್ತಿರಲಿಲ್ಲ. ಆದರೆ ಸಾವನ್ನು ನಾವು,
ಗುರುತಿಸಲಾರೆವು. ಈ ಹಿಂದೆ ಅನುಭವಿಸದೇ ಇರದಂತಹದು ಸಂಪೂರ್ಣ
ಹೊಸದಾಗಿರುವಂತಹದು ಸಾವು. ಈಗಾಗಲೇ ಅನುಭವಿಸಿದ್ದು, ಜ್ಞಾತ,
ಗೊತ್ತಿರುವಂತಹದು ಭೂತಕ್ಕೆ ಸೇರಿರುತ್ತದೆ. ಈ ಭೂತಕ್ಕೆ ಸೇರಿರುವ
ಜ್ಞಾತದ ಮೂಲಕ ಗುರುತಿಸುವುದು ನಡೆಯುತ್ತಿರುತ್ತದೆ. ಎಲ್ಲಿಯ
ವರೆಗೆ ಈ ಭೂತದ ಚಲನವಲನ ಇರುತ್ತದೆಯೋ, ಅಲ್ಲಿಯ ವರೆಗೆ
'ಹೊಸ'ದರ ಅರಿವಿಲ್ಲ. ಇವೆಲ್ಲಾ ನಂತರ ವಿಚಾರ ಮಾಡುವಂತಹದಲ್ಲ.
ಆಲಿಸುತ್ತಿರುವಂತೆ ಅಂದರೆ ಗಮನವಿಟ್ಟು ಓದುತ್ತಿರುವಂತೆಯೇ ನೇರವಾಗಿ
ಅನುಭವಿಸುವಂತಹವು. ಈ ಅನುಭವವನ್ನು ಸಂಗ್ರಹಿಸಿಡಲು ಬರುವದಿಲ್ಲ.
ಹಾಗೆ ಸಂಗ್ರಹಿಸಿಟ್ಟರೆ ಅದು ನೆನಪಾಗುತ್ತದೆ. ಗುರುತಿಸುವಿಕೆಯ ದಾರಿಯಾದ
ಈ ನೆನಪು ಹೊಸದನ್ನು, ಗೊತ್ತಿಲ್ಲದ್ದನ್ನು, ಅಜ್ಞಾತವಾದದ್ದನ್ನು ಅಡ್ಡ-
ಗಟ್ಟುತ್ತದೆ. ಸಾವು ಅಜ್ಞಾತವಾದದ್ದು; ಸಮಸ್ಯೆಯಾದುದು. ಸಾವೆಂದ-
ರೇನು ? ಸಾವಿನ ನಂತರ ಏನಾಗುತ್ತದೆ, ಎಂಬುದರಲ್ಲಲ್ಲ, ಜ್ಞಾತದ ಹಾಗು

ಭೂತದ ಮಾಲಿನ್ಯದಿಂದ ಮನಸ್ಸನ್ನು ಬಿಡಿಸಿಕೊಂಡು, ಸ್ವಚ್ಛ ತೊಳೆದು-ಕೊಳ್ಳಬೇಕಾದಲ್ಲಿ. ಅಂದಾಗಲೇ ಜೀವಂತ ಮನಸ್ಸು ಸಾವಿನ ಸಾಮ್ರಾಜ್ಯ-ವನ್ನು ಪ್ರವೇಶಿಸಲು ಶಕ್ಯ. ಆಗಲೇ ಅದು ಜ್ಞಾತವನ್ನು. ಸಾವನ್ನು ಭೇಟಿ ಮಾಡಬಹುದು.

ಅಪಘಾತ, ರೋಗ ಅಥವಾ ವೃದ್ಧಾಪ್ಯ ಸಾವನ್ನು ತರುತ್ತದೆ. ಆದ ಈ ಸಂದರ್ಭಗಳಲ್ಲೆಲ್ಲ ಮನಸ್ಸು ಸಂಪೂರ್ಣವಾಗಿ ಅರಿವಿನಲ್ಲಿರಲು ಶಕ್ಯವಾಗುವು-ದಿಲ್ಲ. ಯಾತನೆ, ಆಸೆ ಅಥವಾ ನಿರಾಸೆ, ಒಂಟಿತನದ ಭಯ ಎಲ್ಲ ಇವೆ ಮನಸ್ಸು ಅರಿವಿದ್ದೋ ಇಲ್ಲದೇನೋ ಸಾವಿನ ವಿರುದ್ಧ, ಅದರ ಅನಿವಾರ್ಯ-ತೆಯ ವಿರುದ್ಧ ಭೀತಿ ತುಂಬಿದ ಪ್ರತಿಭಟನೆ ಮಾಡುತ್ತಲೇ ಸಾವು ತೀರಿ-ಕೊಳ್ಳುತ್ತೇವೆ. ಆದರೆ ಪ್ರತಿಭಟನೆಯಿಲ್ಲದೇ, ವಿಕಾರತೆಯಿಲ್ಲದೇ, ಪರಪೀಡ ಅಥವಾ ಆತ್ಮಹತ್ಯೆಯ ಒತ್ತಾಸೆಗಳಿಲ್ಲದೇ ಜೀವಂತಿಕೆ ತುಳುಕುತ್ತಿರುವಾಗಲೇ ಮಾನಸಿಕವಾಗಿ ಚೈತನ್ಯಪೂರ್ಣವಾಗಿರುವಾಗಲೇ ಸಾವಿನ ಮನೆಯನ್ನು ಪ್ರವೇಶಿಸಲು ಶಕ್ಯವೇ ?

ನಿಜವಾಗಿಯೂ ಸಾವು ಬದುಕಿನ ಮಧ್ಯೆ ವಿಭಜನೆ ಉಂಟೆ ? ಬದುಕಿ-ಗಿಂತ ಭಿನ್ನವಾದದ್ದು ಸಾವು ಎಂದು ನಾವೇಕೆ ಎಣಿಸುತ್ತೇವೆ ! ಸಾವಿ ನಾವೇಕೆ ಹೆದರುತ್ತೇವೆ ? ಸಾವಿನ ಬಗ್ಗೆ ಯಾಕಾಗಿ ಇಷ್ಟೆಲ್ಲ ಪುಸ್ತಕಗಳ ಬರೆಯಲ್ಪಟ್ಟಿವೆ ? ಸಾವು–ಬದುಕಿನ ಮಧ್ಯೆ ಅಂತರ ಯಾಕಿದೆ ? ಈ ಅಂತ ನಿಜವಾಗಿಯೂ ಇದ್ದದ್ದೇ ಅಥವಾ ಮನಸ್ಸಿನ ಭ್ರಮೆಯೇ ಅಥವಾ ಕಲ್ಪನೆಯೆ ?

ನಾವು ‘ ಬದುಕು ’ ಎಂದು ಮಾತಾಡುವಾಗಲೆಲ್ಲ ಈ ಪ್ರಪಂಚ ಹಲವಾರು ಸಂಗತಿಗಳೊಡನೆ ನಿಮ್ಮನ್ನು ಏಕೀಭವಿಸಿಕೊಂಡಿರುವಂಥ ಚಲ-ನೆಯ ನಿರಂತರ ಪ್ರಕ್ರಿಯೆಯನ್ನು ಮನಸ್ಸಿನಲ್ಲಿಟ್ಟುಕೊಂಡಿರುತ್ತೇವೆ. ನಾನು-ನನ್ನ ಮನೆ, ನಾನು–ನನ್ನ ಮಡದಿ, ನಾನು–ನನ್ನ ಹಣ, ನಾನು–ನನ್ನ ಭೂ ಕಾಲದ ಅನುಭವ–ಇದಕ್ಕೇ ಅಲ್ಲವೇ ನಾವು ಬದುಕೆನ್ನುವುದು ? ಬದು-ಕೆಂದರೆ ನೆನಪಿನ ನಿರಂತರ ಚಲನೆಯ ಪ್ರಕ್ರಿಯೆ— ಜಾಗ್ರತ ಹಾಗ ಸುಪ್ತ ಮನಸ್ಸುಗಳಲ್ಲಿ ಮನೆಮಾಡಿರುವಂಥ ವಿವಿಧ ಬಗೆಯ ಅಂತಸ್ಸಂಘರ್ಷ ಜಗಳ, ಘಟನಾವಳಿಗಳು, ಅನುಭವಗಳು, ಇತ್ಯಾದಿಗಳ ನೆನಪಿನ ನಿರಂತ

ಪ್ರಕ್ರಿಯೆಯೇ ಬದುಕೆನ್ನುವುದು. ಇದಕ್ಕೆ ವಿರುದ್ಧವಾಗಿ ಅವುಗಳಲ್ಲಿ ವಿದಾಯ ಹೇಳುವುದು, ಅಂತ್ಯ ತರುವುದು ಸಾವು. ಹೀಗೆ ವಿರೋಧವಾದದ್ದನ್ನು ಸೃಷ್ಟಿಸಿ, ಸಾವು ಎಂದು ಅದನ್ನು ಕರೆದು, ಆ ಸಾವಿಗೆ ಹೆದರಿ, ಬದುಕು ಮತ್ತು ಸಾವುಗಳ ನಡುವೆ ಸಂಬಂಧ ಹುಡುಕುತ್ತಲೇ ನಾವು ಮುಂದುವರಿಯುತ್ತಿರುತ್ತೇವೆ. ಈ ಸಾವು ಬದುಕಿನ ಕಂದಕವನ್ನು ತುಂಬುವ ಬದುಕಿನ ನಿರಂತರತೆಯನ್ನು ಮುಂದುವರಿಸುವ, ಸಾವಿನ ನಂತರದ ಬದುಕಿನೊಡನೆಯೂ ಸಂಬಂಧ ಹೇಳುವ ನಂಬಿಕೆಗಳು ನಮಗೆ ಸಿಕ್ಕಿಬಿಟ್ಟರೆ ನಾವು ಸಂತೃಪ್ತರಾಗುತ್ತೇವೆ. ಪುನರ್ಜನ್ಮ ಅಥವಾ ಇನ್ನಿತರ ಯಾವುದೇ ಬಗೆಯ ವಿಚಾರದ ನಿರಂತರತೆಯನ್ನು ನಂಬಿ, ಈ ಜ್ಞಾತ ಹಾಗು ಅಜ್ಞಾತಗಳ ಮಧ್ಯೆ ಸಂಬಂಧ ಸ್ಥಾಪಿಸಲು ಹೆಣಗುತ್ತೇವೆ. ತನ್ಮೂಲಕ ಭೂತ-ಭವಿಷ್ಯತ್‌ಗಳ ಸಂಬಂಧ ಕಂಡುಹಿಡಿಯಲು ಯತ್ನಿಸುತ್ತೇವೆ. ಇದನ್ನೇ ಅಲ್ಲವೇ ನಾವು ಮಾಡುತ್ತಿರುವುದು ? ಬದುಕುವದನ್ನು ಹಾಗು ಬದುಕು ಕೊನೆಗೊಳ್ಳುವುದನ್ನು ಸೇರಿಸುವುದು ಹೇಗೆ ಎನ್ನುವುದನ್ನು ತಿಳಿದುಕೊಳ್ಳುವುದೇ ನಮ್ಮ ಮೂಲಭೂತ ಆಸೆಯಲ್ಲವೆ ?

ನಾವು ಬದುಕಿರುವಾಗಲೇ ಅಂತ್ಯವನ್ನು ಅಂದರೆ ಸಾವನ್ನು ಅರಿಯಬಲ್ಲೆವೆ ? ಹೌದೆಂದಾದರೆ ನಮಗೆ ಸಮಸ್ಯೆಯೇ ಇಲ್ಲ. ಆದರೆ ಬದುಕಿರುವಾಗಲೇ ನಾವು ಈ ಅಜ್ಞಾತವನ್ನು ಅನುಭವಿಸಲು ಅಶಕ್ಯವಾದ್ದರಿಂದ ನಮಗೆ ಸಾವಿನ ಬಗ್ಗೆ ಭಯ. ಅಂದರೆ ನಮ್ಮ ಹೋರಾಟ ನಮ್ಮೊಂದಿಗೇ. ನಮ್ಮ ಜ್ಞಾತಕ್ಕೂ, ನಾವು ಸಾವು ಎಂದು ಕರೆಯುವ ಅಜ್ಞಾತಕ್ಕೂ ಸಂಬಂಧ ಸ್ಥಾಪಿಸುವ ಹೋರಾಟ, ಅಲ್ಲವೆ ? ಆದರೆ ಭೂತಕಾಲಕ್ಕೂ ಹಾಗು ಮನಸ್ಸಿಗೆ ಅರ್ಥಮಾಡಿಕೊಳ್ಳಲು ಆಗದಿರುವ ' ಸಾವು ' ಎನ್ನುವಂಥಾದ್ದಕ್ಕೂ ಸಂಬಂಧ ಶಕ್ಯವೇ ? ನಾವೇಕೆ ಇವೆರಡೂ ಬೇರೆ-ಬೇರೆ ಎಂದು ಭಾವಿಸುತ್ತೇವೆ ? ಇದಕ್ಕೆ ಕಾರಣ : ಮನಸ್ಸು ಕೇವಲ ಜ್ಞಾತವಲಯದಲ್ಲಿ ಮಾತ್ರ, ಹಿಂದಿನದೇ ಮುಂದುವರಿಯುತ್ತಿರುವ ವಲಯದಲ್ಲಿ ಮಾತ್ರ ಕಾರ್ಯನಿರತವಾಗಬಲ್ಲದು ಎಂಬುದಲ್ಲವೆ ? ಪ್ರತಿಯೊಬ್ಬನೂ ಯಾತನೆ, ಸಂತೋಷ, ಪ್ರೇಮ, ವಾತ್ಸಲ್ಯ ಇತ್ಯಾದಿ ಹಲವು ಬಗೆಯ ಅನುಭವಗಳ ಸ್ಮೃತಿಯ ರೂಪದಲ್ಲಿ ವಿಚಾರ ಮಾಡುವ ಹಾಗು ಕಾರ್ಯಮಾಡುವ ವ್ಯಕ್ತಿಯಾಗಿ ತನ್ನನ್ನು ತಾನು ಗುರುತಿಸಿಕೊಳ್ಳಬಲ್ಲ, ಅವುಗಳೇ ಹಲವು ರೂಪದಲ್ಲಿ ಮುಂದುವರಿಯುತ್ತಿರುವ ವ್ಯಕ್ತಿ

ರೂಪದಲ್ಲಿ ತನ್ನನ್ನು ತಾನು ಅರಿಯಬಲ್ಲ. ಇಲ್ಲದಿದ್ದರೆ ತಾನು ಏನೋ ಒಂದು ವಿಶಿಷ್ಟ ಎಂಬ ನೆನಪೇ ಇರಲಾರದಷ್ಟೇ. ಯಾವಾಗ ಆ ಏನೋ ಒಂದು ವಿಶಿಷ್ಟವಾದದ್ದು ಅಂತ್ಯಗೊಳ್ಳುತ್ತದೆಯೋ, ಅಂದರೆ ಸಾವು ಬರುತ್ತದೆಯೋ ಆಗ ಅಜ್ಞಾತದ ಭಯ ಬರುತ್ತದೆ; ಅಂದರೆ ಈ ಅಜ್ಞಾತವಾದದ್ದನ್ನು ಜ್ಞಾತದೊಳಕ್ಕೆ ಎಳೆದುಕೊಳ್ಳಲು ನಾವು ಯತ್ನಿಸುತ್ತೇವೆ; ಅಜ್ಞಾತಕ್ಕೂ ಮುಂದು- ವರಿಯುತ್ತ ಹೋಗುವ ದೀಕ್ಷೆ ಕೊಡಲು ಬಯಸುತ್ತೇವೆ. ಅಂದರೆ ನಾವು ಸಾವನ್ನೂ ಒಳಗೊಳ್ಳುವ ಬದುಕನ್ನು ಅರಿಯಲು ಬಯಸುವುದಿಲ್ಲ; ಆದರೆ ಮುಂದುವರಿಯುವುದು ಹೇಗೆ ? ಅಂತ್ಯಕ್ಕೆ ಬರದೆ ಸದಾ ಮುಂದೆ-ಮುಂದೆ ಹೋಗುತ್ತಲೇ ಇರುವುದು ಹೇಗೆ ಎನ್ನುವುದನ್ನು ಅರಿಯಲು ಯತ್ನಿಸುತ್ತೇವೆ.

ಯಾವುದು ಮುಂದುವರಿಯುತ್ತಲೇ ಹೋಗುತ್ತದೆಯೋ ಅದು ಹೊಸ- ದಾಗುವುದಿಲ್ಲ. ಸ್ವಾಭಾವಿಕವಾಗಿ ಆ ಮುಂದುವರಿಯುವಂಥದರಲ್ಲಿ ಹೊಚ್ಚ ಹೊಸದಾಗಲಿ, ಸೃಜನಾತ್ಮಕವಾದದ್ದಾಗಲಿ ಏನೂ ಇರಲು ಶಕ್ಯವಿಲ್ಲ. ಯಾವಾಗ ಈ ಮುಂದುವರಿಯುವಂಥಾದ್ದು ಅಂತ್ಯಗೊಳ್ಳುತ್ತದೆಯೋ ಆಗ ಮಾತ್ರ ಸದಾ ನವನವೀನವಾಗಿರುವಂಥಾದ್ದು ಇರುವ ಸಾಧ್ಯತೆ ಇದೆ. ಆದರೆ ಈ ಕೊನೆಗೊಳ್ಳುವುದಕ್ಕೆ ನಾವು ಭಯಪಡುತ್ತೇವೆ. ಈ ಕೊನೆಗೊಳ್ಳುವ ಪ್ರಕ್ರಿಯೆಯಲ್ಲಿ ಹೊಸದಾಗುವುದು, ಸೃಜನಶೀಲವಾಗುವುದು, ಅಜ್ಞಾತ ಇದೆ— ಎನ್ನುವುದನ್ನು ನಾವು ನೋಡಲು ಇಚ್ಛೆಪಡುವುದಿಲ್ಲ. ನಮ್ಮ ಅನುಭವ, ಸ್ಮೃತಿ, ದೌರ್ಭಾಗ್ಯಗಳನ್ನೆಲ್ಲ ದಿನದಿಂದ ದಿನಕ್ಕೆ ಹೊತ್ತುಕೊಂಡು ಹೋಗು- ವುದರಲ್ಲಿಲ್ಲ; ಯಾವಾಗ ನಾವು ಹಳೆಯದಕ್ಕೆ, ಭೂತಕಾಲಕ್ಕೆ ಪ್ರತಿನಿತ್ಯ ಮೃತರಾಗುತ್ತ ಅಂದರೆ ಸಾಯುತ್ತ ಹೋಗುತ್ತೇವೆಯೋ, ಆಗ ಮಾತ್ರ ಹೊಸದು ಇರಲು ಶಕ್ಯ. ಮುಂದುವರಿಯುವಂಥಾದ್ದು ಇರುವಲ್ಲಿ ಹೊಚ್ಚ ಹೊಸದು, ಅದು—ಸೃಜನಶೀಲತೆ, ಅಜ್ಞಾತ, ದೇವರು, ಸತ್ಯ ಅಥವಾ ಯಾವುದೇ ಹೆಸರಿನಿಂದಲೂ ಕರೆಯಿರಿ— ಅದು ಇರಲು ಶಕ್ಯವಿಲ್ಲ. ಮುಂದು- ವರಿಕೆಯ ಮೂರ್ತಿಯಾದ 'ನಾನು' ಅಜ್ಞಾತವನ್ನು ಕಾಣಲಾರದು. ಯಾಕೆಂದರೆ ತಾನೇ ಕಟ್ಟಿದ ಕಲ್ಪನೆ, ವಿಚಾರಗಳನ್ನು ಮಾತ್ರ ಈ 'ನಾನು' ಕಾಣಬಲ್ಲ. ಕೊನೆಗೊಳ್ಳುವುದರಲ್ಲಿ, ಸಾಯುವುದರಲ್ಲಿ ಮಾತ್ರ ಹೊಸದಿದೆ. ಬದುಕು ಮತ್ತು ಸಾವಿನ ಮಧ್ಯೆ ಸಂಬಂಧ ಹುಡುಕುವವ, ಮುಂದುವರಿಯು-

ನಂಥಾದ್ದು ಹಾಗು ಕೈಮೀರಿದ್ದು, ಕೈಯಾಚೆಗಿನದು ಎಂದು ಭಾವಿಸುವುದರ ಮಧ್ಯೆ ಸೇತುವೆ ನಿರ್ಮಿಸುವ ಇಚ್ಛೆ ಇರುವವ, ತಾನೇ ಸೃಷ್ಟಿಸಿಕೊಂಡ ಭ್ರಮಾತ್ಮಕ ಬದುಕನ್ನು ಬದುಕುತ್ತಾನೆ.

ಬದುಕಿರುವಾಗಲೇ ಸಾಯಲು, ಕೊನೆಗೊಳ್ಳಲು, ಶೂನ್ಯವಾಗಲು ಶಕ್ಯವೆ ? ಪ್ರತಿಯೊಂದೂ ಆಗುವ— ಹೆಚ್ಚೋ ಕಮ್ಮಿಯೋ ಅಂತೂ ಏನೋ ಆಗುವ, ಸಾಧಿಸುವ, ಏರುವ, ಇಳಿಯುವ ಚಟುವಟಿಕೆಗಳಲ್ಲಿ ಮಗ್ನವಾಗಿರುವ ಈ ಜಗತ್ತಿನಲ್ಲಿ ಬದುಕುತ್ತಲಿರುವಾಗಲೇ ಸಾವನ್ನು ಅರಿಯಲು ಶಕ್ಯವೆ ? ಎಲ್ಲ ಬಗೆಯ ನೆನಪನ್ನೂ— ಅಂದರೆ ವಸ್ತುಸ್ಥಿತಿಯ ನೆನಪನ್ನು ಉದಾ : ನಮ್ಮ ನಮ್ಮ ಮನೆಗೆ ಹೋಗುವ ದಾರಿ— ಇತ್ಯಾದಿಗಳನ್ನು ಹೊರತುಪಡಿಸಿ ನೆನಪಿನ ಮೂಲಕ ಮಾನಸಿಕ ಭದ್ರತೆಗೆ ಅಂಟಿಕೊಳ್ಳುವ ಅಂತರ್ಯದ ರೀತಿಗೆ, ಕೂಡಿಸಿ, ಸಂಗ್ರಹಿಸಿ, ಅವುಗಳಲ್ಲಿ ಭದ್ರತೆ, ಸಂತೋಷ ಕಾಣುವುದಕ್ಕಾಗಿ ಸಂಗ್ರಹಿಸಿದ ನೆನಪುಗಳಿಗೆ— ಮೃತನಾಗಲು ಶಕ್ಯವುಂಟೆ ? ಪ್ರತಿನಿತ್ಯವೂ ಸತ್ತು, ಮರುದಿನ ಹೊಸದಾಗಲು ಶಕ್ಯವೆ ? ಆಗ ಮಾತ್ರ ಬದುಕಿರುವಾಗಲೇ ಸಾವನ್ನು ಅರಿಯಬಲ್ಲ. ಅಂಥ ಬಗೆಯ ಸಾವಿನಲ್ಲಿ, ಹಾಗೆ ಕೊನೆಗೊಳ್ಳುವುದರಲ್ಲಿ ಮಾತ್ರ ಇರುತ್ತದೆ ಹೊಚ್ಚ-ಹೊಸ ಜನ್ಮ, ಚಿರಂತನವಾದ ಸೃಷ್ಟಿ ಶಕ್ತಿ.

* * *

೧೨. ಸೌಂದರ್ಯ

ಸೌಂದರ್ಯ ಎಂದರೇನು ? ಅದು ಆಂತರಂಗಿಕವೆ ? ಬಹಿರಂಗಿಕವೆ ? ಅದು ವ್ಯಕ್ತಿನಿಷ್ಠವೆ ? ವಸ್ತುನಿಷ್ಠವೆ ? ಅಥವಾ ಇವೆರಡರ ಸಮ್ಮಿಲನವೆ ?— ಇವುಗಳನ್ನು ಒಂದು ನಿರ್ದಿಷ್ಟ ನೆಲೆಯಿಂದ ಪ್ರಶ್ನಿಸ ಹೊರಡುವುದು ಎಂದರೆ ಸೌಂದರ್ಯವನ್ನು ನಿರಾಕರಿಸಿದಂತೆ. ನಿರ್ದಿಷ್ಟವಾಗಿರುವುದು ಎಂದರೆ ತನ್ನ ಸುತ್ತಲೂ ಕವಚ ಕಟ್ಟಿಕೊಂಡಿರುವುದು; ಸಂವೇದನಾಶೂನ್ಯನಾಗಿರುವುದು. ಮುಕ್ತವಾಗಿರದೇ ಸಂವೇದನಾಶೀಲನಾಗಿರುವುದು ಶಕ್ಯವಿಲ್ಲ.

'ಸೌಂದರ್ಯ' ವನ್ನು ಅರಿಯುವ ಮೊದಲು ನಮಗೆ ಬೇಕಾದದ್ದು ಸೌಂದರ್ಯದ ವ್ಯಾಖ್ಯೆಯೆ ಅಥವಾ ಸೂತ್ರವೆ ? ಅಥವಾ ನಿಜವಾದ ಸೌಂದ-ರ್ಯದ ಅರಿವೆ ? ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.

ತಿಳಿವಳಿಕೆಯಿಲ್ಲದೇ, ವಿವರಣೆ ಇಲ್ಲದೆ ಏನನ್ನಾದರೂ ವಿಚಾರಿಸಲು ಶಕ್ಯವೆ ? ಎಲ್ಲಿಗಾದರೂ ಹೊರಡುವ ಮೊದಲು ಎಲ್ಲಿಗೆ ಹೋಗುತ್ತಿದ್ದೇವೆ ಎನ್ನುವುದನ್ನು ತಿಳಿದುಕೊಂಡಿರಬೇಕಲ್ಲವೆ ?

ಆದರೆ ಜ್ಞಾನ–ಗೊತ್ತಿರುವಂಥಾದ್ದು— ನಮ್ಮ ಅನ್ವೇಕ್ಷಣೆಯನ್ನು ತಡೆಹಿಡಿಯುತ್ತದೆಯಲ್ಲವೆ ? ನಮಗೆ 'ಗೊತ್ತಿರುವಾಗ' ನಾವು ಹೇಗೆ 'ಅನ್ವೇಷಿಸಬಲ್ಲೆವು' ? 'ಗೊತ್ತಿದೆ' ಎನ್ನುವುದೆ 'ಅನ್ವೇಷಣೆ'— ನಿಂತಿ-ರುವುದನ್ನು ಸೂಚಿಸುತ್ತದೆ ಅಲ್ಲವೆ ? ಕೇವಲ ಗೊತ್ತುಮಾಡಿಕೊಳ್ಳುವುದು ಎಂದರೆ ಅನ್ವೇಷಿಸುವುದಲ್ಲ; ಕೇವಲ ವ್ಯಾಖ್ಯೆಗಾಗಿ, ತೀರ್ಮಾನಕ್ಕಾಗಿ ಕೇಳು-ತ್ತಿದ್ದೇವೆ ಎಂದರ್ಥ. ಸೌಂದರ್ಯಕ್ಕೆ ಅಳತೆಗೋಲುಂಟೆ ? ಗೊತ್ತಿರುವ ಅಥವಾ ಕಲ್ಪಿತ ಆಕಾರಕ್ಕೆ ಹೆಚ್ಚು–ಕಮ್ಮಿ ಸರಿಯಾಗುವಂಥಾದ್ದೇ ಸೌಂದರ್ಯ ? ಅಥವಾ ಅದು ಚೌಕಟ್ಟಿಲ್ಲದ ಅಮೂರ್ತವೆ ? ಸೌಂದರ್ಯ ಸೇರಿಕೊಳ್ಳದಂತಹ ಪ್ರತ್ಯೇಕವಾದದ್ದೇ ?

ನಾವು ಸುಂದರವಾದ ಒಂದು ಹೂವು, ವೃಕ್ಷ, ಮಹಿಳೆ, ಹಳ್ಳಿಗ, ನದಿ, ಸೂರ್ಯಾಸ್ತ ಇತ್ಯಾದಿ— ಏನನ್ನಾದರೂ ಒಂದನ್ನು ನೋಡುತ್ತೇವೆ. ಅವೆಲ್ಲ ಕಣ್ಮರೆಯಾಗುತ್ತವೆ. ಆದರೆ ಅವುಗಳ ನೆನಪು ಮಾತ್ರ ಹಾಗೇ ಮನಸ್ಸಿನಲ್ಲಿ ಉಳಿಯುತ್ತದೆ. ಈ ಸೌಂದರ್ಯದ ನೆನಪು ಜೀವಂತ ವಸ್ತುವೇ ? ಸುಂದರವಾದದ್ದನ್ನು ನೋಡಿದ ಕೂಡಲೆ ಹರ್ಷವೆನಿಸುತ್ತದೆ. ಸೂರ್ಯಾಸ್ತ ನೋಡಿದ ತಕ್ಷಣ ಹರ್ಷದ ಪ್ರತಿಸ್ಪಂದನೆ ನಮ್ಮಲ್ಲುಂಟಾಗುತ್ತದೆ. ಆ ಹರ್ಷ ಕೆಲವು ಕ್ಷಣಗಳ ನಂತರ ಕೇವಲ ನೆನಪಾಗುತ್ತದೆ. ಆ ಸೂರ್ಯಾಸ್ತದ ನೆನಪು ಒಂದು ಜೀವಂತ ವಸ್ತು ಅಲ್ಲ, ಅಲ್ಲವೆ ? ಆದರೆ ಆ ಸೂರ್ಯಾಸ್ತದ ನೆನಪಿನ ಮೂಲಕ ಆಗ ಅನುಭವಿಸಿದಂತಹ ಹರ್ಷವನ್ನು ಪುನಃ ಪಡೆಯಲು ಯತ್ನಿಸುತ್ತೇವೆ. ಆದರೆ ನೆನಪಿಗೆ ಹರ್ಷವಿಲ್ಲ. ಗತಕಾಲದಲ್ಲಿ ಸೇರಿಹೋದ ಅವಶೇಷದ ಪ್ರತಿನೆ ಅಷ್ಟೇ, ಅದು. ಸುಂದರವಾದದ್ದನ್ನು ಕಂಡಾಗಲೆಲ್ಲ ತತ್‌ಕ್ಷಣದಲ್ಲೆ ಹರ್ಷದ ರೂಪದಲ್ಲಿ ಪ್ರತಿಸ್ಪಂದನೆ ಇದ್ದೇ ಇರುತ್ತದೆ. ಆದರೆ ನೆನಪು ಧಾವಿಸಿ ಬಂದು ಅದನ್ನು ಧ್ವಂಸಗೊಳಿಸುತ್ತದೆ. ನೆನಪಿನ ಸಂಗ್ರಹಣವಿಲ್ಲದೆ, ಸೌಂದರ್ಯದ ನಿರಂತರ ಅರಿವು ಇರುವಾಗ ಮಾತ್ರ, ಶಾಶ್ವತವಾದ ಸಂತೋಷದ ಸಾಧ್ಯತೆಯಿದೆ. ಆದರೆ ನೆನಪಿನ ಸಂಗ್ರಹಣಕ್ರಿಯೆಯಿಂದ ಬಿಡಿಸಿಕೊಳ್ಳುವುದು ಅಷ್ಟು ಸುಲಭವಲ್ಲ. ಯಾಕೆಂದರೆ ಸುಂದರವಾದದ್ದನ್ನು ಏನು ನೋಡಿದರೂ ಸಾಕು, ಅದನ್ನು ಕೂಡಲೆ ನೆನಪಾಗಿ ಪರಿವರ್ತಿಸಿ, ಅದರ ಮೇಲೆ ನಿಲ್ಲಲು ಮನಸ್ಸು ಯತ್ನಿಸುತ್ತದೆ. ಒಂದು ಸುಂದರ ಮಗುವನ್ನೋ, ಮರವನ್ನೋ, ವಸ್ತುವನ್ನೋ ಕಂಡಾಕ್ಷಣ ಹರ್ಷ ಸ್ಫುರಿಸುತ್ತದೆ. ಆದರೆ ಕೂಡಲೆ ಆ ಹರ್ಷ ಇನ್ನೂ ಬೇಕೆಂಬ ಆಸೆ ಹುಟ್ಟುತ್ತದೆ. ಹಾಗೆ ಇನ್ನೂ ಬೇಕೆಂಬುದೇ ನೆನಪಿನ ಸಂಗ್ರಹಣ. ಆ ಆಸೆಪಡುವ ಪ್ರಕ್ರಿಯೆಯಲ್ಲೇ ವ್ಯಕ್ತಿತ್ವದ ಶೈಥಿಲ್ಯ ಶುರುವಾಗುತ್ತದೆ; ಅಂಥಲ್ಲಿ ಹರ್ಷವಿರುವುದಿಲ್ಲ. ಸ್ಮೃತಿ ಅಥವಾ ನೆನಪು ಶಾಶ್ವತ ಸಂತೋಷವನ್ನು ಎಂದೆಂದೂ ನೀಡದು. ನೆನಪಿನ ಪ್ರಚೋದನೆ ಇಲ್ಲದೆ ಸುಂದರವಾದದ್ದು, ಕುರೂಪವಾದದ್ದು ಎಂಬ ಭೇದವಿಲ್ಲದೆ ಸುತ್ತಲಿನ ಪ್ರತಿಯೊಂದಕ್ಕೂ ಸಹಜವಾಗಿ, ನಿರಂತರವಾಗಿ ಸದಾ ಸ್ಪಂದಿಸುತ್ತಿರುವಾಗ ಮಾತ್ರ ಶಾಶ್ವತ ಸಂತೋಷ ಸಾಧ್ಯ. ಇದಕ್ಕೆ ಅತ್ಯಂತ ಶ್ರೇಷ್ಠ ಬಗೆಯ ಸಂವೇದನೆ ಅಂತರಂಗ ಹಾಗು ಬಹಿರಂಗಗಳೆರಡರಲ್ಲೂ ಇರಬೇಕಾಗುತ್ತದೆ.

ಸಂವೇದನಾಶೀಲನಾಗಿರುವುದು ಎಂದರೆ ಸುಂದರ ಹಾಗು ಕುರೂಪವೆಂದು ಕರೆಯಲ್ಪಡುವ ಎಲ್ಲ ಸಂಗತಿಗಳ ಬಗೆಗೂ ಅರಿವಿನೆಚ್ಚರದಿಂದ ಇರುವುದು. ನದಿ-ಹೊಳೆಗಳು, ಹಸಿರು ಗದ್ದೆ-ಬಯಲು, ದೂರದಲ್ಲಿ ಕಾಣುವ ಶ್ಯಾಮಲ ವೃಕ್ಷಗಳು, ಸಂಜೆಗೆಂಪಿನಲ್ಲಿ ತೂಗುಯ್ಯಾಲೆಯಾಡುತ್ತಿರುವ ಮೃದು ಮೋಡಗಳು— ಇವನ್ನೆಲ್ಲ ನಾವು ಸುಂದರವಾದವು; ಕೊಳೆಯಿಂದ ತುಂಬಿದ, ಅರೆ-ಹೊಟ್ಟೆಯ ಹಳ್ಳಿಗರು, ವಿಚಾರ ಮಾಡಲು ಬರದಂತಹ ಮೂರ್ಖರು, ಕೊಳಚೆ ಪ್ರದೇಶದಲ್ಲಿ ಹುಟ್ಟಿ, ಅಲ್ಲೇ ಬೆಳೆದು ಬದುಕುವಂತಹ ಜನರು— ಇವೆಲ್ಲ ಕುರೂಪವಾದವು ಎನ್ನುತ್ತೇವೆ. ಆದರೆ ಸಾಮಾನ್ಯವಾಗಿ ನಮ್ಮಲ್ಲಿ ಹಲವರು ಸುಂದರವಾದವುಗಳಿಗೆ ಗಟ್ಟಿಯಾಗಿ ಅಂಟಿಕೊಂಡು ಕುರೂಪವಾದದ್ದನ್ನು ನಮ್ಮಲ್ಲಿ ಸೇರಿಸಲೇ ಬಿಡುವುದಿಲ್ಲ. ಆದರೆ ಸೌಂದರ್ಯ ಹಾಗು ಕೌರೂಪ್ಯ ಎರಡಕ್ಕೂ ಸಂವೇದನಾಶೀಲವಾಗಿರುವುದು ಅತ್ಯಂತ ಮಹತ್ವದ್ದಲ್ಲವೆ ? ಈ ಬಗೆಯ ಸಂವೇದನಾಶೀಲತೆಯ ಅಭಾವವೇ ಬದುಕನ್ನು ಸುಂದರ-ಅಸುಂದರ ಎಂದು ವಿಭಾಗಿಸುವುದರ ಹಿಂದಿನ ಕಾರಣ.

ಇದನ್ನೇ ಬೇರೆ ಶಬ್ದಗಳಲ್ಲಿ ಹೇಳುವುದಾದರೆ, ಸಾಮಾನ್ಯವಾಗಿ ನಾವು ಸುಂದರವಾದದ್ದು ಎನ್ನುವುದರೊಡನೆ ನಮ್ಮನ್ನು ನಾವು ' ಆ ಸೌಂದರ್ಯ-ನಾನು-ಒಂದೇ ' ಎಂದು ಭಾವಿಸಿಕೊಂಡು, ಕುರೂಪವೆಂದು ಭಾವಿಸಿಕೊಂಡಿರುವುದರಿಂದ ಪ್ರತ್ಯೇಕಿಸಿಕೊಳ್ಳಲು ಆ ಕುರೂಪವನ್ನು ನಿರಾಕರಿಸುತ್ತಲೆ ಇರುತ್ತೇವೆ, ಅಲ್ಲವೆ ? ಸುಂದರ ಉದ್ಯಾನವನದೊಡನೆ ನಮ್ಮನ್ನು ನಾವು ಗುರುತಿಸಿಕೊಂಡು, ನಾರುವ ಕೊಂಪೆ ಹಳ್ಳಿಗಳಿಗೆ ಕಣ್ಮುಚ್ಚಲು ಬಯಸುತ್ತೇವೆ, ಅಲ್ಲವೆ ? ಪ್ರತಿಭಟಿಸುತ್ತಲೇ ಸ್ವೀಕರಿಸಲೂ ಬಯಸುತ್ತೇವೆ. ಆದರೆ ಯಾವುದೇ ರೀತಿಯ ' ಗುರುತಿಸಿಕೊಳ್ಳುವುದೂ ' ಮೂಲದಲ್ಲಿ ಪ್ರತಿಭಟನೆಯೇ ಅಲ್ಲವೆ ? ಆ ಕೊಂಪೆ ಹಾಗು ಉದ್ಯಾನವನಗಳೆರಡರ ಬಗೆಗೂ ಅರಿವಿನ ಎಚ್ಚರದಲ್ಲಿರುವುದು—ಯಾವ ಪ್ರಭಟನೆ ಅಥವಾ ಹೋಲಿಕೆಗಳಿಲ್ಲದೇ ಅರಿವಿನ ಎಚ್ಚರದಲ್ಲಿರುವುದು ಸಂವೇದನಾಶೀಲತೆ. ನಾವು ಸದ್ಗುಣಕ್ಕೆ, ಸೌಂದರ್ಯಕ್ಕೆ ಮಾತ್ರ ಸಂವೇದನಾಶೀಲರಾಗಿದ್ದು ಕೆಟ್ಟದುದರ ಬಗ್ಗೆ, ಕುರೂಪದ ಬಗ್ಗೆ ಪ್ರತಿಭಟನೆ ಮಾಡುತ್ತಿರುತ್ತೇವೆ. ಸಂವೇದನಾಶೀಲನಾಗಿರುವುದು, ಅಮಾಯಕನಾಗಿರುವುದು ಒಂದು ಸಮಗ್ರ ಪ್ರಕ್ರಿಯೆ. ಒಂದು ಹಂತದ ವರೆಗೆ

ಸಂವೇದನಾಶೀಲನಾಗಿದ್ದು, ಸಂತೃಪ್ತಗೊಂಡ ತಕ್ಷಣ ಅದನ್ನು ನಿಲ್ಲಿಸಿಬಿಡು-ವಂತಹದಲ್ಲ ಅದು.

ನಿಜವಾದ ಸೌಂದರ್ಯವನ್ನು ಅನ್ವೇಷಿಸಲು, ಸೌಂದರ್ಯವನ್ನು ಆರಾಧಿಸುವ, ಅದು ತುಂಬ ವಿಶೇಷವೆಂದು ಪರಿಗಣಿಸುವ ಮನೋಭಾವದಿಂದ ದೂರ ಸರಿಯಬೇಕು. ಏಕೆಂದರೆ ಈ ಆರಾಧನೆ ನಮ್ಮನ್ನು 'ಇರುವುದರಿಂದ' ಪಲಾಯನ ಮಾಡಿಸುತ್ತದೆ. ಏನು 'ಇದೆಯೋ' ಅದರ ಬಗ್ಗೆ, ನಾವು ಏನಿದ್ದೇವೆಯೋ ಅದರ ಬಗ್ಗೆ ಅರಿವಿನ ಎಚ್ಚರದಲ್ಲಿ ನಾವಿಲ್ಲದಿದ್ದಾಗ ನಾವು ಹೇಗೆ ಸಂವೇದನಾಶೀಲರಾಗಿರಬಲ್ಲೆವು ? ಮಹತ್ವಾಕಾಂಕ್ಷಿಗಳು. ಚಾಣಾಕ್ಷರು, ಸೌಂದರ್ಯದ ಬೆನ್ನು ಹತ್ತಿದವರು— ಎಲ್ಲರೂ ತಮ್ಮ-ತಮ್ಮ ಕಲ್ಪನೆಯ ಪೂಜಕರು ಅಷ್ಟೇ. ಅವರೆಲ್ಲರೂ ತಮ್ಮ ಸುತ್ತ ಭದ್ರಕೋಟೆ ನಿರ್ಮಿಸಿ-ಕೊಂಡಿದ್ದಾರೆ. ಆದರೆ ಒಂಟಿಯಾಗಿ ಏನೂ ಬದುಕಲಾರದ್ದರಿಂದ ಅವರೆಲ್ಲರೂ ಯಾತನೆಯಲ್ಲಿದ್ದಾರೆ. ಈ ಸೌಂದರ್ಯದ ಹುಡುಕಾಟ ಹಾಗು ಕಲೆಗಳ ಬಗ್ಗೆ ನಿರರ್ಗಳ ಮಾತು ಅತ್ಯಂತ ಗೌರವಾನಿತ್ವ ಹಾಗು ಉನ್ನತ ಬಗೆಯಲ್ಲಿ ಬದುಕಿನಿಂದ ಪಲಾಯನ ಮಾಡುವ ಮಾಧ್ಯಮಗಳು ಅಷ್ಟೇ.

ಸೌಂದರ್ಯ ಆತ್ಮನಿಷ್ಠವೆ ? ವಸ್ತುನಿಷ್ಠವೆ ? ನಾವು ಕುರುಡಾಗಿ-ದ್ದರೆ, ಕಿವುಡಾಗಿದ್ದರೆ ಯಾವ ಚಿತ್ರವನ್ನೂ ನೋಡಲಾರೆವು; ಸಂಗೀತ-ವನ್ನೂ ಕೇಳಲಾರೆವು, ಆದರೆ ಸೌಂದರ್ಯ ಇಲ್ಲದೆ ಇರುವವರಾಗುತ್ತೇವೆಯೇ? ಅಂದರೆ ಸೌಂದರ್ಯ ಆಂತರಂಗಿಕವೆ ? ನಿಮಗೆ ಕಣ್ಣುಗಳಿಂದ ನೋಡ-ಲಿಕ್ಕಾಗಲಿಕ್ಕಿಲ್ಲ, ಕಿವಿಯಿಂದ ಕೇಳಲಾಗಲಿಕ್ಕಿಲ್ಲ, ಆದರೆ ಸುತ್ತಲಿನ ಎಲ್ಲವಕ್ಕೂ ಮುಕ್ತವಾಗಿ ಸಂವೇದನಾಶೀಲರಾಗಿ, ಈ ಮೇಲೆ ಹೇಳಿದ ಹಾಗೆ ಅನುಭವಿಸುವ ಸ್ಥಿತಿಯಿರುವಾಗ, ನಮ್ಮೊಳಗಿನ ವಿಚಾರ, ಅನಿಸಿಕೆ, ಭಾವನೆಗಳ ಸಂಪೂರ್ಣ ಎಚ್ಚರವಿದ್ದು, ನಮ್ಮ ಅಂತರಾಳದಲ್ಲಿ ನಡೆಯುತ್ತಿರುವ ಸಂಗತಿಗಳೆಲ್ಲದರ ಅರಿವು ನಮಗುಂಟಾದಾಗಲೂ ಅಲ್ಲಿ ಸೌಂದರ್ಯವಿರುತ್ತದೆ, ಅಲ್ಲವೆ ? ಆದರೆ ಸೌಂದರ್ಯವೆನ್ನುವುದು ನಮ್ಮ ಹೊರಗೆ ಇರುವಂಥಾದ್ದು ಎನ್ನುವ ನಂಬಿಕೆ ನಮ್ಮಲ್ಲಿ ಹಲವರದು. ಆದ್ದರಿಂದ ಕಲಾಚಿತ್ರಗಳನ್ನು ಖರೀದಿಸಿ ಗೋಡೆಗಳನ್ನು ಅಲಂಕರಿಸುತ್ತೇವೆ; ಬಣ್ಣ-ಬಣ್ಣದ ಬಟ್ಟೆಬರೆ, ವಿವಿಧ

ಬಗೆಯ ಚಿನ್ನಾಭರಣಗಳನ್ನು ಹೊಂದಲು ಬಯಸುತ್ತೇವೆ; ಸುಂದರವಾದದ್ದೆಲ್ಲ ನಮ್ಮ ಸುತ್ತಲೂ ಸುತ್ತುವರಿದಿರಬೇಕೆಂದು ಆಶಿಸುತ್ತೇವೆ. ಏಕೆಂದರೆ ನೆನಪಿಸುವಂಥ ವಸ್ತು, ಸಾಧನ ನಮ್ಮಲ್ಲಿ ಇಲ್ಲದಿದ್ದರೆ ಅಂತರಂಗದಲ್ಲಿಯ ವಿಶಿಷ್ಟವಾದದ್ದೇನನ್ನೋ ಕಳೆದುಕೊಳ್ಳುತ್ತೇವೆ ಎನ್ನುವ ಭಯ ನಮಗೆ. ಆದರೆ ಸಮಗ್ರ ಬದುಕನ್ನು, ಅಸ್ತಿತ್ವದ ಇಡೀ ಪ್ರಕ್ರಿಯೆಯನ್ನು ಆತ್ಮನಿಷ್ಠ, ವಸ್ತುನಿಷ್ಠ ಎಂದು ವಿಭಾಗಿಸಬಹುದೆ ? ಬಹಿರಂಗ ಇರದ ಅಂತರಂಗ ಇರಲು ಶಕ್ಯವೆ ? ಅದೇ ರೀತಿ. ಅಂತರಂಗವಿರದೆ, ಬಹಿರಂಗವಿರಲುಶಕ್ಯವೆ ?

* * *

೧೩. ಕಲಾವಿದ ಮತ್ತು ಕಲೆ

ಕ್ರಿಯೆಯಲ್ಲಿ ಕುಶಲನಾದವನೆ ಕಲಾವಿದ. ಈ ಕ್ರಿಯೆ ಬದುಕಿನ ಒಳಗೇ ಇದೆಯೆ ಹೊರತು ಹೊರಗಲ್ಲ. ಆದ್ದರಿಂದ ಕುಶುಲತೆಯಿಂದ ಬದುಕುವುದು ನಿಜವಾಗಿಯೂ ಒಬ್ಬನನ್ನು ಕಲಾವಿದನನ್ನಾಗಿ ಮಾಡುತ್ತದೆಯಲ್ಲವೆ ? ಇಡೀ ದಿನ ಒಬ್ಬ ಕಲಾಕಾರ ತನ್ನ ವಾದ್ಯ ನುಡಿಸುತ್ತಿರುವಾಗ, ಅಥವಾ ಕಾವ್ಯ ರಚಿಸುತ್ತಿರುವಾಗ ಅಥವಾ ಚಿತ್ರ ಬಿಡಿಸುತ್ತಿರುವಾಗ— ಕೆಲವು ತಾಸುಗಳ ಕಾಲ ಈ ಕುಶಲತೆ ಕಾರ್ಯನಿರತವಾಗಿರಬಹುದು. ಕೆಲವು ಬಾರಿ ಒಬ್ಬ ಕಲಾಕಾರ ಹಲವಾರು ಕಲೆಗಳಲ್ಲಿ ಕುಶಲನಾಗಿದ್ದರೆ—(ಯುರೋಪಿನ ಪುನರುತ್ಥಾನ ಕಾಲದ ಕಲಾವಿದರ ಹಾಗೆ)— ಈ ವಿವಿಧ ಕುಶಲ ಕಲೆಗಳು ಹೆಚ್ಚು ಕಾಲ ಕಾರ್ಯನಿರತವಾಗಿರಬಹುದು. ಆದರೆ ಈ ಸಂಗೀತ, ಕಾವ್ಯರಚನೆ ಅಥವಾ ಯಾವುದೇ ಬಗೆಯ ಕಲಾಸೃಷ್ಟಿಯ ಕೆಲವು ತಾಸುಗಳು ಗೊಂದಲ ಹಾಗು ಅವ್ಯವಸ್ಥೆಗಳಿಂದ ತುಂಬಿರುವ ಆತನ ಇನ್ನಿತರ ಸಮಯಕ್ಕೆ ತದ್ವಿರುದ್ಧವಾಗಿರಬಹುದು. ಹಾಗಿದ್ದರೆ ಆ ಮನುಷ್ಯ ನಿಜಕ್ಕೂ ಕಲಾವಿದನೆ ?

ಕಲಾಕೌಶಲ್ಯದಿಂದ ವೀಣೆ ಬಾರಿಸುವವ ಪ್ರಸಿದ್ಧಿಯ ಮೇಲೆ ತನ್ನ ಕಣ್ಣಿರಿಸಿಕೊಂಡಿರುವಾಗ, ಆತ ವೀಣಾವಾದನದಲ್ಲಿ ಆಸಕ್ತಿಹೊಂದಿರುವುದಿಲ್ಲ. ತನ್ನ ಪ್ರಸಿದ್ಧಿಗಾಗಿ ಆತ ಅದನ್ನು ಉಪಯೋಗಿಸುತ್ತಿದ್ದಾನೆ, ಅಷ್ಟೇ. ಆಪ್ಯಾಯಮಾನವಾದ ಸಂಗೀತದೊಡನೆ ತನ್ನನ್ನು ತಾನು ಗುರುತಿಸಿಕೊಂಡಿರುತ್ತಾನೆ— ಸಂಗೀತಗಾರ. ಧರ್ಮಭೀರು ತನಗೆ ' ಭವ್ಯ ' ಎನಿಸಿದವನೊಡನೆ ತನ್ನನ್ನು ತಾನು ಏಕೀಭವಿಸಿಕೊಂಡಿರುತ್ತಾನೆ. ಇವರೆಲ್ಲರೂ ತಮ್ಮ-ತಮ್ಮ ವಿಶಿಷ್ಟ ಚಿಕ್ಕ ಕ್ಷೇತ್ರಗಳಲ್ಲಿ ಕುಶಲರೇ, ಆದರೆ ಬದುಕಿನ ಉಳಿದ ವಿಶಾಲವಾದ ಕ್ಷೇತ್ರವು ಅವರ ಉಪೇಕ್ಷೆಗೆ ಒಳಗಾಗಿರುತ್ತದೆ. ಆದ್ದರಿಂದ, ಕ್ರಿಯೆಯಲ್ಲಿ,

ಬದುಕಿನಲ್ಲಿ 'ಕುಶಲತೆ' ಅಂದರೇನು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ಕೇವಲ ಚಿತ್ರಕಲೆಯಲ್ಲಿ ಅಥವಾ ಬರಹದಲ್ಲಿ ಅಥವಾ ತಂತ್ರಜ್ಞಾನದಲ್ಲಷ್ಟೇ ಅಲ್ಲ— ಕುಶಲತೆ ಸಾಧಿಸಬೇಕಾದದ್ದು, ಇಡೀ ಬದುಕಿನಲ್ಲಿ ಕುಶಲತೆ ಹಾಗು ಸೌಂದರ್ಯದಿಂದ ಒಬ್ಬ ಹೇಗೆ ಬದುಕಬಹುದು ಎನ್ನುವುದನ್ನು ಕಂಡುಕೊಳ್ಳಬೇಕಾಗಿದೆ. ಈ ಕುಶಲತೆ ಹಾಗು ಸೌಂದರ್ಯ ಎರಡೂ ಒಂದೇಯೋ ? ಕಲಾಕಾರನಾಗಿರಲಿ ಅಥವಾ ಆಗದಿರಲಿ, ಒಬ್ಬ ತನ್ನ ಸಮಗ್ರ ಬದುಕನ್ನು ಕುಶಲತೆ ಹಾಗು ಸೌಂದರ್ಯಗಳಿಂದ ಬದುಕಬಲ್ಲನೇ ? ಬದುಕುವುದು ಎಂದರೆ ಕ್ರಿಯೆ. ಯಾವಾಗ ಈ ಕ್ರಿಯೆಯು ದುಃಖವನ್ನು ಸೃಷ್ಟಿಸುತ್ತದೆಯೋ, ಆಗ ಅದು ಕುಶಲವಾಗಿರಲು ಶಕ್ಯವಿಲ್ಲ. ಆದ್ದರಿಂದ ಮನುಷ್ಯನು ದುಃಖವಿಲ್ಲದೆ, ಸಂಘರ್ಷವಿಲ್ಲದೆ, ದ್ವೇಷಾಸೂಯೆಗಳಿಲ್ಲದೆ, ದುರಾಸೆಯಿಲ್ಲದೆ, ಯಾವುದೇ ಬಗೆಯ ಹೋರಾಟವಿಲ್ಲದೆ ಬದುಕಬಲ್ಲನೆ ? ಇಲ್ಲಿ ಯಾರು ಕಲಾವಿದ, ಯಾರು ಕಲಾವಿದರಲ್ಲ ಎನ್ನುವುದು ಮುಖ್ಯ ಪ್ರಶ್ನೆಯಲ್ಲ; ಮನುಷ್ಯನನ್ನ-ನಿಮ್ಮಂತಹ ಮನುಷ್ಯ— ಯಾತನೆ ವಿಚಾರಗಳಿಲ್ಲದೆ ಬದುಕಬಲ್ಲನೇ ಎನ್ನುವುದು. ಇದರರ್ಥ ಶ್ರೇಷ್ಠ ಸಂಗೀತ, ಶ್ರೇಷ್ಠ ಕಾವ್ಯ, ಶ್ರೇಷ್ಠ ತರಗತಿಯ ಶಿಲ್ಪ-ನೃತ್ಯಾದಿಗಳು ಮಹತ್ವದವಲ್ಲ, ಕ್ಷುಲ್ಲಕ ಎಂದೂ ಅಲ್ಲ. ಹಾಗೆಣಿಸುವುದು ನಿಜಕ್ಕೂ ಅಸಹ್ಯವಾದದ್ದು, ಅಸಭ್ಯವಾದದ್ದು; ಹಾಗೆ ಈ ಲಲಿತಕಲೆಗಳೆಲ್ಲವನ್ನೂ ಹೀಗಳೆಯುವುದು ನಮ್ಮ ಬದುಕಿನಲ್ಲೇ ಅಕುಶಲತೆಯನ್ನು ಇರಿಸಿಕೊಳ್ಳುವಂಥಾದ್ದು.

ಆದರೆ ಕಲಾಗಾರಿಕೆ ಹಾಗು ಸೌಂದರ್ಯ ದಿನದ ಕೆಲವೇ ಕ್ಷಣಗಳಿಗೆ ಸೀಮಿತವಾಗಿರದೇ, ಇಡೀ ದಿನ ನಮ್ಮ ಬದುಕಿನಲ್ಲಿ ಕಾರ್ಯಪ್ರವೃತ್ತವಾಗಿರಬೇಕು. ಇದು, ಪಿಯಾನೋವನ್ನು ಚೆನ್ನಾಗಿ, ಸುಮಧುರವಾಗಿ, ಜಾಣ್ಮೆಯಿಂದ ಬಾರಿಸುವದಷ್ಟೇ ಅಲ್ಲ, ಹೀಗೆ ಬದುಕುವುದು ನಿಜವಾದ ಸವಾಲು. ನೀವು ಪಿಯಾನೋ ನುಡಿಸಲು ಹಿಡಿದರೆ, ಚೆನ್ನಾಗಿಯೇ ಬಾರಿಸಬೇಕು, ಪ್ರಶ್ನೆಯಿಲ್ಲ; ಆದರೆ ಅಷ್ಟೇ ಸಾಕಾಗದು; ಹಾಗೆ ಮಾಡುವುದೆಂದರೆ ಒಂದು ವಿಸ್ತಾರವಾದ ಪ್ರದೇಶದಲ್ಲಿ ಅತಿ ಚಿಕ್ಕ ಜಾಗವನ್ನಷ್ಟೇ ಸಾಗುವಳಿ ಮಾಡಿದಂತೆ. ನಮ್ಮ ಕಾಳಜಿ ಇಡೀ ಪ್ರದೇಶಕ್ಕೆ ವ್ಯಾಪಿಸಿದೆ; ಆ ಪ್ರದೇಶವೇ ಬದುಕು. ಇಡೀ ಪ್ರದೇಶವನ್ನು ನಿರ್ಲಕ್ಷಿಸಿ ಒಂದು ಸಣ್ಣ ಭಾಗದ ಮೇಲೆ—ಅದು ನಮ್ಮ-

ಇರಬಹುದು ಅಥವಾ ಇತರರದೇ ಇರಬಹುದು— ಎಲ್ಲ ಲಕ್ಷ್ಯವನ್ನೂ ಕೇಂದ್ರೀಕರಿಸುವುದು— ನಾವು ಮಾಡುತ್ತ ಇರುವ ಕೆಲಸ. ನಮ್ಮಲ್ಲಿರುವ ಕಲೆಗಾರಿಕೆಯನ್ನು ಸಂಪೂರ್ಣ ಜಾಗ್ರತಗೊಳಿಸಬೇಕು. ಆದ್ದರಿಂದ ಇಡೀ ಬದುಕಿನಲ್ಲಿ, ಕ್ರಿಯೆಯಲ್ಲಿ ಕುಶಲತೆಯಿಂದಿರಬೇಕು. ಆಗಲೇ ನಿಜವಾದ ಸೌಂದರ್ಯ ಸಾಧ್ಯ.

ಕಾರ್ಖಾನೆ, ಕಛೇರಿಗಳಲ್ಲಿ ದುಡಿಯುವವರೂ ಕಲಾವಿದರೇ. ಅವರು ಎಚ್ಚೆತ್ತಾಗ ತಮ್ಮ ಕೆಲಸವು ಕಲೆಗಾರಿಕೆ ಆಗುವ ಹಾಗೆ ಬದಲಾಯಿಸ- ಬಲ್ಲರು. ಅಥವಾ ಅದು ಶಕ್ಯವಿಲ್ಲದಿದ್ದರೆ ಅದನ್ನು ಬಿಡಲೂ ಬಲ್ಲರು. ಇಲ್ಲಿ ಮುಖ್ಯವಾದದ್ದು ಕೆಲಸವಲ್ಲ; ಕೆಲಸದ ಬಗ್ಗೆ ಎಚ್ಚರವಾಗುವುದು. ಆ ಕೆಲಸ ದಿಂದ ಬಂಧಿತನಾಗುವುದಲ್ಲ; ಆ ಕೆಲಸಕ್ಕೆ ಎಚ್ಚೆತ್ತುಕೊಳ್ಳುವುದು. ನಾವು, ಏನಾದರೂ ಸವಾಲಿದ್ದಾಗ, ಅಪಘಡಗಳೋ, ಸಂತೋಷಗಳೋ ಸಂಭವಿಸಿ- ದಾಗ ಪರಿಸರದ ಮೂಲಕ ಎಚ್ಚೆತ್ತುಕೊಳ್ಳುತ್ತೇವೆ. ಆದರೆ ಈ ಯಾವ ಕಾರಣವೂ ಇಲ್ಲದೆ ಎಚ್ಚರಗೊಂಡಿರಲು ಶಕ್ಯವೆ? ಯಾವುದೇ ಒಂದು ಘಟನೆ, ಕಾರಣ ಇತ್ಯಾದಿಗಳ ಮೂಲಕ ಎಚ್ಚರಗೊಂಡರೆ, ನೀವು ಆ ಕಾರಣದ ಮೇಲೆ ಅವಲಂಬಿಸಿಕೊಂಡಿರುವುದು ಸ್ಪಷ್ಟ. ಆ ಅವಲಂಬನೆ ಕಾಮ, ಮದ್ಯ, ಸಂಗೀತ, ಚಿತ್ರಕಲೆ ಏನೇ ಇರಬಹುದು. ಅವುಗಳ ಮೂಲಕ ನೀವು ಎದ್ದುಹೋಗುವಂತೆ ನೀವೇ ಅವಕಾಶ ನೀಡುತ್ತೀರಿ. ಆದ್ದರಿಂದ ಯಾವುದೇ ಬಗೆಯ ಅವಲಂಬನೆ ಕಲೆಗಾರಿಕೆಯ, ಕೊನೆ, ಕುಶಲತೆಯ ಅಂತ್ಯ.

ಸಾಮಾನ್ಯವಾಗಿ ನಾವು ಕ್ರಿಯೆ, ಕಾರಣ-ಫಲಗಳ ಸಂಬಂಧವಿಲ್ಲದ ಕ್ರಿಯೆಗಳ ಬಗ್ಗೆ ಯೋಚಿಸುವುದಕ್ಕೆ ಅಸಾಧ್ಯವಾಗುವಷ್ಟರ ಮಟ್ಟಿಗಿನ ವಿವೇ- ಚನೆಯ ಅಭಾವ ಸ್ಥಿತಿಯಲ್ಲಿ ಬದುಕುತ್ತಿದ್ದೇವೆ. ಕಾರಣ-ಫಲಗಳ ಕ್ರಿಯೆ, ಚಟುವಟಿಕೆ ಒಂದು ಅಂತ್ಯವೇ ಇಲ್ಲದ ಸರಮಾಲೆ. ಆದರೆ ಜೆ. ಕೆ. ಹೇಳುವ 'ಕ್ರಿಯೆ' ಎನ್ನುವುದು— ಈ 'ಕಾರಣ-ಫಲ'ಗಳ ವರ್ತುಲದ ಆಚೆಗಿನದು. ಕಾರಣ ಉದ್ದೇಶಗಳಿಂದ ಪ್ರೇರಿತವಾದ ಕ್ರಿಯೆ. ಫಲಾಪೇಕ್ಷಿತ ಕ್ರಿಯೆ, ಫಲ ರೂಪದಲ್ಲಿರುವ ಕ್ರಿಯೆ— ನಮಗೆ ಗೊತ್ತಿರುವಂತಹದ್ದೇ. ಎಲ್ಲ ಕ್ರಿಯೆಗಳೂ ಸಂಬಂಧದಲ್ಲಿರುತ್ತವೆ. ಈ ಸಂಬಂಧ ಒಂದು ಕಾರಣದ ಮೇಲೆ ನಿಂತಿದ್ದರೆ,

ಅದು ಒಂದು ಚಾಣಾಕ್ಷ ರೂಪಾಂತರವಾಗಿರುತ್ತದೆ. ತನ್ಮೂಲಕ ಒಂದು ಬಗೆಯ ಮಂಕುತನಕ್ಕೆ ಕಾರಣವಾಗುತ್ತದೆ. ಪ್ರೇಮವೊಂದೇ ಅಕಾರಣವಾದದ್ದು; ಸ್ವತಂತ್ರವಾದದ್ದು. ಪ್ರೇಮವೇ ಸುಂದರವಾದದ್ದು; ಕುಶಲವಾದದ್ದು; ಪ್ರೇಮವೇ ಕಲೆ, ಪ್ರೇಮವಿಲ್ಲದೇ ಯಾವ ಕಲೆಯೂ ಇಲ್ಲ. ಕಲಾವಿದನೊಬ್ಬ ಸುಂದರವಾಗಿ, ಸುಶ್ರಾವ್ಯವಾಗಿ ವಾದ್ಯ ನುಡಿಸುತ್ತಿರುವಾಗ, ಅಲ್ಲಿ 'ನಾನು' ಇರುವುದಿಲ್ಲ. ಅಲ್ಲಿರುವುದು ಕೇವಲ ಪ್ರೇಮ, ಸೌಂದರ್ಯ. ಇದು ನಿಜವಾದ ಕಲೆ, ಇದೇ ಕ್ರಿಯೆಯಲ್ಲಿಯ ಕುಶಲತೆ. ಕ್ರಿಯೆಯಲ್ಲಿ ಕುಶಲತೆ ಎಂದರೆ ' ನಾನು ' ಎನ್ನುವುದರ ಅನುಪಸ್ಥಿತಿ. ' ನಾನು ' ಇಲ್ಲದಿರುವಿಕೆ ಕಲೆ. ಆದರೆ ಯಾವಾಗ ನಾವು ಇಡೀ ಬದುಕನ್ನು ಉಪೇಕ್ಷಿಸಿ, ಬದುಕಿನ ಅತಿ ಚಿಕ್ಕ ಕ್ಷೇತ್ರದ ಮೇಲೆ ಲಕ್ಷ್ಯವೆಲ್ಲವನ್ನೂ ಕೇಂದ್ರೀಕರಿಸಿರುತ್ತೇವೆಯೋ, ಆಗ ನಮ್ಮ 'ಅಹಂ' ಇಲ್ಲದೇ ಇದ್ದರೂ, ನಾವು ಕುಶಲತೆ, ಕಲೆಗಾರಿಕೆ ಇಲ್ಲದೆ ಬದುಕುವುದರಿಂದ ನಾವು ಜೀವನದ ಕಲೆಗಾರರಲ್ಲ. ಬದುಕುವಾಗ ' ನಾನು ' ಇಲ್ಲವಾಗುವುದೇ ಪ್ರೇಮ, ಅದೇ ಸೌಂದರ್ಯ. ಅಂಥ ಪ್ರೇಮದಿಂದ, ಸೌಂದರ್ಯದಿಂದ ಬದುಕಿನ ಸಮಗ್ರ ಕ್ಷೇತ್ರದಲ್ಲಿ ಸದಾ ಬದುಕುವುದೇ ಶ್ರೇಷ್ಠತಮ ಕಲೆ.

* * *

೧೪. ಕ್ರಿಯೆ ಮತ್ತು ವಿಚಾರ

ನಮ್ಮ ಬದುಕೆಂದರೆ, ಅಸ್ತಿತ್ವವೆಂದರೆ ಕ್ರಿಯೆಗಳ ನಿರಂತರ ಪ್ರಕ್ರಿಯೆ. ಹತಾಸೆಗೆ, ವ್ಯಕ್ತಿತ್ವದ ಶಿಥಿಲತೆಗೆ, ಭಗ್ನತೆಗೆ ಎಡೆ ಮಾಡಿಕೊಡುವ, ಒಂದ-ಕ್ಕೊಂದು ಸಂಬಂಧವಿಲ್ಲದಂತೆ ಕಾಣುವ ಕ್ರಿಯೆಗಳ ಸರಮಾಲೆಯಲ್ಲೇ ನಮ್ಮಲ್ಲಿ ಹೆಚ್ಚು ಜನರು ಬದುಕುತ್ತಿರುತ್ತೇವೆ. ಪ್ರತಿಯೊಬ್ಬನಿಗೂ ನಮ್ಮಲ್ಲಿ ಈ 'ಕ್ರಿಯೆ' ಅಥವಾ 'ಕೆಲಸ' (Action) ಒಂದು ಸಮಸ್ಯೆ. ಏಕೆಂದರೆ ನಾವು ಕ್ರಿಯೆ ಇಲ್ಲದೇ ಬದುಕಲು ಶಕ್ಯವಿಲ್ಲ. ಅನುಭವಿಸಲೂ, ವಿಚಾರ ಮಾಡಲೂ ಶಕ್ಯವಿಲ್ಲ; ವಿಚಾರವೇ ಕ್ರಿಯೆ; ಪ್ರಜ್ಞೆಯ ಒಂದು ಸ್ತರದಲ್ಲಿ, ಅದೂ ಬಾಹ್ಯಸ್ತರದಲ್ಲಿ ಮಾತ್ರ ಕ್ರಿಯೆಯನ್ನು ಅರಸುತ್ತ, ಕ್ರಿಯೆಯ ಸಮಗ್ರ ಪ್ರಕ್ರಿಯೆ–ಸ್ವರೂಪವನ್ನು ಅರಿತುಕೊಳ್ಳದೇ, ಬಾಹ್ಯಕ್ರಿಯೆಯಲ್ಲಿ ಬಂಧಿತ-ನಾಗಿರುವುದು ಅನಿವಾರ್ಯವಾಗಿ ಹತಾಸಗೆ, ಯಾತನೆಗೆ ಎಡೆ ಮಾಡಿ-ಕೊಡುತ್ತದೆ.

ನಮ್ಮ ಪ್ರಜ್ಞೆಯ ವಿವಿಧ ಸ್ತರಗಳಲ್ಲಿಯ ಕ್ರಿಯಾ–ಪರಂಪರೆ ಅಥವಾ ಕ್ರಿಯಾ–ಸರಪಳಿಯೇ ನಮ್ಮ ಬದುಕು. ಪ್ರಜ್ಞಾವಂತಿಕೆ ಎಂದರೆ ಅನು-ಭವಿಸುವುದು, ಹೆಸರಿಸುವುದು, ದಾಖಲಿಸುವುದು; ಅಂದರೆ ಪ್ರಜ್ಞೆ; ಸವಾಲು ಮತ್ತು ಪ್ರತಿಸ್ಪಂದನೆ— ಅದರರ್ಥ ಅನುಭವಿಸುವುದು, ನಂತರ ಹೆಸರಿಸು-ವುದು, ಅನಂತರ ದಾಖಲಿಸುವುದು, ಅಂದರೆ ನೆನಪಿಟ್ಟುಕೊಳ್ಳುವುದು. ಇದು ಕ್ರಿಯೆಯ ಪ್ರಕ್ರಿಯೆ ಅಥವಾ ಸ್ವರೂಪ. ಪ್ರಜ್ಞಾವಂತಿಕೆ ಎಂದರೆ ಕ್ರಿಯೆ : ಸವಾಲು–ಪ್ರತಿಸ್ಪಂದನೆಗಳಿರದೇ, ಅನುಭವಿಸುವುದು; ಹೆಸರಿಸುವುದು ಇರದೇ, ದಾಖಲಿಸಿಡುವ ರೂಪದ ನೆನಪು ಇರದೇ ಕ್ರಿಯೆ ಇರದು.

ಕ್ರಿಯೆ ಕರ್ತೃವನ್ನು ಸೃಷ್ಟಿಸುತ್ತದೆ. ಅಂದರೆ 'ಕಾರ್ಯ'— 'ಕಾರ್ಯಕರ್ತ'ನನ್ನು ಸೃಷ್ಟಿಸುತ್ತದೆ. ಅಂದರೆ ಯಾವಾಗ ಕ್ರಿಯೆಗೆ ಒಂದು

ಗುರಿ, ಉದ್ದೇಶ ಇರುತ್ತದೆಯೋ, ಆಗ 'ಕರ್ತೃ' ಅಸ್ತಿತ್ವಕ್ಕೆ ಬರುತ್ತಾನೆ. ಕ್ರಿಯೆಗೆ ಫಲಿತಾಂಶ, ಉದ್ದೇಶ ಇಲ್ಲವೆಂದಾದರೆ 'ಕರ್ತೃ' ಇರುವುದಿಲ್ಲ, ಒಂದು 'ಗುರಿ' ಅಥವಾ 'ಫಲ' ಕ್ರಿಯೆಗೆ ಇದೆ ಎಂದು ಅದರೆ, ಆ ಕ್ರಿಯೆ ಕರ್ತೃವನ್ನು ತರುತ್ತದೆ. ಹೀಗೆ, ಕರ್ತೃ, ಕ್ರಿಯೆ ಹಾಗು ಗುರಿ ಅಥವಾ ಫಲಿತಾಂಶಗಳೆಲ್ಲ ಒಂದೇ ಪ್ರಕ್ರಿಯೆ. ಇದು ಕ್ರಿಯೆಗೆ ಒಂದು ಗುರಿ ಇರುವಾಗ ಬರುವಂತಹದು. ಒಂದು ನಿರ್ದಿಷ್ಟ ಗುರಿ ಇರುವ ಕ್ರಿಯೆಯೇ ಇಚ್ಛೆ, ಸಂಕಲ್ಪ ಅಥವಾ ಛಲ. ಅಂತಹದ್ದೇನೂ ಇಲ್ಲದಿದ್ದಾಗ ಸಂಕಲ್ಪ, ಇಚ್ಛೆ ಇರದು. ಒಂದು ಗುರಿ ಸಾಧಿಸ-ಬೇಕೆನ್ನುವುದು ಇಚ್ಛೆ ಅಥವಾ ಸಂಕಲ್ಪವನ್ನು ತರುತ್ತದೆ. ಆ ಇಚ್ಛೆಯೇ ಕರ್ತೃ ಅಂದರೆ ಸಾಧಿಸುವ, ಬರೆಯುವ, ಚಿತ್ರಿಸುವ, ಶ್ರೀಮಂತನಾಗುವ— ಇತ್ಯಾದಿ ಇಚ್ಛೆಯುಳ್ಳವ ಕರ್ತೃ. ಕರ್ತೃ, ಕ್ರಿಯೆ ಹಾಗು ಫಲಗಳ ರೂಪವೇ ನಮ್ಮ ದೈನಂದಿನ ಅಸ್ತಿತ್ವ. ಇದು 'ಏನೋ' ಒಂದು 'ಆಗುವ' ಪ್ರಕ್ರಿಯೆಯ ಸ್ವರೂಪ. ಕರ್ತೃ ಇಲ್ಲದಿದ್ದರೆ, ಒಂದು ನಿಶ್ಚಿತ ಉದ್ದೇಶಕ್ಕೆ ಬದ್ಧವಾಗಿರದ ಕ್ರಿಯೆ ಇಲ್ಲದಿದ್ದರೆ, 'ಆಗುವ' ಪ್ರಕ್ರಿಯೆ ಇರುವುದಿಲ್ಲ; ಆದರೆ ನಮ್ಮ ದೈನಂದಿನ ಬದುಕು ಈ ಆಗುವ ಪ್ರಕ್ರಿಯೆ. ನಾನು ಬಡವ; ಶ್ರೀಮಂತನಾಗುವ ಗುರಿ ಇಟ್ಟುಕೊಂಡು ನಾನು ಕ್ರಿಯಾಶೀಲನಾಗಿರುತ್ತೇನೆ. ನಾನು ಕುರೂಪಿ; ಸುಂದರನಾಗಲು ಇಚ್ಛಿಸುತ್ತೇನೆ. ಹೀಗೆ ನನ್ನ ಬದುಕು ಏನೋ 'ಆಗುವ' ಪ್ರಕ್ರಿಯೆ, ಇರಬೇಕೆಂಬ ಇಚ್ಛೆಯೇ ಪ್ರಜ್ಞೆಯ ವಿವಿಧ ಸ್ತರಗಳಲ್ಲಿ, ವಿವಿಧ ಸ್ಥಿತಿಗಳಲ್ಲಿ ಆಗಬೇಕೆಂಬ ಇಚ್ಛೆಯಾಗಿರುತ್ತದೆ. ಸವಾಲು, ಉತ್ತರ; ಹೆಸರಿಸುವುದು, ದಾಖಲಿಸುವುದು— ಇತ್ಯಾದಿ ಈ ಆಗುವ ಪ್ರಕ್ರಿಯೆ ಯಾತನಾಮಯವಾದದ್ದು. ನಾನು 'ಇದು' ಇದ್ದೇನೆ; 'ಅದು' ಆಗಬೇಕು, ಎಂಬ ಇಚ್ಛೆ ಇದೆ. ಈ ಎರಡರ ಮಧ್ಯೆ ಸದಾ ಹೋರಾಟ, ಸಂಘರ್ಷ ಇದ್ದೇ ಇದೆ.

ಈ 'ಆಗುವ' ಪ್ರಕ್ರಿಯೆಯ ಹೊರತಾಗಿ ಬೇರೆ ಬಗೆಯ ಕ್ರಿಯೆ ಶಕ್ಯವಿಲ್ಲವೆ? ಎಂಬ ಪ್ರಶ್ನೆ ಉದ್ಭವಿಸುತ್ತದೆ. ಈ 'ಆಗುವ' ಪ್ರಕ್ರಿಯೆ ತರುವ ನೋವು. ನಿರಂತರ ಯುದ್ಧ ಇರದಂತಹ ಕ್ರಿಯೆ ಇಲ್ಲವೆ? ಜೆ. ಕೆ. ಹೀಗೆ ಉತ್ತರಿಸುತ್ತಾರೆ: 'ಕ್ರಿಯೆ'ಗೆ ಒಂದು ನಿರ್ದಿಷ್ಟ ಗುರಿ, ಉದ್ದೇಶ ಇರದಿದ್ದಾಗ ಕರ್ತೃ ಇಲ್ಲವಾಗುತ್ತಾನೆ. ಯಾಕೆಂದರೆ ಒಂದು ನಿರ್ದಿಷ್ಟ ಗುರಿ

ಹೊಂದಿರುವ ಕ್ರಿಯೆಯೇ ಕರ್ತೃವನ್ನು ಸೃಷ್ಟಿಸುವುದರಿಂದ ಅಂಥ ಸ್ಥಿತಿಯಲ್ಲಿ, ಯಾವ ಫಲಾಕಾಂಕ್ಷೆಯೂ ಇರದ ಸ್ಥಿತಿಯ ಕ್ರಿಯೆಯಲ್ಲಿ 'ಆಗುವುದು' ಇರುವದಿಲ್ಲ. ಆದ್ದರಿಂದ ಸಂಘರ್ಷವೂ ಇರುವುದಿಲ್ಲ. ಅನುಭವಿಸುವವ ಹಾಗು ಅನುಭವ ಎರಡೂ ಇರುವಂತಹ, ಕೇವಲ ಕ್ರಿಯಾತ್ಮಕ ಸ್ಥಿತಿ, ಅನುಭವಿಸುತ್ತಿರುವ ಸ್ಥಿತಿ ಮಾತ್ರ ಇರುವಂತಹ ಸ್ಥಿತಿ ಇದೆ. ಇದು ಅತ್ಯಂತ ಆಳವಾದಂಹ ತಾತ್ವಿಕ ವಿಷಯವೆನಿಸಿದರೂ, ಅತ್ಯಂತ ಸರಳವಾದ ವಿಷಯ ಎನ್ನುತ್ತಾರೆ ಜೆ. ಕೆ.

ಅನುಭವಿಸುತ್ತಿರುವ ಸ್ಥಿತಿಯಲ್ಲಿ, ಅನುಭವಕ್ಕಿಂತ ಭಿನ್ನವಾಗಿ ಅನು-ಭವಿಸುತ್ತಿರುವವನ ಅರಿವು— ಅಂದರೆ ನಮ್ಮದೇ ಅರಿವು ಇರುವುದಿಲ್ಲ; ಕೇವಲ ಅನುಭವಿಸುತ್ತಿರುವ ಸ್ಥಿತಿಯಲ್ಲಿರುತ್ತೇವೆ. ಉದಾ : ನೀವು ಸಿಟ್ಟುಗೊಂಡಿ-ದ್ದೀರಿ. ಸಿಟ್ಟುಗೊಂಡಿರುವ ಕ್ಷಣದಲ್ಲಿ ಅನುಭವಿಸುತ್ತಿರುವವನೂ ಇರುವ-ದಿಲ್ಲ; ಅನುಭವವೂ ಇರುವುದಿಲ್ಲ— ಕೇವಲ ಅನುಭವಿಸುತ್ತಿರುವುದು ಮಾತ್ರ ಇರುತ್ತದೆ. ಆ ಕ್ಷಣದಿಂದ ಈಚೆ ಬಂದ ತಕ್ಷಣ ಅನುಭವಿಸುವವ ಮತ್ತು ಅನುಭವ ಎರಡೂ ಅಸ್ತಿತ್ವಕ್ಕೆ ಬರುತ್ತವೆ. ಕರ್ತೃ ಹಾಗು ಒಂದು ನಿರ್ದಿಷ್ಟ ಗುರಿ ಇಟ್ಟುಕೊಂಡಂತಹ ಕ್ರಿಯೆ— ಆ ಗುರಿ ಎಂದರೆ ಸಿಟ್ಟನ್ನು ನಿಗ್ರಹಿಸ-ಬೇಕು ಅಥವಾ ಸಿಟ್ಟಿನ ಸ್ಥಿತಿಯಿಂದ ಪಲಾಯನ ಮಾಡಬೇಕೆಂಬುದು— ಎರಡೂ ಬರುತ್ತವೆ. ನಾವು ಮೇಲಿಂದ ಮೇಲೆ ಹೀಗೆ ಅನುಭವಿಸುತ್ತಿರುವ ಸ್ಥಿತಿಯಲ್ಲಿರುತ್ತೇವೆ. ಆದರೆ ಪೂರ್ಣ ಅಲ್ಲಿಂದ ಹೊರಬಂದು, ಅದಕ್ಕೊಂದು ಹೆಸರಿಟ್ಟು, ದಾಖಲೆ ಮಾಡಿ, ತನ್ಮೂಲಕ ಆಗುವ ಪ್ರಕ್ರಿಯೆಗೆ ನಿರಂತರತೆ-ಯನ್ನು ನೀಡುತ್ತೇವೆ.

ನಾವು ಕ್ರಿಯೆಯ ಮೂಲಭೂತ ಸ್ವರೂಪವನ್ನು ಅರಿವು ಮಾಡಿಕೊಂಡರೆ, ಆ ಅರಿವು ನಮ್ಮ ಮೇಲು-ಮೇಲಿನ ಚಟುವಟಿಕೆಗಳ ಮೇಲೆ ಪ್ರಭಾವ ಬೀರು-ತ್ತದೆ. ಆದರೆ ಅದಕ್ಕೂ ಮೊದಲು ಕ್ರಿಯೆಯ ಮೂಲಭೂತ ಸ್ವರೂಪವನ್ನು ಅರಿತುಕೊಳ್ಳುವುದು ಮುಖ್ಯ. ಕ್ರಿಯೆ ಒಂದು ವಿಚಾರದಿಂದ ಮೂಡಿದ್ದೆ ? ಒಂದು ವಿಚಾರ ಮೊದಲಿದ್ದು, ಅನಂತರ ಅದನ್ನು ಕ್ರಿಯೆಗೆ ಇಳಿಸುತ್ತೇವೆಯೆ? ಅಥವಾ ಕ್ರಿಯೆ ಮೊದಲು ಬಂದು, ಆ ನಂತರ ಆ ಕ್ರಿಯೆ ಸಂಘರ್ಷವನ್ನು ಸೃಷ್ಟಿಮಾಡುವುದರಿಂದ ವಿಚಾರದ ಹಂದರವನ್ನು ಬೆಳೆಸುತ್ತೇವೆಯೆ ? ಕ್ರಿಯೆ

ಕೃತ್ರ್ಯವನ್ನು ಸೃಷ್ಟಿಸುತ್ತದೆಯೋ ಅಥವಾ ಕರ್ತೃವೇ ಮಾಡಲು ಬರುತ್ತಾನೋ ?

ಈ ಹುಡುಕಾಟ ಅತ್ಯಂತ ಮಹತ್ವದ್ದು. ಮೊದಲು ವಿಚಾರ ಬಂದರೆ ಕ್ರಿಯೆ ವಿಚಾರಕ್ಕೆ ಹೊಂದಿಕೊಳ್ಳುತ್ತದೆ. ಆದ್ದರಿಂದ ಅದು ಕ್ರಿಯೆ ಆಗದೆ, ಕೇವಲ ವಿಚಾರದ ಅನುಕರಣೆಯಾಗಿ, ಆಗ್ರಹವಾಗಿ ಪರಿಣಮಿಸುತ್ತದೆ. ಇದನ್ನು ಸರಿಯಾಗಿ ಅರಿತುಕೊಳ್ಳುವುದು ಅತ್ಯಂತ ಮಹತ್ವದ್ದು. ಏಕೆಂದರೆ, ನಮ್ಮ ಸಮಾಜ ಕೇವಲ ಬೌದ್ಧಿಕ ಹಾಗು ವೈಚಾರಿಕ ಸ್ತರದ ಮೇಲೆ ರಚಿಸಲ್ಪಟ್ಟಿದ್ದು, ನಮ್ಮಲ್ಲಿ ಸಾಮಾನ್ಯವಾಗಿ ವಿಚಾರ ಮೊದಲು ಬಂದು, ಅನಂತರ ಕ್ರಿಯೆ ಬರುತ್ತದೆ. ಆದ್ದರಿಂದ ನಮ್ಮೆಲ್ಲ ಕ್ರಿಯೆ ಸಾಮಾನ್ಯವಾಗಿ ವಿಚಾರದ ಕೈಗೊಂಬೆ. ಕೇವಲ ವಿಚಾರಗಳ ನಿರ್ಮಾಣ ಸ್ವಾಭಾವಿಕವಾಗಿ ಕ್ರಿಯೆಗೆ ಆತಂಕಕಾರಿ. ವಿಚಾರಗಳು ಮತ್ತಷ್ಟು ವಿಚಾರಗಳನ್ನು ಸೃಷ್ಟಿಸುತ್ತ, ಸೃಷ್ಟಿಸುತ್ತ, ಪರಸ್ಪರ ವಿರೋಧ ಜಾಸ್ತಿಯಾಗುತ್ತ ಕೇವಲ ವಿಚಾರ ನಿರ್ಮಾಣದ ಬೌದ್ಧಿಕ ಪ್ರತಿಕ್ರಿಯೆಯ ಮೂಲಕ, ತಲೆಭಾರಗೊಂಡ ಸಮಾಜವಾಗಿ ಪರಿಣಮಿಸುತ್ತದೆ. ನಮ್ಮ ಸಾಮಾಜಿಕ ಸಂವಿಧಾನವೇ ಅತ್ಯಂತ ಬುದ್ಧಿಪ್ರಧಾನವಾಗಿದೆ. ನಮ್ಮ ವ್ಯಕ್ತಿತ್ವದ ಇನ್ನಿತರ ಪ್ರತಿಯೊಂದು ಶಕ್ತಿ ಘಟಕವನ್ನೂ ಬಲಿಗೊಟ್ಟು, ನಾವು ಬುದ್ಧಿಯನ್ನು ಮಾತ್ರ ಬೆಳೆಸುತ್ತಿದ್ದೇವೆ. ಇದರಿಂದಾಗಿಯೇ ನಾವು ವಿಚಾರಗಳಿಂದ ಉಸಿರುಗಟ್ಟಿ ಸಾಯುತ್ತಲಿದ್ದೇವೆ.

ವಿಚಾರಗಳು ಕ್ರಿಯೆಯನ್ನು ಎಂದಾದರೂ ಸೃಷ್ಟಿಸಬಹುದೆ ? ಅಥವಾ ವಿಚಾರಗಳು ಆಲೋಚನೆಗಳಿಗೆ ಆಕಾರ ನೀಡಿ, ಕ್ರಿಯೆಯನ್ನು ನಿಯಂತ್ರಿಸುತ್ತವೆಯೋ ? ಯಾವಾಗ ಕ್ರಿಯೆಯು ವಿಚಾರಗಳಿಂದ ಆಗ್ರಹಿಸಲ್ಪಟ್ಟಿದೆಯೋ, ಆಗ ಆ ಕ್ರಿಯೆ ಮನುಷ್ಯನನ್ನು ಎಂದೆಂದೂ ಸ್ವತಂತ್ರಗೊಳಿಸದು. ಇದು ನಾವೆಲ್ಲರೂ ಅರಿಯಬೇಕಾದ ಮಹತ್ವದ ಸಂಗತಿ. ಒಂದು ವಿಚಾರ ಕ್ರಿಯೆಯನ್ನು ಸಾಕಾರಗೊಳಿಸಿದರೆ, ಆ ಕ್ರಿಯೆ ನಮ್ಮ ಸಂಕಟಗಳಿಗೆ ಪರಿಹಾರವನ್ನೆಂದೂ ತರಲು ಶಕ್ಯವಿಲ್ಲ. ಇದನ್ನು ಅರಿಯುವ ಪೂರ್ವದಲ್ಲಿ ಈ ವಿಚಾರ ಹೇಗೆ ಅಸ್ತಿತ್ವಕ್ಕೆ ಬರುತ್ತದೆ ಎನ್ನುವುದನ್ನು ಗಮನಿಸೋಣ.

ಸಮಾಜವಾದಿಗಳ, ಬಂಡವಾಳಶಾಹಿಗಳ, ಕಮ್ಯುನಿಸ್ಟ್‌ರ ಅಥವಾ ವಿವಿಧ ಧರ್ಮಗಳ ವಿಚಾರಗಳು ರೂಪುಗೊಳ್ಳುವ ವಿಧಾನವನ್ನು ಅನ್ವೇಷಿಸುವುದು ನಮಗೆಲ್ಲರಿಗೂ ಅತ್ಯಂತ ಮುಖ್ಯವಾದದ್ದು. ಅದೂ ಸಮಾಜ ಮತ್ತೊಂದು ಬಗೆಯ ವಿನಾಶದ ಅಂಚಿಗೆ, ಅಪಾಯದ ಪ್ರಪಾತದಂಚಿಗೆ ಬಂದಿರುವ ಈ ಸಂದರ್ಭದಲ್ಲಿ, ನಮ್ಮ ಹಲವಾರು ಸಮಸ್ಯೆಗಳಿಗೆ ಮಾನವೀಯ ಪರಿಹಾರ-ವನ್ನು ಹುಡುಕುವ ಕೆಲಸದಲ್ಲಿ ಗಂಭೀರವಾಗಿ ತೊಡಗಿಕೊಂಡವರಂತೂ ಈ ವಿಚಾರದ ಪ್ರಕ್ರಿಯೆಯನ್ನು ಮೊಟ್ಟಮೊದಲು ಅರ್ಥ ಮಾಡಿಕೊಳ್ಳಲೇಬೇಕು.

ವಿಚಾರ ಎಂದರೇನು? ವಿಚಾರ ಅಸ್ತಿತ್ವಕ್ಕೆ ಹೇಗೆ ಬರುತ್ತದೆ? ವಿಚಾರ ಹಾಗು ಕ್ರಿಯೆಗಳನ್ನು ಒಟ್ಟಿಗೆ ತರಲು ಶಕ್ಯವೆ? ಉದಾ: ನನ-ಗೊಂದು ವಿಚಾರವಿದ್ದು ಅದನ್ನು ಕಾರ್ಯರೂಪಕ್ಕೆ ತರಲಿಚ್ಛಿಸುತ್ತೇನೆ. ಆ ವಿಚಾರವನ್ನು ಕಾರ್ಯರೂಪಕ್ಕೆ ತರಲು ಯಾವ ದಾರಿ ಸೂಕ್ತ ಎಂದು ನಾನು ಹುಡುಕಲಾರಂಭಿಸುತ್ತೇನೆ. ಯಾವ ರೀತಿಯಲ್ಲಿ ಅದನ್ನು ಕಾರ್ಯರೂಪ-ದಲ್ಲಿಳಿಸಬೇಕೆಂಬುದರ ಬಗ್ಗೆ ನಾವು ಜಗಳಾಡಿ ಕಾಲ ವ್ಯಯಿಸುತ್ತೇವೆ. ಆದ್ದ-ರಿಂದ ವಿಚಾರ ಹೇಗೆ ಅಸ್ತಿತ್ವಕ್ಕೆ ಬರುತ್ತದೆ ಎಂದು ನಾವು ತಿಳಿದುಕೊಳ್ಳುವುದು ಅತ್ಯಂತ ಮಹತ್ವದ್ದು. ಅದರ ಸತ್ಯಾಸತ್ಯತೆಯನ್ನು ಕಂಡುಕೊಂಡ ನಂತರವೇ ನಾವು ಕ್ರಿಯೆಯ ಪ್ರಶ್ನೆಯನ್ನು ಚರ್ಚಿಸಬಹುದು. ವಿಚಾರಗಳನ್ನು ಚರ್ಚಿ-ಸದೇ ಕೇವಲ ಕಾರ್ಯರೂಪಕ್ಕೆ ಅಥವಾ ಕ್ರಿಯೆಗೆ ತರುವ ಕ್ರಮದ ಬಗ್ಗೆ ಚರ್ಚಿಸುವುದು ಅರ್ಥಹೀನ. ವಿಚಾರವನ್ನು— ಅದು ತಾತ್ವಿಕ, ಧಾರ್ಮಿಕ, ರಾಜಕೀಯ, ಯಾವುದೂ ಆಗಿರಲೇಬೇಕಾಗಿಲ್ಲ— ಅತ್ಯಂತ ಸಾಮಾನ್ಯ ವಿಚಾರವನ್ನಾದರೂ ನಾವು ಹೇಗೆ ರೂಪಿಸಿಕೊಳ್ಳುತ್ತೇವೆ ಅಥವಾ ಪಡೆದು-ಕೊಳ್ಳುತ್ತೇವೆ? ಅದು ಆಲೋಚನೆಯ ಪ್ರಕ್ರಿಯೆಯಷ್ಟೇ. ವಿಚಾರ ಆಲೋ-ಚನೆಯ ಉತ್ಪತ್ತಿ. ಆಲೋಚನಾ ಪ್ರಕ್ರಿಯೆ ಇರದೇ ವಿಚಾರ ಇರಲು ಶಕ್ಯವಿಲ್ಲ. ಆದ್ದರಿಂದ ಈ ಆಲೋಚನಾ ಪ್ರಕ್ರಿಯೆಯನ್ನೇ ನಾವು ಮೊದಲು ಅರಿತುಕೊಳ್ಳಬೇಕು— ಅದರ ಉತ್ಪತ್ತಿಯಾದಂಥ ವಿಚಾರವನ್ನು ಅರಿಯು-ವುದಕ್ಕಿಂತ ಮೊದಲು. ಆಲೋಚನೆ ಎಂದರೇನು? ಯಾವಾಗ ಆಲೋಚಿ-ಸುವುದು ಇರುತ್ತದೆ? ಆಲೋಚನೆ ಮೂಲತಃ ನರಗಳ ಅಥವಾ ಮನಸ್ಸಿನ ಪ್ರತಿಸ್ಪಂದನೆ. ಯಾವುದೇ ಪ್ರಚೋದನೆಗೆ ತತ್‌ಕ್ಷಣದಲ್ಲೇ ನರಗಳ ಪ್ರತಿ-

ಸ್ಪಂದನೆ ಇರುತ್ತದೆ. ಅಥವಾ ಸಂಗ್ರಹಿತ ಸ್ಮೃತಿಯ ಪ್ರತಿಸ್ಪಂದನೆಯ ರೂ ದಲ್ಲಿ ಮನಸ್ಸಿನ ಪ್ರತಿಸ್ಪಂದನೆ ಇರುತ್ತದೆ. ಅಥವಾ ಗುರು, ಜಾತಿ, ಜನಾಂಗ ಗುಂಪು, ಪರಂಪರೆ, ಕುಟುಂಬ ಇತ್ಯಾದಿಗಳ ಪ್ರಭಾವದ ರೂಪದಲ್ಲೂ ಪ್ರತಿ ಸ್ಪಂದನೆ ಇರುತ್ತದೆ— ಇವೆಲ್ಲವನ್ನೂ ನಾವು ಆಲೋಚನೆ ಎಂದೇ ಹೇಳುತ್ತೇವೆ ಹೀಗೆ ಆಲೋಚನಾ ಪ್ರಕ್ರಿಯೆ ನೆನಪಿನ ಪ್ರತಿಸ್ಪಂದನೆ. ಸ್ಮೃತಿ ಅಥವಾ ನೆನಪು ಇಲ್ಲದಿದ್ದರೆ ಆಲೋಚನೆ ಇರುವುದಿಲ್ಲ. ಕೆಲವು ಅನುಭವಗಳಿಗೆ ನೆನಪಿ ಪ್ರತಿಸ್ಪಂದನೆಯೇ ಆಲೋಚನಾಪ್ರಕ್ರಿಯೆಗೆ ಕ್ರಿಯಾಶೀಲತೆಯನ್ನು ತರುತ್ತದೆ ಉದಾಹರಣೆಗೆ ನನಗೆ ರಾಷ್ಟ್ರೀಯ ಭಾವನೆಯು ನೆನಪಿನಲ್ಲಿ ಸಂಗ್ರಹಿತವಾ- ಗಿದ್ದು, ನಾನು 'ಹಿಂದು' ಎಂದು ಕರೆದುಕೊಳ್ಳುತ್ತೇನೆ. ಈ ಭೂತಕಾಲ ಪ್ರತಿಸ್ಪಂದನೆ, ಕ್ರಿಯೆಗಳು, ಪರಂಪರೆಗಳು, ಸಂಪ್ರದಾಯಗಳು ಇತ್ಯಾದಿಗಳ ನೆನಪಿನ ಸರೋವರವು ಒಬ್ಬ ಮುಸಲ್ಮಾನ ಅಥವಾ ಬೌದ್ಧ ಅಥವಾ ಕ್ರಿಶ್ಚಿ- ಯನ್‌ನ ಸವಾಲಿಗೆ ಪ್ರತಿಸ್ಪಂದನೆಯಾಗಿ ಬರುತ್ತದೆ. ಈ ಬಗೆಯ ಸವಾ- ಲಿಗೆ ನೀಡುವ ಉತ್ತರ ಅನಿವಾರ್ಯವಾಗಿ ವಿಚಾರದ ಪ್ರಕ್ರಿಯೆಯನ್ನು ತರುತ್ತದೆ. ನಿಮ್ಮ ಮನಸ್ಸಿನ ಆಲೋಚನಾಪ್ರಕ್ರಿಯೆಯನ್ನೇ ಗಮನಿಸಿ ಇದರ ಸತ್ಯತೆಯನ್ನು ಪರಿಶೀಲಿಸಬಹುದು. ಯಾರೋ ನಿಮಗೆ ಅವಮಾ ಮಾಡಿದ್ದಾರೆ. ಅದು ನಿಮ್ಮ ಮನಸ್ಸಿನಲ್ಲಿಯೇ ಉಳಿಯುತ್ತದೆ. ಅದು ಹಿನ್ನೆಲೆಯನ್ನು ಸೃಷ್ಟಿಸುತ್ತದೆ. ಆ ವ್ಯಕ್ತಿಯನ್ನು ನೀವು ಭೇಟಿಯಾಗು ಸವಾಲಿಗೆ ಉತ್ತರವಾಗಿ, ಆ ಅವಮಾನದ ನೆನಪು ಬರುತ್ತದೆ. ಹೀಗೆ ನೆನಪಿ ಪ್ರತಿಸ್ಪಂದನೆ, ಅದೇ ಆಲೋಚನೆಯ ಪ್ರಕ್ರಿಯೆ— ವಿಚಾರವನ್ನು ಸೃಷ್ಟಿ- ಸುತ್ತದೆ.

ಆದ್ದರಿಂದ ವಿಚಾರ ನಿರ್ಬಂಧಿತವಾದದ್ದು. ಈ ಅರಿವು ಅತ್ಯಂ ಮಹತ್ವದ್ದು; ವಿಚಾರವು ಆಲೋಚನಾಪ್ರಕ್ರಿಯೆಯ ಪ್ರತಿಫಲ. ಆಲೋಚನ ಪ್ರಕ್ರಿಯೆ ನೆನಪಿನ ಪ್ರತಿಸ್ಪಂದನೆ. ನೆನಪು ಯಾವತ್ತೂ ನಿರ್ಬಂಧಿಸಲ್ಪಟ್ಟದ್ದು ನೆನಪು ಯಾವಾಗಲೂ ಭೂತಕಾಲದ್ದೇ. ಆ ಸ್ಮೃತಿಗೆ ಜೀವದಾನ ಮಾಡಿದ್ದು ಈ ಕ್ಷಣದ ಸವಾಲು. ನೆನಪಿಗೆ ತನದೇ ಆದ ಜೀವವಿಲ್ಲ. ಸವಾಲನ್ನೆದು ರಿಸಿ ನಿಂತಾಗ ಅದಕ್ಕೆ ಜೀವ ಬರುತ್ತದೆ — ವರ್ತಮಾನದಲ್ಲಿ. ಹೀಗೆ ಎ

ತಪ್ಪುಗಳು— ಅವು ಗುಪ್ತವಾಗಿರಲಿ, ಪ್ರಕಟವಾಗಿರಲಿ ನಿರ್ಬಂಧಿತವಾಗಿಯೇ ರುತ್ತವೆ; ಅಲ್ಲವೆ?

ಆದ್ದರಿಂದ, ಅತ್ಯಂತ ಬೇರೆಯದೇ ಆದ ರೀತಿಯಲ್ಲಿ ನಾವು 'ಕ್ರಿಯೆ'ಯ ಸ್ವರೂಪವನ್ನು ನೋಡಬೇಕಾಗಿದೆ. ತಾನು ಒಂದು ವಿಚಾರದ ಮೇಲೆ ಕ್ರಿಯಾ-ಶೀಲನಾಗಿದ್ದೇನೆಯೋ ಅಥವಾ ವಿಚಾರವಿಲ್ಲದೇನೇ ಕ್ರಿಯೆ ಶಕ್ಯವುಂಟೋ ಎನ್ನುವುದನ್ನು ಪ್ರತಿಯೊಬ್ಬನೂ ತನ್ನ ಅಂತರಂಗ ನೋಡಿಯೇ, ನಿರೀಕ್ಷಿಸಿ-ಕೊಂಡೇ ಕಂಡುಕೊಳ್ಳಬೇಕು. ಅದಕ್ಕೂ ಮೊದಲು ವಿಚಾರದ ಆಧಾರವಿರದ ಕ್ರಿಯೆ ಎಂದರೇನು?— ಎನ್ನುವುದನ್ನು ಅರಿಯುವುದು ಸೂಕ್ತ.

ಭೂತಕಾಲದ ಅನುಭವರೂಪಿ ಆಲೋಚನೆಯ ಆಧಾರವಿರುವ ಕ್ರಿಯೆ, ಪರಿಮಿತಿ ಒಡ್ಡುವುದರಿಂದ, ನಿರ್ಬಂಧಿಸಿರುವುದರಿಂದ, ಕಾಲ್ತೊಡಕಾಗಿ ಪರಿ-ಣಮಿಸುತ್ತದೆ. ವಿಚಾರದ ಉತ್ಪತ್ತಿಯಾಗಿರದ ಕ್ರಿಯೆ ತತ್‌ಕ್ಷಣದ್ದಾಗಿರು-ವುದೆ; ಅನುಭವ-ಆಧಾರಿತ ವಿಚಾರದ ಪ್ರಕ್ರಿಯೆ, ಕ್ರಿಯೆಯನ್ನು ನಿಯಂತ್ರಿ-ಸುತ್ತಿರುವುದಿಲ್ಲ. ಅಂದರೆ ಮನಸ್ಸು ಕ್ರಿಯೆಯನ್ನು ನಿಯಂತ್ರಿಸದೇ ಇರು-ವಾಗ ಅನುಭವದಿಂದ ಸ್ವತಂತ್ರವಾದ ಕ್ರಿಯೆ ಇರುತ್ತದೆ— ಎಂಬಾಯಿತು. ಸ್ಥಿತಿಯಲ್ಲಿ ಮಾತ್ರ ಅರಿವಿರುತ್ತದೆ. ಅನುಭವ ಆಧಾರಿತ ಮನಸ್ಸು ಕ್ರಿಯೆಗೆ ಮಾರ್ಗದರ್ಶನ ಮಾಡದೇ ಇರದಂತಹ ಸ್ಥಿತಿ. ಅನುಭವ ಆಧಾರಿತ ವಿಚಾರ, ಕ್ರಿಯೆಯ ಸ್ವರೂಪವನ್ನು ರೂಪಿಸದಂತಹ ಸ್ಥಿತಿ. ಆಲೋಚನಾ ಪ್ರಕ್ರಿಯೆ ಇರದಂತಹ ಕ್ರಿಯೆ ಎಂದರೇನು? ನನಗೆ ಮನೆ ಕಟ್ಟಬೇಕಾಗಿದೆ; ನನಗೆ ಮನೆ ಕಟ್ಟಲು ಬೇಕಾದ ತಂತ್ರಜ್ಞಾನವಿದೆ; ಆ ತಂತ್ರಜ್ಞಾನ ಮನೆ ಕಟ್ಟುವುದು ಹೇಗೆ ಎನ್ನುವುದನ್ನು ನನಗೆ ತಿಳಿಸುತ್ತದೆ. ಅದನ್ನೇ ನಾವು ಕ್ರಿಯೆ ಎಂದು ಕರೆಯುತ್ತೇವೆ. ಅದೇ ತರಹ ಕವಿತೆ ಬರೆಯುವ, ಚಿತ್ರಿಸುವ, ಸರಕಾರದ ಜವಾಬ್ದಾರಿಯನ್ನು ನಿಭಾಯಿಸುವ, ಸಾಮಾಜಿಕ, ಪಾರಿಸರಿಕ ಪ್ರತಿಸ್ಪಂದನೆಗಳೂ ಇವೆ. ಇವೆಲ್ಲವೂ ಹಿಂದಿನ ಅನುಭವ ಅಥವಾ ವಿಚಾರದ ಆಧಾರದ ಮೇಲಿದ್ದು, ಕ್ರಿಯೆಯನ್ನು ರೂಪಿಸುತ್ತವೆ. ಆದರೆ ಹೀಗೆ ವಿಚಾರವೇ ಇರದಂತಹ ಕ್ರಿಯೆ ಶಕ್ಯವೆ?

'ಹೌದು' ಎನ್ನುತ್ತ ಜೆ. ಕೆ. ಅದನ್ನು ಹೀಗೆ ಸ್ಪಷ್ಟಪಡಿಸುತ್ತಾರೆ: ಕ್ರಿಯೆ ಹಾಗು ವಿಚಾರಗಳ ಮಧ್ಯೆ ಒಂದು ಕಂದಕವಿದೆ, ಒಂದು ವಿಭಜನೆ ಇದೆ, ಕಾಲದ ಪ್ರಕ್ರಿಯೆ ಇದೆ. "ನಾನು ಉದಾರನಲ್ಲ, ಪ್ರೀತಿ ತುಂಬಿದವನಲ್ಲ, ನನ್ನ ಹೃದಯದಲ್ಲಿ ಕ್ಷಮಾಗುಣವೇ ಇಲ್ಲ, ಆದರೆ ನಾನು ಉದಾರನಾಗಲೇ ಬೇಕು, ಇತ್ಯಾದಿ ಎಲ್ಲವೂ ನನಗೇ ಪ್ರಬಲವಾಗಿ ಅನಿಸುತ್ತದೆ. ಅಂದರೆ ನಾನು ಇರುವ ಹಾಗು ಇರಬೇಕೆಂದಿರುವ ಸ್ಥಿತಿಗಳ ಮಧ್ಯೆ ಅಂತರವಿದೆ. ಯಾವತ್ತೂ ನಾವು ಈ ಅಂತರವನ್ನು ತುಂಬಲು, ಈ ಕಂದಕಕ್ಕೆ ಸೇತುವೆ ಕಟ್ಟಲು ಪ್ರಯತ್ನಿಸುತ್ತಿರುತ್ತೇವೆ, ಅಲ್ಲವೆ?

ಈಗ, ವಿಚಾರವೇ ಇಲ್ಲದಿದ್ದರೆ ಏನಾಗುತ್ತದೆ? ಒಂದೇ ಹೊಡೆತಕ್ಕೆ ಆ ಅಂತರವನ್ನೇ ತೆಗೆದುಹಾಕಿಬಿಡಬಹುದು, ಅಲ್ಲವೆ? ನೀವು ಏನಿದ್ದೀರೋ, ಅದೇ ಆಗಿಬಿಡುವುದು. ನೀವು 'ನಾನು ಕುರೂಪಿ; ನಾನು ಸುಂದರಾಂಗ-ನಾಗಬೇಕು, ನಾನೇನು ಮಾಡಲಿ?" ಎಂದು ಪ್ರಶ್ನಿಸುವಾಗ ನಿಮ್ಮ ಕ್ರಿಯೆ ವಿಚಾರವನ್ನು ಆಧರಿಸಿಕೊಂಡಿರುತ್ತದೆ. "ನಾನು ದಯಾರ್ದ್ರಹೃದಯಿ ಅಲ್ಲ; ನಾನು ದಯಾರ್ದ್ರ ಹೃದಯಿ 'ಆಗಬೇಕು' ಎಂದು ಹೇಳುತ್ತೀರಿ. ಆದ್ದರಿಂದ ಕ್ರಿಯೆಗಿಂತ ಭಿನ್ನವಾದ ವಿಚಾರವನ್ನು ತರುತ್ತೀರಿ. ತನ್ಮೂಲಕ ಯಾವತ್ತೂ ನೀವು ಏನಿದ್ದೀರೋ ಅದರ ಮೇಲೆ ಆಧಾರಿತವಾದ ಕ್ರಿಯೆ ಇರದೇ, ನೀವೇನು ಆಗಬೇಕು ಎಂಬುದಾಗಿ ನಿಮ್ಮ ಆದರ್ಶವಿರುತ್ತದೆಯೋ ಆ ವಿಚಾರದ ಮೇಲೆಯೇ ಕ್ರಿಯೆ ಇರುತ್ತದೆ. ಮೂರ್ಖ ಮನಸ್ಸು ಯಾವಾಗಲೂ ತಾನು ಜಾಣನಾಗ-ಲಿದ್ದೇನೆ ಎಂದೇ ಹೇಳುತ್ತಿರುತ್ತದೆ. ಆತ ಹಾಗೆ 'ಆಗಲು' ಸದಾ ಹೋರಾಡುತ್ತ, ಕೆಲಸ ಮಾಡುತ್ತಲೇ ಇರುತ್ತಾನೆ; 'ನಾನು ಮೂರ್ಖ' ಎಂದು ಆತ ಎಂದೂ ಹೇಳುವುದಿಲ್ಲ. ಆದ್ದರಿಂದ ಆತನ ಕೆಲಸ ಅಥವಾ ಕ್ರಿಯೆ ವಿಚಾರದ ಮೇಲೆಯೇ ಅವಲಂಬಿಸಿಕೊಂಡಿರುವುದರಿಂದ ನಿಜವಾದ ಕ್ರಿಯೆ ಅಲ್ಲ.

'ಕ್ರಿಯೆ' ಎಂದರೆ 'ಮಾಡುತ್ತಿರುವುದು' 'ಚಲಿಸುತ್ತಿರುವುದು'. ಆದರೆ ನಿಮ್ಮಲ್ಲಿ ಯಾವಾಗ ವಿಚಾರವಿರುತ್ತದೆಯೋ, ಆಗ ಅದು ಕ್ರಿಯೆಗೆ ಸಂಬಂಧಪಟ್ಟಂತೆ ಮುಂದುವರಿಯುತ್ತಿರುವ ವಿಚಾರೀಕರಣ, ವಿಚಾರ-

ಪ್ರಕ್ರಿಯೆಯ ನಿರಂತರತೆ. ವಿಚಾರವೇ ಇಲ್ಲದಿದ್ದಾಗ ಏನಾಗುತ್ತದೆ ? ನೀವೇ-ನಿದ್ದೀರೋ ಅದೇ ಇರುತ್ತೀರಿ. ನೀವು ಔದಾರ್ಯಹೀನರು, ಕ್ಷಮಾಹೀನರು, ಕ್ರೂರಿಗಳು, ಮೂರ್ಖರು, ವಿಚಾರಹೀನರು, ಇದ್ದೀರೆಂದು ಇಟ್ಟುಕೊ-ಳ್ಳುವಾ. ಈಗ ಅದರೊಂದಿಗೆ, ಆ ವಸ್ತುಸ್ಥಿತಿ ಸತ್ಯದೊಂದಿಗೇ ನೀವು ಇರಲು ಶಕ್ಯವೆ ? ನಾನು ಔದಾರ್ಯಹೀನ, ಮೂರ್ಖ ಇತ್ಯಾದಿಗಳನ್ನು ಗುರುತಿಸಿ, ನಿಜಕ್ಕೂ ನಾನು ಅರಿತಾಗ ಏನಾಗುತ್ತದೆ ? ನಾನು ನಿಜಕ್ಕೂ ಔದಾರ್ಯ-ಹೀನ, ಪ್ರೇಮಹೀನ ಎನ್ನುವುದನ್ನು ಶಾಬ್ದಿಕವಾಗಿಯಲ್ಲ, ಕೃತಕವಾಗಿ-ಯಲ್ಲ, ಇದ್ದಿರುವ ವಸ್ತುಸ್ಥಿತಿರೂಪದ ಸತ್ಯವನ್ನು ಗ್ರಹಿಸಿ, ನಿಜಕ್ಕೂ ಅರಿತಾಗ, ಆ ಅರಿವಿನಲ್ಲೇ ಪ್ರೇಮವಿರುತ್ತದೆ, ಅಲ್ಲವೆ ? ಯಾವಾಗ ಪ್ರೇಮ ಇರುತ್ತದೆಯೋ, ಆಗ ವಿಚಾರವಿರುವುದಿಲ್ಲ; ಪ್ರೇಮ ನೆನಪಲ್ಲ; ಒಂದು ಅನು-ಭವವಲ್ಲ. ಪ್ರೇಮಿಸುವ ವ್ಯಕ್ತಿಯ ಬಗ್ಗೆ ಆಲೋಚಿಸುವುದೂ ಅಲ್ಲ. ಈ ಪ್ರೇಮ ಇರುವ ಕ್ಷಣದಲ್ಲೇ ನಾನು ಉದಾರನಾಗುತ್ತೇನೆ, ಕ್ರಿಯಾ-ಶೀಲನಾಗುತ್ತೇನೆ. ನಾನು ಸ್ವಚ್ಛನಾಗಿರಬೇಕಾದುದರ ಆವಶ್ಯಕತೆ ಕಂಡಾಗ ನಾನೇನು ಮಾಡುತ್ತೇನೆ ? ಉತ್ತರ ಸರಳ ಅಲ್ಲವೆ ? ಎದ್ದು ಹೊರಟು ಹೋಗಿ ಹೊಲಸನ್ನು ತೊಳೆದುಕೊಂಡು, ಸ್ವಚ್ಛವಾಗಿ ಬರುತ್ತೇನೆ. ಆದರ ಬದಲು ಸ್ವಚ್ಛತೆಯಿಂದಿರುವುದು ಒಂದು ಆದರ್ಶವಾಗಿಬಿಟ್ಟಾಗ ಏನಾಗುತ್ತದೆ? ಸ್ವಚ್ಛತೆಯ ಕ್ರಿಯೆಯನ್ನು ಮುಂದೆ ಹಾಕುತ್ತೇವೆ ಅಥವಾ ಅತ್ಯಂತ ಮೇಲು-ಮೇಲಿನ ಸ್ವಚ್ಛತೆ ಇಟ್ಟುಕೊಳ್ಳುತ್ತೇವೆ.

ಹೀಗೆ ಪ್ರೇಮ ಅಥವಾ ಪ್ರೀತಿ ಇರುವಾಗ ಮಾತ್ರ 'ಕ್ರಿಯೆ' (Action) ಇರುತ್ತದೆ. ಆ ಕ್ರಿಯೆಯು ಬಿಡುಗಡೆ ಮಾಡುವಂತಹದು. ಆ ಕ್ರಿಯೆ ಮನಸ್ಸಿನ ಫಲವಲ್ಲ. ಕ್ರಿಯೆ ಹಾಗು ವಿಚಾರಗಳ ಮಧ್ಯೆ ಅಂತರ ಇರುವ ಹಾಗೆ, ಪ್ರೇಮ ಮತ್ತು ಕ್ರಿಯೆಗಳ ಮಧ್ಯೆ ಅಂತರವಿಲ್ಲ. ವಿಚಾರ ಯಾವತ್ತೂ ಹಿಂದಿನದೇ. ಅದು ವರ್ತಮಾನದ ಮೇಲೆ ತನ್ನ ನೆಳಲನ್ನು ಚೆಲ್ಲುತ್ತದೆ. ನಾವು ಆ ಕ್ರಿಯೆ ಹಾಗು ವಿಚಾರಗಳ ಮಧ್ಯೆ ಸೇತುವೆ ನಿರ್ಮಿಸಲು ಯತ್ನಿಸುತ್ತಿರು-ತ್ತೇವೆ. ಯಾವಾಗ ಪ್ರೀತಿ ಅಥವಾ ಪ್ರೇಮ— ಮನಸ್ಸಿನ ಉತ್ಪತ್ತಿಯಲ್ಲದ, ವಿಚಾರದ ಫಲವಲ್ಲದ, ಅನುಭವದ ಕೂಸಲ್ಲದ, ಅನುಷ್ಠಾನ ಮಾಡಿದ ಶಿಸ್ತಿನ ಫಲವಲ್ಲದ— ಪ್ರೀತಿ ಇರುತ್ತದೆಯೋ, ಅದೇ ಕ್ರಿಯೆಯಾಗಿರುತ್ತದೆ. ಈ

ಕ್ರಿಯೆ ಮಾತ್ರ ಬಿಡುಗಡೆಗೊಳಿಸುವಂತಹದು. ಎಲ್ಲಿಯ ವರೆಗೆ ಮಾನಸಿಕತೆ, ಅನುಭವ, ವಿಚಾರಗಳ ಮೂಲಕ ಕ್ರಿಯೆಯನ್ನು ರೂಪಿಸುವದಿರುತ್ತದೆಯೋ, ಅಲ್ಲಿಯ ವರೆಗೂ ಬಿಡುಗಡೆಯಿಲ್ಲ.

ನಾವು ಮನುಷ್ಯರಾಗುವಂತೆ ಪರಿವರ್ತನೆ ತರುವಂಥ ಕ್ರಿಯೆ—ವಿಮೋಚನೆ, ಪುನರುಜ್ಜೀವನ, ಪರಿವರ್ತನೆ – ಅಥವಾ ಯಾವುದೇ ಹೆಸರಿನಿಂದ ಕರೆಯಿರಿ— ಅಂಥ ಕ್ರಿಯೆ ವಿಚಾರದ ಮೇಲೆ ಅವಲಂಬಿತವಾಗಿರುವುದಿಲ್ಲ. ಬಹುಮಾನ ಅಥವಾ ದಂಡನೆಗಳಿಗೆ ಅಲಿಪ್ತವಾಗಿರುವಂಥ ಕ್ರಿಯೆ ಅದು. ಆ ಕ್ರಿಯೆ ಅಥವಾ ಕೆಲಸ ಕಾಲಾತೀತವಾದಂಥಾದ್ದು. ಏಕೆಂದರೆ ಆ ಕ್ರಿಯೆಯಲ್ಲಿ ಮನಸ್ಸು— ಕಾಲದ ಪ್ರಕ್ರಿಯೆಯಾದಂಥ, ಲೆಕ್ಕಾಚಾರ, ವಿಭಜನೆ, ಬೇರ್ಪಡಿಸುವಿಕೆ ಮುಂತಾದ ರೂಪದ ಪ್ರಕ್ರಿಯೆಯಾದಂಥ ಮನಸ್ಸು— ಆ ಕ್ರಿಯೆಯಲ್ಲಿ ಪ್ರವೇಶಿಸುವುದೇ ಇಲ್ಲ.

* * *

೧೫. ತನ್ನನ್ನು ತಾನು ಅರಿತುಕೊಳ್ಳುವುದು

ಈ ಜಗತ್ತಿನ ಸಮಸ್ಯೆಗಳು ಎಷ್ಟು ಬೃಹದಾಕರವೂ, ಸಂಕೀರ್ಣವೂ ಆಗಿವೆ ಎಂದರೆ, ಅವುಗಳನ್ನು ಅರಿಯಲು ಹಾಗು ಪರಿಹರಿಸಲು ನಾವು ಅವನ್ನು ಅತ್ಯಂತ ನೇರವಾಗಿ ಹಾಗು ಸರಳವಾಗಿ ಪರಿವೀಕ್ಷಿಸಬೇಕಾಗಿದೆ. ಈ ನೇರತೆ, ಸರಳತೆ ಬಾಹ್ಯ ಸಂಗತಿಗಳನ್ನು ಅವಲಂಬಿಸಿದ್ದಲ್ಲ. ನಮ್ಮ ವಿಶಿಷ್ಟ ಪೂರ್ವ-ಗ್ರಹ ಹಾಗು ಭಾವಸ್ಥಿತಿಗಳನ್ನು ಅವಲಂಬಿಸಿದ್ದಲ್ಲ. ಈ ಹಿಂದೆ ಹೇಳಿರು-ವಂತೆ ಸಂಕಿರಣ, ಸಮ್ಮೇಳನಗಳ ಮೂಲಕ, ಹಳೆಯ ನೇತಾರರ ಸ್ಥಳದಲ್ಲಿ ಹೊಸ ನೇತಾರರನ್ನು ತಂದು ಅನುಸರಿಸುವುದರ ಮೂಲಕ, ವಿಶಿಷ್ಟ ನೀತಿ-ನಿಯಮಾದಿಗಳನ್ನು ಅನುಸರಿಸುವುದರ ಮೂಲಕ ಸಾಧ್ಯವಾಗುವಂತಹದಲ್ಲ, ಸಮಸ್ಯೆಯನ್ನು ಸೃಷ್ಟಿಸುವವನಲ್ಲೇ, ಕುಚೋದ್ಯದ ಕರ್ತಾರನಲ್ಲೇ, ಮಾನವ-ರಲ್ಲಿ ಅಗಾಧವಾಗಿ ಬೆಳೆದಿರುವ ತಪ್ಪು ತಿಳಿವಳಿಕೆ, ದ್ವೇಷಗಳನ್ನು ಸೃಷ್ಟಿಸುವ ಮೂಲದಲ್ಲೇ ಸಮಸ್ಯೆಗಳಿಗೆ ಪರಿಹಾರವಿದೆ. ಅವುಗಳ ಸೃಷ್ಟಿಕರ್ತರು ನಾವು; ಸಾಮಾನ್ಯವಾಗಿ ತಿಳಿದುಕೊಂಡಿರುವಂತೆ ಜಗತ್ತಲ್ಲ. ನೀವು-ನಾನು, ಮತ್ತೊಬ್ಬ ಇತ್ಯಾದಿ ವ್ಯಕ್ತಿಗಳು. ಇನ್ನೊಬ್ಬನೊಂದಿಗಿನ ನಿಮ್ಮ ಸಂಬಂಧವೇ ಜಗತ್ತು. ನಿಮ್ಮ ಹಾಗು ನನ್ನಿಂದ ಬೇರೆಯಾಗಿ ಪ್ರಪಂಚವಿಲ್ಲ. ಈ ಪ್ರಪಂಚ, ಈ ಸಮಾಜವೆಂದರೆ ನಾವು-ನೀವು ಪರಸ್ಪರ ಸ್ಥಾಪಿಸಿರುವ ಅಥವಾ ಸ್ಥಾಪಿಸ-ಲಿಚ್ಛಿಸಿರುವ ಸಂಬಂಧಗಳು.

ಆದ್ದರಿಂದ ಸಮಸ್ಯೆ ಈ ಜಗತ್ತಲ್ಲ; ನೀವು-ನಾನು. ಏಕೆಂದರೆ ನಮ್ಮೊಳಗಿನ ಬಹಿರಂಗವೇ ಈ ಜಗತ್ತು. ಆದ್ದರಿಂದ ಈ ಜಗತ್ತನ್ನು ಅರಿಯ-ಬೇಕೆಂದರೆ ನಮ್ಮನ್ನೇ ನಾವು ಅರಿತುಕೊಳ್ಳಬೇಕು. ನಮ್ಮಿಂದ ಜಗತ್ತು ಬೇರೆಯಾಗಿಲ್ಲ. ನಾವೇ ಜಗತ್ತು; ಈ ನಮ್ಮ ಸಮಸ್ಯೆಗಳೇ ಜಗತ್ತಿನ ಸಮಸ್ಯೆಗಳು. ನಾವು ಮಾನಸಿಕವಾಗಿ ಎಷ್ಟು ನಿಶ್ಚಿಬಡಕನೆಂದರೆ, ಈ

ವಾಸ್ತವ ಸತ್ಯವನ್ನು ಪದೇ–ಪದೇ ಹೇಳುತ್ತಿದ್ದರೂ, ನಾವದನ್ನು ಅರಿತು-ಕೊಳ್ಳದೆ, "ಈ ಜಗತ್ತಿನ ಸಮಸ್ಯೆ ನಮ್ಮದಲ್ಲ; ಅದನ್ನು ಬಗೆಹರಿಸುವವರು 'ಸಂಯುಕ್ತ ರಾಷ್ಟ್ರಸಂಸ್ಥೆ'ಯವರು ಅಥವಾ ಹೊಸ ನೇತಾರರನ್ನು ಹಳೆಯ ನೇತಾರರ ಜಾಗದಲ್ಲಿ ತಂದರೆ ಆಗುವಂತಹದು" ಎಂದೆಲ್ಲ ಭಾವಿಸುತ್ತಿರುತ್ತೇವೆ. ಹಾಗೆ ಚಿಂತಿಸುವುದು ದಡ್ಡತನ; ಏಕೆಂದರೆ ನಮ್ಮ ಸುತ್ತಲಿನ ದಿಗ್ಭ್ರಮೆ ಹುಟ್ಟಿಸುವ ಯಾತನೆಗೆ, ಗೊಂದಲಗಳಿಗೆ, ಯುದ್ಧದ ಭೀತವಾತಾವರಣ ಉತ್ಕಟವಾಗುತ್ತಿರುವುದಕ್ಕೆ ನಾವೇ ಜವಾಬ್ದಾರರು. ಜಗತ್ತನ್ನು ಬದ-ಲಾಯಿಸಲು ನಾವು ನಮ್ಮಿಂದಲೇ ಆರಂಭಿಸಬೇಕು. ಈ ಆರಂಭದಲ್ಲಿ ಮುಖ್ಯ-ವಾದದ್ದು ನಮ್ಮ ಉದ್ದೇಶ. ಆ ಉದ್ದೇಶ ನಮ್ಮನ್ನು ನಾವೇ ಅರ್ಥ ಮಾಡಿ ಕೊಳ್ಳಬೇಕು; ಹೊರತು ನಮ್ಮನ್ನು ಬದಲಾಯಿಸಲು ಬೇರೆಯವರಿಗೆ—ಎಡ ಪಂಥೀಯರಿಗೋ, ಬಲ ಪಂಥೀಯರಿಗೋ ಅಥವಾ ಇನ್ನಾರಿಗೋ ಅವಕಾಶ ನೀಡಿ, ಜಗತ್ತಿನ ಬದಲಾವಣೆಗೆ ಕಾಯುತ್ತಿರಬಾರದು ಎಂಬುದು. ಇದು ನಮ್ಮ, ನಿಮ್ಮ ಹಾಗು ನನ್ನ—ಜವಾಬ್ದಾರಿ ಎಂದು ತಿಳಿದುಕೊಳ್ಳುವುದು ಅತ್ಯಂತ ಮಹತ್ವದ್ದು. ಏಕೆಂದರೆ ನಾವು ಬದುಕುತ್ತಿರುವ ಜಗತ್ತು ಎಷ್ಟೇ ಚಿಕ್ಕದಿರಲಿ, ನಮ್ಮನ್ನು ನಾವು ಪರಿವರ್ತನೆಗೊಳಿಸಿಕೊಳ್ಳಬಲ್ಲೆವಾದರೆ, ನಮ್ಮ ದೈನಂದಿನ ಅಸ್ತಿತ್ವದಲ್ಲಿ, ಬದುಕಿನಲ್ಲಿ, ಮೂಲಭೂತವಾದ, ಬೇರೆಯದೇ ಆದ ದೃಷ್ಟಿಕೋನವನ್ನು ಹೊಂದಬಲ್ಲೆವಾದರೆ ಬಹುಶಃ ಹೊರಗಿನ ವಿಶಾಲವಾದ ಪ್ರಪಂಚದಲ್ಲೂ ಪರಿಣಾಮ ಚೆಲ್ಲಬಹುದು— ಇನ್ನೊಬ್ಬರೊಂದಿಗೆ ವಿಸ್ತೃತಗೊಂಡ ನಮ್ಮ ಸಂಬಂಧಗಳ ಮೂಲಕ.

ನಮ್ಮನ್ನು ನಾವು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯನ್ನು ಕಂಡು ಹಿಡಿಯುವ ಪ್ರಯತ್ನ ಎಂದರೆ ಬೇರ್ಪಡುವ ಪ್ರಕ್ರಿಯೆ ಅಲ್ಲ; ಈ ಜಗತ್ತಿ-ನಿಂದ ಹಿಂದೆ ಸರಿಯುವ ಪ್ರಕ್ರಿಯೆಯೂ ಅಲ್ಲ. ಯಾಕೆಂದರೆ ಬೇರ್ಪಟ್ಟುಕೊಂಡೇ ನಾವು ಬದುಕಲು ಶಕ್ಯವಿಲ್ಲ. ಇರುವುದು ಎಂದರೆ ಸಂಬಂಧಗಳ ಮೂಲಕ ಇರುವುದು; ಬೇರ್ಪಟ್ಟಿರುವುದು ಎಂಬುದು ಇಲ್ಲವೇ ಇಲ್ಲ. ಸಂಘರ್ಷ, ಯಾತನೆ, ಹೋರಾಟ ಬರುವುದಕ್ಕೆ ಕಾರಣವೆಂದರೆ ಯೋಗ್ಯವಾದ ಸಂಬಂಧದ ಕೊರತೆ. ನಮ್ಮ ಜಗತ್ತು ಎಷ್ಟೇ ಸಣ್ಣದಿದ್ದರೂ, ನಮ್ಮ ಸಂಬಂಧಗಳನ್ನು

ಸಂಕ್ಷಿಪ್ತ ಜಗತ್ತಿನಲ್ಲಿಯೇ ಬದಲಿಸಬಲ್ಲೆವಾದರೆ, ಅದು ಕಾಲದಲ್ಲಿ ಸದಾ ಮುರ್ಖಿಯಾಗಿ ವಿಸ್ತರಿಸುತ್ತಲೇ ಹೋಗುವ ಸಣ್ಣ ಅಲೆಯಂತೆ. ನಿಜವಾದ ಂತಿ ಯಾವ ಸಿದ್ಧಾಂತ ಸೂತ್ರಗಳಿಗೆ—ಎಡ, ಬಲ, ಇತ್ಯಾದಿ—ಅನುಗುಣ- ಗಿ ಇರುವಂತಹದಲ್ಲ. ಅದು ಮೌಲ್ಯಗಳ ಕ್ರಾಂತಿ; ಇಂದ್ರಿಯತೃಪ್ತಿಯೇ ಧಾನವಾದ ಮೌಲ್ಯಗಳಿಗಿಂತ, ಅದಿಲ್ಲದ ಮೌಲ್ಯಗಳ ಕಡೆ, ಪರಿಸರದ ಪ್ರಭಾವ ಂದ ಸೃಷ್ಟಿಗೊಂಡಂತಹದಲ್ಲದರ ಕಡೆ ಈ ಮೂಲಭೂತ ಕ್ರಾಂತಿ. ಬದಲಾವಣೆ ವಂತಹ ಈ ನಿಜವಾದ ಮೌಲ್ಯಗಳ ಶೋಧಕ್ಕೆ ತನ್ನನ್ನು ತಾನು ಅರಿತು- ಳ್ಳುವುದು ಅತ್ಯಂತ ಅವಶ್ಯ. ತನ್ನನ್ನು ತಾನು ಅರಿಯುವುದರಿಂದಲೇ ಂಭ ಧೀಮಂತಿಕೆ. ಆದ್ದರಿಂದ ಅದೇ ಬದಲಾವಣೆಯ, ಪುನರುಜ್ಜೀವನದ ಂಭ. ತನ್ನನ್ನು ತಾನು ಅರಿಯುವುದಕ್ಕೆ ಆ ಅರಿಯುವ ಉದ್ದೇಶವಿರಬೇಕು. ೇ ಕಷ್ಟ ಬರುವುದು.

ನಮ್ಮಲ್ಲಿ ಹೆಚ್ಚು ಜನರು ಅತೃಪ್ತಿಗೊಂಡಿದ್ದರೂ ನಾವು ಬಯಸುವುದು ಕ್ಷಣದ ಬದಲಾವಣೆ. ನಮ್ಮ ಅತೃಪ್ತಿ ಒಂದು ವಿಶಿಷ್ಟ ಫಲಿತಾಂಶದ ಧನೆಯ ದಿಶೆಯಲ್ಲಿ ಹರಿಯುತ್ತಿರುತ್ತದೆ. ಅತೃಪ್ತಿಗೊಂಡವರು ಬೇರೆ ಧಂದೆ ಹುಸುತ್ತೇವೆ; ಇಲ್ಲವೆ ಪರಿಸರಕ್ಕೆ ಬಲಿಯಾಗುತ್ತೇವೆ. ನಮ್ಮ ಅತೃಪ್ತಿ ಮ್ಮಲ್ಲಿ ಜ್ವಾಲೆ ಹೊತ್ತಿಸಿ, ಬದುಕನ್ನು ಪ್ರಶ್ನಿಸುವ, ಅಸ್ತಿತ್ವದ ಸಮಗ್ರ ಕ್ರಿಯೆಯನ್ನೇ ಪ್ರಶ್ನಿಸುವ ಬದಲು, ಅದನ್ನು ಒಂದು ದಾರಿಯಲ್ಲಿ ಹರಿಯ- ಟ್ಟು ನಾವು ಅತ್ಯಂತ ಸಾಮಾನ್ಯರಾಗಿಬಿಡುತ್ತೇವೆ. ಬದುಕಿನ ಸಮಗ್ರ ಕ್ರಿಯೆಯನ್ನೇ ಅನ್ವೇಷಿಸುವ ಆ ಉತ್ಕಟತೆಯನ್ನೇ ಕಳೆದುಕೊಂಡು ುತ್ತೇವೆ. ಆದ್ದರಿಂದ ಇವೆಲ್ಲವನ್ನೂ ನಾವೇ ಶೋಧಿಸಿ, ಅರಿಯುವುದು ್ಯಂತ ಮಹತ್ವದ್ದು; ಏಕೆಂದರೆ ಯಾರಿಗೂ ತನ್ನ ಬಗ್ಗೆ ಅರಿವನ್ನು ಬೇರೆಯ- ರು ನೀಡಲಾರರು. ಕೆಲವು ಪುಸ್ತಕಗಳಿಂದಲೂ ಇದನ್ನು ನಾವು ಪಡೆಯ- ರೆವು. ನಾವು ಅನ್ವೇಷಿಸಲೇ ಬೇಕು. ಆ ಅನ್ವೇಷಣೆಗೆ ಆ ಗುರಿ, ಶೋಧ, ಾರಣೆ ಇರಬೇಕಾಗುತ್ತದೆ. ಎಲ್ಲಿಯ ವರೆಗೆ ಆ ಹುಡುಕಾಟ, ಶೋಧ, ್ದೇಶ; ಆಳವಾಗಿರದೇ, ದುರ್ಬಲವಾಗಿದ್ದು ಅಥವಾ ಕೇವಲ ಬಾಯಿ- ತಿನಹಂತಹದಲ್ಲ, ಮೇಲೆಮೇಲೆ ಮಾತ್ರ ಇರುತ್ತದೆಯೋ, ಅಲ್ಲಿಯ

ವರೆಗೆ ತನ್ನನ್ನು ತಾನು ಅರಿಯುವ ಉದ್ದೇಶಕ್ಕೆ ಯಾವ ಅರ್ಥವೂ ಇರುವು ದಿಲ್ಲ.

ಹೀಗೆ ಜಗತ್ತಿನ ಬದಲಾವಣೆ ತನ್ನನ್ನು ತಾನು ಬದಲಾಯಿಸಿಕೊಳ್ಳು-ವುದರಲ್ಲಿದೆ. ಯಾಕೆಂದರೆ ಈ ' ನಾನು ' ಎನ್ನುವುದು ಮನುಷ್ಯನ ಅಸ್ತಿತ್ವದ ಸಮಗ್ರ ಪ್ರಕ್ರಿಯೆಯ ಉತ್ಪನ್ನ ಹಾಗು ಅದರದೇ ಅವಿಭಾಜ್ಯ ಅಂಗ. ತನ್ನನ್ನು ತಾನು ಬದಲಾಯಿಸಿಕೊಳ್ಳಲು ಆತ್ಮದ ಅರಿವು ತುಂಬ ಅವಶ್ಯ. ನೀವು ಏನು ಎನ್ನುವುದರ ಅರಿವಿಲ್ಲದೇ, ಸರಿಯಾದ ಚಿಂತನೆಗೆ ಆಧಾರವೇ ಇರುವುದಿಲ್ಲ; ನಿಮ್ಮನ್ನು ನೀವು ಅರಿಯದೇ ಬದಲಾವಣೆ, ಪರಿವರ್ತನೆ ಶಕ್ಯವಿಲ್ಲ. ತನ್ನನ್ನು ತಾನು ಇದ್ದಂತೆಯೇ ಅರಿತುಕೊಳ್ಳಬೇಕೇ ಹೊರತು, ತಾನು ಇರಬೇಕೆಂದು ಇಚ್ಛಿಸಿದ ರೀತಿಯಲ್ಲಲ್ಲ. ತಾನು ಇರಬೇಕಾಗಿತ್ತೆಂದು ಬಯಸಿದ ರೀತಿಯೆಂದರೆ ಆದರ್ಶ. ಅಂದರೆ ಅವಾಸ್ತವ ಕಲ್ಪನೆ. ಇದ್ದುದನ್ನು ಬದಲಾಯಿಸಬಹು-ದಲ್ಲದೇ, ನೀವು ಇರಬೇಕಾಗಿತ್ತೆಂದು ಇಚ್ಛಿಸಿದ್ದನ್ನು ಬದಲಾಯಿಸಲು ಶಕ್ಯವಿಲ್ಲ. ತನ್ನನ್ನು ತಾನು ಇದ್ದ ಹಾಗೇ ಅರಿತುಕೊಳ್ಳಲು ಅಸಾಧಾರಣವಾದ ಮಾನ-ಸಿಕ ಚುರುಕುತನ ಬೇಕಾಗುತ್ತದೆ. ಏಕೆಂದರೆ ಏನು ' ಇದೆಯೋ ' ಅದು ಸದಾ ಬದಲಾಗುತ್ತಲೇ, ಪರಿವರ್ತನೆಹೊಂದುತ್ತಲೇ ಇರುತ್ತದೆ. ಅದನ್ನು ಹಿಂಬಾಲಿಸುವಲ್ಲಿ ಮನಸ್ಸು ಯಾವುದೇ ವಿಶಿಷ್ಟ ಶ್ರದ್ಧೆ-ನಂಬಿಕೆಗಳಿಗೆ ಕಟ್ಟು ಬೀಳದೇ, ಯಾವುದೇ ವಿಶಿಷ್ಟ ಬಗೆಯ ಕ್ರಿಯೆ-ಮಾದರಿಗೆ ಕಟ್ಟುಬೀಳದೇ ಇರಬೇಕು. ನಿಮ್ಮನ್ನೇ ನೀವು ಅರಿತುಕೊಳ್ಳಲು ಮಾನಸಿಕ ಎಚ್ಚರ, ಜಾಗ್ರತಿ ಇರಲೇ ಬೇಕು. ಅಸಾಧಾರಣವಾದ ಮಾನಸಿಕ ಚುರುಕುತನ ಇದ್ದಾಗ ಮಾತ್ರ ಎಲ್ಲ ಬಗೆಯ ನಂಬಿಕೆ, ಆದರ್ಶೀಕರಣಗಳಿಂದ ಮನಸ್ಸಿಗೆ ಬಿಡುಗಡೆ ಸಿಗುತ್ತದೆ. ಏಕೆಂದರೆ ಈ ನಂಬಿಕೆ, ಆದರ್ಶಗಳೆಲ್ಲ ಸತ್ಯಗ್ರಹಣವನ್ನು ವಿಕೃತಗೊಳಿಸಿ, ತಮ್ಮ ಬಣ್ಣವನ್ನೇ ಅವಕ್ಕೆ ಲೇಪಿಸುತ್ತವೆ. ನಿಮಗೆ, ನೀವೇನಿದ್ದೀರಿ ಎನ್ನು-ವುದನ್ನು ಅರಿಯುವ ಇಚ್ಛೆ ಇರುವಾಗ, ನೀವು ಅಲ್ಲದಂತಹದರ ಬಗ್ಗೆ ನಿಮ್ಮ ಕಲ್ಪನೆ, ನಂಬಿಕೆ ಇಟ್ಟುಕೊಳ್ಳಲು ಶಕ್ಯವಾಗುವುದಿಲ್ಲ. ನಾನು ಆಸೆಬುರುಕ ಅಥವಾ ಅಸೂಯಾಪರ ಅಥವಾ ಹಿಂಸೆಕೊಡುವ ವ್ಯಕ್ತಿ ಆಗಿರುವಾಗ, ಆಸೆಬುರುಕನಲ್ಲದ, ಹಿಂಸೆಮಾಡದ ಆದರ್ಶ ಇಟ್ಟುಕೊಂಡರೆ ಏನೂ ಪ್ರಯೋ-ಜನವಿಲ್ಲ. ಆದರೆ ತಾನು ಆಶೆಬುರುಕ ಅಥವಾ ಹಿಂಸೆ ಕೊಡುವಂಥ ವ್ಯಕ್ತಿ

ಎಂದು ಅರಿತುಕೊಳ್ಳಲು ಅತ್ಯಂತ ಅಸಾಧಾರಣವಾದ ಗ್ರಹಣಶಕ್ತಿ ಬೇಕಷ್ಟೇ. ಂಥ ಅರಿವಿಗೆ ಪ್ರಾಮಾಣಿಕತೆ ಬೇಕು. ವಿಚಾರ-ಸ್ಪಷ್ಟತೆ ಬೇಕು. ಅದಕ್ಕೆ ದ್ವಿರುದ್ಧವಾಗಿ ಆದರ್ಶದ ಬೆನ್ನುಹತ್ತುವದೆಂದರೆ-ಏನು ಇದೆಯೋ ' ಸದ್ಯ ಪ್ರತ್ಯಕ್ಷ 'ವಾದುದರಿಂದ ಪಲಾಯನ ಮಾಡುವುದು. ಈ ಆದರ್ಶ, ಈ ಪಲಾಯನ, ಆತನ ಶೋಧವನ್ನು. ಆ ಆತ್ಮಶೋಧದ ಮೇಲೆಯೇ ನೇರವಾಗಿ ನಡೆದುಕೊಳ್ಳುವುದನ್ನು ಪ್ರತಿಬಂಧಿಸುತ್ತದೆ.

ನಿಮ್ಮನ್ನು ನೀವು ಇದ್ದ ಹಾಗೇ ಅರಿತುಕೊಳ್ಳುವುದು— ಕುರೂಪಿಯೋ, ಸುಂದರಾಂಗನೋ, ಕೆಟ್ಟವನೋ, ಒಳ್ಳೆಯವನೋ, ದುಷ್ಟನೋ— ಹೇಗೇ ಇರಲಿ-ಇದ್ದ ಹಾಗೇ ಇದ್ದುದನ್ನು ವಿಕೃತಗೊಳಿಸದೇ, ಅರಿತುಕೊಳ್ಳುವುದೇ ಸದ್ಗುಣದ ಆರಂಭ. ಈ ಸದ್ಗುಣ ಬಿಡುಗಡೆ ನೀಡುವುದರಿಂದ ಅತ್ಯಂತ ಅವಶ್ಯವಾದದ್ದು. ಈ ಸದ್ಗುಣದಲ್ಲಿ ನಿಮ್ಮನ್ನು ನೀವು ಕಾಣಬಹುದು, ಎದುಕಬಹುದು; ಕೇವಲ ಗೌರವ ತರುವಂತಹ, ಅರಿವು, ಮತ್ತು ಸ್ವಾತಂತ್ರ್ಯ ಗಳನ್ನು ತರದಂತಹ ಸದ್ಗುಣದ ' ಸಾಧನೆ 'ಯಲ್ಲಲ್ಲ, ಸದ್ಗುಣಿಯಾಗಿರುವುದು ಮತ್ತು ' ಸದ್ಗುಣಿ ' ಆಗಬೇಕಾದದ್ದು— ಇವೆರಡರ ಮಧ್ಯೆ ವ್ಯತ್ಯಾಸ ಇದೆ. ಇದ್ದುದನ್ನು ಅರಿಯುವುದರ ಮೂಲಕ ಸದ್ಗುಣಿಯಾಗಿರುವುದು ಬರುತ್ತದೆ. ಆದರೆ ಸದ್ಗುಣಿ ಆಗಬೇಕಾದದ್ದು ಎಂದರೆ, ಇದ್ದುದನ್ನು, ನೀವೇನು ಆಗ ಬೇಕೋ ಅದರಿಂದ ಮುಚ್ಚಿಹಾಕಿ, ಮುಂದುವರಿಯುವುದು. ಇದರಿಂದ ' ಸದ್ಗುಣಿ ' ಆಗಬೇಕೆಂಬುದರ ಮೂಲಕ, ಇದ್ದುದರ ಮೇಲೆಯೇ ನೇರವಾಗಿ ಕ್ರಿಯಾನಿರತರಾಗುವುದನ್ನು ತಪ್ಪಿಸಿಕೊಳ್ಳುತ್ತೀರಿ. ಆದರ್ಶಸಾಧನೆಯ ಮೂಲಕ ಇದ್ದುದನ್ನು ತೊರೆಯುವ ಪ್ರಕ್ರಿಯೆಯನ್ನೇ ' ಸದ್ಗುಣ ' ಎಂದು ಭಾವಿಸು- ತ್ತೀವೆ. ಆದರೆ ಸೂಕ್ಷ್ಮವಾಗಿ, ನೇರವಾಗಿ ಗಮನಿಸಿದರೆ ಇದರ ಸತ್ಯಾಸತ್ಯತೆ ಗೊತ್ತಾಗುತ್ತದೆ. ಇದ್ದುದರೊಡನೆ ಮುಖಾಮುಖಿಯಾಗುವುದನ್ನು ಮುಂದೂ ಡುತ್ತ ಹೋಗುವ ಪ್ರಕ್ರಿಯೆ ಇದು. ಇಲ್ಲದ್ದನ್ನು ಆಗುವುದು ಸದ್ಗುಣವಲ್ಲ. ಇದ್ದುದನ್ನು ಅರಿಯುವುದು ಸದ್ಗುಣ. ಆ ಅರಿವಿನ ಮೂಲಕ ಇದ್ದುದರಿಂದ ಬಿಡುಗಡೆ ಪಡೆಯುವುದು ಸದ್ಗುಣ. ಅತ್ಯಂತ ತೀವ್ರಗತಿಯಲ್ಲಿ ಶಿಥಿಲಗೊಳ್ಳು- ತ್ತಿರುವ ಸಮಾಜದಲ್ಲಿ ಈ ಸದ್ಗುಣ ಅತ್ಯವಶ್ಯ. ಹಿಂದಿನದಕ್ಕಿಂತ ಭಿನ್ನವಾದ, ಹೊಸವಾದ ಜಗತ್ತನ್ನು ಸೃಷ್ಟಿಸುವುದಕ್ಕೆ ಈ ಕಂಡುಕೊಳ್ಳುವ, ಕಂಡು-

ಹಿಡಿಯುವ ಸ್ವಾತಂತ್ರ್ಯ ಬೇಕು. ಆ ಸ್ವಾತಂತ್ರ್ಯಕ್ಕೆ ಈ ಸದ್ಗುಣ ಬೇಕು. ಸದ್ಗುಣಿಯಾಗಲು ಪ್ರಯತ್ನಿಸುತ್ತಿರುವ ಅನೈತಿಕ ಮನುಷ್ಯ ಸದ್ಗುಣ ಅರಿಯಬಲ್ಲನೆ ? ನೀತಿಯಿರದವ ಎಂದೆಂದೂ ಸ್ವತಂತ್ರನಾಗಲಾರ. ಆದ್ದರಿಂದ ಆತ ಸತ್ಯ ಅರಿಯಲಾರ. ಏನು ಇದೆಯೋ ಅದನ್ನು ಅರಿತಾಗ ಮಾತ್ರ ಸತ್ಯವನ್ನು ಕಾಣಲು ಶಕ್ಯ. ಈ ಇದ್ದುದನ್ನು ಅರಿಯಲು ಸ್ವಾತಂತ್ರ್ಯ ಬೇಕು; ಇದ್ದುದರ ಭಯದಿಂದ ಸ್ವಾತಂತ್ರ್ಯಬೇಕು.

ಆ ಪ್ರಕ್ರಿಯೆಯನ್ನು ಅರಿಯಲು, ಇದ್ದುದನ್ನು ಅರಿಯುವ ಗುರಿ ಇರಬೇಕು; ಪ್ರತಿಯೊಂದು ವಿಚಾರ, ಅನಿಸಿಕೆ, ಕ್ರಿಯೆಗಳನ್ನು ಹಿಂಬಾಲಿಸಿ ನೋಡುವುದಿರಬೇಕು. ಇದ್ದುದನ್ನು ಅರಿಯುವುದು ಅತ್ಯಂತ ಕಷ್ಟದ ಕೆಲಸ. ಯಾಕೆಂದರೆ ಇದ್ದದ್ದು ಯಾವತ್ತೂ ನಿಶ್ಚಲವಲ್ಲ; ಚಲನಶೀಲ. ಕ್ಷಣಕ್ಷಣಕ್ಕೂ ನೀವು ಮಾಡುತ್ತಿರುವ ಕ್ರಿಯೆ, ವಿಚಾರ, ನಿಮ್ಮಲ್ಲಿ ಮೂಡುತ್ತಿರುವ ಅನಿಸಿಕೆ, ಭಾವನೆಗಳೆಲ್ಲವೂ ನೀವೇ. ಇವುಗಳ ಪರಿಜ್ಞಾನವೇ ನಿಮ್ಮ ಅರಿವು. ಇದ್ದುದನ್ನು ಗ್ರಹಿಸಲು ಮನಸ್ಸು ಅತ್ಯಂತ ಎಚ್ಚರದಲ್ಲಿ, ಸೂಕ್ಷ್ಮವಾಗಿ ಗಮನಿಸುತ್ತಿರಬೇಕು. ಆದರೆ ಇದ್ದುದನ್ನು ಖಂಡಿಸಲು ಆರಂಭಿಸಿದರೆ, ಆ ಚಲನೆಯನ್ನು ನಾವು ಅರಿತುಕೊಳ್ಳಲಾರೆವು. ಒಬ್ಬಾತನನ್ನು ಅರಿಯಬೇಕೆಂದಿದ್ದರೆ ಆತನನ್ನು ನಾನು ಖಂಡಿಸಕೂಡದು; ಆತನನ್ನು ಗಮನಿಸಬೇಕು, ಅಭ್ಯಸಿಸಬೇಕು. ನಾನು ಅಭ್ಯಸಿಸುತ್ತಿರುವುದನ್ನು ಪ್ರೀತಿಸಬೇಕು. ಒಂದು ಮಗುವನ್ನು ನೀವು ಅರಿಯಬೇಕೆಂದರೆ ಆತನನ್ನು ಪ್ರೀತಿಸಬೇಕು; ಖಂಡಿಸಬಾರದು. ಆತನ ಜೊತೆಗೆ ಆಡಬೇಕು; ಆತನ ಚಲನ-ವಲನ, ಆತನ ವಿಶೇಷತೆ, ವರ್ತನೆಯ ರೂಪಗಳೆಲ್ಲವನ್ನೂ ನಿರೀಕ್ಷಿಸಬೇಕು; ಅದನ್ನು ಬಿಟ್ಟು ಕೇವಲ ಖಂಡಿಸಿದರೆ, ಬೈದರೆ, ಪ್ರತಿಭಟಿಸಿದರೆ ಮಗುವಿನ ಸಮಗ್ರ ಅರಿವು ಅಶಕ್ಯ. ಅದೇ ತರಹ ನಮ್ಮನ್ನು ಅರಿಯಬೇಕೆಂದರೆ ನಮ್ಮ ಅನಿಸಿಕೆ, ವಿಚಾರ, ಕ್ರಿಯೆ ಎಲ್ಲವನ್ನೂ ಕ್ಷಣ-ಕ್ಷಣಕ್ಕೂ ಗಮನಿಸಬೇಕು. ಅದು ವಾಸ್ತವ. ಇದರ ಹೊರತಾದ ಆದರ್ಶ, ತತ್ವಪ್ರಣಾಳಿಕೆ, ಎಲ್ಲವೂ ಅವಾಸ್ತವ; ಅದು ಕೇವಲ ಇದ್ದುದನ್ನು ತೊರೆದು ಬೇರೇನೋ ಆಗುವ ಆಕಾಂಕ್ಷೆ, ಇಚ್ಛೆ.

ಇದ್ದುದನ್ನು ಅರಿಯಲು ತಾನು 'ಮತ್ತೇನೋ ಒಂದು' ಎಂದು ಭಾವಿಸಿಕೊಳ್ಳುವುದಾಗಲಿ ಅಥವಾ ತನ್ನನ್ನು ಹೀಗಳೆದುಕೊಂಡು ಖಂಡಿಸಿಕೊಳ್ಳುವುದಾಗಲಿ

ಇರಕೂಡದು. ಅಂದರೆ ಮನಸ್ಸು ಅತ್ಯಂತ ಚುರುಕಿದ್ದೂ, ನಿಷ್ಕ್ರಿಯವಾಗಿರಬೇಕು. ಏನಾದರೂ ಒಂದನ್ನು ಸರಿಯಾಗಿ ಅರಿಯಬೇಕೆಂದಿದ್ದಾಗ ನಾವೆಲ್ಲರೂ ಅಂಥ ಮನಸ್ಥಿತಿಯಲ್ಲೇ ಇರುತ್ತೇವೆ. ಯಾವಾಗ ಆಸಕ್ತಿ ಉತ್ಕಟವಾಗಿರುತ್ತದೆಯೋ ಆಗ ಮನಸ್ಸು ತನ್ನಷ್ಟಕ್ಕೆ ತಾನೇ ಅಸ್ತಿತ್ವಕ್ಕೆ ಬರುತ್ತದೆ. ಇದ್ದುದನ್ನು ಅರಿಯುವ ಆಸಕ್ತಿ ಇರುವಾಗ, ಮನಸ್ಸಿನ ವಾಸ್ತವಸ್ಥಿತಿಯನ್ನು ಅರಿತುಕೊಳ್ಳುವಾಗ ಯಾವುದೇ ಬಗೆಯ ಒತ್ತಾಯ, ಶಿಸ್ತು ಅಥವಾ ಸಮಯ ಬೇಕಾಗುವುದಿಲ್ಲ. ತದ್ವಿರುದ್ಧವಾಗಿ ಆಗ ಸಹಜವಾಗಿಯೇ ನಿಷ್ಕ್ರಿಯ ಚುರುಕುತನ, ಮಾನಸಿಕ ತೀಕ್ಷ್ಣತೆ ಇರುತ್ತದೆ, ಗಮನಿಸುವಿಕೆ ಇರುತ್ತದೆ. ಅರಿಯುವ ಆಸ್ಥೆ, ಗುರಿ ಇರುವಾಗ ಈ ಬಗೆಯ ಎಚ್ಚರ ಸ್ಥಿತಿ ಬಂದೇ ಬರುತ್ತದೆ.

ಆತ್ಮದ ಅಥವಾ ಅಂತರಂಗದ ಮೂಲಭೂತ ಅರಿವು ಕೇವಲ ನೆನಪನ್ನು ಬೆಳೆಸುವ ಅನುಭವ ಸಂಗ್ರಹದ ಅಥವಾ ಜ್ಞಾನದ ಮೂಲಕ ಶಕ್ಯವಿಲ್ಲ. ಕ್ಷಣದಿಂದ ಕ್ಷಣಕ್ಕೆ ನಮ್ಮ ಅರಿವು ಇರಬೇಕು. ನಮ್ಮ ಬಗೆಗಿನ ಅರಿವನ್ನು ಸಂಗ್ರಹಿಸುತ್ತ ಹೊರಟರೆ ಆ ಜ್ಞಾನವು ಅರಿವನ್ನು ಪ್ರತಿಬಂಧಿಸುತ್ತದೆ. ಯಾಕೆಂದರೆ ಈ ಜ್ಞಾನ ಮತ್ತು ಅನುಭವ 'ಕೇಂದ್ರ'ವಾಗಿ ವಿಚಾರ ಹಾಗು ಮನಸ್ಸಿನ ಎಲ್ಲ ಅಸ್ತಿತ್ವ ಅಲ್ಲಿ ಕೇಂದ್ರೀಕೃತಗೊಳ್ಳುತ್ತದೆ. ನಾವು ಹಾಗು ನಮ್ಮ ಚಟುವಟಿಕೆಗಳಿಗಿಂತ ಭಿನ್ನವಾಗಿಲ್ಲ ಈ ಪ್ರಪಂಚ. ನಾವೇ ಇಲ್ಲಿಯ ಸಮಸ್ಯೆಗಳ ಕರ್ತಾರರು. ಆದರೆ ಇದನ್ನು ಅರಿಯದೇ ಸಮಸ್ಯೆಗಳನ್ನು ಪರಿಹರಿಸಲು ನಾವು ಒಂದು ಪದ್ಧತಿ, ಸಿದ್ಧಾಂತ ಇತ್ಯಾದಿಗಳ ಮೂಲಕ ಆಗಬಹುದೆಂದು ಪ್ರಯತ್ನಿಸುತ್ತೇವೆ.

ತನ್ನನ್ನು ತಾನು ಕಂಡುಕೊಳ್ಳುವ ಮಾರ್ಗ ಯಾವುದೂ ಇಲ್ಲ. ಅದಕ್ಕೆ ಯಾವ ಪದ್ಧತಿ ಅನುಸರಿಸಬೇಕು ? ಎಂಬ ಪ್ರಶ್ನೆಗೆ ಜೆ. ಕೆ. ಅವರದು ನಕಾರಾತ್ಮಕ ಉತ್ತರ. ಯಾವುದೇ ಒಬ್ಬ ಚಾಣಾಕ್ಷ ಮನುಷ್ಯ, ಒಬ್ಬ ತತ್ತ್ವಜ್ಞಾನಿ ಒಂದು ಪದ್ಧತಿಯನ್ನು ಅನ್ವೇಷಿಸಬಲ್ಲ, ಒಂದು ವಿಧಾನವನ್ನು ಸೃಷ್ಟಿಸಬಲ್ಲ. ಆದರೆ ಖಂಡಿತವಾಗಿ ಆ ಪದ್ಧತಿ, ವಿಧಾನವನ್ನು ಅನುಸರಿಸಿದರೆ, ಆ ಪದ್ಧತಿ ಮತ್ತು ವಿಧಾನ ನಿರ್ಮಿಸಿದ ಫಲಿತಾಂಶ ಮಾತ್ರ ಹೊಂದಬಲ್ಲ.

ನನ್ನನ್ನು ನಾನು ಅರಿಯಬಲ್ಲಂತಹ ಒಂದು ನಿಶಿಷ್ಟ ಪದ್ಧತಿಯನ್ನು ಅನುಸರಿಸಿದರೆ, ಆ ವಿಧಾನ ಅವಶ್ಯಪಡಿಸಿದ ಫಲಿತಾಂಶವನ್ನು ನಾನು ಹೊಂದಬಲ್ಲೆ. ಆದರೆ ಆ ಫಲಿತಾಂಶ ಖಂಡಿತವಾಗಿ ನನ್ನ ಆತ್ಮದ ಅರಿವಾಗಿರುವುದಿಲ್ಲ. ಏಕೆಂದರೆ ಒಂದು ವಿಧಾನ ಪದ್ಧತಿಯನ್ನು ಅನುಸರಿಸಿದರೆ, ಅದಕ್ಕನುಗುಣವಾಗಿ ನನ್ನ ವಿಚಾರ, ಚಟುವಟಿಕೆಗಳನ್ನು ಸಾಕಾರಗೊಳಿಸಬೇಕಾಗುತ್ತದೆ. ಆದರೆ ಅದರಿಂದ ಆತ್ಮದ ಅರಿವು ಉಂಟಾಗುವುದಿಲ್ಲ.

ಆದ್ದರಿಂದ ಆತ್ಮದ ಅರಿವು ಮಾಡಿಕೊಳ್ಳುವುದಕ್ಕೆ ಇಂಥದೇ ಪದ್ಧತಿ ಎನ್ನುವುದಿಲ್ಲ. ಒಂದು ಪದ್ಧತಿಯನ್ನು ಹುಡುಕುವುದು ಎಂದರೆ ಅನಿವಾರ್ಯವಾಗಿ ಒಂದು ಫಲಿತಾಂಶ ಪಡೆಯುವ, ಒಂದು ಗುರಿ ತಲುಪುವ ಇಚ್ಛೆಯನ್ನು ಧ್ವನಿಸುತ್ತದೆ. ಸಾಮಾನ್ಯವಾಗಿ ನಾವೆಲ್ಲ ಬಯಸುವುದು ಇದನ್ನೇ. ನಾವು ಹಿಂಬಾಲಕರು— ವ್ಯಕ್ತಿ ಇಲ್ಲದಿದ್ದರೆ, ಒಂದು ಪದ್ಧತಿ ಅಥವಾ ಆದರ್ಶ ಅಥವಾ ವಿಶಿಷ್ಟ ಸಂಪ್ರದಾಯ. ಏಕೆಂದರೆ ನಮಗೆ ತೃಪ್ತಿ ತರುವಂತಹ ಫಲಿತಾಂಶ ಬೇಕು. ಅದು ಭದ್ರತೆಯನ್ನು ಕೊಡಬೇಕು. ನಾವು ನಮ್ಮ ತುಡಿತಗಳನ್ನು, ಸ್ಪಂದನ, ಪ್ರತಿಸ್ಪಂದನೆ, ಪ್ರತಿಕ್ರಿಯೆಗಳನ್ನು, ನಮ್ಮ ಜಾಗ್ರತ ಹಾಗು ಸುಪ್ತ ವಿಚಾರಗಳ ಸಮಗ್ರ ಪ್ರಕ್ರಿಯೆಯನ್ನು ಅರಿಯುವುದಕ್ಕೆ ನಿಜವಾಗಿ ಇಚ್ಛಿಸುವುದಿಲ್ಲ; ಅದಕ್ಕೆ ಬದಲಾಗಿ ಒಂದು ನಿರ್ದಿಷ್ಟ ಫಲ ನೀಡುವ ಪದ್ಧತಿಯನ್ನು ಹಿಂಬಾಲಿಸಲು ಬಯಸುತ್ತೇವೆ. ಆ ಪದ್ಧತಿ ನಮ್ಮ ಭದ್ರತೆಯ, ನಿಶ್ಚಿತತೆಯ ಇಚ್ಛೆಯ ಉತ್ಪತ್ತಿ. ಅದರ ಪರಿಣಾಮ ಖಂಡಿತ ಆತ್ಮದ ಅರಿವಲ್ಲ. ಒಂದು ಪದ್ಧತಿ ಅನುಸರಿಸಿದಾಗ, ನಮಗೆ ಗುರು, ರಕ್ಷಕ, ಸ್ವಾಮಿ, ಇತ್ಯಾದಿಗಳು— ಪ್ರಭುಗಳು ನಮ್ಮ ಇಚ್ಛೆಗಳಿಗೆ ಆಶ್ವಾಸನೆ ನೀಡಬೇಕು; ಇದು ಖಂಡಿತವಾಗಿ ಆತ್ಮದ ಅರಿವು ಮಾಡಿಕೊಳ್ಳುವ ಕ್ರಮವಲ್ಲ.

ಪ್ರಭುತ್ವ ಆತ್ಮದ ಅರಿವನ್ನು ಪ್ರತಿಬಂಧಿಸುತ್ತದೆ. ಒಂದು ಪ್ರಭುತ್ವದ ಅಥವಾ ಒಬ್ಬ ಗುರುವಿನ ಆಶ್ರಯದಲ್ಲಿ ತಾತ್ಕಾಲಿಕವಾಗಿ ಸಂರಕ್ಷಣ ಭಾವನೆ, ಉತ್ತಮವೆನಿಸಿರುವ ಭಾವ ನಿಮಗೆ ಬರಬಹುದು. ಆದರೆ ಅದು ಅಂತರಂಗದ ಸಮಗ್ರ ಪ್ರಕ್ರಿಯೆಯ ಅರಿವಲ್ಲ. ಪ್ರಭುತ್ವ ಸ್ವಭಾವತಃ ಸಮಗ್ರ ಅರಿವನ್ನು ಪ್ರತಿಬಂಧಿಸುವುದರಿಂದ ಅಂತಿಮವಾಗಿ ಸ್ವಾತಂತ್ರ್ಯವನ್ನು ಅದು

ವಿಧ್ವಂಸಗೊಳಿಸುತ್ತದೆ. ಸ್ವಾತಂತ್ರ್ಯದಲ್ಲಿ ಮಾತ್ರ ಸೃಜನಶೀಲತೆ ಇರಲು ಶಕ್ಯ. ಆತ್ಮದ ಅರಿವಿನ ಮೂಲಕ ಮಾತ್ರ ಸೃಜನಶೀಲತೆ ಇರಲು ಶಕ್ಯ. ನಮ್ಮಲ್ಲಿ ಹೆಚ್ಚಿನ ಜನ ಸೃಜನಶೀಲರಾಗಿಲ್ಲ. ಹೇಳಿದ್ದನ್ನೇ ಹೇಳುವ ಯಂತ್ರಗಳು ನಾವು. ನಮ್ಮದೋ ಅಥವಾ ಇನ್ನಾರದೋ ಕೆಲವು ತೀರ್ಮಾನಗಳನ್ನು, ನೆನಪುಗಳನ್ನು, ಅನುಭವಗಳ ಹಾಡುಗಳನ್ನು ಪದೇ-ಪದೇ, ಮೇಲಿಂದ ಮೇಲೆ ಹಾಡುವ ಗ್ರಾಮೋಫೋನ್ ಅಥವಾ ಟೇಪ್‌ಗಳು ನಾವು. ಈ ಬಗೆಯ ಪುನರುಚ್ಚಾರ ಸೃಜನಶೀಲ ಅಸ್ತಿತ್ವವಲ್ಲ. ಆದರೆ ನಮಗೆ ಅದೇ ಬೇಕಾಗಿದೆ. ಏಕೆಂದರೆ ನಮಗೆ ಆಂತರಂಗಿಕವಾಗಿ ಭದ್ರತೆ ಬೇಕಾಗಿದೆ. ಇದಕ್ಕಾಗಿ ಪದ್ಧತಿ, ವಿಧಾನಗಳ ಹುಡುಕಾಟದಲ್ಲಿದ್ದೇವೆ— ನಾವು. ಅದರ ಮೂಲಕವೇ ನಾವು ಪ್ರಭುಗಳನ್ನು ಸೃಷ್ಟಿಸುವದು, ಇನ್ನೊಬ್ಬರ ಆರಾಧನೆ ಮಾಡುವುದು. ಆದರೆ ಇವೆಲ್ಲ ಅರಿವನ್ನು ಸೃಜನಸ್ಥಿತಿ ಇರಬಹುದಾದ ಆ ತತ್‌ಕ್ಷಣದ ಸ್ಫೂರ್ತ ಮನಸ್ಸಿನ ಪ್ರಶಾಂತತೆಯನ್ನು ವಿನಾಶಗೊಳಿಸುತ್ತವೆ.

ನಮ್ಮ ನಿಜವಾದ ಕಷ್ಟವೆಂದರೆ ನಮ್ಮಲ್ಲಿ ಹೆಚ್ಚು ಜನ ಈ ಸೃಜನಶೀಲ ಭಾವನೆಯನ್ನು, ಶಕ್ತಿಯನ್ನು ಕಳೆದುಕೊಂಡುಬಿಟ್ಟಿರುವುದು. ಸೃಜನಶೀಲನಾಗುವುದು ಎಂದರೆ ನಾವು ಚಿತ್ರ ಬಿಡಿಸಬೇಕು ಅಥವಾ ಕಾವ್ಯ ರಚಿಸಬೇಕು, ಪ್ರಸಿದ್ಧರಾಗಬೇಕು ಎಂದು ಅಲ್ಲ. ಇವು ಸೃಜನಶೀಲತೆಯಲ್ಲ— ಸಾರ್ವಜನಿಕರು ಸ್ವೀಕರಿಸಬಹುದಾದ ಅಥವಾ ತಿರಸ್ಕರಿಸಬಹುದಾದ ಒಂದು ವಿಚಾರವನ್ನು ಅಭಿವ್ಯಕ್ತಗೊಳಿಸುವ ಸಾಮರ್ಥ್ಯ ಅಷ್ಟೇ. ಸಾಮರ್ಥ್ಯ ಹಾಗು ಸೃಜನಶೀಲತೆಗಳನ್ನು ನಾವು ಒಂದೇ ಎಂದು ಭಾವಿಸಿ ಗೊಂದಲಮಾಡಿಕೊಳ್ಳಬಾರದು. ಸಾಮರ್ಥ್ಯ ಸೃಜನಶೀಲತೆ ಅಲ್ಲ; ಸೃಜನಶೀಲತೆ ಬೇರೆಯದೇ ಆದ ವಿಶಿಷ್ಟ ಸ್ಥಿತಿ. ಆ ಸ್ಥಿತಿಯಲ್ಲಿ 'ತಾನು' ಎನ್ನುವುದು, ಅಥವಾ 'ಅಹಂ' ಇಲ್ಲವಾಗಿರುತ್ತದೆ. ನಮ್ಮ ಅನುಭವ, ಮಹತ್ವಾಕಾಂಕ್ಷೆ, ಹುಡುಕಾಟ, ಇಚ್ಛೆಗಳೆಲ್ಲದರ ಕೇಂದ್ರವಾಗಿ ಮನಸ್ಸು ಇರುವುದಿಲ್ಲ. ಸೃಜನಶೀಲತೆ ಒಂದು ನಿರಂತರ ಸ್ಥಿತಿ ಅಲ್ಲ. ಅದು ಕ್ಷಣದಿಂದ ಕ್ಷಣಕ್ಕೆ ಇರುವಂಥದು. 'ನಾನು' 'ನನ್ನದು' ಎನ್ನುವದಾವುದೂ ಇರದ ನಿರಂತರ ಚಲನೆ ಅದು. ಯಾವದೇ ಒಂದು ವಿಶಿಷ್ಟ ಅನುಭವ, ಮಹತ್ವಾಕಾಂಕ್ಷೆ, ಸಾಧನೆ, ಉದ್ದೇಶ. ಗುರಿಗಳ ಮೇಲೆ ವಿಚಾರ ಕೇಂದ್ರಗೊಳ್ಳದೇ ಇರದಂತಹ ಸ್ಥಿತಿ ಅದು. 'ನಾನು' ಇಲ್ಲ.

ದಾದಾಗ ಸೃಜನಶೀಲ ಸ್ಥಿತಿ ಇರುತ್ತದೆ. ಆ ಸ್ಥಿತಿಯಲ್ಲೇ ಸತ್ಯ ಇರುವುದು, ಎಲ್ಲದರ ಸೃಷ್ಟಿಕರ್ತನಿರುವುದು ಆದರೆ ಆ ಸ್ಥಿತಿಯನ್ನು ಊಹಿಸಿ, ಕಲ್ಪಿಸಿ, ತಿಳಿಯಲು ಶಕ್ಯವಿಲ್ಲ. ಅದನ್ನು ಸೂತ್ರೀಕರಿಸಿ, ಅನುಸರಿಸಲು ನಕಲು ಮಾಡಲು ಬರುವಂತಹದಲ್ಲ. ಯಾವುದೇ ಪದ್ಧತಿ, ತತ್ತ್ವಸಿದ್ಧಾಂತ, ರೀತಿ-ನೀತಿಗಳ, ಶಿಸ್ತು-ಸಂಯಮಗಳ ಮೂಲಕ ಹೊಂದುವಂತಹದಲ್ಲ ಅದು. ತದ್ವಿರುದ್ಧವಾಗಿ ಮನಸ್ಸಿನ ಸಮಗ್ರ ಪ್ರಕ್ರಿಯೆಯ ಅರಿವಿದ್ದಾಗ ಅದು ತಾನೇ ತಾನಾಗಿ ಅಸ್ತಿತ್ವಕ್ಕೆ ಬರುತ್ತದೆ.

ತನ್ನನ್ನು ತಾನು ಅರಿತುಕೊಳ್ಳುವುದು ಒಂದು ಫಲಿತಾಂಶವಲ್ಲ. ಅದು ಸಂಬಂಧಗಳ ಕನ್ನಡಿಯಲ್ಲಿ ಕ್ಷಣ-ಕ್ಷಣಕ್ಕೂ ತನ್ನನ್ನು ತಾನು ಕಾಣುತ್ತ, ಅರಿಯುತ್ತ ಹೋಗುವ ಪ್ರಕ್ರಿಯೆ. ನಿಮ್ಮ ಹಾಗು ಆಸ್ತಿ-ಪಾಸ್ತಿಗಳ ನಡುವಿನ ಸಂಬಂಧ, ನಿಮ್ಮ ಹಾಗು ಜನಗಳ, ವಸ್ತುಗಳ ನಡುವಿನ ಸಂಬಂಧ, ನಿಮ್ಮ ಹಾಗು ಆಚಾರ-ವಿಚಾರಗಳ ಸಂಬಂಧ— ಇತ್ಯಾದಿ ಎಲ್ಲದರ ನಡುವಿನ ಸಂಬಂಧಗಳನ್ನು ಕ್ಷಣ-ಕ್ಷಣಕ್ಕೂ ಗಮನಿಸುತ್ತ ಹೋಗುವುದರಿಂದ ನಮ್ಮ ಬಗ್ಗೆ ಅರಿವು ಮೂಡುತ್ತದೆ. ಆದರೆ ಈ ಬಗೆಯಲ್ಲಿ ಚುರುಕಾಗಿರಲಿಕ್ಕೆ, ಎಚ್ಚರದಿಂದ ಇರುವುದು ಕಷ್ಟ ಎಂದು ನಾವು ಒಂದು ಪದ್ಧತಿಯನ್ನು ಅನುಸರಿಸಿ, ಪ್ರಭುಗಳನ್ನು, ಮೂಢನಂಬಿಕೆಗಳನ್ನು, ತೃಪ್ತಿನೀಡುವ ಸಿದ್ಧಾಂತಗಳನ್ನು ಸ್ವೀಕರಿಸಿ, ನಾವು ಮಂದಬುದ್ಧಿಯವನಾಗಿಯೇ ಇರಲಿಕ್ಕೆ ಬಯಸುತ್ತೇವೆ. ತನ್ಮೂಲಕ ನಾವು ಮಾನಸಿಕವಾಗಿ ತುಂಬ ಬಳಲಿ, ದಣಿದು, ಸಂವೇದನಾಹೀನರಾಗಿಬಿಡುತ್ತೇವೆ. ಆದರೆ ಅಂಥ ಮನಸ್ಸು ಸೃಜನಶೀಲ ಸ್ಥಿತಿಯಲ್ಲಿ ಇರುವುದಿಲ್ಲ. ಗುರುತಿಸುವ ಹಾಗು ಸಂಗ್ರಹಿಸುತ್ತ ಹೋಗುವ ಮಾನಸಿಕ ಚಟುವಟಿಕೆ ನಿಂತ ವಿನಃ, ಆ ಸೃಜನಶೀಲ ಸ್ಥಿತಿ ಬರಲು ಶಕ್ಯವಿಲ್ಲ. ಏಕೆಂದರೆ ' ನಾನು ' ಎಂಬ ಪ್ರಜ್ಞೆ ಈ ಗುರುತಿಸುವಿಕೆಯ ಕೇಂದ್ರ. ಮತ್ತು ಈ ಗುರುತಿಸುವಿಕೆ ಕೇವಲ ಅನುಭವ ಸಂಗ್ರಹಿಸುವ ಪ್ರಕ್ರಿಯೆ ಅಷ್ಟೇ. ಆದರೆ ನಾವೆಲ್ಲ ' ಏನೂ ಅಲ್ಲ ' ಎಂದು ಸತ್ಯ ಅರಿಯಲು ಭಯಗೊಂಡಿದ್ದೇವೆ. ಏಕೆಂದರೆ ನಾವೆಲ್ಲ ಏನಾದರೂ ಆಗಬೇಕೆಂದು ಇಚ್ಛಿಸುತ್ತೇವೆ; ಸಣ್ಣ ವ್ಯಕ್ತಿ ದೊಡ್ಡ ಮನುಷ್ಯನಾಗಬೇಕು; ಗುಣಹೀನ ಸದ್ಗುಣಿಯಾಗಬೇಕು, ದುರ್ಬಲ ಹಾಗು ಅಜ್ಞಾತವಾಗಿರುವವನಿಗೆ ಅಧಿಕಾರ, ಸ್ಥಾನ, ಮಾನ, ಪ್ರಭುತ್ವ ಬೇಕು, ಇತ್ಯಾದಿ. ಇದು ಮನಸ್ಸಿನ

ಂತರ ಚಟುವಟಿಕೆ. ಅಂಥ ಮನಸ್ಸು ಶಾಂತ ಹಾಗು ನಿಶ್ಚಲಗೊಳ್ಳುವು-
. ಆದ್ದರಿಂದ ಅದು ಎಂದೆಂದೂ ಸೃಜನಶೀಲತೆಯನ್ನು ಅರಿಯಲಾರದು.

ಯಾತನೆ, ಯುದ್ಧ, ನಿರುದ್ಯೋಗ, ಹಸಿವು, ವರ್ಗಭೇದ ಹಾಗು ಂತ ಗೊಂದಲದಿಂದ ತುಂಬಿರುವ ನಮ್ಮ ಪ್ರಪಂಚವನ್ನು ಬದಲಾಯಿಸಲು ಮ್ಮಲ್ಲೇ ಬದಲಾವಣೆ ಆಗಬೇಕು. ಕ್ರಾಂತಿ ಪ್ರತಿಯೊಬ್ಬನ ಅಂತರಂಗದಲ್ಲಿ ಂಭಗೊಳ್ಳಬೇಕು. ಯಾವುದೇ ನಂಬಿಕೆ, ಆದರ್ಶ, ಇತ್ಯಾದಿಗಳಿಗೆ ಅನು- ವಾಗಿಯಲ್ಲ ಕ್ರಾಂತಿ; ಹಾಗೇನಾದರೂ ಒಂದು ಪದ್ಧತಿ, ಆದರ್ಶಗಳಿಗೆ ಬದ್ಧವಾಗಿ ಆಗುವ ಕ್ರಾಂತಿ, ಕ್ರಾಂತಿಯಾಗುವುದಿಲ್ಲ. ತನ್ನಲ್ಲೇ ಮೂಲ- ತ ಕ್ರಾಂತಿ ತರಬೇಕಿದ್ದರೆ, ತನ್ನೆಲ್ಲ ಸಂಬಂಧಗಳಲ್ಲಿಯ, ಅನಿಸಿಕೆ, ಭಾವ- ಕಾರಗಳ ಸಮಗ್ರ ಪ್ರಕ್ರಿಯೆಯನ್ನು ಅರಿತುಕೊಳ್ಳಬೇಕು. ನಮ್ಮೆಲ್ಲ ಸ್ಯೆಗಳಿಗೆ ಇದು ಪರಿಹಾರವೇ ಹೊರತು, ಇನ್ನೂ ಹೆಚ್ಚಿನ ಶಿಸ್ತು, ಇನ್ನೂ ವು ನಂಬಿಕೆಗಳು, ಆದರ್ಶಗಳು, ಸಿದ್ಧಾಂತಗಳನ್ನು ಹೊಂದುವದಲ್ಲ.

* * *

೧೬. ಸರಳತೆ

' ಸರಳತೆ ' ಎಂದರೆ ಹೆಚ್ಚಿನ ಜನರು ಬಾಹ್ಯದಲ್ಲಿ ವ್ಯಕ್ತಗೊಂಡಿರುವ ವೇಷ-ಭೂಷಣಗಳಿಗಷ್ಟೇ ಸೀಮಿತಗೊಳಿಸುತ್ತಾರೆ; ಇನ್ನು ಕೆಲವರು ಇಂದು ಬದುಕು ತುಂಬ ಸಂಕೀರ್ಣವಾಗುತ್ತ ಹೋಗಿರುವುದರಿಂದ, ಚಹ–ಕಾಫಿ ಕುಡಿಯುವುದನ್ನು, ದುಬಾರಿ ಬಟ್ಟೆ–ಬರೆ ತೊಡುವುದನ್ನು, ಚಿನ್ನಾಭರಣಗಳನ್ನು ಧರಿಸುವುದನ್ನು ಬಿಟ್ಟುಬಿಟ್ಟಿರುವುದನ್ನು ' ಸರಳತೆ ' ಎಂದು ಭಾವಿಸಿಕೊಂಡಿರುತ್ತಾರೆ. ಇನ್ನೂ ಕೆಲವರು ಆಸ್ತಿ–ಪಾಸ್ತಿ ಇಲ್ಲದೆ, ಮನೆ–ಮಠ ಇಲ್ಲದೆ, ಕೌಪೀನಧಾರಿಯಾಗಿ, ಕೆಲವೇ ವಸ್ತುಗಳನ್ನು ಹೊಂದಿರುವುದಕ್ಕೆ ಸರಳತೆ ಎಂದು ತಿಳಿದುಕೊಂಡಿರುತ್ತಾರೆ. ಹಲವಾರು ಸಂತರು, ಗುರುಗಳು ಇದೇ ತರಹ ಪ್ರತಿಯೊಂದನ್ನೂ ತ್ಯಜಿಸಿದ್ದಾರೆ. ಆದರೆ ಅದರಿಂದ ಸರಳತೆ ಸಾಧ್ಯವಾಗುವುದಿಲ್ಲ; ಇವೆಲ್ಲ ಸರಳತೆಯ ಅಂಶಗಳಾದರೂ ಇವು ನಿಜವಾದ ಸರಳತೆ ಅಲ್ಲ.

ಮೂಲಭೂತವಾದ, ನಿಜವಾದ, ' ಸರಳತೆ ' ಆಂತರಿಕವಾಗಿ ಬರಬೇಕು; ಅನಂತರ ಬಹಿರ್ರೂಪದಲ್ಲಿ ವ್ಯಕ್ತಗೊಳ್ಳಬೇಕು. ತನ್ನನ್ನು ತಾನು ಅರಿತುಕೊಳ್ಳುವುದರ ಅರ್ಥವಂತಿಕೆಯನ್ನು ಪ್ರತಿಯೊಬ್ಬನೂ ಸ್ವತಃ ಕಂಡುಕೊಂಡಾಗಲೇ ಅತ್ಯಂತ ಅವಶ್ಯವಿರುವ ಈ ಸರಳತೆಯನ್ನು ಅರಿಯಬಹುದು.

ತನ್ನನ್ನು ಸುತ್ತಿರುವ ನೂರಾರು ಅಡ್ಡಿ–ಆತಂಕಗಳನ್ನು ಭಯ, ಆಸೆಗಳನ್ನು ಅರಿತಾಗ ಮಾತ್ರವೇ ಪ್ರತಿಯೊಬ್ಬನೂ ಅಂತರ್ಯದಲ್ಲಿ ಸರಳನಾಗಬಲ್ಲ. ಆದರೆ ದುರ್ದೈವದ ಮಾತೆಂದರೆ ನಮ್ಮಲ್ಲಿ ಅನೇಕರು ಜನರಿಂದ, ವಿಚಾರಗಳಿಂದ, ಆಸ್ತಿ–ಪಾಸ್ತಿಗಳಿಂದ ಸದಾ ಸುತ್ತುವರಿಯಲ್ಪಟ್ಟಿರಬೇಕು; ಇಲ್ಲದಿದ್ದರೆ ಅವರಿಗೆ ತಾವು ಇದ್ದಂತೆ ಅನಿಸುವುದೇ ಇಲ್ಲ. ನಮಗೆ, ಬಂಧಿಗಳಾಗಿದ್ದರೇ ಖುಶಿ. ಹೊರಗೆ ತುಂಬ ಸರಳವಾಗಿ ಕಂಡರೂ ಅಂತರ್ಯದಲ್ಲಿ ನಾವು ಬಂಧಿಗಳೇ. ನಮ್ಮ

ಸೆ, ಕನಸು, ಆದರ್ಶ, ಗುರಿ— ಇತ್ಯಾದಿಗಳಿಂದ ನಾವು ಅಂತರಂಗದಲ್ಲಿ ಸೆರೆ-ಾಳಗಾಗಿದ್ದೇವೆ. ಇವುಗಳಿಂದ ಬಿಡುಗಡೆ ಪಡೆದ ವಿನಃ ಸರಳತೆ ಶಕ್ಯವಿಲ್ಲ.

ಸರಳತೆ— ಎಂದರೆ ಒಂದು ನಂಬಿಕೆಗೆ ಹೊಂದಿಕೊಳ್ಳುವದಲ್ಲ; ನಂಬಿಕೆಗೆ ತುಕೊಂಡಿರುವದಲ್ಲ. ನಂಬಿಕೆಯ ಸ್ವರೂಪ, ಅದರ ಸಕಲ ಪ್ರಕ್ರಿಯೆಗಳನ್ನು ರಿಯುವುದರಿಂದ ಅಸಾಧರಣವಾದ ಬಿಡುಗಡೆ ಉಂಟಾಗುತ್ತದೆ. ನಂಬಿಕೆ-ಯಿಂದ ಬಿಡುಗಡೆ ಹೊಂದಿದಾಗ ಸರಳತೆ ಇರುತ್ತದೆ. ಆದರೆ ಈ ಸರಳತೆಗೆ ೀಮಂತಿಕೆ ಬೇಕು. ಧೀಮಂತನಾಗಲು ತನ್ನ ಅಡ್ಡಿ-ಆತಂಕಗಳ ಬಗ್ಗೆ, ಆ ಕ್ತಿಗೇ ಅರಿವು-ಎಚ್ಚರ ಇರಬೇಕು. ಅರಿವಿನೆಚ್ಚರದಲ್ಲಿರಲು ವ್ಯಕ್ತಿ ಯಾವುದೇ ಚಾರಿಕ ಪದ್ಧತಿಗೆ ಅಂಟಿಕೊಳ್ಳದೇ, ಸಿದ್ಧಾಂತಕ್ಕೆ ಬದ್ಧನಾಗದೇ ಸದಾ ರೀಕ್ಷಿಸುತ್ತ, ಗಮನಿಸುತ್ತ ಇರಬೇಕು. ಅಂತಿಮವಾಗಿ ಒಬ್ಬಾತ ಅಂತರ್ಯ-ಲ್ಲಿ ಹೇಗಿದ್ದಾನೆ ಎನ್ನುವುದು ಸುತ್ತಲಿನ ಸಮಾಜವನ್ನು ಪ್ರಭಾವಿತಗೊಳಿಸು ದೆ. ಸಮಾಜವಾಗಲಿ ಅಥವಾ ಯಾವುದೇ ಕಾರ್ಯವಿಧಾನವಾಗಲಿ ನ್ನುದೇ ವಿಸ್ತೃತರೂಪವಾಗಿರುವುದರಿಂದ ಅಂತರಂಗಿಕವಾಗಿ ಏನನ್ನೂ ಬದ-ಾಯಿಸದೇ, ಕಾಯದೆ, ಕಾನೂನು, ಮಸೂದೆಗಳ ಮೂಲಕ ಬದಲಾವಣೆ ರುವುದು ಅಶಕ್ಯ. ಅಲ್ಪ-ಸ್ವಲ್ಪ ಸುಧಾರಣೆ, ಹೊಂದಾಣಿಕೆ ತಂದೀತಾದರೂ, ಂತಿಮವಾಗಿ ಅಂತರ್ಯದಲ್ಲಿದ್ದದ್ದೇ ಹೊರಗಿರುವುದನ್ನೆಲ್ಲ ವ್ಯಾಪಿಸಿ, ಜಯಿಸಿ ಡುತ್ತದೆ. ಆಂತರಿಕವಾಗಿ ಒಬ್ಬಾತ ದುರಾಸೆಯುಳ್ಳವನೋ, ಮಹತ್ವಾ-ಾಂಕ್ಷೆಯುಳ್ಳವನೋ, ಕೆಲವು ಆದರ್ಶಗಳನ್ನು ಸಾಧಿಸುತ್ತಿರುವವನೋ ಆಗಿ-ದ್ದಾಗ, ಆ ಅಂತರಂಗದ ಸಂಕೀರ್ಣತೆಯು ಹೊರಗಿನ ಅತ್ಯಂತ ಶಿಸ್ತಿನಿಂದ, ಹಳ ಜಾಗರೂಕತೆಯಿಂದ ಕಟ್ಟಿದ ಸಮಾಜವನ್ನಾದರೂ ವಿಧ್ವಂಸಗೊಳಿಸಿ-ಡುತ್ತದೆ.

ನಮ್ಮ ಸುತ್ತಲಿನ ರೂಪ ನಮ್ಮ ಅಂತರಂಗದ್ದೇ ಪ್ರತಿರೂಪ. ಆದ್ದ-ಂದ ಈ ಹೊರಗಿನದನ್ನು ಅರ್ಥಮಾಡಿಕೊಳ್ಳಬೇಕಿದ್ದರೆ ನಮ್ಮ ಒಳಗಿನ-ನ್ನು ನಾವು ಅರ್ಥ ಮಾಡಿಕೊಳ್ಳಲೇಬೇಕು. ಆದರೆ ಈ ಅಂತರಂಗದ್ದನ್ನು ರಿಯಲು ಬಹಿರಂಗದ ವಾಸ್ತವತೆಯನ್ನು ಅರಿಯುವುದರಿಂದ ಮಾತ್ರ ಶಕ್ಯ. ದರ ಮೂಲಕ ನಮ್ಮೊಳಗಿನದು ನಮ್ಮ ಅರಿವಿಗೆ ಬರುತ್ತ ಹೋದಂತೆ, ನಾವು

ಹೆಚ್ಚು-ಹೆಚ್ಚು ಸಂವೇದನಾಶೀಲರೂ, ಸ್ವತಂತ್ರರೂ ಆಗುತ್ತೇವೆ. ಈ ಸರಳತೆ— ಅಂತರಂಗದ ಸರಳತೆಯು ಸಂವೇದನಾಶೀಲತೆಯನ್ನು ಹುಟ್ಟಿಸುವುದರಿಂದ ಅತ್ಯಂತ ಮಹತ್ವವಾದದ್ದು. ಚುರುಕುತನ, ಸಂವೇದನಾಶೀಲತೆ, ಅರಿವಿನೆಚ್ಚರ ಇರದಂತಹ ಮನಸ್ಸು ಏನನ್ನೂ ಸೃಜಿಸಲಾರದಂತಹ, ಸ್ವೀಕರಿಸಲಾರದಂತಹ ಅಸಹಾಯಕತೆಯಲ್ಲಿರುತ್ತದೆ. ಯಾವುದಾದರೂ ತತ್ತ್ವ, ಸಿದ್ಧಾಂತ, ನಂಬಿಕೆಗಳಿಗೆ ಶರಣಾಗಿ ನಮ್ಮನ್ನೇ ನಾವು ಸರಳಗೊಳಿಸಿಕೊಳ್ಳುವುದು ಹೃದಯ ಮತ್ತು ಮನಸ್ಸನ್ನು ಮಂಕುಗೊಳಿಸುತ್ತದೆ. ಸಂವೇದನಾ ಶೂನ್ಯಗೊಳಿಸುತ್ತದೆ. ರಾಜಕೀಯ ತತ್ತ್ವ, ಸಿದ್ಧಾಂತಗಳಿಗೆ, ಧಾರ್ಮಿಕ ನಂಬಿಕೆಗಳಿಗೆ ಬದ್ಧರಾಗಿ, ಶರಣಾಗಿ ಬದುಕುವ ಜನ ವಿಶಿಷ್ಟ ನೇಮ, ಶಿಸ್ತು, ಧ್ಯಾನ, ಆಚರಣೆಗಳಿಂದ ತಾವು ಸರಳರೆಂದು ಹೊರ ಜಗತ್ತಿಗೆ ತೋರಿಸಿಕೊಳ್ಳುತ್ತಾರೆ. ಆದರೆ ಅದಾವುದೂ ಅಂತರಂಗದ ಸರಳತೆಯನ್ನು ತರುವಂತಹದಲ್ಲ. ಹೆಚ್ಚೆಚ್ಚು ಒತ್ತಾಯ, ಪ್ರತಿಬಂಧ, ನಿರ್ಬಂಧಗಳು ಇದ್ದ ಹಾಗೆ ಸರಳತೆ ಹೆಚ್ಚೆಚ್ಚು ದೂರ ಸರಿಯುತ್ತದೆ. ಇವುಗಳೆಲ್ಲದರ ಪ್ರಕ್ರಿಯೆ, ಸ್ವರೂಪ ಅರಿತಾಗ ಸರಳತೆ ತಾನೇ ತಾನಾಗಿ ಮೂಡುತ್ತದೆ.

ನಮ್ಮ ಸಾಮಾಜಿಕ, ರಾಜಕೀಯ, ಧಾರ್ಮಿಕ ಸಮಸ್ಯೆಗಳು ಎಷ್ಟು ಸಂಕೀರ್ಣಗೊಂಡಿವೆ ಎಂದರೆ, ಅಸಾಧಾರಣ ಪಾಂಡಿತ್ಯ ಹಾಗು ಬುದ್ಧಿವಂತಿಕೆಯಿಂದಲ್ಲ, ಕೇವಲ ಸರಳತೆಯಿಂದ ಮಾತ್ರ ಅವೆಲ್ಲವನ್ನೂ ಬಗೆಹರಿಸಬಲ್ಲೆವು. ಸರಳ ಮನುಷ್ಯ ಹೆಚ್ಚು ನೇರವಾಗಿ ಅರಿಯಬಲ್ಲನು. ಸಂಕೀರ್ಣ ಮನಸ್ಸಿನ ವ್ಯಕ್ತಿಗಿಂತ ಸರಳ ಮನಸ್ಸಿನ ವ್ಯಕ್ತಿ ನೇರ ಅನುಭವ ಪಡೆಯಬಲ್ಲ. ಅವರಿವರು ಹೇಳಿದ್ದು, ನಾವು ಓದಿದ್ದು, ಕೇಳಿದ್ದು, ಅಂತೆಲ್ಲ ನಮ್ಮ ಮನಸ್ಸಿನಲ್ಲಿ ಪ್ರತಿಯೊಂದರ ಬಗ್ಗೆಯೂ ಮಾಹಿತಿ ಅನಂತ ಸರಮಾಲೆಯೇ ತುಂಬಿರುವುದರಿಂದ ನಾವು ನೇರವಾಗಿ, ಸರಳವಾಗಿ ಏನನ್ನೂ ಅನುಭವಿಸಲಾರದಂತಹ ಸ್ಥಿತಿಗೆ ಬಂದುಬಿಟ್ಟಿದ್ದೇವೆ. ಎಲ್ಲ ಸಮಸ್ಯೆಗಳೂ ಹೊಸವಾಗಿರುವುದರಿಂದ ಸದಾ ಹೊಸ ದೃಷ್ಟಿ ಅವಶ್ಯವಿದೆ. ನಾವು ಅಂತರಂಗಿಕವಾಗಿ ಸರಳವಾಗಿರುವಾಗ ಮಾತ್ರ ಅದು ಶಕ್ಯವಾಗುತ್ತದೆ. ನಮ್ಮ ಮನಸ್ಸಿನ ಅನಂತ ಸ್ವರೂಪವನ್ನು ಸದಾ ಗಮನವಿಟ್ಟು ಅರಿಯುವುದರಿಂದ ಈ ಸರಳತೆ ಬರುತ್ತದೆ.

ಸರಳವಾಗಿರದೆ ಮರ, ಗಿಡ, ಹಕ್ಕಿ, ಪರ್ವತ, ಗಾಳಿ, ಇತ್ಯಾದಿ ನಮ್ಮ ಸುತ್ತಲಿನ ಯಾವುದಕ್ಕೂ ನಾವು ಸಂವೇದನಾಶೀಲರಾಗಿರಲು ಶಕ್ಯವಿಲ್ಲ. ಸರಳ-ವಾಗಿರದೇ ಪ್ರತಿಯೊಂದರ ಅಂತರ್ಯದ ಧ್ವನಿಯನ್ನು ಆಲಿಸಲು ಶಕ್ಯವಾಗುವು-ದಿಲ್ಲ. ನಮ್ಮಲ್ಲಿ ಹೆಚ್ಚು ಜನ ಕೇವಲ ಮನಸ್ಸಿನ ಜಾಗ್ರತ ಪ್ರಜ್ಞಾಮಟ್ಟದಲ್ಲಿ ಮಾತ್ರ ಸರಳವಾಗಿರಲು, ವಿಚಾರವಂತರಾಗಿರಲು, ಅದೂ ಒತ್ತಾಯಪೂರ್ವಕ-ವಾಗಿ ಯತ್ನಿಸುತ್ತಿರುತ್ತೇವೆ. ಈ ಒತ್ತಾಯದಿಂದ ಮನಸ್ಸು ನಿಧಾನವಾಗಿ ಕಠಿಣವಾಗುತ್ತ ಹೋಗುತ್ತದೆಯೇ ಹೊರತು ಚುರುಕುತನ, ಮೃದುತ್ವ, ಸ್ವಚ್ಛತೆ ಅದಕ್ಕೆ ದೊರೆಯಲಾರದು.

ನಮ್ಮ ಮನಸ್ಸಿನ ಸಮಗ್ರ ಪ್ರಜ್ಞಾಸ್ತರಗಳಲ್ಲೂ ಸರಳವಾಗುವುದು ಎಂದರೆ ಅತ್ಯಂತ ಕಷ್ಟದ ಕೆಲಸ. ಇದಕ್ಕೆ ಅಂತರಂಗದಲ್ಲಿ ಯಾವುದೇ ನಿರ್ಬಂಧ, ಅಡ್ಡಿ ಇರಕೂಡದು. ಶೋಧಿಸುವ, ನಮ್ಮೆಲ್ಲ ಪ್ರಕ್ರಿಯೆಯನ್ನು ವಿಚಾರಿಸುವ, ಪ್ರತಿಯೊಂದು ಅತಿ ಸಣ್ಣ, ಸೂಕ್ಷ್ಮ ಅನಿಸಿಕೆ, ಭಾವನೆಗಳ ಬಗ್ಗೆ ಜಾಗ್ರತ-ವಿರುವ ಮಾನಸಿಕ ಎಚ್ಚರ ಇರಬೇಕು. ನಮ್ಮೆಲ್ಲ ಭಯ, ಆಸೆಗಳ ಬೇರು—ಈ ಬೇರುಗಳ ಬಗ್ಗೆ ಎಚ್ಚರವಾಗಿದ್ದು. ಅದರಿಂದ ಹೆಚ್ಚೆಚ್ಚು ಬಿಡುಗಡೆ ಪಡೆಯಲು ಶಕ್ಯ. ಆಗ ಹೃದಯ-ಬುದ್ಧಿಗಳೆರಡೂ ನಿಜವಾಗಿಯೂ ಸರಳವಾಗಿರುವಾಗ, ನಮ್ಮೆಲ್ಲ ಸಮಸ್ಯೆಗಳನ್ನು ಪರಿಹರಿಸಲು ಶಕ್ಯ.

ಜ್ಞಾನ ನಮ್ಮ ಸಮಸ್ಯೆಗಳನ್ನು ಬಗೆಹರಿಸುವುದಿಲ್ಲ. ಅವತಾರ-ಕಲ್ಪನೆ, ಸಾವಿನ ನಂತರದ ಬದುಕು, ಇತ್ಯಾದಿಗಳ ಬಗ್ಗೆ ನಿಮಗೆ ಮಾಹಿತಿ ಸಿಕ್ಕಿರಬಹುದು ಅಥವಾ ಇವುಗಳ ಬಗ್ಗೆ ಗೊತ್ತಿರಬಹುದು ಅಥವಾ ಅವುಗಳ ಬಗ್ಗೆ ಚೆನ್ನಾಗಿ ಮನದಟ್ಟಾಗಿರಬಹುದು- ಆದರೆ ಇವು ಸಮಸ್ಯೆಯನ್ನು ಬಗೆಹರಿಸವು. ಈ ಸಿದ್ಧಾಂತ, ಮಾಹಿತಿ ಅಥವಾ ನಂಬಿಕೆಯ ಮೂಲಕ ಸಾವಿನ ಸಮಸ್ಯೆಯನ್ನು ಬಗೆ ಹರಿಸಲು ಬರುವುದಿಲ್ಲ. ಇವೆಲ್ಲವುಗಳಿಗಿಂತ ಹೆಚ್ಚು ನಿಗೂಢವಾದದ್ದು, ಆಳ-ವಾದದ್ದು, ಸೃಜನಾತ್ಮಕವಾದದ್ದು ಸಾವು.

ಬದುಕಿನ ಎಲ್ಲ ಸಂಗತಿಗಳನ್ನೂ ಹೊಚ್ಚ ಹೊಸದಾಗಿ ಕಾಣುವ ಸಾಮರ್ಥ್ಯ ಪ್ರತಿಯೊಬ್ಬನಲ್ಲಿರಬೇಕು. ನೇರ ಅನುಭವ, ಅರಿವುಗಳಿಂದ ಮಾತ್ರ ನಮ್ಮ ಸಮಸ್ಯೆಗಳ ಪರಿಹಾರ ಶಕ್ಯ. ಈ ನೇರ ಅನುಭವಕ್ಕೆ ಸರಳತೆ ಬೇಕು;

ಅಂದರೆ ಸಂವೇದನಾಶೀಲತೆ ಬೇಕು. ಜ್ಞಾನದ ಭಾರದಿಂದ ಮನಸ್ಸು ಮಂಕಾಗುತ್ತದೆ. ಭೂತ-ಭವಿಷ್ಯಗಳ ಪ್ರಜ್ಞೆಯಿಂದಲೂ ಮನಸ್ಸು ಮಂಕಾಗುತ್ತದೆ. ಈ ವರ್ತಮಾನದಲ್ಲಿ ಇದ್ದುದನ್ನು ಗಮನಿಸಿ ಅರಿಯುವ ಸಾಮರ್ಥ್ಯವುಳ್ಳ ಮನಸ್ಸು ಮಾತ್ರ ನಮ್ಮ ಪರಿಸರದ ಎಲ್ಲ ಒತ್ತಡಗಳನ್ನೂ ಎದುರಿಸಬಲ್ಲದು.

ಸರಳತೆ ಇರುವ ಮನುಷ್ಯನೇ ನಿಜವಾದ ಧಾರ್ಮಿಕ ವ್ಯಕ್ತಿ. ಆತನಿಗೆ 'ಆಗಬೇಕಾದದ್ದು' ಎಂದು ಏನೂ ಇಲ್ಲ. ಯಾಕೆಂದರೆ ಅಂಥ ಸ್ಥಿತಿಯಲ್ಲಿ ಅಸಾಧರಣ ಗ್ರಹಣಶಕ್ತಿ ಇರುತ್ತದೆ. ಭಯ, ನಿರ್ಬಂಧ, ಏನೋ ಆಗಬೇಕು ಎಂಬ ತಹತಹ, ಯತ್ನ ಯಾವುದೂ ಇರದ ಕಾರಣ, ಅದು ಸತ್ಯ ಅಥವಾ ದೇವರು ಅಥವಾ ಆನಂದ ಎನ್ನುವಂಥಾದ್ದನ್ನು ಸ್ವೀಕರಿಸಲು ಪಾತ್ರತ್ವವನ್ನು ಪಡೆದುಕೊಳ್ಳುತ್ತದೆ. ಆದರೆ ಸತ್ಯವನ್ನು ಹುಡುಕುತ್ತ ಹೊರಟ ಮನಸ್ಸು ಸರಳ ಮನಸ್ಸಲ್ಲ.

* * *

೧೭. ನಮ್ಮೆದುರಿನ ಬದುಕು

ಹಲವಾರು ಬಗೆಯ ಬಿಕ್ಕಟ್ಟುಗಳು ಹಾಗು ಸಮಸ್ಯೆಗಳು ಸದಾ ಹೆಚ್ಚುತ್ತಲೇ ಹೋಗುತ್ತಿರುವ ಇಂದಿನ ಜಾಗತಿಕ ಸಂದರ್ಭದಲ್ಲಿ, ಬದುಕಿನ ಸಮಗ್ರ ಪ್ರಕ್ರಿಯೆಯ ಅರಿವಿನಿಂದ ಹುಟ್ಟಿದ ಕ್ರಿಯೆ, ಇಂದಿನದಕ್ಕಿಂತ ಸಂಪೂರ್ಣ ಭಿನ್ನವಾದ ನೈತಿಕತೆ ಹಾಗು ಆಚಾರಸಂಹಿತೆ ಅತ್ಯಂತ ಜರೂರಾದ ಆವಶ್ಯಕತೆ ಎಂದೆನಿಸುತ್ತದೆ. ಇವೆಲ್ಲವನ್ನೂ ರಾಜಕೀಯ ಮತ್ತು ಸಾಂಘಿಕ ವಿಧಾನಗಳ ಮೂಲಕ, ಆರ್ಥಿಕ ಹೊಂದಾಣಿಕೆಯ ಮುಖಾಂತರ ಹಾಗು ಇನ್ನಿತರ ಹಲವು ಬಗೆಯ ಸುಧಾರಣೆಗಳ ಮೂಲಕ ನಾವು ಬಗೆಹರಿಸಲು ಯತ್ನಿಸುತ್ತಿದ್ದೇವೆ. ಆದರೆ ಅವೆಲ್ಲ ತಾತ್ಕಾಲಿಕ ಪರಿಹಾರ ನೀಡಿದರೂ, ಮಾನವನ ಅಸ್ತಿತ್ವದ ಸಂಕೀರ್ಣ ಸಮಸ್ಯೆ, ಸಂಕಷ್ಟಗಳನ್ನು ಎಂದೆಂದೂ ಪರಿಹರಿಸಲಾರವು. ಎಷ್ಟೇ ವಿಸ್ತೃತವಾಗಿರುವ ಹಾಗು ಶಾಶ್ವತವೆಂದು ಕಾಣುವ ಸುಧಾರಣೆಗಳೆಲ್ಲವೂ ಅಂತಿಮ-ವಾಗಿ ಇನ್ನೂ ಹೆಚ್ಚಿನ ಗೊಂದಲ ಹುಟ್ಟಿಸಿ, ಇನ್ನೂ ಹೆಚ್ಚಿನ ಸುಧಾರಣೆಗೆ ಹಾದಿ ಮಾಡಿಕೊಡುತ್ತವೆ. ಮನುಷ್ಯನ ಅಸ್ತಿತ್ವದ ಸಂಕೀರ್ಣತೆಯನ್ನು ಸಮಗ್ರವಾಗಿ ಗಮನಿಸದೇ ಇದ್ದುದೇ ಇದಕ್ಕೆ ಕಾರಣ. ಅದರ ಫಲಃ ಸುಧಾ-ರಣೆಗಳ ನಿರಂತರ ಜನನ.

ಆದರೆ ಇದಕ್ಕಿಂತ ಸಂಪೂರ್ಣ ಬೇರೆಯದೇ ಆದ ಕ್ರಾಂತಿಯೊಂದಿದೆ. ನಾವು ಸಿಕ್ಕಿಹಾಕಿಕೊಂಡು ಒದ್ದಾಡುತ್ತಿರುವ ಆತಂಕ, ಹತಾಶೆ, ಸಂಘರ್ಷಗಳ ಬಲೆಯಿಂದ ಹೊರಬರಬೇಕಾದರೆ ಈ ಕ್ರಾಂತಿ ಜರುಗಲೇಬೇಕು. ಯಾವುದೇ ಸಿದ್ಧಾಂತ ಅಥವಾ ಆದರ್ಶಗಳಿಂದ ಇದು ಆರಂಭವಾಗುವಂತಹದಲ್ಲ. ಮನಸ್ಸಿ-ನಲ್ಲೇ ಮೂಲಭೂತವಾಗಿ ಉಂಟಾಗುವ ಬದಲಾವಣೆಯಿಂದ ಸುರುವಾಗುವಂತ-ಹದು ಈ ಕ್ರಾಂತಿ. ಯೋಗ್ಯ, ಅರ್ಥಪೂರ್ಣ ಶಿಕ್ಷಣ ಹಾಗು ಮನುಷ್ಯನ ಸಮಗ್ರ ಬೆಳವಣಿಗೆಯ ಮೂಲಕ ಮಾತ್ರ ಅಂಥ ಬದಲಾವಣೆ ತರುವುದು ಶಕ್ಯ. ಮನಸ್ಸಿನಲ್ಲೇ ಆ ಕ್ರಾಂತಿ ಸಂಪೂರ್ಣ ಜರುಗಬೇಕು; ವಿಚಾರದಲ್ಲಲ್ಲ,

ಯಾಕೆಂದರೆ ವಿಚಾರ ಎಷ್ಟೆಂದರೂ ಫಲಿತಾಂಶವೇ ಹೊರತು, ಮೂಲ ಉಗಮವಲ್ಲ. ಮೂಲ ಉಗಮದಲ್ಲೇ ಬದಲಾವಣೆ ಸಾಧ್ಯವಾಗಬೇಕು; ಫಲಿತಾಂಶದ ಸುಧಾರಣೆಯಲ್ಲಲ್ಲ. ನಾವೆಲ್ಲ ಮಾಡುತ್ತ ಇರುವುದು ಈಗ ಫಲಿತಾಂಶದೊಡನೆ ಅಥವಾ ರೋಗಚಹರೆಯೊಡನೆ ನಡೆಸಿದ ಚಿಕಿತ್ಸೆ. ಹಳೆಯ ಎಲ್ಲ ವಿಚಾರ ಕ್ರಮಗಳನ್ನು ಕಿತ್ತೆಸೆದು ಸಂಪ್ರದಾಯ ಹಾಗು ಚಟಗಳಿಂದ ಮನಸ್ಸನ್ನು ಮುಕ್ತಗೊಳಿಸುವಂಥ ಜೀವಂತ ಬದಲಾವಣೆಯನ್ನು ನಾವು ತರುತ್ತಿಲ್ಲ. ಇದು ಅರ್ಥಪೂರ್ಣ ಶಿಕ್ಷಣ ಮಾತ್ರವೇ ತರಬಹುದಾದ ಜೀವಂತ ಬದಲಾವಣೆ.

ವಿಚಾರ ಮಾಡುವುದು ಹಾಗು ಕಲಿಯುವುದು ಮನಸ್ಸಿನ ಕೆಲಸ. ಕಲಿಯುವುದೆಂದರೆ ನೆನಪಿನ ಶಕ್ತಿಯನ್ನು ಮಾತ್ರ ಬೆಳೆಸುವ ಅಥವಾ ಜ್ಞಾನ ಸಂಗ್ರಹಿಸುವದಷ್ಟೇ ಅಲ್ಲ. ಯಾವುದೇ ಪೂರ್ವಗ್ರಹ, ನಂಬಿಕೆ, ಆದರ್ಶ, ಭ್ರಮೆಗಳಿಲ್ಲದೇ; ವಸ್ತುಸ್ಥಿತಿಯಿಂದ ಆರಂಭಿಸಿ ಸ್ಪಷ್ಟವಾಗಿ ವಿಚಾರ ಮಾಡುವ ಸಾಮರ್ಥ್ಯ. ತೀರ್ಮಾನಗಳಿಂದಲೇ ವಿಚಾರಗಳು ಹುಟ್ಟುವಾಗ ಕಲಿಕೆಯಿರುವುದಿಲ್ಲ. ಕಲಿಕೆ ಎಂದರೆ ಅರಿವಿನ ಪ್ರೇಮ ಹಾಗು ಒಂದು ಕೆಲಸವನ್ನು ಕೇವಲ ಆ ಕೆಲಸ ಮಾಡುವುದಕ್ಕಾಗಿಯೇ ಮಾಡುವಂತಹ ಪ್ರೇಮ. ಯಾವುದೇ ಬಗೆಯ ಕಡ್ಡಾಯವಿಲ್ಲದೆ ಇದ್ದಾಗ ಕಲಿಕೆ ಇರುತ್ತದೆ. ಈ ಕಡ್ಡಾಯ ಹಲವಾರು ರೂಪ ಧರಿಸುತ್ತದೆ. ಪ್ರಭಾವ, ಮೋಹ, ಭಯ, ಮನವೊಲಿಸಿ ಪ್ರೋತ್ಸಾಹಿಸುವಿಕೆ, ಬಹುಮಾನ ನೀಡುವುದು ಇತ್ಯಾದಿ ಎಲ್ಲಕಡೆಗಳಲ್ಲೂ ಕಡ್ಡಾಯ, ಒತ್ತಾಯ ಇದ್ದೇ ಇದೆ.

ಹೋಲಿಕೆಯ ಮೂಲಕ ಕಲಿಕೆಯನ್ನು ಪ್ರೋತ್ಸಾಹಿಸಬಹುದೆಂಬುದು ಕೆಲವರ ಎಣಿಕೆ. ಆದರೆ ವಸ್ತುಸ್ಥಿತಿ ಅದಕ್ಕೆ ತದ್ವಿರುದ್ಧ. ಹೋಲಿಕೆ ಆಶಾಭಂಗ ತರುತ್ತದೆ; ಹೊಟ್ಟೆಕಿಚ್ಚನ್ನು ಪ್ರೋತ್ಸಾಹಿಸುತ್ತದೆ. ಅದನ್ನೇ ಸ್ಪರ್ಧೆ ಎನ್ನುತ್ತೇವೆ. ಇನ್ನಿತರ ಒಲಿಸುವಿಕೆಯಂತೆ ಹೋಲಿಕೆ ಸಹ ಕಲಿಕೆಯನ್ನು ನಿರ್ಬಂಧಿಸಿ, ಭಯವನ್ನು ಹುಟ್ಟಿಸುತ್ತದೆ. ಮಹತ್ವಾಕಾಂಕ್ಷೆ ಹುಟ್ಟಿಸುವುದೂ ಭಯವನ್ನೇ. ವೈಯಕ್ತಿಕ ಅಥವಾ ಸಮುದಾಯದೊಡನೆ ತನ್ನನ್ನು ತಾನು ಏಕೀಭವಿಸಿಕೊಂಡು ಮಹತ್ವಾಕಾಂಕ್ಷೆ ಎಂದೆಂದೂ ಸಮಾಜಘಾತುಕವಾದದ್ದೇ. ನಾವು ಹೇಳುವ ಉದಾತ್ತ ಮಹತ್ವಾಕಾಂಕ್ಷೆಗಳೆಲ್ಲವೂ ಮೂಲಭೂತವಾಗಿ ವಿಧ್ವಂಸಕ ಸ್ವರೂಪದವೇ.

ಬದುಕಿನ ಹಲವಾರು ಸಮಸ್ಯೆಗಳನ್ನು ಸಮಗ್ರವಾಗಿ ನಿಭಾಯಿಸಲು ಸಮರ್ಥವಾದ ಮನಸ್ಸಿನ ಬೆಳವಣಿಗೆಯನ್ನು ಪ್ರೋತ್ಸಾಹಿಸಬೇಕಾದದ್ದು ತುಂಬ ಅವಶ್ಯಕ. ಹಾಗಾಗದಿದ್ದರೆ ಆ ಸಮಸ್ಯೆಗಳಿಂದ ಪಾರಾಗಲು ಮನಸ್ಸು ಯತ್ನಿಸುತ್ತದೆ ಹಾಗು ತನ್ಮೂಲಕ ಸ್ವಯಂ-ವಿರೋಧಾಭಾಸ, ಆಶಾಭಂಗ ಮತ್ತು ಸಿನಿಕತನಗಳಿಂದ ತುಳುಕುವ ಮನಸ್ಸಾಗಿ ಪರಿವರ್ತಿತವಾಗುತ್ತದೆ. ತನ್ನೆಲ್ಲ ಬಂಧನಗಳ, ಉದ್ದೇಶ ಹಾಗು ಹುಡುಕಾಟಗಳ ಸ್ವರೂಪದ ಬಗ್ಗೆ ಸಂಪೂರ್ಣ ಎಚ್ಚರದಿಂದಿರುವುದು ಮನಸ್ಸಿಗೆ ತುಂಬ ಅಗತ್ಯ.

ಉತ್ತಮ ಮನಸ್ಸನ್ನು ಬೆಳೆಸುವುದು ನಮ್ಮ ಮುಖ್ಯ ಕಾಳಜಿಗಳಲ್ಲಿ ಒಂದಾಗಿರುವುದರಿಂದ, ಕಲಿಸುವ ವಿಧಾನ ಅತ್ಯಂತ ಮಹತ್ವದ್ದಾಗುತ್ತದೆ. ಮನಸ್ಸಿನ ಸರ್ವಾಂಗೀಣ ಬೆಳವಣಿಗೆ ಇರಬೇಕೇ ಹೊರತು, ಕೇವಲ ಮಾಹಿತಿ ನೀಡುವದಲ್ಲ. ಜ್ಞಾನ ನೀಡುವ ಸಮಯದಲ್ಲಿ ಅಧ್ಯಾಪಕನು ವಿದ್ಯಾರ್ಥಿಗಳನ್ನು ಚರ್ಚೆಗೆ ಆಹ್ವಾನಿಸಿ, ತನ್ನ ವಿದ್ಯಾರ್ಥಿಗಳು ಅನ್ವೇಷಕ ಪ್ರವೃತ್ತಿಯವರೂ, ಸ್ವತಂತ್ರವಾಗಿ ವಿಚಾರ ಮಾಡುವಷ್ಟು ಸಮರ್ಥರೂ ಆಗುವಂತೆ ಪ್ರೋತ್ಸಾಹಿಸಬೇಕು.

ಕಲಿಕೆಯಲ್ಲಿ ' ಬಲ್ಲವನು ' ಎಂಬಂತಹ ಅಧಿಕಾರವಾಣಿಯವರಿಗೆ ಸ್ಥಾನವಿಲ್ಲ. ತಮ್ಮ ನಡುವಿರುವ ವಿಶಿಷ್ಟ ಸಂಬಂಧಗಳ ಮೂಲಕ ಅಧ್ಯಾಪಕ ಹಾಗು ವಿದ್ಯಾರ್ಥಿ— ಇಬ್ಬರೂ ಕಲಿಯುತ್ತಿರುತ್ತಾರೆ; ಇದರರ್ಥ ವಿಚಾರದ ವ್ಯವಸ್ಥಿತ ಕ್ರಮವನ್ನು ಅಧ್ಯಾಪಕ ನಿರ್ಲಕ್ಷಿಸುತ್ತಾನೆ ಎಂದಲ್ಲ. ಅಧಿಕಾರವಾಣಿಯಿಂದ ಜ್ಞಾನದ ಬಗ್ಗೆ ಹೇಳಿಕೆ ನೀಡುತ್ತ ಹೋಗುವ ಶಿಸ್ತಿನ ಮೂಲಕ, ವಿಚಾರದಲ್ಲಿ ವ್ಯವಸ್ಥಿತ ಕ್ರಮ ತರಲು ಶಕ್ಯವಿಲ್ಲ; ಆದರದು, ಧೀಮಂತಿಕೆಯನ್ನು ಬೆಳೆಸುವಲ್ಲಿ ಸ್ವಾತಂತ್ರ್ಯದ ಭಾವನೆ ಇರಲೇಬೇಕು ಎನ್ನುವುದನ್ನು ಅಧ್ಯಾಪಕನು ಅರಿತಾಗ ಸಹಜವಾಗಿಯೇ ಬರುವಂತಹದು ಈ ಸ್ವಾತಂತ್ರ್ಯವೆಂದರೆ— ಮನಸ್ಸಿಗೆ ಕಂಡಕಂಡ ಹಾಗೆ ಮಾಡುವದಲ್ಲ ಅಥವಾ ಪ್ರತಿಯೊಂದನ್ನೂ ವಿರೋಧಿಸುತ್ತ ಹೋಗುವ ಸ್ವೈರತೆಯೂ ಅಲ್ಲ. ಈ ಸ್ವಾತಂತ್ರ್ಯವೆಂದರೆ ವಿದ್ಯಾರ್ಥಿಯು ತನ್ನ ಅಂತರ್ಯದ ಒತ್ತಡ ಹಾಗು ಉದ್ದೇಶಗಳ ಬಗ್ಗೆ ಎಚ್ಚರವಾಗುವಲ್ಲಿ ನೀಡುವ ಸಹಾಯ. ಆತನ ದೈನಂದಿನ ವಿಚಾರ ಹಾಗು

ಕಾರ್ಯ-ಚಟುವಟಿಕೆಗಳಲ್ಲೇ ಆ ಒತ್ತಡ ಹಾಗು ಉದ್ದೇಶಗಳು ಆತನಿಗೆ ವ್ಯಕ್ತವಾಗುತ್ತಿರುತ್ತವೆ.

ಶಿಸ್ತಿಗೆ ಒಳಪಟ್ಟ ಮನಸ್ಸು ಹಾಗು ಆಸೆಗಳು ಹತ್ತಿಕ್ಕಲ್ಪಟ್ಟ ಮನಸ್ಸು ಎಂದಿಗೂ ಸ್ವತಂತ್ರ ಮನಸ್ಸಲ್ಲ. ಆಶೆಯ ಸಮಗ್ರ ಪ್ರಕ್ರಿಯೆ ಅರಿತಾಗಷ್ಟೇ ಆ ಬಿಡುಗಡೆ ಶಕ್ಯ. ಒಂದು ವಿಶಿಷ್ಟ ವಿಚಾರ ಅಥವಾ ನಂಬಿಕೆಯ ಚೌಕಟ್ಟಿನಲ್ಲೇ ಓಡಾಡುವ ಹಾಗೆ ಪರಿಮಿತಿಗೊಳಿಸುವುದು ಶಿಸ್ತು. ಅಂಥ ಮನಸ್ಸಿಗೆ ಧೀಮಂತವಾಗಲು ಎಂದೆಂದೂ ಶಕ್ಯವಾಗುವುದಿಲ್ಲ. ಶಿಸ್ತು ಅಧಿಕಾರವನ್ನು ಬಗ್ಗಿಸುವಂಥಾದ್ದು. ಒಂದು ಸಮಾಜದ ಚೌಕಟ್ಟು ಕೇಳುವ, ಕಾರ್ಯ ನಿರ್ವಹಿಸುವ ಸಾಮರ್ಥ್ಯವನ್ನಷ್ಟೇ ಶಿಸ್ತು ಕೊಡಬಲ್ಲದೇ ಹೊರತು, ತನ್ನದೇ ಸಾಮರ್ಥ್ಯವುಳ್ಳ ಧೀಮಂತಿಕೆಯನ್ನು ಅದು ಎಚ್ಚರಿಸುವುದಿಲ್ಲ. ನೆನಪಿನ ಮುಖಾಂತರ ಮಾತ್ರ, ತನ್ನ ಸಾಮರ್ಥ್ಯವನ್ನು ಬೆಳೆಯಿಸಿಕೊಂಡ ಮನಸ್ಸು ಆಧುನಿಕ ಕಂಪ್ಯೂಟರ್ ಇದ್ದಂತೆ; ಆತ್ಯಾಶ್ಚರ್ಯಕರ ರೀತಿಯಲ್ಲಿ ಕೆಲಸ ಮಾಡಿದರೂ ಅದು ಕೇವಲ ಯಂತ್ರವಷ್ಟೇ! ಒಂದು ವಿಶಿಷ್ಟ ದಿಸೆಯಲ್ಲಿ ವಿಚಾರಮಾಡಲು ಹಚ್ಚುವ ಒತ್ತಾಯಮಾಡಬಹುದು ಅಧಿಕಾರ. ಈ ಹಿಂದಿನ ತೀರ್ಮಾನಗಳಂತೆ ಅಥವಾ ಒಂದು ನಿರ್ದಿಷ್ಟ ಧಾಟಿಯಲ್ಲಿ ನಿರ್ದೇಶಿಸಿದ ಹಾಗೇ ವಿಚಾರಮಾಡುವುದು— ಎಂದರೆ ವಿಚಾರಮಾಡುವದಲ್ಲ. ಹಾಗೆ ಮಾಡುವು-ದೆಂದರೆ ಕೇವಲ ಮನುಷ್ಯಯಂತ್ರ ಕೆಲಸ ಮಾಡಿದಂತೆ. ಅದು ಕೇವಲ ವಿಚಾರಹೀನತೆ, ಅತೃಪ್ತಿ, ಆಶಾಭಂಗ ಹಾಗು ಇನ್ನಿತರ ಯಾತನೆಗಳನ್ನು ಮಾತ್ರ ತರುತ್ತದೆ.

ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಪರಮಾವಧಿ ಸಾಮರ್ಥ್ಯವನ್ನು ಅರಿಯು-ವಲ್ಲಿ ಸಹಾಯನೀಡಿ, ಆತನ ವ್ಯಕ್ತಿತ್ವ ಸಮಗ್ರವಾಗಿ ಬೆಳೆಯುವಂತೆ ಮಾಡು-ವುದೇ ನಮ್ಮ ಕಾಳಜಿ. ಆ ಸಾಮರ್ಥ್ಯ ಅಧ್ಯಾಪಕನ ಮನಸ್ಸಿನಲ್ಲಿರುವ ಕಾಲ್ಪನಿಕ ಆದರ್ಶ ಖಂಡಿತ ಅಲ್ಲ. ಯಾವುದೇ ಬಗೆಯ ಹೋಲಿಕೆ ವ್ಯಕ್ತಿತ್ವ ಸಂಪೂರ್ಣವಾಗಿ ಅರಳುವಲ್ಲಿ ಅಡ್ಡಿಯುಂಟುಮಾಡುತ್ತದೆ. ಒಬ್ಬ ಹೂದೋಟ ತಜ್ಞನ ಪರಮಾವಧಿ ಸಾಮರ್ಥ್ಯ ಹಾಗು ಒಬ್ಬ ಭೌತವಿಜ್ಞಾನಿಯ ಪರಮಾವಧಿ ಸಾಮರ್ಥ್ಯ ಎರಡೂ ಹೋಲಿಕೆಯಿಲ್ಲದಿದ್ದಾಗ ಸಮ-ಸಮವೇ ಹೋಲಿಕೆಯು

ಅಸೂಯೆ, ಮೇಲು-ಕೀಳು ಎಂಬ ಭಾವನೆಗಳನ್ನು ಸೃಷ್ಟಿಸಿ ಸಂಘರ್ಷಕ್ಕೆ ಕಾರಣವಾಗುತ್ತದೆ. ಪ್ರೀತಿ-ಪ್ರೇಮ, ದುಃಖದ ಹಾಗೆ ಹೋಲಿಕೆಗೆ ಸಿಗ-ದಂತಹದು. ಶ್ರೀಮಂತರದಿರಲಿ, ಬಡವರದಿರಲಿ ದುಃಖ-ದುಃಖವೇ, ಪ್ರೀತಿ, ಪ್ರೀತಿಯೇ. ಹೆಚ್ಚು-ಕಮ್ಮಿ, ಎಂದೆಲ್ಲ ತಾರತಮ್ಯ ಮಾಡಲು ಬರುವುದಿಲ್ಲ— ಇಂಥವುಗಳಲ್ಲಿ.

ಪ್ರತಿಯೊಬ್ಬ ವ್ಯಕ್ತಿಯ ಸಂಪೂರ್ಣ ಬೆಳವಣಿಗೆಯೇ ಎಲ್ಲರೂ ಸಮಾನ-ರಾದ ಸಮಾಜವನ್ನು ನಿರ್ಮಿಸುತ್ತದೆ. ಇಂದು ನಡೆಯುತ್ತಿರುವ ರಾಜಕೀಯ, ಆರ್ಥಿಕ ಅಥವಾ ಆಧ್ಯಾತ್ಮಿಕ ತಳಹದಿಯ ಮೇಲೆ ಸಾಮಾಜಿಕ ಸಮಾನತೆ ತರುವ ಯತ್ನ ಅರ್ಥವಿಲ್ಲದ್ದು. ಸಮಾನತೆ ಸ್ಥಾಪಿಸುವ ಉದ್ದೇಶದ ಸಾಮಾ-ಜಿಕ ಸುಧಾರಣೆಗಳು ಸಮಾಜವಿರೋಧಿ ಚಟುವಟಿಕೆಗಳನ್ನೇ ಹುಟ್ಟಿಸುತ್ತವೆ. ಯೋಗ್ಯರೀತಿಯ ಶಿಕ್ಷಣ ನೀಡಿದಾಗ ಸಾಮಾಜಿಕ ಮತ್ತು ಇನ್ನಿತರ ಸುಧಾರ-ಣೆಗಳ ಮೂಲಕ ಸಮಾನತೆಯನ್ನು ತರುವ ಉದ್ದೇಶವೇ ಇರುವುದಿಲ್ಲ.

ಕೆಲಸ ಹಾಗು ಸ್ಥಾನ ಅಥವಾ ಅಂತಸ್ತುಗಳ ಅಂತರವನ್ನು ಸ್ಪಷ್ಟವಾಗಿ ಅರಿಯಬೇಕು. ಕೆಲಸಗಳು ಮೇಲು-ಕೀಳು ಎಂಬ ಹೋಲಿಕೆಯಲ್ಲೇ ಮೈತಾ-ಳಿದ್ದು, ಈ ಅಂತಸ್ತಿನ, ಪ್ರತಿಷ್ಠೆಯ ಭಾವನೆ. ಪ್ರತಿಯೊಬ್ಬನ ಸಾಮರ್ಥ್ಯವೂ ಸಂಪೂರ್ಣ ಅರಳಿರುವಾಗ, ಕೆಲಸಗಳ ಹೋಲಿಕೆಗಳೇ ಇರುವುದಿಲ್ಲ. ಅಧ್ಯಾಪಕ, ಪ್ರಧಾನಮಂತ್ರಿ, ತೋಟಿಗ ಇತ್ಯಾದಿಯಾಗಿ ಸಾಮರ್ಥ್ಯಗಳ ಅಭಿವ್ಯಕ್ತಿ ಇರುತ್ತದೆ. ಹೀಗಾಗಿ ಅಂತಸ್ತಿನ ಪ್ರಜ್ಞೆ ಅಸೂಯೆಯ ವಿಷದ ಹಲ್ಲನ್ನು ಕಳೆದುಕೊಳ್ಳುತ್ತದೆ.

ಇಂದು ಕಾರ್ಯ ಅಥವಾ ತಾಂತ್ರಿಕ ಸಾಮರ್ಥ್ಯವು ವ್ಯಕ್ತಿಯ ಹೆಸರಿನ ಮುಂದೆ ಹಚ್ಚಲ್ಪಡುವ ಪದವಿಗಳ ಮೂಲಕ ಗೊತ್ತಾಗುತ್ತದೆ. ಆದರೆ ಮನು-ಷ್ಯನ ಇಡೀ ವ್ಯಕ್ತಿತ್ವದ ಬೆಳವಣಿಗೆ ನಮ್ಮ ಕಾಳಜಿಯಾಗಿದ್ದಾಗ ನಮ್ಮ ಧೋರಣೆಯೇ ಬದಲಾಗಬೇಕು. ಸಾಮರ್ಥ್ಯವಿರುವ ಒಬ್ಬನು ಪದವಿ ಪಡೆಯ-ಬಹುದು, ಪಡೆಯದೆಯೂ ಇರಬಹುದು. ಆದರೆ ಆತನಿಗೆ, ಆತನ ಪದವಿಯ ಮೂಲಕ ತಿಳಿಸಲಾರದಷ್ಟು ಸಾಮರ್ಥ್ಯ ಹಾಗು ಅರಿವು ಇರುತ್ತವೆ. ಕೇವಲ ತಾಂತ್ರಿಕ ಕೌಶಲ್ಯ ‘ ಅಹಂ ’ ಕೇಂದ್ರಿತ-ಆತ್ಮವಿಶ್ವಾಸವನ್ನು ಹುಟ್ಟಿಸುವುದೆ-

ರಿಂದ ಅದು ಸಮಾಜವಿರೋಧಿ. ಈ ಬಗೆಯ ತಾರತಮ್ಯವು ಪ್ರಯೋಜನದ ದೃಷ್ಟಿಯಿಂದ ಇರಬಹುದು. ಆದರೆ ಶಿಕ್ಷಕ, ತನ್ನ ವಿದ್ಯಾರ್ಥಿಗಳ ಸಾಮರ್ಥ್ಯಗಳನ್ನು ಹಾಗೆ ಹೋಲಿಸಿ, ಮೇಲು-ಕೀಳು ಎಂದು ಪೌರ್ವಾಪರ್ಯ ನಿರ್ಧಾರ ಮಾಡಬಾರದು.

ವಿದ್ಯಾರ್ಥಿಗೆ ತನ್ನ ಐಚ್ಛಿಕ ವಿಷಯವನ್ನು ಆಯ್ದುಕೊಳ್ಳಲು ಕೊಡಬಾರದು. ಯಾಕೆಂದರೆ, ಈ ಹಂತದಲ್ಲಿ ಆತನ ಆಯ್ಕೆಯನ್ನು ಯಾವುದೋ ಲಹರಿಯೋ, ಪೂರ್ವಗ್ರಹವೋ, ಸುಲಭವೆನ್ನಿಸಬಹುದಾದ ಭಾವನೆಯೋ ಕೆಲವು ವಿಷಯಗಳನ್ನು ಆಯ್ದುಕೊಳ್ಳಲು ಪ್ರೇರೇಪಿಸಬಹುದು ಅಥವಾ ತತ್ಕಾಲೀನ ಅಗತ್ಯತೆಯನ್ನು ಅನುಲಕ್ಷಿಸಿಯೂ ಆತ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ ಆತನಿಗೆ ತನ್ನನ್ನೇ ಕಂಡುಕೊಳ್ಳಲು, ತನ್ಮೂಲಕ ತನ್ನಲ್ಲಿಯ ಅಂತರ್ಗತ ಸಾಮರ್ಥ್ಯವನ್ನು ಬೆಳೆಸಿಕೊಳ್ಳಲು ಸಹಾಯ ಮಾಡಿದರೆ, ಸ್ವಾಭಾವಿಕವಾಗಿ ಆತ ಅತ್ಯಂತ ಸುಲಭ ವಿಷಯಗಳನ್ನಲ್ಲ, ಯಾವುದರ ಮೂಲಕ ತನ್ನನ್ನೇ ತಾನು ಪರಿಪೂರ್ಣವಾಗಿ ಅಭಿವ್ಯಕ್ತಿಸಿಕೊಳ್ಳಬಹುದೋ ಅಂಥ ವಿಷಯಗಳನ್ನು ಆಯ್ದುಕೊಳ್ಳಬಹುದು. ಸುರುವಿನಿಂದಲೇ ಬದುಕನ್ನು ಅದರ ಸಮಗ್ರತೆಯಲ್ಲಿ—ಅದರೆಲ್ಲ ಮಾನಸಿಕ, ಬೌದ್ಧಿಕ, ಭಾವನಾತ್ಮಕ ಸಮಸ್ಯೆಗಳೊಂದಿಗೆ ನೋಡುವಂತೆ ವಿದ್ಯಾರ್ಥಿಗೆ ಸಹಾಯ ನೀಡಿದರೆ, ಆತ ಬದುಕಿಗೆ ಹೆದರುವುದಿಲ್ಲ.

ಬದುಕನ್ನು ಸಮಗ್ರವಾಗಿ ನೋಡುವ ಸಾಮರ್ಥ್ಯವೇ ಬುದ್ಧಿವಂತಿಕೆ ಅಥವಾ ಧೀಮಂತಿಕೆ. ಅಂಕಗಳನ್ನೋ, ಗ್ರೇಡ್‌ಗಳನ್ನೋ ಕೊಡುವುದು ಬುದ್ಧಿವಂತಿಕೆಯನ್ನು ಖಚಿತಪಡಿಸುವುದಿಲ್ಲ. ತದ್ವಿರುದ್ಧವಾಗಿ ಮನುಷ್ಯನ ಘನತೆಯನ್ನು ತಗ್ಗಿಸುವಂತಹದು, ಶಕ್ತಿಯನ್ನು ಕುಗ್ಗಿಸುವಂತಹದು. ಇದರರ್ಥ ಪ್ರತಿ ವಿದ್ಯಾರ್ಥಿಯ ಪ್ರಗತಿಯನ್ನು ಗಮನಿಸಿ ದಾಖಲಿಸಬಾರದೆಂತಲ್ಲ. ಸಹಜವಾಗಿ ಮಕ್ಕಳ ಭವಿತವ್ಯದ ಬಗ್ಗೆ ಆತಂಕದಿಂದಿರುವ ಪಾಲಕರು ಅಂಥ ಪ್ರಗತಿಯ ವರದಿ ಬಯಸುತ್ತಾರೆ. ಆದರೆ ಈ ವರದಿಯ ಆಧಾರದ ಮೇಲೆಯೇ ಪಾಲಕರು ತಮ್ಮ ಗುರಿ ಈಡೇರಲು ಬೇಕಾದಂತಹ ಒತ್ತಾಯ ತರತೊಡಗಿ, ಶಿಕ್ಷಕನ ಉದ್ದೇಶವನ್ನೇ ಅರ್ಥಮಾಡಿಕೊಳ್ಳದೇ ಹೋದರೆ ಮಾತ್ರ, ಶಿಕ್ಷಕನ ಪ್ರಯತ್ನ ನಿರರ್ಥಕವಾಗುತ್ತದೆ.

ಅಂಥ ಶಾಲೆಗಳಲ್ಲಿ ಕೊಡುತ್ತಿರುವ ಶಿಕ್ಷಣಕ್ರಮದ ಸ್ವರೂಪವನ್ನು ಾಲಕರು ಅರಿತುಕೊಳ್ಳಬೇಕು. 'ಒಂದಲ್ಲ ಒಂದು ಉದ್ಯೋಗಕ್ಕೆ ಸೇರಿ ದುಕಲು ಅನುಕೂಲವಾಗುವಂಥ ಪದವಿ ಮಕ್ಕಳಿಗೆ ಸಿಕ್ಕರೆ ಸಾಕು' ಎಂಬ ಮಾಧಾನದ ಭಾವನೆ ಪಾಲಕರಲ್ಲಿ ಸಾಮಾನ್ಯ. ಅವರು ತಮ್ಮ ಮಕ್ಕಳು ಂತೋಷದಿಂದ ಇರಬೇಕು ಎಂಬ ಅಸ್ಪಷ್ಟ ಅಪೇಕ್ಷೆ ಇಟ್ಟುಕೊಳ್ಳುವುದರ ೂರತಾಗಿ ಈ ಸಮಗ್ರ ಬೆಳವಣಿಗೆ ಇತ್ಯಾದಿಗಳ ಬಗ್ಗೆ ಹೆಚ್ಚು ತಲೆಕೆಡಿಸಿ- ೊಳ್ಳುವುದಿಲ್ಲ. ತಮ್ಮ ಮಕ್ಕಳು ಭಾರೀ ಯಶಸ್ವಿಗಳಾಗಬೇಕು— ತಮ್ಮ-ತಮ್ಮ ್ಷೇತ್ರದಲ್ಲಿ ಎಂದು, ಹೆಚ್ಚು ಜ್ಞಾನ ಪಡೆಯಲು ಹೆಚ್ಚು ಓದಬೇಕೆಂದು ಮಕ್ಕ- ನ್ನು ಗದರಿಸುತ್ತಾರೆ, ವಾತ್ಸಲ್ಯದಿಂದ ಒತ್ತಾಯಿಸುತ್ತಾರೆ. ಆದ್ದರಿಂದಲೇ ುಸ್ತಕ ಅತಿ ಮುಖ್ಯ ಎನಿಸುವುದು; ಇದರಿಂದ ಕೇವಲ ಸ್ಮೃತಿಶಕ್ತಿಯ ಬೆಳವ- ಿಗೆ, ನಿಜವಾದ ವಿಚಾರದ ಗುಣವಿರದ, ಗಂಧವಿರದ ಕೇವಲ ಗಿಳಿಪಾಠ, ಪುನರು- ಚ್ಚಾರ ಮಾತ್ರ ವಿದ್ಯಾಭ್ಯಾಸ ಎನಿಸಿಕೊಳ್ಳುತ್ತದೆ.

ಶಿಕ್ಷಕ ಎದುರಿಸುವ ಅತಿ ದೊಡ್ಡ ಕಷ್ಟವೆಂದರೆ ಬಹುಶಃ ಈ ವಿಶಾಲ- ಾದ ಹಾಗು ಆಳವಾದ ಶಿಕ್ಷಣದ ಬಗ್ಗೆ ಪಾಲಕರ ಉದಾಸೀನತೆ (ಔದಾಸೀನ್ಯ). ವರಿಗೆ ಬೇಕಾದದ್ದು ತಮ್ಮ ಮಕ್ಕಳು ಮೇಲಿಂದ ಮೇಲೆ ಏನಾದರೂ ಸ್ವಲ್ಪ ಜ್ಞಾನ ಮಾಡಿಕೊಂಡು, ಅದರ ಮೂಲಕ ಈ ಭ್ರಷ್ಟಗೊಂಡ ಸಮಾಜದಲ್ಲಿ ಗೌರವಾನ್ವಿತ ಸ್ಥಾನ ಹೊಂದುವುದು, ಅಷ್ಟೇ. ಆದ್ದರಿಂದ ಶಿಕ್ಷಕನು, ಈ ಮಕ್ಕಳಿಗೆ ಸರಿಯಾಗಿ ಕಲಿಸುವುದಷ್ಟೇ ಅಲ್ಲ, ಶಾಲೆಯಲ್ಲಿ ಕಲಿಸಿದ್ದನ್ನು ಾಲಕರು ವ್ಯರ್ಥಗೊಳಿಸದ ಹಾಗೆ ಸಹ ನೋಡಿಕೊಳ್ಳಬೇಕು. ಶಾಲೆ ಹಾಗು ಮನೆ ಅರ್ಥಪೂರ್ಣ ಶಿಕ್ಷಣದ ಜಂಟಿಕೇಂದ್ರಗಳಾಗಿದ್ದು, ಪರಸ್ಪರ ಪೂರಕ- ಾಗಿರಬೇಕು; ಶಿಕ್ಷಕರು ಹಾಗು ಪಾಲಕರು ಪರಸ್ಪರ ವಿರುದ್ಧವಾದುದನ್ನು ಾಡುವ ಸ್ಥಿತಿ ಇರಬಾರದು. ಶಿಕ್ಷಕ ಮಾಡುತ್ತಿರುವುದರ ಬಗ್ಗೆ ಪಾಲಕರಿಗೆ ಪೂರ್ಣ ಜ್ಞಾನವಿದ್ದು, ತಮ್ಮ ಮಕ್ಕಳ ಸಮಗ್ರ ಬೆಳವಣಿಗೆಯ ಬಗ್ಗೆ ಸಕ್ತಿ ಜೀವಂತವಾಗಿರಬೇಕು; ಯೋಗ್ಯ ಶಿಕ್ಷಣ ದೊರೆಯುವಲ್ಲಿ (ಸಮ) ರ್ಣದಷ್ಟು ಜವಾಬ್ದಾರಿಯನ್ನು ಹೀಗೆ ಪಾಲಕರೂ ಹೊರಬೇಕು. ಶಿಕ್ಷಕ, ದ್ಯಾರ್ಥಿ ಹಾಗು ಪಾಲಕ ಹೀಗೆ ಮೂವರ ಮಧ್ಯೆ ಸರಿಯಾದ ಸಂಬಂಧ

ಪಿದ್ದಾಗ ಮಾತ್ರ, ಮಗುವಿನ ಸಮಗ್ರ ವಿಕಾಸ ಶಕ್ಯವಾಗುತ್ತದೆ. ಪಾಲಕರ ಮನಸ್ಸಿನ ಲಹರಿ ಬಯಸಿದಂತೆಯೋ ಅಥವಾ ಕೆಲವು ಸಲ ಅವರ ಮೊಂಡ ಹಟದ ಇಚ್ಛೆಗಳಂತೆಯೋ ಶಿಕ್ಷಕ ನಡೆದುಕೊಳ್ಳಲಾರದ್ದರಿಂದ, ಶಿಕ್ಷಕನನ್ನು ಸರಿಯಾಗಿ ಅರ್ಥಮಾಡಿಕೊಂಡು ಪಾಲಕರು ಸಹಕರಿಸಬೇಕು, ತಮ್ಮ ಮಕ್ಕಳಲ್ಲಿ ಗೊಂದಲ, ಸಂಘರ್ಷಗಳಿಗೆ ಕಾರಣರಾಗಬಾರದು.

ಮಗುವಿಗೆ ಅರಿಯುವ ಸ್ವಾಭಾವಿಕ ಕುತೂಹಲ, ಕಲಿಯುವ ಆಸಕ್ತಿ ಪ್ರಾರಂಭದಿಂದಲೂ ಇರುತ್ತದೆ. ಅದನ್ನು ಬುದ್ಧಿವಂತಿಕೆಯಿಂದ ಸದಾಕಾಲ ಪ್ರೋತ್ಸಾಹಿಸಬೇಕು. ತನ್ಮೂಲಕ ಅದು ಸದಾ ಜೀವಂತವೂ, ಆರೋಗ್ಯ-ಪೂರ್ಣವೂ ಆಗಿರುವಂತೆ ನೋಡಿಕೊಂಡು ನಿಧಾನವಾಗಿ ಆತ ವಿಭಿನ್ನ ವಿಷಯಗಳ ಅಧ್ಯಯನಕ್ಕೆ ಮುಂದುವರಿಯುವಂತೆ ಪ್ರೇರೇಪಿಸಬೇಕು. ಮಗುವಿನ ಕಲಿಯುವ ಲವಲವಿಕೆಯನ್ನು ಸದಾ ಪ್ರೋತ್ಸಾಹಿಸುತ್ತಿದ್ದರೆ ಗಣಿತ, ಭೂಗೋಲ, ಇತಿಹಾಸ, ವಿಜ್ಞಾನ ಇತ್ಯಾದಿ ಯಾವ ವಿಷಯಗಳ ಅಧ್ಯಯನ, ಕಲಿಕೆ ಮಗುವಿಗೆ ಸಮಸ್ಯೆಯಾಗದು, ಅಧ್ಯಾಪಕರಿಗೂ ಸಮಸ್ಯೆಯಾಗದು. ಆನಂದದಾಯಕ ವಾತ್ಸಲ್ಯ ಹಾಗು ವಿಚಾರಪೂರ್ಣ ಕಾಳಜಿಗಳಿರುವ ವಾತಾ-ವರಣದಲ್ಲಿ ಕಲಿಕೆ ಸುಗಮವಾಗಿರುತ್ತದೆ.

ಸಂವೇದನಾಶೀಲತೆ ಹಾಗು ಭಾವನಾತ್ಮಕವಾಗಿ ತೆರೆದುಕೊಂಡಿರುವುದನ್ನು ವಿದ್ಯಾರ್ಥಿಯಲ್ಲಿ ಬೆಳೆಸುವದು, ಶಿಕ್ಷಕರೊಂದಿಗೆ ತನ್ನ ಸಂಬಂಧ ಸುರಕ್ಷಿತ ಎಂದು ಅವನಿಗೆ ಅನಿಸಿದಾಗಲೇ ಶಕ್ಯ. ಸಂಬಂಧದಲ್ಲಿ ತಾನು ಸುರಕ್ಷಿತನೆಂಬ ಭಾವನೆ ಮಗುವಿನ ಪ್ರಾಥಮಿಕ ಅಗತ್ಯ. ಸುರಕ್ಷಿತತೆಯ ಅನಿಸಿಕೆ ಹಾಗು ಪರಾವಲಂಬನೆಯ ಅನಿಸಿಕೆಗಳಲ್ಲಿ ಅಜಗಜಾಂತರವಿದೆ. ತಿಳಿದೋ, ತಿಳಿಯ-ದೆಯೋ ಹೆಚ್ಚು ಜನ ಶಿಕ್ಷಕರು ಪರಾವಲಂಬನೆಯ ಭಾವನೆಯನ್ನು ಬೆಳೆಸು-ತ್ತಾರೆ; ತನ್ಮೂಲಕ ಸೂಕ್ಷ್ಮರೂಪದಲ್ಲಿ ಭಯವನ್ನೂ ಪ್ರೋತ್ಸಾಹಿಸು-ತ್ತಾರೆ— ತಮ್ಮ ವಾತ್ಸಲ್ಯ ಅಥವಾ ಅಧಿಕಾರದಿಂದ ಪಾಲಕರು ಮಾಡು-ವದೂ ಇವನ್ನೇ. ‘ ಮಗು ಹೇಗಿರತಕ್ಕದ್ದು, ಏನು ಮಾಡತಕ್ಕದು ’ ಎನ್ನುವು ದನ್ನು ಅಧಿಕಾರವಾಣಿಯಿಂದಲೇ ತಂದೆ-ತಾಯಿಗಳು ಮತ್ತು ಪಾಲಕರು ಮಗುವಿಗೆ ಹೇಳುತ್ತಲೇ ಹೋಗುವುದರಿಂದ, ಈ ಬಗೆಯ ಪರಾವಲಂಬನೆಯ

ಭಾವನೆ ಮಗುವಿನಲ್ಲಿ ಬೆಳೆದುಬರುತ್ತದೆ. ಪರಾವಲಂಬನೆಯಲ್ಲಿ ಭಯದ ನೆರಳು ಇದ್ದೇ ಇದೆ. ಈ ಭಯವೇ ಮಗುವು, ಏನೂ ವಿಚಾರ ಮಾಡದೇ ಹಿರಿಯರು ಹೇಳಿದ್ದನ್ನೆಲ್ಲ ವಿಧೇಯರಾಗಿ ಅನುಸರಿಸುವಂತೆ, ಸ್ವೀಕರಿಸುವಂತೆ ಮಾಡುತ್ತದೆ. ಇಂಥ ಪರಾವಲಂಬನೆಯ ವಾತಾವರಣದಲ್ಲಿ ಸಂವೇದನೆ ಸಂಪೂರ್ಣ ನಾಶ-ವಾಗುತ್ತದೆ. ಆದರೆ ಯಾವಾಗ ತಾನು ಸುರಕ್ಷಿತ ಎಂಬ ಅನಿಸಿಕೆ ಮಗುವಿಗೆ ಇರುತ್ತದೆಯೋ, ಆಗ ಅವರ ಭಾವನಾತ್ಮಕ ವಿಕಾಸವು ಭಯದಿಂದ ನಾಶ ಹೊಂದುವ ಶಕ್ಯತೆ ಇಲ್ಲ.

ಮಗುವಿನ ಸುರಕ್ಷಿತ ಭಾವನೆ ತಾನು ಅಸಂರಕ್ಷಿತ ಎಂಬ ಭಾವನೆಯ ವಿರುದ್ಧವಲ್ಲ. ಅದು ಯಾವ ಅಳುಕಿಲ್ಲದೆ ಶಾಲೆಯಲ್ಲಾಗಲಿ, ಮನೆಯಲ್ಲಾಗಲಿ ಎಲ್ಲೇ ಆಗಲಿ, ತಾನು ಏನಿದ್ದೇನೆಯೋ ಹಾಗೇ ಇದ್ದು, ಬೇರೇನೋ ಆಗಲು ಯಾವುದೇ ಬಗೆಯ ಒತ್ತಾಯ ಇರದಂತಹ ಸ್ಥಿತಿ. ಅಂದರೆ ಆತನಿಗೆ ಮರ ಹತ್ತಬೇಕೆನಿಸಿದರೆ ಹತ್ತಿ, ಬಿದ್ದರೆ ಬೈಸಿಕೊಳ್ಳದಂತಹ ಪರಿಸರ. ಪಾಲಕ ಹಾಗು ಶಿಕ್ಷಕರಿಗೆ ಆತನ ಸಮಗ್ರ ವಿಕಾಸದ ಬಗ್ಗೆ ಕಾಳಜಿ-ಕಳಕಳಿ ಇದ್ದಾಗ ಮಾತ್ರ, ಮಗುವಿಗೆ ಈ ಬಗೆಯಲ್ಲಿ 'ಸುರಕ್ಷಿತ ತಾನು' ಎನ್ನುವ ಭಾವನೆ ಬರಲು ಶಕ್ಯವಾಗುತ್ತದೆ.

ಶಾಲೆಯಲ್ಲಿ ಮಗುವಿಗೆ ನಿಶ್ಚಿಂತೆ, ಸಮೃದ್ಧಿ ಅನಿಸಬೇಕಿದ್ದರೆ, ಶಾಲೆ ಸೇರಿದ ಮೊದಲ ದಿನದಿಂದಲೇ ಆತನಿಗೆ ಸುರಕ್ಷಿತ ಭಾವನೆ ಉಂಟಾಗಬೇಕು. ಈ ಪ್ರಥಮ ದಿನದ ಪರಿಣಾಮ ಅತ್ಯಂತ ಮಹತ್ವದ್ದು. ಹಲವಾರು ಕೃತಕ ಯತ್ನಗಳ ಮೂಲಕ ಮಗುವಿನ ವಿಶ್ವಾಸಗಳಿಸಲು ಶಿಕ್ಷಕ ಪ್ರಯತ್ನಿಸಿದರೆ, ಆತ ಪರಾವಲಂಬನೆಯನ್ನು ಬೆಳೆಸುತ್ತಿದ್ದಾನೆಂದರ್ಥ; ತನ್ನ ಸಮಗ್ರ ವಿಕಾಸದ ಬಗ್ಗೆ ಆಳವಾದ ಕಳಕಳಿ ಇರುವ ಜನರಿರುವ ಸುರಕ್ಷಿತ ತಾಣ ಎನ್ನುವ ಭಾವನೆ ಆರಂಭದಿಂದಲೂ ಈ ಹೊಸ ಸಂಬಂಧದ ಮೂಲಕ ಉಂಟಾಗಬೇಕು.

ಹೊಸರೀತಿಯ ಈ ವಿಶ್ವಾಸದ ಮೇಲೆ ನಿಂತಿರುವ ಸಂಬಂಧದ ಪ್ರಪ್ರಥಮ ಪ್ರಭಾವ ಮಗು ಅನುಭವಿಸುವುದು ಎಂದರೆ, ಹಿರಿಯರೆದುರು ತಾನು ಚಿಕ್ಕವ, ಆದ್ದರಿಂದ ಅಂಜಬೇಕು, ಎಂಬ ನಿರ್ಬಂಧವಿಲ್ಲದೆ ಸಹಜವಾದ ಸಂಪರ್ಕ-ಸಂವಹನದಿಂದ ಇರಲು ಶಕ್ಯ ಎನ್ನುವ ಅನಿಸಿಕೆ. ಹಾಗೆ ಸುರಕ್ಷಿತ ಎನಿಸುವಂಥ

ವಾತಾವರಣದಲ್ಲಿ ಮಗುವಿಗೆ ಕಲಿಕೆಯಲ್ಲಿ ಅವಶ್ಯವಿರುವ ಗೌರವವನ್ನು ತೋರಿಸುವ ವಿಧಾನ ಸಹಜವಾಗಿಯೇ ಇರುತ್ತದೆ. ಈ ಗೌರವ ಎಲ್ಲ ಬಗೆಯ ಭಯ ಹಾಗು ಅಧಿಕಾರ— ದರ್ಪಗಳಿಂದ ಮುಕ್ತವಾಗಿರುವಂತಹದು. ಮಗುವಿಗೆ ಸಂರಕ್ಷಿತ ಭಾವನೆಯಿರುವಾಗಿನ ನಡವಳಿಕೆ ಹಾಗು ಚಾರಿತ್ರ್ಯ ಹಿರಿಯರು ಹೇರಿರುವಂಥದ್ದಾಗಿರದೇ, ಆತನ ಕಲಿಯುವ ಪ್ರಕ್ರಿಯೆಯ ಅಂಗವಾಗಿರುತ್ತದೆ. ಯಾಕೆಂದರೆ ಶಿಕ್ಷಕರೊಡನೆಯ ಸಂಬಂಧದಲ್ಲಿ ಸಂರಕ್ಷಿತ ಭಾವನೆಯಿರುವುದರಿಂದ ಆತ ಸಹಜವಾಗಿಯೇ ಅವರ ಬಗ್ಗೆ ಕಳಕಳಿ ಹೊಂದಿರುತ್ತಾನೆ; ಮತ್ತು ಇಂಥ ವಾತಾವರಣದಲ್ಲಿ ಮಾತ್ರ ಭಾವನಾತ್ಮಕವಾಗಿ ತೆರೆದುಕೊಂಡಿರುವುದು ಹಾಗು ಸಂವೇದನಾಶೀಲತೆ ಶಕ್ಯವಾಗುತ್ತದೆ. ನಿಶ್ಚಿಂತನಾಗಿದ್ದು, ಸಂರಕ್ಷಿತ ಭಾವನೆಯಿರುವಾಗ ಮಗು ತನಗೆ ಬೇಕೆನಿಸಿದ್ದನ್ನು ಮಾಡುತ್ತಾನೆ; ಆದರೆ ಹಾಗೆ ತನಗೆ ಬೇಕೆನಿಸಿದ್ದನ್ನು ಮಾಡುವುದಗಲ್ಲಿ ತನಗೆ ಸರಿ ಎನಿಸಿದ್ದನ್ನೇ ಮಾಡುತ್ತಾನೆ; ಮತ್ತು ಆಗಿನ ಆತನ ನಡಾವಳಿ ಯಾವುದೇ ಬಗೆಯ ಪ್ರತಿಭಟನೆ, ಹಟಮಾರಿತನ ಅಥವಾ ಹತ್ತಿಕ್ಕಲ್ಪಟ್ಟ ಭಾವನೆಗಳ ಅಥವಾ ತಾತ್ಕಾಲಿಕ ಒತ್ತಡ, ಪ್ರಲೋಭನೆಗಳ ಅಭಿವ್ಯಕ್ತಿಯಾಗಿರುವುದಿಲ್ಲ.

ಸಂವೇದನಾಶೀಲತೆ ಎಂದರೆ ಸುತ್ತಲಿನ ಪ್ರತಿಯೊಂದಕ್ಕೂ— ಮರ-ಗಿಡಗಳಿಗೆ, ಪ್ರಾಣಿಗಳಿಗೆ, ಆಕಾಶ, ನದಿಯ ಪ್ರವಾಹ, ಹಾರುತ್ತಿರುವ ಹಕ್ಕಿ, ಸುತ್ತಲಿರುವ ಜನರ ವಿವಿಧ ಭಾವ-ತುಡಿತಗಳಿಗೆ, ಹಾದುಹೋಗುತ್ತಿರುವ ಅಪರಿಚಿತನ ಬಗ್ಗೆ— ಹೀಗೆ ಎಲ್ಲವಕ್ಕೂ ಸಂವೇದನಾಶೀಲನಾಗಿರುವುದು. ಈ ಸಂವೇದನಾಶೀಲತೆ ಲೆಕ್ಕಾಚಾರದಿಂದ ದೂರಾದ, ನಿಸ್ವಾರ್ಥ ಪ್ರತಿಸ್ಪಂದನೆಯನ್ನು ಉಂಟುಮಾಡುತ್ತದೆ. ಇದೇ ನಿಜವಾದ ನೈತಿಕತೆ, ಚಾರಿತ್ರ್ಯ. ಸಂವೇದನಾಶೀಲತೆಯ ಪರಿಣಾಮವಾಗಿ ಮಗುವಿನ ನಡಾವಳಿ ಮುಕ್ತವಾಗಿರುತ್ತದೆ; ಕದ್ದು-ಮುಚ್ಚಿ ಇರುವುದಿಲ್ಲ. ಆದ್ದರಿಂದ ಶಿಕ್ಷಕರ ಯಾವುದೇ ಸೂಕ್ಷ್ಮ ಸಲಹೆಯನ್ನೂ ಪ್ರತಿಭಟನೆ ಅಥವಾ ಘರ್ಷಣೆ ಇಲ್ಲದೆ ಮಕ್ಕಳು ಸ್ವೀಕರಿಸುತ್ತಾರೆ.

ಮಗುವಿನ ಸಮಗ್ರವಿಕಾಸ ನಮ್ಮ ಉದ್ದೇಶವಾಗಿರುವುದರಿಂದ ಆತನ ಬೌದ್ಧಿಕ ವಿಚಾರ-ಶಕ್ತಿಗಿಂತಲೂ ಪ್ರಬಲವಾದ ಆತನ ಭಾವನಾತ್ಮಕ ಒತ್ತಡ

ಳನ್ನು ನಾವು ಅರ್ಥಮಾಡಿಕೊಳ್ಳಬೇಕು. ಈ ಭಾವನಾತ್ಮಕ ಸಾಮರ್ಥ್ಯ-
ನ್ನು ಬೆಳೆಯಿಸಿಕೊಳ್ಳಬೇಕೇ ಹೊರತು, ಅದನ್ನು ಹತ್ತಿಕ್ಕಲು ಸಹಾಯ
ಾಡಬಾರದು. ಅವುಗಳನ್ನು ಯಾವಾಗ ನಾವು ಅರಿತುಕೊಳ್ಳುತ್ತೇವೆಯೋ
ತ್ತು ತನ್ಮೂಲಕ ಭಾವನಾತ್ಮಕ ಹಾಗು ಬೌದ್ಧಿಕ ಸಮಸ್ಯೆಗಳನ್ನು ಅರ್ಥ-
ೂರ್ಣವಾಗಿ ನಿಭಾಯಿಸಲು ಸಮರ್ಥರಾಗುತ್ತೇವೆಯೋ ಆಗ ಅವುಗಳನ್ನು
ದುರಿಸುವಲ್ಲಿ ಭಯಕ್ಕೆ ಆಸ್ಪದವಿರುವುದಿಲ್ಲ.

ಮನುಷ್ಯನ ವ್ಯಕ್ತಿತ್ವದ ವಿಕಾಸಕ್ಕೆ ಸಂವೇದನಾಶೀಲತೆಯನ್ನು ಬೆಳೆ-
ಯಿಸುವ ಮಾಧ್ಯಮವಾಗಿ ಏಕಾಂತತೆ ಅನಿವಾರ್ಯವಾಗುತ್ತದೆ. ಏಕಾಂಗಿ-
ಯಾಗಿರುವದೆಂದರೇನು ? ಧ್ಯಾನವೆಂದರೇನು ? ಸಾಯುವುದೆಂದರೇನು ?
ನ್ನುವುದನ್ನು ಅರಿತುಕೊಳ್ಳಬೇಕು. ಇವನ್ನು ಕಲಿಸಲು ಬರುವುದಿಲ್ಲ; ಪ್ರತಿ-
ಯೊಬ್ಬನೂ ತಾನೇ ಇದನ್ನು ಕಲಿತುಕೊಳ್ಳಬೇಕು. ಅವು ಏನೆಂದು
ನಿರ್ದೇಶಿಸಬಹುದು; ಆದರೆ ಈ ನಿರ್ದೇಶನದಿಂದ ಕಲಿಯುವುದೆಂದರೆ ಏಕಾಂತತೆ-
ಯನ್ನು, ಧ್ಯಾನವನ್ನು ಅನುಭವಿಸಿದ ಹಾಗಲ್ಲ; ಇವುಗಳನ್ನು ಅರಿಯುವು-
ದೆಂದರೆ ಅವುಗಳೇನೆಂದು ಅಖಂಡವಾಗಿ ಅನ್ವೇಷಿಸುತ್ತಲೇ ಇರುವ ಸ್ಥಿತಿ; ಈ
ಅನ್ವೇಷಣೆಯಲ್ಲಿ ನಿರತವಾಗಿರುವ ಮನಸ್ಸಿಗೆ ಮಾತ್ರ ಕಲಿಯುವುದು ಶಕ್ಯ.
ಆದರೆ ಹಳೆಯದರ ಜ್ಞಾನ, ಅಧಿಕಾರಪ್ರಮಾಣ, ಇನ್ನೊಬ್ಬನ ಅನುಭವ
ಇತ್ಯಾದಿಗಳಿಂದ ಈ ಅನ್ವೇಷಣ ಪ್ರಕ್ರಿಯೆ ಹತ್ತಿಕ್ಕಲ್ಪಟ್ಟಾಗ, ಕಲಿಕೆ ಕೇವಲ
ಅನುಕರಣೆಯಾಗುತ್ತದೆ; ಅನುಕರಣೆ ಅನುಭವವಿಲ್ಲದೇ ಕಲಿತಿದ್ದನ್ನು ಪುನರು-
ಚ್ಚಾರ ಮಾಡುವಂತೆ ಮಾಡುತ್ತದೆ.

ಕಲಿಸುವುದೆಂದರೆ ಕೇವಲ ಮಾಹಿತಿ ನೀಡುವದಷ್ಟೇ ಅಲ್ಲ. ಸದಾ
ಶೋಧನಾನಿರತವಾದ ಮನಸ್ಸನ್ನು ಬೆಳೆಯಿಸುವುದು. ಅಂಥ ಮನಸ್ಸು
ಧರ್ಮವೆಂದರೇನು ಎಂಬ ಪ್ರಶ್ನೆಯ ಆಂತರ್ಯ ಅರಿಯಲು ಆಳಕ್ಕಿಳಿಯುತ್ತದೆ;
ದೇವಾಲಯ, ಧಾರ್ಮಿಕವಿಧಿಗಳ ಸ್ಥಾಪಿತ ಧರ್ಮಗಳನ್ನು ಕೇವಲ ಸ್ವೀಕರಿ-
ಸುವದಷ್ಟಕ್ಕೆ ನಿಲ್ಲುವುದಿಲ್ಲ. ನಂಬಿಕೆ, ಮತ-ಸಿದ್ಧಾಂತಗಳ ಸ್ವೀಕಾರ, ಪಾಲನೆ
ಇಷ್ಟೇ ಧರ್ಮವಲ್ಲ; ದೇವರು, ಸತ್ಯ ಅಥವಾ ಯಾವುದೇ ಹೆಸರಿನಿಂದ ಬೇಕಾ-
ದರೂ ಕರೆಯಿರಿ— ಆ ಅಂಥವರ ಶೋಧನೆ ನಿಜವಾದ ಧರ್ಮ.

ದಿನಾಲು ತನ್ನ ಹಲ್ಲು ಉಜ್ಜಿಕೊಳ್ಳುವ ಹಾಗೆ, ಸ್ನಾನ ಮಾಡುವ ಹಾಗೆ, ಹೊಸ ವಿಷಯುಗಳನ್ನು ಕಲಿಯುತ್ತಿರುವ ಹಾಗೆ, ತನ್ನಷ್ಟಕ್ಕೆ ಅಥವಾ ಇತರ-ರೊಡನೆ ಮೌನವಾಗಿ ಕುಳಿತುಕೊಳ್ಳುವ ಕ್ರಿಯೆಯೂ ಇರಬೇಕು. ಮಾರ್ಗ-ದರ್ಶನ ಅಥವಾ ನಿರ್ದೇಶನದ ಮೂಲಕ, ಇಲ್ಲವೆ ಸಂಪ್ರದಾಯದ ಬಾಹ್ಯ ಒತ್ತಡದ ಮೂಲಕ ಅಥವಾ ಏಕಾಂಗಿಯಾಗಿರಲು ಸಾಧ್ಯವಾಗದೇ ಕೇವಲ ಮೌನವಾಗಿ ಕುಳಿತುಕೊಳ್ಳುವವರ ಪ್ರಭಾವದ ಮೂಲಕವಾಗಲಿ, ಈ ಏಕಾಂತತೆಯನ್ನು ತರಲು ಶಕ್ಯವಿಲ್ಲ. ಕನ್ನಡಿಯಲ್ಲಿ ನೋಡಿದ ಹಾಗೆ ಏಕಾಂತದಲ್ಲಿ ನಮ್ಮ ಮನಸ್ಸನ್ನು ನೋಡಬಹುದು. ಅದರ ಮೂಲಕವೇ ಅಹಂಕೇಂದ್ರಿತ ಚಟುವಟಿಕೆಯಾದ ಮಹತ್ವಾಕಾಂಕ್ಷೆಯ ನಿಷ್ಫಲಯತ್ನ—ಅದರೊಂದಿಗಿನ ಸಂಕೀರ್ಣತೆ, ಭಯ, ಹತಾಶೆಗಳಿಂದ ಬಿಡುಗಡೆ ಪಡೆಯಲು ಶಕ್ಯ. ಏಕಾಂತತೆ ಮನಸ್ಸಿಗೆ ಸ್ಥಿರತೆಯನ್ನು-ಕಾಲದ ಮೂಲಕ ಅಳೆಯಲು ಬಾರದ ಸ್ಥಿರತೆಯನ್ನು-ಗಟ್ಟಿತನವನ್ನು ನೀಡುತ್ತದೆ. ಮನಸ್ಸಿನ ಅಂಥ ಸ್ವಚ್ಛತೆಯೇ ಚಾರಿತ್ರ್ಯ. ಚಾರಿತ್ರ್ಯದ ಅಭಾವ ಎಂದರೆ ಸ್ವಯಂವಿರೋಧಾ-ಭಾಸವುಳ್ಳ ಸ್ಥಿತಿ.

ಸಂವೇದನಾಶೀಲನಾಗಿರುವುದು ಎಂದರೆ ಪ್ರೇಮಿಸುವುದು, ಪ್ರೀತಿಸು-ವುದು. ಪ್ರೇಮ, ಪ್ರೀತಿ ಎಂಬ ಶಬ್ದಗಳು 'ಪ್ರೇಮ ಪ್ರೀತಿ' ಅಲ್ಲ. ದೈವಿಕ ಪ್ರೇಮ ಮತ್ತು ಮಾನವೀಯ ಪ್ರೇಮ ಇತ್ಯಾದಿ ವಿಂಗಡಿಸುವಂತಹದಲ್ಲ ಪ್ರೇಮ; ಒಬ್ಬನ ಪ್ರೇಮ, ಹಲವರ ಪ್ರೇಮ ಎಂದು ಅಳತೆಮಾಡುವಂತಹದೂ ಅಲ್ಲ. ಹೂವು ತನ್ನ ಸೌರಭವನ್ನು ಯಥೇಷ್ಟ ನೀಡುವ ಹಾಗೆ, ಪ್ರೇಮ ತನ್ನನ್ನು ತಾನೇ ಅಪಾರವಾಗಿ ಕೊಟ್ಟುಕೊಳ್ಳುವಂತಹದು. ನಮ್ಮ ಸಂಬಂಧ-ಗಳಲ್ಲೆಲ್ಲ ನಾವು ಪ್ರೇಮ, ಪ್ರೀತಿಗಳನ್ನು ಅಳೆಯುವುದರಿಂದ ಅದನ್ನು ನಾಶ-ಪಡಿಸುತ್ತೇವೆ.

ಪ್ರೇಮ, ಪ್ರೀತಿ ಸಮಾಜಸುಧಾರಕ ಅಥವಾ ಸಮಾಜಕಾರ್ಯಕರ್ತನ ಪದಾರ್ಥವಲ್ಲ, ಸರಕಲ್ಲ. ಕ್ರಿಯೆಯ ಸೃಷ್ಟಿಗಾಗಿ ಉದ್ದೀಪಿಸುವ ರಾಜಕೀಯ ಸಾಧನವೂ ಅಲ್ಲ. ರಾಜಕಾರಣಿ ಮತ್ತು ಸಮಾಜ ಸುಧಾರಕರು ಪ್ರೇಮದ ಬಗ್ಗೆ ಮಾತನಾಡುತ್ತಿದ್ದಾಗ, ಅವರು ಕೇವಲ ಆ ಶಬ್ದಗಳನ್ನು ಬಳಸುತ್ತಿದ್ದಾರೆ.

ಯೇ ಹೊರತು, ಪ್ರೇಮದ ಸತ್ಯವನ್ನು ಅವರು ಸ್ಪರ್ಶಿಸುತ್ತಿಲ್ಲ; ಯಾಕೆಂದರೆ ಪ್ರೇಮವನ್ನು ಈ ಕ್ಷಣದ ಅಥವಾ ದೀರ್ಘಕಾಲದ ಒಂದು ಗುರಿ ತಲುಪುವ ಸಾಧನವನ್ನಾಗಿ, ಅಸ್ತ್ರವನ್ನಾಗಿ ಬಳಸಲು ಶಕ್ಯವಿಲ್ಲ. ಪ್ರೇಮವೆನ್ನುವುದು ಜಗತ್ತಿನ ಒಂದು ಭಾಗಕ್ಕೋ ಅರಣ್ಯಪ್ರದೇಶಕ್ಕೋ ಸೀಮಿತವಾಗಿರದೆ ಇಡೀ ಜಗತ್ತನ್ನು ವ್ಯಾಪಿಸಿರುವದು. ಸತ್ಯದ ಪ್ರೇಮ ಯಾವುದೇ ಧರ್ಮದ ಪರಿಮಿತಿಗೆ ಅಳವಡುವಂತಹದಲ್ಲ; ಸಂಘಟಿತ ಧರ್ಮಗಳು 'ಪ್ರೇಮ' ಎನ್ನು-ವದನ್ನು ಉಪಯೋಗಿಸಿದಾಗ, ಅಲ್ಲಿ ಪ್ರೇಮ ಇರುವುದಿಲ್ಲ. ತಮ್ಮ-ತಮ್ಮ ಕಟ್ಟುವಟಿಕೆಗಳಲ್ಲಿ ನಿರತವಾಗಿರುವ ಸಂಘ-ಸಂಸ್ಥೆಗಳು, ಸಂಘಟಿತ ಧರ್ಮಗಳು, ಅಧಿಕಾರಶಾಹಿ ಸರಕಾರಗಳು ತಮಗರಿವಿಲ್ಲದೇನೇ ಪ್ರೇಮವನ್ನು ನಾಶಪಡಿ-ಸುತ್ತವೆ.

ಅರ್ಥಪೂರ್ಣ ಶಿಕ್ಷಣದ ಮೂಲಕ ಸಾಧಿಸಬೇಕಾದ ಮಾನವನ ವ್ಯಕ್ತಿ-ತ್ವದ ಸಮಗ್ರವಿಕಾಸದಲ್ಲಿ ಪ್ರೇಮದ ಗುಣಗಳನ್ನು ಪ್ರಾರಂಭದಿಂದಲೇ ಬೆಳೆಯಿಸಿಕೊಂಡು, ಉಳಿಸಿಕೊಂಡು ಬರಬೇಕಾಗುತ್ತದೆ. ಪ್ರೇಮವು ಭಾವುಕತೆ ಯಲ್ಲ; ಭಕ್ತಿಯೂ ಅಲ್ಲ. ಅದು ಸಾವಿನಷ್ಟೇ ಶಕ್ತಿಯುತವಾದದ್ದು. ಜ್ಞಾನದ ಮೂಲಕ ಪ್ರೇಮವನ್ನು ಖರೀದಿಸಲು ಬರುವುದಿಲ್ಲ; ಪ್ರೇಮವಿಲ್ಲದ ಜ್ಞಾನ-ಸಾಧನೆಯಲ್ಲಿ ನಿರತವಾದ ಮನಸ್ಸು ನಿರ್ದಯತೆಯಲ್ಲಿ ವ್ಯವಹರಿಸುತ್ತ, ಕೇವಲ ಕಾರ್ಯಸಾಮರ್ಥ್ಯವನ್ನು ಮಾತ್ರ ಬೆಳೆಸಿಕೊಳ್ಳುತ್ತಿರುವಂತಹದು.

ಆದ್ದರಿಂದ ವಿನಯ, ಸೌಜನ್ಯ, ಪರಹಿತ ಚಿಂತನೆ, ಸಹನೆ ಹಾಗು ಸಭ್ಯತೆ-ಎಲ್ಲವೂ ಅಗಿರುವ ಈ ಪ್ರೇಮದ ಗುಣಗಳ ಬಗ್ಗೆ ಶಿಕ್ಷಕ, ಪ್ರಾರಂಭ ದಿಂದಲೂ ಕಾಳಜಿ ಹೊಂದಿರಬೇಕು. ವಿನಯ ಹಾಗು ಸಭ್ಯತೆ ಯೋಗ್ಯ ಶಿಕ್ಷಣ ಹೊಂದಿರುವವನ ಸ್ವಾಭಾವಿಕ ಗುಣಗಳು. ಪ್ರಾಣಿಗಳು, ಮರ-ಗಿಡಗಳೂ ಸೇರಿದಂತೆ ಎಲ್ಲದರ ಬಗೆಗೂ ಆತನಿಗೆ ಆದರ, ಗೌರವ. ಇವು ಆತನ ನಡ-ವಳಿಕೆಯಲ್ಲಿ, ಮಾತಿನ ರೀತಿಯಲ್ಲಿ ವ್ಯಕ್ತವಾಗುತ್ತಲೇ ಇರುತ್ತವೆ

ಪ್ರೇಮದ ಈ ಗುಣಗಳನ್ನು ಒತ್ತುಕೊಟ್ಟು ಬೆಳೆಸುವುದರಿಂದ ಮನಸ್ಸು ಮಹತ್ವಾಕಾಂಕ್ಷೆ, ದುರಾಸೆ, ತನ್ನದಾಗಿಸಿಕೊಳ್ಳಬೇಕು ಎಂಬ ಇಚ್ಛೆ ಇತ್ಯಾದಿ-ಗಳಿಂದ ಮುಕ್ತವಾಗುತ್ತದೆ. ಸುಸಂಸ್ಕೃತಗೊಂಡ ಪ್ರೇಮ, ಸದಭಿರುಚಿ ಹಾಗು

ಆದರ್ಶಗಳ ಮೂಲಕ ವ್ಯಕ್ತವಾಗುತ್ತದೆ. ಅಹಂಕಾರದಿಂದ ಉದ್ದೀಪ್ತಗೊಂಡು ಪ್ರಬಲವಾಗುವ ಮನಸ್ಸನ್ನೂ ಸಹ ಈ ಪ್ರೇಮ ಶುದ್ಧೀಕರಿಸುತ್ತದೆ. ನಿಜವಾದ ಪ್ರೇಮವಿರುವಾಗ ಸುಸಂಸ್ಕೃತ ನಡಾವಳಿ ತಾನೇ ತಾನಾಗಿ ಬರುತ್ತದೆ; ಅದು ನಾವೇ ಹೊಂದಾಣಿಕೆಗಾಗಿ ಹಾಕಿಕೊಂಡ ಶಿಸ್ತು ಅಲ್ಲ; ಹೊರಪ್ರಪಂಚದಿಂದ ಒತ್ತಾಯಪೂರ್ವಕ ಹೇರಿದುದರ ಫಲಿತಾಂಶವೂ ಅಲ್ಲ. ಪ್ರೇಮವನ್ನು ಸರಿಯಾಗಿ ಅರ್ಥಮಾಡಿಕೊಂಡು ಅರಿತಾಗ, ಕಾಮ ಹಾಗು ಇನ್ನಿತರ ಹಲವಾರು ಬಗೆಯ ಮಾನಸೀಯ ಸಂಬಂಧ— ಸೂಕ್ಷ್ಮಗಳನ್ನು ಸ್ವಸ್ಥ ಚಿತ್ತದಿಂದ; ನಿರುದ್ವಿಗ್ನಸ್ಥಿತಿಯಲ್ಲಿ, ನಿರ್ಭೀತರಾಗಿ ಪರಿವೀಕ್ಷಿಸಬಹುದು.

ನಮ್ಮ ಬದುಕಿನಲ್ಲಿ ಬಹುಮುಖ್ಯ ಪಾತ್ರ ವಹಿಸುವ ಲೈಂಗಿಕ ಒತ್ತಡಗಳ ಬಗ್ಗೆ, ಮನುಷ್ಯನ ಸಮಗ್ರ ವ್ಯಕ್ತಿತ್ವದ ವಿಕಾಸವೇ ಪ್ರಧಾನ ಮಹತ್ವವಾಗುಳ್ಳ ಶಿಕ್ಷಕ ಅರಿತಿರಬೇಕು. ಪ್ರಾರಂಭದಿಂದಲೂ ಈ ಬಗ್ಗೆ ಮಕ್ಕಳಲ್ಲಿ ಯಾವ ಅನಾರೋಗ್ಯಕರ ಆಸಕ್ತಿಯೂ ಉಂಟಾಗದಂತೆ, ಆತ ಅವರ ಸಹಜ ಆಸಕ್ತಿ-ಯನ್ನು ಎದುರಿಸುವಲ್ಲಿ ಸಮರ್ಥನಾಗಿರಬೇಕು. ಪ್ರೇಮದ ಮಹತ್ವ ಅರಿವಿಗೆ ಬಾರದೇ, ಅನುಭವಕ್ಕೆ ಬಾರದೇ ಕೇವಲ ದೈಹಿಕ ವಿವರಗಳನ್ನು ಕಿಶೋರಾ-ವಸ್ಥೆಯಲ್ಲಿ ಕೊಡುವುದು ಪ್ರಾಯೋಗಿಕ ಕಾಮುಕತೆಗೆ ಅವಕಾಶ ನೀಡಬ-ಹುದು. ದುಷ್ಟ ಮನಸ್ಸನ್ನೂ ಪ್ರೇಮ ಶುದ್ಧಗೊಳಿಸಬಲ್ಲದು. ಸ್ವತಃ ಶಿಕ್ಷಕನಿಗೆ ಪ್ರೇಮದ ಅರಿವಿರದೆ ಹುಡುಗ-ಹುಡುಗಿಯರನ್ನು ಬೇರೆ-ಬೇರೆ ಕುಳ್ಳಿರಿಸು-ವುದು, ಅವರಲ್ಲಿಯ ಕುತೂಹಲ ಹೆಚ್ಚಿಸಿ ಆ ಭಾವೋತ್ಕಟತೆಯನ್ನು ಪ್ರಚೋ-ದಿಸಿ, ಅಂತಿಮವಾಗಿ ಅದು ಕೇವಲ ‘ತೃಪ್ತಿ’ಯ ಹಂಬಲವಾಗಿ ಅಧೋಮುಖಿ-ಗತಿಯನ್ನು ಹೊಂದಬಹುದು. ಆದ್ದರಿಂದ ಹುಡುಗ-ಹುಡುಗಿಯರನ್ನು ಯೋಗ್ಯ ರೀತಿಯಲ್ಲಿ ಒಟ್ಟಿಗೆ ಬೆಳೆಸುವುದು ತುಂಬ ಮಹತ್ವದ ವಿಷಯ.

ಪ್ರೇಮದ ಈ ಗುಣಗಳು ಇನ್ನೂ ಹಲವಾರು ರೀತಿಗಳಲ್ಲಿ ವ್ಯಕ್ತವಾಗ-ಬೇಕು : ಹೂದೋಟ ಮಾಡುವುದು, ಮರಗೆಲಸ, ಚಿತ್ರಕಲೆ, ಕೈಗಾರಿಕೆಯ ಕೆಲಸಗಳು ಇತ್ಯಾದಿ ತನ್ನ ಕೈಯಿಂದಲೇ ಮಾಡುವ ಹಲವು ಬಗೆಯ ಕೆಲಸಗಳ ಮೂಲಕ ಹಾಗು ಮರ-ಗಿಡಗಳನ್ನು, ಭವ್ಯ ಪರ್ವತಾವಳಿಗಳನ್ನು, ಭೂಮಿಯ ಸಮೃದ್ಧ ಸಂಪತ್ತನ್ನು ನೋಡುವುದು, ಮನುಷ್ಯರೇ ತಮ್ಮ-ತಮ್ಮಲ್ಲಿ

ನಿರ್ಮಿಸಿಕೊಂಡಿರುವ ದಾರಿದ್ರ್ಯವನ್ನು ಗಮನಿಸುವುದು, ಪಕ್ಷಿಗಳ ಸಂಗೀತ, ಹರಿವ ನೀರಿನ ಜುಳು–ಜುಳು ನಾದ ಇತ್ಯಾದಿ ಕೇಳಿ ಆನಂದಿಸುವುದು; ಮುಂತಾದ ಜ್ಞಾನೇಂದ್ರಿಯಗಳ ಚಟುವಟಿಕೆಗಳ ಮೂಲಕವೂ ಪ್ರೇಮದ ಗುಣ-ಗಳು ವ್ಯಕ್ತವಾಗಬೇಕು.

ಮನಸ್ಸಿನ ಸಂಸ್ಕಾರ ಹಾಗು ಭಾವನಾತ್ಮಕ ಸಂವೇದನಾಶೀಲತೆಯನ್ನು ಎಚ್ಚರಗೊಳಿಸುವುದಷ್ಟೇ ಅಲ್ಲ ನಮ್ಮ ಕಾಳಜಿ; ಇವುಗಳ ಜೊತೆಗೆ ಉತ್ತಮ-ವಾಗಿ ಬೆಳೆದ ಶರೀರವೂ ನಮ್ಮ ಲಕ್ಷ್ಯದಲ್ಲಿರಬೇಕು. ದೇಹ ಆರೋಗ್ಯಕರ-ವಾಗಿ, ಜೀವಂತ ಲವಲವಿಕೆಯಿಂದ ಕೂಡಿರದಿದ್ದರೆ ಅನಿವಾರ್ಯವಾಗಿ ಅದು ವಿಚಾರವನ್ನು ವಿಕೃತಗೊಳಿಸುತ್ತದೆ— ಸಂವೇದನಾಹೀನತೆಗೆ ದಾರಿಮಾಡಿ-ಕೊಡುತ್ತದೆ. ಉತ್ತಮ ಆಹಾರ ಮತ್ತು ಸಾಕಷ್ಟು ನಿದ್ದೆಯ ಮೂಲಕ ಉತ್ತಮ ಆರೋಗ್ಯದಿಂದಿರಲು ಸಾಧ್ಯ. ಜ್ಞಾನೇಂದ್ರಿಯಗಳು ಚುರುಕಾಗಿರ-ದಿದ್ದರೆ ವ್ಯಕ್ತಿತ್ವದ ಸಮಗ್ರವಿಕಾಸ ಹ್ರಾಸಗೊಳ್ಳುತ್ತದೆ. ನಡಿಗೆಯಲ್ಲಿ ಅಂದ ಹಾಗು ಸ್ನಾಯುಗಳ ಸಮರ್ಥ ನಿಯಂತ್ರಣ ಸಾಧಿಸುವ ಸಲುವಾಗಿ ವಿವಿಧ ರೀತಿಯ ವ್ಯಾಯಾಮಗಳು, ನೃತ್ಯ ಹಾಗು ಆಟ-ಪಾಟಗಳು ಇರಬೇಕು. ಶುಚಿಯಾಗಿರದ ಹಾಗು ಸರಿಯಾದ ಸ್ಥಿತಿಯಲ್ಲಿ ನಿಲ್ಲಲಾರದ ದೇಹವು ಮನಸ್ಸು ಹಾಗು ಭಾವನೆಗಳ ಸಂವೇದನಾಪೂರ್ಣ ಸಂವಹನೆಗೆ ತಕ್ಕುದಾಗಿರುವುದಿಲ್ಲ. ದೇಹವು ಮನಸ್ಸಿನ ಆಯುಧವಲ್ಲ; ಆದರೆ ದೇಹ, ಮನಸ್ಸು ಹಾಗು ಭಾವನೆ-ಗಳು ಸೇರಿ ಸಮಗ್ರ ಮನುಷ್ಯನಾಗುತ್ತಾನೆ. ಅವು ಈ ಮೂರು ಸಾಮರಸ್ಯ-ದಿಂದ ಕೂಡಿರದಿದ್ದರೆ ಸಂಘರ್ಷ ಅನಿವಾರ್ಯ.

ಸಂಘರ್ಷ ಸಂವೇದನಾಹೀನತೆಗೆ ಕಾರಣವಾಗುತ್ತದೆ. ಮನಸ್ಸು ದೇಹದ ಮೇಲೆ ದಬ್ಬಾಳಿಕೆ ನಡೆಸಿ, ಜ್ಞಾನೇಂದ್ರಿಯಗಳನ್ನು ಹತ್ತಿಕ್ಕಬಹುದು; ತನ್ಮೂಲಕ ದೇಹವನ್ನು ಸಂವೇದನಾಶೂನ್ಯ ಮಾಡಬಹುದು. ಅಂಥ ಸಂವೇ-ದನಾಶೂನ್ಯ ದೇಹವು ಮನಸ್ಸಿನ ಸಂಪೂರ್ಣ ವಿಕಸನಕ್ಕೆ, ಮುಕ್ತ ಹಾರಾಟಕ್ಕೆ ಅಡ್ಡಿಯಾಗಬಹುದು. ಪ್ರಜ್ಞೆಯ ಆಳಕ್ಕಿಳಿದು ಶೋಧಿಸುವಲ್ಲಿ ಈ ಬಗೆಯ ದೇಹದಂಡನೆ ಖಂಡಿತ ಪೂರಕವಲ್ಲ. ಯಾವಾಗ ದೇಹ, ಮನಸ್ಸು ಹಾಗು ಭಾವನೆಗಳು ಪರಸ್ಪರ ವಿರೋಧವಾಗಿರದೇ, ಯಾವುದೇ ವಿಚಾರ, ನಂಬಿಕೆ,

ಆದರ್ಶಗಳಿಂದ ಎಳೆದೊಯ್ಯಲ್ಪಡದೇ, ಅಪ್ರಯತ್ನಪೂರ್ವಕವಾಗಿ ಒಮ್ಮುಖ-ವಾಗಿದ್ದು ಏಕವಾಗಿರುತ್ತವೆಯೋ, ಆಗ ಶೋಧ ಸಾಧ್ಯ.

ಮನಸ್ಸನ್ನು ಬೆಳೆಯಿಸುವ ಕಾರ್ಯದಲ್ಲಿ ನಮ್ಮ ಪ್ರಧಾನ ಕಾಳಜಿ 'ಗಮನ' ನೀಡುವುದರತ್ತ ಇರಬೇಕೇ ಹೊರತು ಏಕಾಗ್ರತೆಯ ಮೇಲಲ್ಲ. 'ಏಕಾಗ್ರತೆ' ಎಂದರೆ ಮನಸ್ಸನ್ನು ಒತ್ತಾಯಪೂರ್ವಕವಾಗಿ ಒಂದು ಬಿಂದುವಿನಲ್ಲಿ ಸಂಕುಚಿತಗೊಳಿಸುವ ಪ್ರಕ್ರಿಯೆಯಾದರೆ, ಗಮನಿಸುವಿಕೆ ಪಾರವೇ ಇಲ್ಲದ ಗಡಿ, ನಿರ್ಬಂಧಗಳೇ ಇರದಂತಹ ಮಾನಸಿಕ ಚಟುವಟಿಕೆ. ಏಕಾಗ್ರತೆಯ ಪ್ರಕ್ರಿಯೆಯಲ್ಲಿ ಗಡಿ-ಮಿತಿಗಳ ನಿರ್ಬಂಧಗಳಿರುವುದರಿಂದ, ಮನಸ್ಸಿನ ಸಮಗ್ರತೆ ಅರಿಯುವಲ್ಲಿ ಕೇವಲ ಏಕಾಗ್ರತೆ ಅಡ್ಡಿಯನ್ನುಂಟುಮಾಡುತ್ತದೆ. ಜ್ಞಾನದ ಪರಿಮಿತಿ, ನಿರ್ಬಂಧಗಳಿರದ ಗಮನಿಸುವಿಕೆಗೆ ಅಪಾರತೆಯೇ ಮಿತಿ. ಏಕಾಗ್ರ-ತೆಯ ಮೂಲಕ ಜ್ಞಾನಸಾಧನೆ ಶಕ್ಯ. ಜ್ಞಾನಸಾಧನೆಯ ಮುಂದುವರಿಕೆ ಎಂದರೆ ಜ್ಞಾನದ ಮಿತಿಯಲ್ಲೇ ಸುತ್ತುವರಿಯುವುದು. ಗಮನಿಸುವಿಕೆಯ ಪ್ರಕ್ರಿಯೆಯಲ್ಲೇ ಮನಸ್ಸು ಜ್ಞಾನವನ್ನು ಉಪಯೋಗಿಸಿಯೇ ಉಪಯೋ-ಗಿಸುತ್ತದೆ. ಅದು ಏಕಾಗ್ರತೆಯ ಫಲರೂಪಿಯೇ. ಆದರೆ ಒಂದು ಭಾಗ ಅಥವಾ ಅಂಶವೇ ಇಡಿಯದಲ್ಲ, ಸಮಗ್ರವಲ್ಲ; ಮತ್ತು ಬಿಡಿಭಾಗಗಳನ್ನು ಕೂಡಿಸುತ್ತ ಹೋಗುವುದರಿಂದಲೂ ಸಮಗ್ರವಾದುದರ ಅರಿವು ಉಂಟಾಗುವು-ದಿಲ್ಲ. ಏಕಾಗ್ರತೆಯಿಂದ ಸಂಗ್ರಹಿಸುತ್ತ ಹೋಗುವುದರ ಫಲವಾದ ಜ್ಞಾನ ಆ ಅಳತೆ ಮೀರಿದುದನ್ನು ಅನುಭವಕ್ಕೆ, ಅರಿವಿಗೆ ತರಲಾರದು. ಸಮಗ್ರ-ವಾದದ್ದು ಎಂದೆಂದೂ ಏಕಾಗ್ರತೆಯಿರುವ ಮನಸ್ಸಿನ ಅಳವಿಗೆ ಬರುವಂಥದಲ್ಲ.

ಆದ್ದರಿಂದ 'ಗಮನಿಸುವುದೇ' ಅತ್ಯಂತ ಪ್ರಧಾನವಾದದ್ದು. ಆದರೆ ಇದು ಏಕಾಗ್ರತೆಯ ಪ್ರಯತ್ನದ ಮೂಲಕ ಬರುವಂಥದಲ್ಲ. ಗಮನಿಸುವಿಕೆ ಎಂದರೆ ಸಂಗ್ರಹಿಸಿದ ಅನುಭವಗಳ, ಶೇಖರವಾದ ಜ್ಞಾನದ ಕೇಂದ್ರಬಿಂದು-ವಿಲ್ಲದೇ ಮನಸ್ಸು ಸದಾ ಅರಿಯುತ್ತಿರುವ ಸ್ಥಿತಿ. ತನ್ನಲ್ಲೇ ಕೇಂದ್ರಿತವಾದ ಮನಸ್ಸು ಜ್ಞಾನವನ್ನು ತನ್ನ ಪರಿಧಿ-ವಿಸ್ತಾರದ ಮಾಧ್ಯಮವಾಗಿ ಉಪ-ಯೋಗಿಸುತ್ತದೆ; ಮತ್ತು ಅಂಥ ಪ್ರಕ್ರಿಯೆ ಸ್ವಯಂ-ವಿರೋಧಾಭಾಸವೂ ಹಾಗು ಸಮಾಜವಿರೋಧಿಯೂ ಆಗುತ್ತದೆ.

ಯಾವುದೇ ಬಗೆಯ ಆಂತರಿಕ ಅಥವಾ ಬಾಹ್ಯ ಒತ್ತಡವಿಲ್ಲದೇ ಗಮನಿಸುವಂಥ ಸ್ಥಿತಿಯಲ್ಲಿ, ನಿಜವಾದ ಅರಿವು ಶಕ್ಯವಾಗುತ್ತದೆ. ಸಂಪ್ರದಾಯ ಹಾಗು ನೆನಪುಗಳಿಗೆ ಗುಲಾಮನಾಗಿರದಂಥ ಮಾನಸಿಕ ಸ್ಥಿತಿಯಲ್ಲಿ ಮಾತ್ರ ಸರಿಯಾದ ವಿಚಾರವಂತಿಕೆ ಸಾಧ್ಯ. ಈ ಬಗೆಯ ಗಮನಿಸುವಿಕೆಯೇ ಮೌನ ಮನಸ್ಸನ್ನು ಆವರಿಸಲು ಬರುತ್ತದೆ. ಈ ಮೌನವೇ ಸೃಜನಶೀಲತೆಯನ್ನು ತೆರೆಯುವ ದ್ವಾರ. ಆದ್ದರಿಂದ ಈ ಗಮನಿಸುವಿಕೆ ಅತ್ಯಂತ ಮಹತ್ವವಾದದ್ದು.

ಮನಸ್ಸನ್ನು ಸಂಸ್ಕರಿಸುವ ಮಾಧ್ಯಮವಾಗಿ ಕಾರ್ಯಸಾಧನೆಯ ಹಂತದಲ್ಲಿ ಜ್ಞಾನದ ಅಗತ್ಯ ಇದ್ದೇ ಇದೆ. ಆದರೆ ಜ್ಞಾನವೇ ಗುರಿಯಲ್ಲ; ಗಣಿತಜ್ಞನೋ, ವಿಜ್ಞಾನಿಯೋ, ಸಂಗೀತಗಾರನೋ ಆಗುವ ಹಾಗೆ ಕೇವಲ ಒಂದೇ ಒಂದು ಸಾಮರ್ಥ್ಯವನ್ನಷ್ಟೇ ಬೆಳೆಯಿಸುವುದಲ್ಲ; ವಿದ್ಯಾರ್ಥಿಯ ಸಮಗ್ರ ವಿಕಾಸದ ಮೂಲಕ ಉತ್ತಮ ಮನುಷ್ಯನ ನಿರ್ಮಾಣ ನಮ್ಮ ಗುರಿ.

ಗಮನಿಸುವಿಕೆಯ ಸ್ಥಿತಿಯನ್ನು ತಂದುಕೊಳ್ಳುವ ಬಗೆ ಹೇಗೆ? ಒತ್ತಾಯ, ಹೋಲಿಕೆ, ಬಹುಮಾನ, ಹೀಗಳೆಯುವಿಕೆ— ಮುಂತಾದ ಹಲವು ಬಗೆಯ ಬಲಪ್ರಯೋಗದ ಮೂಲಕ ಇದನ್ನು ಸಾಧಿಸಲು ಶಕ್ಯವಿಲ್ಲ. ಭಯವನ್ನು ದೂರ ಮಾಡುವುದೇ ಗಮನಿಸುವಿಕೆಯ ಆರಂಭ. 'ಹಾಗಾಗಬೇಕು, ಹೀಗಾಗಬೇಕು' ಎಂಬ ಹಂಬಲ ಇರುವ ವರೆಗೆ ಭಯ ಇರುವಂಥಾದ್ದೇ. ಏಕೆಂದರೆ ಯಶಸ್ಸನ್ನು ಹಿಂಬಾಲಿಸುವುದೆಂದರೆ ಅದರೊಂದಿಗೆ ಆಶಾಭಂಗ ಹಾಗು ಯಾತನಾಮಯತೆ; ಹಲವಾರು ಬಗೆಯ ವಿರೋಧಾಭಾಸಗಳನ್ನು ಬಳಿಯಲ್ಲೇ ಇಟ್ಟುಕೊಳ್ಳುವುದು. ಏಕಾಗ್ರತೆಯನ್ನು ಕಲಿಸಬಹುದೇ ಹೊರತು, ಗಮನಿಸುವಿಕೆಯನ್ನು ಕಲಿಸುವುದು ಅಶಕ್ಯ ಹೇಗೋ, ಹಾಗೇ ಭಯದಿಂದ ಬಿಡುಗಡೆ ಪಡೆಯುವುದನ್ನೂ ಕಲಿಸಲು ಆಗುವದಿಲ್ಲ. ಆದರೆ ಭಯದ ಕಾರಣಗಳನ್ನು ಕಂಡುಹಿಡಿಯುತ್ತ, ಅರಿಯುತ್ತ ಹೋದಂತೆ ಭಯ ತನ್ನಷ್ಟಕ್ಕೆ ತಾನೇ ಇಲ್ಲವಾಗುತ್ತದೆ. ವಿದ್ಯಾರ್ಥಿಯ ಸುತ್ತ-ಮುತ್ತ ಸಂರಕ್ಷಣೆಯ ಭಾವನೆ, ನಿಶ್ಚಿಂತ ಸ್ಥಿತಿ, ಪ್ರೇಮದಿಂದ ಹುಟ್ಟುವ ನಿರಪೇಕ್ಷ ಕ್ರಿಯೆಗಳ ಎಚ್ಚರವಿರುವಾಗ, ಗಮನಿಸುವಿಕೆ ತಾನೇ ತಾನಾಗಿ ಹೊರಹೊಮ್ಮುತ್ತದೆ. ಪ್ರೇಮ ಏನನ್ನೂ

ಹೋಲಿಸುವುದಕ್ಕೆ ಹೋಗದಿದ್ದುದರಿಂದ ‘ ಆಗುವ ’ ಪ್ರಕ್ರಿಯೆಯ ಫಲವಾದ ಅಸೂಯೆ ಹಾಗು ಯಾತನೆಗಳು ತಮ್ಮಷ್ಟಕ್ಕೆ ತಾವೇ ನಿಲ್ಲುತ್ತವೆ.

ವಯಸ್ಸಿನ ಭೇದವಿಲ್ಲದೆ ನಾವೆಲ್ಲ ಸಾಮಾನ್ಯವಾಗಿ ಅನುಭವಿಸುವ ಅತೃಪ್ತಿ ತನ್ನನ್ನು ತಾನೇ ತೃಪ್ತಿಗೊಳಿಸಿಕೊಳ್ಳುವ ದಾರಿ ಕಂಡುಕೊಳ್ಳ-ತೊಡಗುತ್ತದೆ. ಇದರಿಂದ ಮನಸ್ಸು ನಿಷ್ಟ್ರಿಯವಾಗಲಾರಂಭಿಸುತ್ತದೆ. ಯಾತನೆ ನರಳಿಕೆಗಳ ಮೂಲಕ ಈ ಅತೃಪ್ತಿ ಪುನಃ-ಪುನಃ ಜಾಗ್ರತಗೊಂಡರೂ, ಸಂತೃಪ್ತಗೊಳಿಸುವ ಮಾರ್ಗವನ್ನು ಮನಸ್ಸು ಕಂಡುಹಿಡಿಯುತ್ತದೆ. ಈ ಅತೃಪ್ತಿ-ಸಂತೃಪ್ತಿಗಳ ಚಕ್ರದಲ್ಲಿ ಸಿಲುಕಿದ ಮನಸ್ಸು ಯಾತನೆಗಳ ಮೂಲಕ ಉಂಟಾಗುವ ನಿರಂತರ ಎಚ್ಚರ ಈ ನಮ್ಮ ಅತೃಪ್ತಿಯ ಅವಿಭಾಜ್ಯ ಅಂಗ. ಅತೃಪ್ತಿಯೇ ಅನ್ವೇಷಣೆಯು, ಶೋಧನೆಯ ದಾರಿ. ಆದರೆ ಆದರ್ಶ-ಗಳಿಗೋ, ಸಂಪ್ರದಾಯಗಳಿಗೋ ಮನಸ್ಸು ಕಟ್ಟುಬಿದ್ದಾಗ, ಈ ಶೋಧನೆ ಇರದು. ಗಮನಿಸುವಿಕೆಯು ಜ್ವಾಲೆಯೇ ಶೋಧನೆ.

ಅತೃಪ್ತಿ ಎಂದರೆ ವಾಸ್ತವತೆಯನ್ನು, ಇದ್ದುದನ್ನು ಇದ್ದ ಹಾಗೇ ಅರಿ-ಯುವ, ಮುಂದೇನೆಂದು ಸದಾ ಶೋಧಿಸುತ್ತಲೇ ಇರುವ ಮನಸ್ಸಿನ ಸ್ಥಿತಿ. ಏನು ಇದೆಯೋ ಅದರ ಪರಿಧಿ ಮೀರಿ ಆಚೆ ಹೋಗುವ ಚಲನೆಯೇ ಅತೃಪ್ತಿ. ಈ ಅತೃಪ್ತಿಯನ್ನು ಅಡಗಿಸುವ ಅಥವಾ ಗೆಲ್ಲುವ ಮಾಧ್ಯಮ ಅಥವಾ ದಾರಿ ಗೊತ್ತಾಯಿತೆಂದರೆ, ಸ್ವಯಂಕೇಂದ್ರಿತ ಮನಸ್ಸಿನ ಮಿತಿಯನ್ನು ಸ್ವೀಕರಿಸಿದಂತೆ. ತನ್ಮೂಲಕ ಬದುಕುತ್ತಿರುವ ಸಮಾಜವನ್ನು ಸ್ವೀಕರಿಸಿ-ದಂತೆ. ಸಂತೃಪ್ತಿಯ ಕಸ-ಕಲ್ಮಶಗಳನ್ನೆಲ್ಲ ಸುಟ್ಟುಹಾಕುವಂತಹದು ಅತೃಪ್ತಿ. ಆದರೆ ಈ ಅತೃಪ್ತಿಯನ್ನು ನಾವು ವಿವಿಧ ರೀತಿಗಳಲ್ಲಿ ವ್ಯರ್ಥ-ಗೊಳಿಸುತ್ತೇವೆ; ಇನ್ನೂ ಬೇಕೆಂಬ ದಾಹದ— ದೊಡ್ಡಮನೆ, ಇನ್ನೂ ಉತ್ತಮ ಕಾರು, ಇತ್ಯಾದಿ ಬೇಕುಗಳ ಆಶೆಯ ಸ್ವರೂಪವನ್ನು ಅತೃಪ್ತಿ ಧರಿಸಿಬಿಡು-ತ್ತದೆ. ಈ ಬಿಸೆಯು, ಅಸೂಯೆಯ ವರ್ತುಳದ್ದು. ಈ ಅಸೂಯೆ ಹೀಗೆ ಅತೃಪ್ತಿಯನ್ನು ಜೀವಂತವಿಡುತ್ತದೆ. ಆದರೆ ನಾವೀಗ ಇಲ್ಲಿ ಚರ್ಚಿಸುತ್ತಿರುವ ಅತೃಪ್ತಿ ಆ ಬಗೆಯದಲ್ಲ. ಈ ಅತೃಪ್ತಿಯಲ್ಲಿ ಅಸೂಯೆ ಇಲ್ಲ; ಇನ್ನೂ ಬೇಕೆಂಬ ದಾಹವಿಲ್ಲ; ತೃಪ್ತಗೊಳಿಸಬಹುದಾದ ಆಸೆಗಳಿಂದ ನಿಂತಿದ್ದಲ್ಲ ಅದು. ಅಯೋಗ್ಯ ಶಿಕ್ಷಣದಿಂದ, ತೃಪ್ತಿಗೊಳಿಸಿದ ಪರಿಹಾರಗಳಿಂದ, ಮಹತ್ವಾ-

ಕಾಂಕ್ಷೆಗಳಿಂದ ಅಥವಾ ಆದರ್ಶವನ್ನು ಬೆಂಬತ್ತುವುದರಿಂದ ಸಾಯದೇ ಅಕಸ್ಮಾತ್ ಇದ್ದರೆ, ಪ್ರತಿಯೊಬ್ಬನಲ್ಲೂ ಮಲಿನಗೊಳ್ಳದ, ಪರಿಶುದ್ಧರೂಪದಲ್ಲಿ ಇರುವ ಅತೃಪ್ತಿ ಅದು. ಅತೃಪ್ತಿಯ ಸ್ವರೂಪದ ಸತ್ಯವನ್ನು ಅರಿತಾಗ ಗಮನಿಸುವಿಕೆ ಆ ಜ್ವಾಲೆಯ ಒಂದಂಶವೆನ್ನುವುದು ನಮಗೆ ಮನದಟ್ಟಾಗುವುದು. ಈ ಜ್ವಾಲೆ ಮನಸ್ಸಿನ ಕ್ಷುಲ್ಲಕತನವನ್ನು ಕಬಳಿಸಿ, ತನ್ನಲ್ಲೇ ಕೇಂದ್ರಗೊಂಡ ತೃಪ್ತಿ— ಹುಡುಕಾಟಗಳ ಪರಿಮಿತಿಯಿಂದ ಮನಸ್ಸನ್ನು ಮುಕ್ತಗೊಳಿಸುತ್ತದೆ.

ಸ್ವಯಂಪ್ರಗತಿಯ ಅಥವಾ ಸಂತೃಪ್ತಿಯ ಹುಡುಕಾಟವಿಲ್ಲದೇ, ಮನವು ಶೋಧನೆಯಲ್ಲಿರುವಾಗ ಈ ಗಮನಿಸುವಿಕೆ ತಾನೇ ಇರುತ್ತದೆ. ಈ ಬಗೆಯ ಗಮನಿಸುವಿಕೆಯನ್ನು ಮಗುವಿನಲ್ಲಿ ಪ್ರಾರಂಭದಿಂದಲೂ ಬೆಳೆಯಿಸಬೇಕು. ವಿನಯ, ಸೌಜನ್ಯ, ಸಹನೆ, ಸಭ್ಯತೆಗಳ ಮೂಲಕ ವ್ಯಕ್ತಗೊಳ್ಳುವ ಪ್ರೇಮ ಎಲ್ಲಿ ಇರುತ್ತದೆಯೋ, ಆಗ ಸಂವೇದನಾಶೂನ್ಯತೆ ನಿರ್ಮಿಸುವ ಕೋಟೆ, ನಿರ್ಬಂಧಗಳೆಲ್ಲ ತಮ್ಮಷ್ಟಕ್ಕೇ ಇಲ್ಲವಾಗುತ್ತವೆ. ಆದ್ದರಿಂದ ಮಗುವಿಗೆ ಅತ್ಯಂತ ಎಳೆಯ ವಯಸ್ಸಿನಿಂದಲೇ ಗಮನಿಸುತ್ತ ಇರುವ ಈ ಧೀಮಂತಿಕೆಯನ್ನು ಬೆಳೆಯಿಸುವುದು ಅನುಕೂಲ. ಈ ಗಮನಿಸುವಿಕೆ ಕಲಿಯುವಂಥಾದ್ದಲ್ಲ; ಕಲಿಸುವಂಥಾದ್ದೂ ಅಲ್ಲ. ಆದರೆ ಸ್ವಯಂ ವಿರೋಧಾಭಾಸ ಸ್ಥಿತಿಯನ್ನು ನಿರ್ಮಿಸುವ, ಒತ್ತಾಯದ ವಾತಾವರಣವನ್ನು ಅವನ (ವಿದ್ಯಾರ್ಥಿಯ) ಸುತ್ತಲೂ ನಿರ್ಮಾಣ ಮಾಡದೆ ಇರುವುದರ ಮೂಲಕ ಆ ಶಕ್ತಿವಿಶೇಷ ಎಚ್ಚರವಾಗುವಂತೆ ಮಾಡುವಲ್ಲಿ ಸಹಾಯ ಮಾಡಬಹುದು. ಆಗ ಆತ ಯಾವಾಗ ಬೇಕಾದರೂ, ಯಾವ ವಿಷಯದ ಮೇಲಾದರೂ ತನ್ನ ಗಮನ ನೀಡಬಲ್ಲ. ಆದರೆ ಇದು ಸಾಧಿಸುವ ಅಥವಾ ಸಂಪಾದಿಸುವ, ಮಾನಸಿಕ ಆಗ್ರಹದ ಮೂಲಕ ತರುವ ಸಂಕುಚಿತ ರೂಪದ ಏಕಾಗ್ರತೆ ಖಂಡಿತ ಅಲ್ಲ.

ಈ ರೀತಿಯಲ್ಲಿ ಶಿಕ್ಷಣಪಡೆದ ಜನಾಂಗ ಭಯ ಹಾಗು ಸಂಪಾದಿಸಿಡುವ ಪ್ರವೃತ್ತಿಗಳಿಂದ, ತಮ್ಮ ತಾಯಿ-ತಂದೆಗಳ ಆನುವಂಶಿಕತೆಯಿಂದ ಹಾಗು ತಾವು ಹುಟ್ಟಿದ ಸಮಾಜದಿಂದ ಭಿನ್ನರಾಗಿ ಬೆಳೆದು ಸ್ವತಂತ್ರರಾಗುತ್ತಾರೆ. ಈ ರೀತಿಯಲ್ಲಿ ಶಿಕ್ಷಣ ಪಡೆದಿರುವುದರಿಂದ ತಮ್ಮ ತಾಯ್ತಂದೆಗಳ ಆಸ್ತಿಪಾಸ್ತಿಗಳ ಮೇಲೆ ಅವಲಂಬಿಸಿಕೊಂಡಿರುವುದಿಲ್ಲ. ಈ ಆನುವಂಶಿಕ ಹಕ್ಕು

ನಿಜವಾದ ಸ್ವಾತಂತ್ರ್ಯವನ್ನು ವಿಧ್ವಂಸಗೊಳಿಸುತ್ತದೆ. ಧೀಮಂತಿಕೆಯನ್ನೂ ಪರಿಮಿತಗೊಳಿಸುತ್ತದೆ. ಯಾಕೆಂದರೆ ಇದು ಸುಳ್ಳು ಸಂರಕ್ಷಣಭಾವನೆಯನ್ನು ಸೃಜಿಸಿ, ಯಾವ ಆಧಾರವೂ ಇಲ್ಲದ ಆತ್ಮವಿಶ್ವಾಸವನ್ನು ಬೆಳೆಸುತ್ತದೆ; ತನ್ಮೂಲಕ ಹೊಸದು ಏನೇನೂ ಬೆಳೆಯಲಾರದಂತೆ ಮನಸ್ಸಿನಲ್ಲಿ ಕತ್ತಲೆಯನ್ನು ಸೃಜಿಸುತ್ತದೆ. ಆದರೆ ಈ ಮೇಲೆ ತಿಳಿಸಿದ, ಅತ್ಯಂತ ಬೇರೆಯದೇ ಆದ ರೀತಿಯಲ್ಲಿ ಬೆಳೆದು ಶಿಕ್ಷಣಪಡೆದಂಥವರು ಹೊಸ ಸಮಾಜವನ್ನು ನಿರ್ಮಿಸುತ್ತಾರೆ; ಏಕೆಂದರೆ ಭಯದಿಂದ ನಿರ್ಬಂಧಗೊಂಡಿರದ ಧೀಮಂತಿಕೆಯಲ್ಲಿ ಹುಟ್ಟಿದ ಸಾಮರ್ಥ್ಯ ಅವರದಾಗಿರುತ್ತದೆ.

ಶಿಕ್ಷಣವು, ಪಾಲಕರು ಹಾಗು ಶಿಕ್ಷಕರು–ಇಬ್ಬರ ಹೊಣೆಯೂ ಆದ್ದರಿಂದ, ಅವರಿಬ್ಬರೂ ಕೂಡಿಯೇ ಕೆಲಸ ಮಾಡಬೇಕು. ಇಬ್ಬರೂ ಸತ್ಯವೇನೆಂಬುದನ್ನು ಅರಿತಾಗ ಮಾತ್ರ ಶಕ್ಯವಾಗುವಂತಹದು ಇದು; ಅಭಿಪ್ರಾಯ, ಸಿದ್ಧಾಂತ ಅಥವಾ ನಂಬಿಕೆಗಳಲ್ಲ, ಸತ್ಯದ ಅರಿವು ನಮ್ಮನ್ನು ಒಂದುಗೂಡಿಸುವ ಶಕ್ತಿ. ಕಲ್ಪನಾತ್ಮಕ ಹಾಗು ವಾಸ್ತವ ಸತ್ಯಗಳ ಮಧ್ಯೆ ಅಂತರ ಬಹಳ. ಕಲ್ಪನಾತ್ಮಕ ಸತ್ಯ ತಾತ್ಕಾಲಿಕವಾಗಿ ನಮ್ಮನ್ನು ಹತ್ತಿರಕ್ಕೆ ತರಬಹುದು; ಆದರೆ ಒಟ್ಟಿಗೆ ಕೆಲಸ ಮಾಡುವುದು, ನಿಶ್ಚಿತಾಭಿಪ್ರಾಯದ ಮೇಲೆ ಬೇರ್ಪಡುವಿಕೆ ಮುಂದೆ ಇದ್ದದ್ದೇ. ಪ್ರತಿಯೊಬ್ಬನೂ ಸತ್ಯವನ್ನು ಅರಿತಾಗ, ಅದರ ವಿವರದಲ್ಲಿ ಒಮ್ಮತವಿರದಿದ್ದರೂ, ಬೇರ್ಪಡುವುದಕ್ಕೆ ಆಗ್ರಹವಿರುವುದಿಲ್ಲ. ಕೇವಲ ವಿವರಗಳಿಗಾಗಿ ಬೇರ್ಪಡುವುದು ಮೂರ್ಖತನ. ಸತ್ಯವನ್ನು ಎಲ್ಲರೂ ಅರಿತಾಗ, ಅದರ ವಿವರದಲ್ಲಿಯ ಭಿನ್ನಾಭಿಪ್ರಾಯ ಎಂದೆಂದೂ ಬೇರ್ಪಡಿಸುವುದಿಲ್ಲ.

ಸ್ಥಾಪಿತ ಸತ್ತೆಗೆ ಅನುಗುಣವಾಗಿ ಸೇರಿ ಕೆಲಸಮಾಡುವ ಕ್ರಮಕ್ಕೆ ನಮ್ಮಲ್ಲಿ ಹೆಚ್ಚಿನ ಪ್ರಮಾಣದ ಜನರು ಹೊಂದಿಕೊಂಡುಬಿಟ್ಟಿದ್ದೇವೆ. ಒಂದು ಕಲ್ಪನೆಯನ್ನು ಪೃಥಃಕ್ಕರಿಸಲು, ವಿಚಾರದ ಮುನ್ನಡೆಗೆ ನಾವೆಲ್ಲ ಒಟ್ಟು ಸೇರುತ್ತೇವೆ. ಇದಕ್ಕೆ ಬೇಕಾದದ್ದು ನಂಬಿಕೆ, ಒತ್ತಾಯ, ಆಗ್ರಹ, ಪ್ರಚಾರ ಇತ್ಯಾದಿ. ಆದರೆ ಇದಕ್ಕಿಂತ ಸಂಪೂರ್ಣ ಭಿನ್ನವಾದದ್ದು ಸತ್ಯ ನೋಡುವುದರಿಂದ ಹಾಗು ಅದನ್ನು ಕೃತಿಯಲ್ಲಿಳಿಸುವ ಅಗತ್ಯವನ್ನು ಮನಗಾಣುವುದರಿಂದ ಮೂಡಿಬರುವ ಸಹಕಾರ ಭಾವನೆ. ಒಂದು ಆದರ್ಶ ಅಥವಾ ಒಬ್ಬ ವ್ಯಕ್ತಿಯ

ಪ್ರಚೋದನೆ ಅಥವಾ ಅಧಿಕಾರಗಳಡಿಯಲ್ಲಿ ಕೆಲಸ ಮಾಡುವುದು ನಿಜವಾದ ಸಹಕಾರವಲ್ಲ. ಒಬ್ಬ ಅತ್ಯಂತ ಪ್ರಭಾವಶಾಲೀ ವ್ಯಕ್ತಿಗೆ— ರಾಜಕೀಯವಾಗಿ, ವೈಚಾರಿಕವಾಗಿ ಅಥವಾ ಸಾಮಾಜಿಕವಾಗಿ ಇರಬಹುದು— ಆದರ್ಶವೆನಿಸಿದ ಕಲ್ಪನೆ, ವಿಚಾರಕ್ಕಾಗಿ ಇನ್ನಿತರರೆಲ್ಲ ಒತ್ತಾಯಪೂರ್ವಕವಾಗಿ (ಆದರ್ಶದ ಒತ್ತಾಯವೂ), ಎಷ್ಟೇ ಸೂಕ್ಷ್ಮರೂಪದಲ್ಲಿರಲಿ, ಬಲಪ್ರಯೋಗದಿಂದ ಸೇರಿ ಕೆಲಸ ಮಾಡುವುದು, ಅತ್ಯಂತ ಚುರುಕು ಹಾಗು ಜೀವಂತ ವ್ಯಕ್ತಿಗಳ ಕ್ರಮ-ವಲ್ಲ. ನಮ್ಮಲ್ಲಿಯ ಪ್ರತಿ ವ್ಯಕ್ತಿಗೂ ಯಾವುದರ ಸತ್ಯವೇ ಆದರೂ ಅರಿವಿಗೆ ಬಂದು, ಎಲ್ಲರಿಗೂ ಸಾಮಾನ್ಯವಾದ ಸತ್ಯದ ಅರಿವಿನಿಂದ ಹುಟ್ಟಿದ ಕ್ರಿಯೆಯೇ ಸಹಕಾರ. ಸತ್ಯವನ್ನು ಸತ್ಯವೆಂದು, ಸುಳ್ಳನ್ನು ಸುಳ್ಳೆಂದು, ಸುಳ್ಳಿನಲ್ಲಿ ಸತ್ಯವನ್ನು ಅರಿಯುವವನು ಸಹಜವಾಗಿಯೇ ಸಹಕರಿಸಬಲ್ಲ; ಅಷ್ಟೇ ಮಹತ್ವ-ದ್ದಾದ-ಯಾವಾಗ ಸಹಕರಿಸಬಾರದು ಎನ್ನುವುದನ್ನೂ ಅರಿತಿರಬಲ್ಲ.

ಶಿಕ್ಷಣದಲ್ಲಿ ಆಗಬೇಕಾದ ಮೂಲಭೂತವಾದ ಕ್ರಾಂತಿಯ ಆವಶ್ಯಕತೆ-ಯನ್ನು ಪ್ರತಿಯೊಬ್ಬನೂ ಮನಗಂಡಾಗ ಹಾಗು ಈಗ ಹೇಳಿರುವುದರ ಸತ್ಯತೆ-ಯನ್ನು ಅರಿತಾಗ, ಯಾವ ಒತ್ತಡವಿಲ್ಲದೆಯೇ ನಾವೆಲ್ಲ ಸೇರಿ ಕೆಲಸಮಾಡಬ-ಹುದು. ಒಬ್ಬಾತ ತನ್ನ ನಿಲುವನ್ನು ಬದಲಾಯಿಸಲು ಇಚ್ಛಿಸದೇ ಇದ್ದಾಗ ಮನವೊಲಿಸುವುದು ಬರುತ್ತದೆ; ಒಂದು ವಿಚಾರದಲ್ಲೋ, ಅಭಿಪ್ರಾಯದಲ್ಲೋ ಮುಳುಗಿಹೋದಾಗ ಆತ ವಿರೋಧ ವ್ಯಕ್ತಪಡಿಸುತ್ತಾನೆ. ಆಗ ಮನವೊಲಿಸು-ವುದೋ, ಪ್ರಭಾವಕ್ಕೆ ಒಳಪಡಿಸುವುದೋ, ಬೇರೆ ರೀತಿಯಲ್ಲಿ ವಿಚಾರ ಮಾಡು-ವಂತೆ ಮಾಡುವದೋ ನಡೆಯುತ್ತದೆ. ಆದರೆ ಪ್ರತಿಯೊಬ್ಬನೂ ಸತ್ಯವನ್ನು ಅರಿಯುವಂಥ ಸನ್ನಿವೇಶದಲ್ಲಿ ಅಂಥ ಸಂದರ್ಭಗಳೇ ಬರುವುದಿಲ್ಲ. ಆದರೆ ನಾವು ಸತ್ಯವನ್ನು ಅರಿತುಕೊಳ್ಳದೇ, ಶಾಬ್ದಿಕ ಒಪ್ಪಂದ, ಬೌದ್ಧಿಕ ಅಥವಾ ತಾರ್ಕಿಕ ಕಾರಣಗಳ ಆಧಾರದ ಮೇಲೆ ನಡೆದುಕೊಳ್ಳಲಾರಂಭಿಸಿದಾಗ, ವಾದ-ವಿವಾದ, ಸಮ್ಮತಿ-ಅಸಮ್ಮತಿಗಳು ತಮ್ಮೆಲ್ಲ ಇನ್ನಿತರ ವಿರೂಪಗಳೊಡನೆ, ನಿಷ್ಫಲ ಯತ್ನಗಳೊಡನೆ ಇರುತ್ತವೆ.

ಅದಕ್ಕಾಗಿ ನಾವು ಸೇರಿ ಕೆಲಸ ಮಾಡುವುದು ಅತ್ಯವಶ್ಯ. ಒಂದು ಮನೆ ಕಟ್ಟಬೇಕಾದರೆ ಎಲ್ಲರೂ ಸೇರಿ ದುಡಿಯುವ ಹಾಗೆ ದುಡಿಯಬೇಕು. ಕೆಲವರು

ಮನೆ ಕಟ್ಟುವುದರಲ್ಲಿ ನಿರತರಾಗಿ ಮತ್ತೆ ಕೆಲವರು ಕಟ್ಟಿದ್ದನ್ನು ಕೆಡುವುವದರಲ್ಲಿ ನಿರತರಾಗಿದ್ದರೆ ಆ ಮನೆಯನ್ನು ಎಂದೂ ಕಟ್ಟಿ ಮುಗಿಸಲು ಶಕ್ಯವಿಲ್ಲ. ಆದ್ದರಿಂದ ಬದುಕಿನ ಸಮಸ್ಯೆಗಳನ್ನು ಬಿಡಿ-ಬಿಡಿಯಾಗಿ ನೋಡದೆ ಸಮಗ್ರವಾಗಿ ಗಮನಿಸಿ ನಿಭಾಯಿಸಿ, ನಿರ್ವಹಿಸುವ ಸಮರ್ಥ ಹೊಸ ಜನಾಂಗವನ್ನು ಸೃಷ್ಟಿಸುವ ಅಗತ್ಯತೆಯನ್ನು ನಮ್ಮಲ್ಲಿ ಪ್ರತಿಯೊಬ್ಬರೂ ಸ್ವತಃ ಚೆನ್ನಾಗಿ ಕಂಡುಕೊಂಡು ಅರಿವು ಮಾಡಿಕೊಳ್ಳಬೇಕು.

ಇದಕ್ಕೆ ನಾವು ಆಗಾಗ್ಗೆ ಪರಸ್ಪರ ಸೇರುತ್ತಿರಬೇಕು. ವಿವರಗಳಲ್ಲಿ ಮುಳುಗಿಹೋಗದ ಹಾಗೆ ಎಚ್ಚರ ವಹಿಸಬೇಕು. ಯೋಗ್ಯ ಶಿಕ್ಷಣ ತರಬೇಕೆಂಬುದರ ಬಗ್ಗೆ ಗಂಭೀರವಾಗಿ ಸಮರ್ಪಿಸಿಕೊಂಡ ಜನರು ಹೊಣೆಗಾರಿಕೆಯಿಂದ ಅರಿತಿದ್ದನ್ನು ಅನುಷ್ಠಾನಕ್ಕೆ ಸರಿಯಾಗಿ ಇಳಿಸುವುದಷ್ಟೇ ಅಲ್ಲ, ಇನ್ನಿತರರೂ ಅದನ್ನು ಅರಿಯುವ ಹಾಗೆ ಸಹಾಯ ನೀಡಬೇಕು. ಅಧ್ಯಾಪನ ಒಂದು ಉದ್ಯೋಗವೆನ್ನಬಹುದಾದರೂ ಅದೊಂದು ಅತ್ಯುದಾತ್ತವಾದ ಉದ್ಯೋಗ. ಕೇವಲ ಬೌದ್ಧಿಕ ಸಾಮರ್ಥ್ಯವಷ್ಟೇ ಅಲ್ಲ; ಅಪಾರ ಸಹನೆ ಹಾಗು ಪ್ರೇಮಗಳು ಬೇಕಾದ ಒಂದು ಕಲೆ ಅಧ್ಯಾಪನವೃತ್ತಿ. ನಮ್ಮ ಅಸ್ತಿತ್ವದ ವಿಸ್ತಾರದಲ್ಲಿ ಹಣ, ಸಂಪತ್ತು, ಜನ ಇತ್ಯಾದಿ ಎಲ್ಲದರೊಂದಿಗೂ ನಮ್ಮ ಸಂಬಂಧಗಳನ್ನು ಅರಿಯುವುದೇ— ನಿಜವಾದ ಶಿಕ್ಷಣ ಹೊಂದಿರುವುದರ ಲಕ್ಷಣ.

ಈ ಅರಿವಿನ ಅಂಶವೇ ಸೌಂದರ್ಯವೆನ್ನುವುದು. ಪ್ರಮಾಣ, ಆಕಾರ, ಅಭಿರುಚಿ ಹಾಗು ನಡತೆಗಳಿಗಷ್ಟೇ ಸೀಮಿತಗೊಂಡಿದ್ದಲ್ಲ ಸೌಂದರ್ಯ. ಈ ಮೇಲೆ ತಿಳಿಸಿದ ಅರಿವಿನ ಅಂಶವೂ ಹೌದು. ಸರಳತೆಯ ಪ್ರಬಲ ಆಸೆಗಾಗಿ ಅಹಂಕೇಂದ್ರ ತೊರೆದು ಬರುವ ಮನಸ್ಸಿನ ಸ್ಥಿತಿಯಲ್ಲಿ ಸೌಂದರ್ಯ ಇರುತ್ತದೆ. ಸರಳತೆಗೆ ಅಂತ್ಯವೆಂಬುದಿಲ್ಲ. ತನ್ನನ್ನು ತಾನು ನಿರಾಕರಿಸದ ಹಾಗು ಲೆಕ್ಕಾಚಾರದ ಶಿಸ್ತು ಇಲ್ಲದೆ ಎಲ್ಲಿ ಸಂಯಮ ಇರುತ್ತದೆಯೋ ಅಲ್ಲಿ ಸರಳತೆ ಇರುತ್ತದೆ. ಇಂಥಲ್ಲಿ ಪ್ರೇಮ ಮಾತ್ರ ತರಬಹುದಾದ 'ಅಹಂ' ಪರಿತ್ಯಾಗವಿರುತ್ತದೆ. ನಮ್ಮಲ್ಲಿ ಪ್ರೇಮವಿರದಿದ್ದಾಗ, ಅಂತರಂಗದ ಜೀವಂತಿಕೆ ಹಾಗು 'ಅಹಂ' ಪರಿತ್ಯಾಗದ ಸಂಯಮ— ಎರಡೂ ಇಲ್ಲದ ಕೇವಲ ಆಕಾರನಿಷ್ಠ ಸೌಂದರ್ಯವನ್ನು ಹುಡುಕುವ ನಾಗರಿಕತೆಯನ್ನು ಸೃಷ್ಟಿಸುತ್ತೇವೆ. ಒಳ್ಳೆಯ ಕೆಲಸಕ್ಕಾಗಿ,

ದರ್ಶಕ್ಕಾಗಿ, ನಂಬಿಕೆಗಳಿಗಾಗಿ ಒಬ್ಬಾತ ತನ್ನನ್ನೇ ಸಮರ್ಪಿಸಿಕೊಂಡಲ್ಲಿ ಅಹಂ ' ಪರಿತ್ಯಾಗವಿರುವುದಿಲ್ಲ. ಈ ಎಲ್ಲ ಚಟುವಟಿಕೆಗಳಲ್ಲಿ ' ಅಹಂ ' ರದಂತೆ ಕಂಡರೂ, ವಾಸ್ತವವಾಗಿ ಬೇರೆ ಹೆಸರಿನಲ್ಲಿ ಅದು ಇದ್ದೇ ಇರುತ್ತದೆ. ಜ್ಞಾತವಾದದ್ದನ್ನು ಕೇವಲ ಮುಗ್ಧಮನಸ್ಸು ಮಾತ್ರ ಶೋಧಿಸಬಹುದು. ಕ್ಯಾಚಾರದ ಮುಗ್ಧತೆ, ಅಮಾಯಕತೆ ಕಾವಿ ಧರಿಸಿರಲಿ, ಕೌಪೀನ ಧರಿಸಿ-ಲಿ, ' ಅಹಂ ' ಪರಿತ್ಯಾಗದ ಉತ್ಕಟತೆಯನ್ನು ಹೊಂದಿರುವದಿಲ್ಲ. ಪ್ರೇಮದ ಭಿವ್ಯಕ್ತಿಯಾದ ಸೌಜನ್ಯ, ಸಭ್ಯತೆ, ವಿನಯ, ಸಹನೆಗಳು ' ಅಹಂ ' ರಿತ್ಯಾಗದ ಸ್ಥಿತಿಯಲ್ಲಿ ಸಹಜವಾಗಿಯೇ ಬರುತ್ತವೆ.

ಮನುಷ್ಯಾಕೃತಿಯ ಸೌಂದರ್ಯ, ದೇವಾಲಯದ ಸೌಂದರ್ಯ ಇತ್ಯಾದಿ ೃಷ್ಟಿಮಾಡಲ್ಪಟ್ಟ ಅಥವಾ ಬಿಡಿಭಾಗಗಳನ್ನು ಒಂದುಕಡೆ ಸೇರಿಸುವುದರ ಮೂಲಕ ಉಂಟಾದ ಸೌಂದರ್ಯವನ್ನು ಮಾತ್ರ ನಾವು ಬಲ್ಲೆವು. ಒಂದು ಮರ, ಒಂದು ಮನೆ ಅಥವಾ ನಿಸ್ತಾರವಾದ ನದಿಯು ವಕ್ರಾಕಾರವಾಗಿ ಸುತ್ತುತ್ತ ರಿಯುವುದು— ಎಲ್ಲವನ್ನು ಸುಂದರವಾಗಿದೆ ಎನ್ನುತ್ತೇವೆ. ಹೋಲಿಕೆಗಳ ಮೂಲಕ ಕುರೂಪವಾದದ್ದೇನು ಎನ್ನುವುದನ್ನು ಅರಿತಿದ್ದೇವೆ— ಎಂದು ನಾವು ಾವಿಸಿದ್ದೇವೆ. ಆದರೆ ಸೌಂದರ್ಯವು ಹೋಲಿಕೆಗೆ ಸಿಗುವಂತಹದೆ ? ಕಣ್ಣಿಗೆ ಾಣುವಂತಹದೇ ಸೌಂದರ್ಯವೆಂದರೆ ? ನಾವು ಒಂದು ಕವನವನ್ನೋ, ಚಿತ್ರ ನ್ನೋ, ಮುಖವನ್ನೋ ಸುಂದರವಾಗಿದೆ ಎನ್ನುತ್ತೇವೆ. ನಮಗೆ ಈಗಾಗಲೇ ೌಂದರ್ಯವೇನೆಂದು ಕಲಿಸಿರುವುದರ ಆಧಾರದ ಮೇಲೆ ಅಥವಾ ನಮಗೆ ೋಡಿ ಗೊತ್ತಿರುವ ಹಾಗು ರೂಪಿಸಿಕೊಂಡಿರುವ ಅಭಿಪ್ರಾಯದ ಮೇಲೆ ಹಾಗೆ ೇಳುತ್ತೇವೆ. ಆದರೆ ಹೋಲಿಕೆಯಿಂದ ಸೌಂದರ್ಯವೇ ಇಲ್ಲವಾಗುತ್ತದೆ-ುಲ್ಲವೆ ? ನಮಗೆ ಗೊತ್ತಿರುವುದರ ಪರಿಚಯವಷ್ಟೇ ಸೌಂದರ್ಯವೋ ಅಥವಾ ಾವ ಸೃಷ್ಟಿಗೊಂಡ ಆಕಾರ ಇಲ್ಲದೇನೂ ಇರುವ ಸ್ಥಿತಿಯಲ್ಲಿ ಸೌಂದರ್ಯ ರುವಂಥಾದ್ದೋ ?

ನಾವು ಯಾವಾಗಲೂ ಸೌಂದರ್ಯವನ್ನು ಅರಸುತ್ತ, ಕುರೂಪವಾದ-ನ್ನು ತೊರೆಯುತ್ತಿರುತ್ತೇವೆ. ಈ ರೀತಿಯಲ್ಲಿ ಒಂದನ್ನು ಹುಡುಕುತ್ತ ತ್ತೊಂದನ್ನು ತೊರೆಯುತ್ತ ಸಮೃದ್ಧಿಯನ್ನು ಹುಡುಕುವುದು ಅನಿವಾರ್ಯ-

ವಾಗಿ ಅಸಂವೇದನೆಯನ್ನು ಸೃಜಿಸುತ್ತದೆ. ಸೌಂದರ್ಯವನ್ನು ಅರಿಯಲಿಕ್ಕೆ, ಅನುಭವಿಸಲಿಕ್ಕೆ ಸುಂದರವಾದದ್ದು; ಅಸುಂದರವಾದದ್ದು ಎಂದು ನಾವು ಕರೆಯುವ ಎರಡನ್ನೂ ಸಂವೇದನಾಪೂರ್ಣವಾಗಿ, ಸೂಕ್ಷ್ಮವಾಗಿ ಗಮನಿಸಿ ಗ್ರಹಿಸಬೇಕಾಗುತ್ತದೆ. ಒಂದು ಅನಿಸಿಕೆ ಸುಂದರವಾಗಲಿ ಅಸುಂದರವಾಗಲಿ ಇರದೇ ಕೇವಲ ಅನಿಸಿಕೆಯಾಗಿರುತ್ತದೆ. ಆದರೆ ನಾವು ನಮ್ಮ ಧಾರ್ಮಿಕ ಹಾಗು ಸಾಮಾಜಿಕ ನಿರ್ಬಂಧಗಳ ಮೂಲಕ ಅವುಗಳನ್ನು ನೋಡಿ ಅವಕ್ಕೆ ಹೆಸರು, ಹಣೆಪಟ್ಟಿ ಹಚ್ಚುತ್ತೇವೆ. ಒಂದು ಒಳ್ಳೆಯ ಅನಿಸಿಕೆ ಅಥವಾ ಕೆಟ್ಟ ಅನಿಸಿಕೆ ಎಂದು ನಾವು ಹೇಳಿ, ಅದನ್ನು ವಿಕೃತಗೊಳಿಸುತ್ತೇವೆ ಅಥವಾ ವಿಧ್ವಂಸಗೊಳಿಸುತ್ತೇವೆ. ಹೆಸರು ಹಚ್ಚದೇ ಇದ್ದಾಗ ಆ ಅನಿಸಿಕೆ ತುಂಬ ತೀವ್ರವಾಗಿದ್ದು ಉತ್ಕಟವಾಗಿರುತ್ತದೆ. ಈ ಬಗೆಯ ಉತ್ಕಟ ಅನಿಸಿಕೆ ಕುರೂಪ ವಲ್ಲದ, ಸುಂದರವೂ ಅಲ್ಲದ, ಆ 'ಅದನ್ನು' ಅರ್ಥಮಾಡಿಕೊಳ್ಳುವುದು ಅತ್ಯಂತ ಅಗತ್ಯ. ಈ ಆಧಾರರೂಪೀ ಅನಿಸಿಕೆ ಅತ್ಯಂತ ಮಹತ್ವದ್ದು. ಇದು ಕೇವಲ ಅಹಂಕಾರ ತೃಪ್ತಿಗೊಳಿಸುವ ಒಂದು ಕಾಮವಲ್ಲ. ಏಕೆಂದರೆ ಯಾತ-ರೊಂದಿಗೂ ಹೋಲಿಸಲು ಶಕ್ಯವಿಲ್ಲದ, ಯಾವುದಕ್ಕೂ ವಿರೋಧವಲ್ಲದ ಈ ಉತ್ಕಟ ಅನಿಸಿಕೆ 'ಸೌಂದರ್ಯ'ವನ್ನು ಸೃಷ್ಟಿಸುತ್ತದೆ.

ವ್ಯಕ್ತಿತ್ವದ ಸಮಗ್ರವಿಕಾಸದ ಕೆಲಸದಲ್ಲಿ ಮನಸ್ಸಿನ ಜಾಗ್ರತ ಹಾಗು ಸುಪ್ತ ಭಾಗಗಳೆರಡನ್ನೂ ಸಂಪೂರ್ಣವಾಗಿ ಪರಿಗಣಿಸಬೇಕಾಗುತ್ತದೆ. ಅಪ್ರಜ್ಞೆ ಅಥವಾ ಸುಪ್ತಪ್ರಜ್ಞೆಯನ್ನು ಅರಿಯದೇ ಕೇವಲ ಜಾಗ್ರತ ಪ್ರಜ್ಞೆಯಷ್ಟನ್ನೇ ಶಿಕ್ಷಣವು ಒಳಪಡಿಸುವುದರಿಂದ ಸ್ವಯಂವಿರೋಧಾಭಾಸವನ್ನು ಅದರ ಆಶಾಭಂಗ ಹಾಗು ಯಾತನೆಗಳೆಲ್ಲದರೊಂದಿಗೆ ಎಳೆದು ತಂದಂತಾಗುತ್ತದೆ. ಈ ಸುಪ್ತಪ್ರಜ್ಞೆ ಮನಸ್ಸಿನ ಜಾಗ್ರತ ಪ್ರಜ್ಞೆಗಿಂತ ಅತ್ಯಂತ ಜೀವಂತವಾದದ್ದು. ಹೆಚ್ಚಿನ ಶಿಕ್ಷಣ ವೇತ್ತರು ಈ ಜಾಗ್ರತ ಮನಸ್ಸಿಗೆ ಮಾತ್ರ ಒತ್ತುಕೊಟ್ಟು, ಅದಕ್ಕೆ ಎಲ್ಲ ಮಾಹಿತಿ, ಜ್ಞಾನ ನೀಡಿ ಒಂದು ಕೆಲಸಕ್ಕೆ ಮನಸ್ಸನ್ನು ಸಿದ್ಧಗೊಳಿಸಿ, ಸಮಾ-ಜಕ್ಕೆ ಹೊಂದಿಕೊಳ್ಳುವಂತೆ ಮಾಡುತ್ತಾರೆ. ಸುಪ್ತಪ್ರಜ್ಞೆಯನ್ನು ಮುಟ್ಟು-ವುದೇ ಇಲ್ಲ. ನಾವು 'ಶಿಕ್ಷಣ' ಎಂದು ಕರೆಯುವಂಥಾದ್ದು ಜ್ಞಾನ ಹಾಗು ತಂತ್ರಗಳ ಪದರನ್ನು ಜಾಗ್ರತ ಪ್ರಜ್ಞೆಯ ಮೇಲೆ ಹೇರುವುದು ಹಾಗು

ತ್ತಲಿನ ಪರಿಸರಕ್ಕೆ ಹೊಂದುವ ಹಾಗೆ ಸಾಮರ್ಥ್ಯ ಬೆಳೆಸುವುದು ಅಷ್ಟನ್ನೇ, ಮಾಡುವುದು.

ಎಷ್ಟೇ ಚೆನ್ನಾಗಿ ಶಿಕ್ಷಣ ನೀಡಿದರೂ, ಹೊಂದಿಕೊಳ್ಳುವುದರಲ್ಲಿ ಎಷ್ಟೇ ಮರ್ಥವಾಗಿದ್ದರೂ ಜಾಗ್ರತ ಪ್ರಜ್ಞೆಗಿಂತ ಸುಪ್ತಪ್ರಜ್ಞೆ ತುಂಬ ಶಕ್ತಿಶಾಲಿ. ದರೆ ಅದು ನಿಗೂಢವೆಂದೇನೂ ಅಲ್ಲ. ಈ ಸುಪ್ತಪ್ರಜ್ಞೆ ಜನಾಂಗ-ಸಂಸ್ಕೃ-ಯ ಭಾಂಡಾರ. ಧರ್ಮ, ಮೂಢನಂಬಿಕೆ, ಪ್ರತಿಮೆ-ಪ್ರತೀಕಗಳು, ಒಂದು ಶಿಷ್ಟ ಜನಾಂಗದ ಅನನ್ಯ ಪರಂಪರೆ, ಪವಿತ್ರ ಹಾಗು ಅಶ್ಲೀಲ ಸಾಹಿತ್ಯಗಳ ಪ್ರಭಾವ, ಆಶೆಗಳು, ಆಶಾಭಂಗಗಳು, ಆಚಾರ-ವಿಧಿಗಳು, ಆಹಾರ ವೈವಿಧ್ಯ, ವೆಲ್ಲವುಗಳ ಪ್ರಭಾವ-- ಇವೆಲ್ಲವೂ ಸುಪ್ತಪ್ರಜ್ಞೆಯಲ್ಲಿ ಬೇರೂರಿರುತ್ತವೆ. ಗುಪ್ತ ಹಾಗು ಬಹಿರಂಗಗೊಂಡಿರುವ ಆಸೆಗಳು, ಉದ್ದೇಶಗಳು, ಸುಖ-ದುಃಖ-ಳಿಂದುಂಟಾದ ಆಸೆ ಹಾಗು ಭಯಗಳು, ತನ್ನ ಸಂರಕ್ಷಣೆಗಾಗಿ ಉಳಿಸಿ-ಕೊಂಡಿರುವ ನಂಬಿಕೆಗಳು, ಅವು ವ್ಯಕ್ತಗೊಳ್ಳುವ ವಿವಿಧ ರೀತಿಗಳು—ಇವೆಲ್ಲ ಸುಪ್ತಪ್ರಜ್ಞೆಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಅಡಕವಾಗಿರುತ್ತವಷ್ಟೇ ಅಲ್ಲ, ಭವಿಷ್ಯವನ್ನು ಪ್ರಭಾವಿತಗೊಳಿಸುವಷ್ಟರ ಮಟ್ಟಿಗಿನ ಸಾಮರ್ಥ್ಯವನ್ನೂ ಹೊಂದಿರುತ್ತವೆ. ಕನಸುಗಳ ಮೂಲಕ ಮಾತ್ರವಲ್ಲದೇ ಇತರ ರೀತಿಯಲ್ಲೂ ಜಾಗ್ರತ ಪ್ರಜ್ಞೆಗೆ ಅವೆಲ್ಲವುಗಳ ಬಗ್ಗೆ ಮಾಹಿತಿ ಕಳಿಸುತ್ತಿರುತ್ತದೆ--ಅದು.

ಈ ಸುಪ್ತಪ್ರಜ್ಞೆ ಅತ್ಯಂತ ಪವಿತ್ರವಾಗಲಿ, ಭಯವನ್ನುಂಟು ಮಾಡು-ವಂತಹದ್ದಾಗಲಿ ಖಂಡಿತ ಅಲ್ಲ. ಅದನ್ನು ಬಾಹ್ಯ ಮನಸ್ಸಿಗೆ ತಿಳಿಯಪಡಿಸಲು ಯಾವುದೇ ತಜ್ಞನ ಆವಶ್ಯಕತೆಯೂ ಇಲ್ಲ. ಆದರೆ ಸುಪ್ತಪ್ರಜ್ಞೆಯ ಅಗಾಧ ಶಕ್ತಿಯಿಂದಾಗಿ, ಬಾಹ್ಯಪ್ರಜ್ಞೆ ಬಯಸಿದರೂ ಅವೆಲ್ಲವನ್ನು ವಿಶ್ಲೇಷಿಸಲು ಅದಕ್ಕೆ ಶಕ್ಯವಾಗುವುದಿಲ್ಲ. ತನ್ನದೇ ಸುಪ್ತಭಾಗಕ್ಕೆ ಸಂಬಂಧಪಟ್ಟಹಾಗೆ ಜಾಗ್ರತ ಮನಸ್ಸು ಶಕ್ತಿಹೀನ ಎಂದೇ ಹೇಳಬಹುದು. ಸುಪ್ತ ಮನಸ್ಸನ್ನು ನಿಯಂತ್ರಿ-ಸಲು, ಅದಕ್ಕೊಂದು ಆಕೃತಿಕೊಡಲು ಜಾಗ್ರತ ಮನಸ್ಸು ಎಷ್ಟೇ ಪ್ರಯತ್ನಿ-ಸಿದರೂ, ತುರ್ತಿನ ಸಾಮಾಜಿಕ— ಆವಶ್ಯಕತೆ ಹಾಗು ಹುಡುಕಾಟಗಳಿಂದ ಜಾಗ್ರತ ಮನಸ್ಸು ಕೊಂಚವೂ ಸುಪ್ತ ಮನಸ್ಸನ್ನು ತಟ್ಟದು. ಆದ್ದರಿಂದ ಇವೆರಡರ ಮಧ್ಯೆ ಕಂದಕ ಅಥವಾ ವಿರೋಧಾಭಾಸ ಇದೆ. ಇವೆರಡರ ಮಧ್ಯದ

ಬಿರುಕನ್ನು ಶಿಸ್ತಿನ ಮೂಲಕ, ಹಲವಾರು ರೂಢಿಗಳ ಮೂಲಕ, ವಿಧಿ-ವಿಧಾನಗಳ ಮೂಲಕ ಮುಚ್ಚಲು, ಕಂದಕ ತುಂಬಲು ನೋಡುತ್ತೇವೆ. ಆದರೆ ಅದು ಶಕ್ಯವಾಗುವುದಿಲ್ಲ.

ಜಾಗ್ರತ ಮನಸ್ಸು ಈ ಕ್ಷಣದ ಪರಿಮಿತ ವರ್ತಮಾನಕ್ಕಷ್ಟಕ್ಕೇ ತನ್ನನ್ನು ಸೀಮಿತಗೊಳಿಸಿಕೊಂಡಿರುತ್ತದೆ. ಆದರೆ ಹಲವಾರು ಶತಮಾನಗಳ ಭಾರ-ಒತ್ತಡಗಳಿರುವ ಸುಪ್ತಪ್ರಜ್ಞೆ ಈ ಕ್ಷಣದ ಅಗತ್ಯದಿಂದ ಅಗತ್ಯಕ್ಕೆ ಅನುಗುಣವಾಗಿ ಬದಲಾಯಿಸಲು ಶಕ್ಯವಿಲ್ಲ; ಸುಪ್ತ ಮನಸ್ಸಿಗೆ ದೀರ್ಘಕಾಲೀನ ಸ್ವಭಾವವಿದೆ; ಜಾಗ್ರತಪ್ರಜ್ಞೆ ತನ್ನ ಇತ್ತೀಚಿನ ಸಂಸ್ಕಾರಗಳ ಮೂಲಕ, ತನ್ನ ಈ ಕ್ಷಣದ ಆವಶ್ಯಕತೆಗನುಗುಣವಾಗಿ ಈ ಸುಪ್ತಪ್ರಜ್ಞೆಯನ್ನು ಉಪಯೋಗಿಸಿ-ಕೊಳ್ಳಲು ಬರುವುದಿಲ್ಲ. ಈ ಸ್ವಯಂವಿರೋಧಾಭಾಸವನ್ನು ಪರಿಹರಿಸಲು ಜಾಗ್ರತಪ್ರಜ್ಞೆ ಈ ವಾಸ್ತವ ಸತ್ಯವನ್ನು ಅರಿತುಕೊಂಡು ಶಾಂತವಾಗಿರಬೇಕು. ಇದರರ್ಥ ಸುಪ್ತಮನಸ್ಸಿನ ಒತ್ತಡಗಳಿಗೆಲ್ಲಪಕ್ಕೂ ಅವಕಾಶ ನೀಡುವುದು ಎಂದಲ್ಲ. ಸುಪ್ತ ಹಾಗು ಬಾಹ್ಯ ಮನಸ್ಸುಗಳ ಮಧ್ಯೆ ಪ್ರತಿಭಟನೆ ಇಲ್ಲದಿ-ದ್ದಾಗ, ಕಾಲದ ಸಹನೆಯಿರುವ ಸುಪ್ತ ಮನಸ್ಸು ಈ ಕ್ಷಣದ್ದನ್ನೂ ನಿರ್ಲಕ್ಷಿ-ಸುವುದಿಲ್ಲ.

ಗುಪ್ತವಾದ, ಅಶೋಧಿತವಾದ, ಅಜ್ಞಾತವಾದ ಮನಸ್ಸು ಶಿಕ್ಷಿತಗೊಂಡ ತನ್ನ ಹೊರಮನಸ್ಸಿನ ಜೊತೆಗೆ ವರ್ತಮಾನದ ಈ ಕ್ಷಣದ ಸವಾಲುಗಳ ಅಥವಾ ಬೇಡಿಕೆಗಳೊಡನೆ ಸಂಪರ್ಕಕ್ಕೆ ಬರುತ್ತದೆ. ಜಾಗ್ರತ ಮನಸ್ಸು ತತ್‌ಕ್ಷಣ ಸಮರ್ಥವಾಗಿಯೇ ಪ್ರತಿಸ್ಪಂದಿಸಬಹುದು; ಆದರೆ ಈ ಜಾಗ್ರತ ಹಾಗು ಸುಪ್ತ ಮನಸ್ಸುಗಳಲ್ಲಿ ವಿರೋಧವಿರುವುದರಿಂದ ಯಾವ ಅನುಭವವಾ-ದರೂ ಈ ಅಂತರ ಹಾಗು ವಿರೋಧವನ್ನು ಜಾಸ್ತಿಗೊಳಿಸುತ್ತದೆ. ಇದು ಇನ್ನೂ ಹೆಚ್ಚಿನ ಅನುಭವವನ್ನು ತರುತ್ತದೆ. ವರ್ತಮಾನ ಹಾಗು ಭೂತಗಳ ಮಧ್ಯದ ಕಂದರವನ್ನು ಇನ್ನೂ ವಿಸ್ತಾರಗೊಳಿಸುತ್ತದೆ. ಗುಪ್ತವಾದ ಅಂತ-ರಾಳದ್ದನ್ನು ಅರಿಯದೇ ಬಾಹ್ಯವಾದದ್ದನ್ನು ಹೊರಮನಸ್ಸಷ್ಟೇ ಅನುಭವಿಸು-ವುದು, ಕೇವಲ ಇನ್ನೂ ಆಳ ಹಾಗು ವಿಸ್ತಾರವಾದ ಸಂಘರ್ಷವನ್ನು ಸೃಜಿ-ಸುತ್ತದೆ.

ಸಾಮಾನ್ಯವಾಗಿ ನಾವು ಯೋಚಿಸುವಂತೆ ಅನುಭವ ನಮ್ಮನ್ನು ಸ್ವತಂತ್ರಗೊಳಿಸುವದಿಲ್ಲ; ಶ್ರೀಮಂತಗೊಳಿಸುವುದೂ ಇಲ್ಲ. ಅನುಭವ ಅನುಭವಿಯನ್ನು ಬಲಿಷ್ಠಗೊಳಿಸುತ್ತಲೇ ಹೋಗುವ ವರೆಗೂ ಸಂಘರ್ಷ ಇದ್ದೇ ಇರುತ್ತದೆ. ಅನುಭವವನ್ನು ಸಂಗ್ರಹಿಸುವುದು ಪೂರ್ವಗ್ರಹದೂಷಿತ ಮನಸ್ಸನ್ನು ಮತ್ತಷ್ಟು ಪ್ರಬಲಗೊಳಿಸುತ್ತದೆ. ತನ್ಮೂಲಕ ವಿರೋಧ ಹಾಗು ಯಾತನೆಗಳನ್ನು ಅದು ಮುಂದುವರಿಸುತ್ತದೆ. ತನ್ನ ಸಮಗ್ರ ಸ್ವರೂಪವನ್ನೂ ಅರಿಯಬಲ್ಲ ಮನಸ್ಸು ಮಾತ್ರ ಇವೆಲ್ಲವುಗಳಿಂದ ಬಿಡುಗಡೆ ಪಡೆಯಬಲ್ಲದು.

ಸುಪ್ತ ಮನಸ್ಸಿನ ಹಲವಾರು ಸ್ತರಗಳಲ್ಲಿಯ ಶಕ್ತಿಸಾಮರ್ಥ್ಯಗಳನ್ನು ಸರಿಯಾಗಿ ಗ್ರಹಿಸಿ ಅರಿತಾಗ, ಇನ್ನಿತರ ಎಲ್ಲ ವಿವರಗಳನ್ನು ಧೀಮಂತಿಕೆ ಹಾಗು ಕೌಶಲ್ಯಗಳಿಂದ ನಿರ್ವಹಿಸಬಹುದು. ಆದ್ದರಿಂದ ಮುಖ್ಯವಾದದ್ದು ಈ ಸುಪ್ತ ಮನಸ್ಸನ್ನು ಚೆನ್ನಾಗಿ ಅರಿತುಕೊಳ್ಳುವುದೇ ಹೊರತು, ಹೊರಮನಸ್ಸಿಗೆ ಕೇವಲ ಜ್ಞಾನ ಸಂಗ್ರಹಕ್ಕಾಗಿ ಶಿಕ್ಷಣ ನೀಡುವಂತಹದ್ದಲ್ಲ. ಈ ಸುಪ್ತಮನಸ್ಸಿನ ಅರಿವು ಇಡಿಯ ಮನಸ್ಸನ್ನು ಅದರ ತೊಳಲಾಟಗಳಿಂದ ಬಿಡುಗಡೆಗೊಳಿಸಬಲ್ಲದು. ಆಗಲೇ ಧೀಮಂತಿಕೆ ಇರಲು ಶಕ್ಯ.

ಚಟುವಟಿಕೆಗಳಲ್ಲಿ ಜೀವಂತವಾಗಿರುವ ಜಾಗ್ರತ ಮನಸ್ಸಿನ ಶಕ್ತಿಸಾಮರ್ಥ್ಯಗಳೆಲ್ಲವನ್ನೂ ನಾವು ಎಚ್ಚರಗೊಳಿಸಬೇಕು. ಹಾಗು ಸುಪ್ತ ಮನಸ್ಸನ್ನು ಅರ್ಥಮಾಡಿಕೊಳ್ಳಬೇಕು. ಸುಪ್ತವಾದುದರ ಅರಿವಿನಲ್ಲಿ ಸುಖದುಃಖಗಳ ಪರ್ಯಾಯರೂಪೀ ಚಲನೆ, ಸ್ವಯಂ ವಿರೋಧಾಭಾಸಗಳು ಇಲ್ಲವಾಗಿ ಸಂಪೂರ್ಣವಾಗಿ ಬದುಕುವುದು ಅಲ್ಲಿರುವುದು. ಸುಪ್ತಮನಸ್ಸನ್ನು ಅರಿತುಕೊಳ್ಳುವುದು ಹಾಗು ಅದರೆಲ್ಲ ಕ್ರಿಯಾಚಟುವಟಿಕೆಗಳ ಬಗ್ಗೆ ಜಾಗ್ರತವಾಗಿರಬೇಕಾದದ್ದು ಅತ್ಯಂತ ಅವಶ್ಯ. ಆದರೆ ಅದಕ್ಕೇ ವಿಶೇಷ ಗಮನ ಕೊಡದೇ ಇರುವುದೂ ಅಷ್ಟೇ ಮಹತ್ವದ್ದು. ಮನಸ್ಸು ಈ ಜಾಗ್ರತ ಹಾಗು ಸುಪ್ತ ಮನಸ್ಸುಗಳನ್ನು ಅರ್ಥಮಾಡಿಕೊಂಡ ಮೇಲೆಯೇ ತನ್ನೆಲ್ಲ ಮಿತಿಗಳಾಚೆ ಅದು ಹೋಗಬಲ್ಲದು, ಕಾಲದಾಚೆಗಿನ ಆ ಆನಂದವನ್ನು ಕಾಣಬಲ್ಲದು.

* * *

ಒಪ್ಪೋಲೆ

ಪುಟ	ಪಂಕ್ತಿ	ತಪ್ಪು	ಸರಿ
೧	೨	ಅಮೆನ್	ಒಮೆನ್
೪	೩, ೪, ೫	ಈ ಪಂಕ್ತಿಗಳೂ ತಪ್ಪು.	ಅವುಗಳಿಲ್ಲದಿದ್ದದ್ದೇ ಸರಿ.
೫	೮	ಅಸತ್ಯವಷ್ಟೇ	ಅಸಾಧ್ಯವಷ್ಟೇ.
೬	೧೬	ಎನ್. ಆರ್.	ಎಸ್. ಆರ್.
೮	೧೭	ಸಾಕ್ಷೇಪನಲ್ಲಿ	ಸಾಪೇಕ್ಷನಲ್ಲ-
೧೦	೬	ತೀರ್ಮಾನ	ತೀರ್ಮಾನದ
೧೪	೨೧	ಸಾರಿದರು ಆ ವ್ಯಕ್ತಿ,	ಸಾರಿದರು, ಆ ವ್ಯಕ್ತಿ.
೧೮	೧೮	ವಿಜ್ಞಾನಿಗಳ	ವಿಜ್ಞಾನಗಳ
೧೯	೧೫	ನೇತ್ರತ್ವ	ನೇತೃತ್ವ
೨೧	೨೩	ಅತ	ಆತ
೨೨	೨೬	ನಿರ್ದೇಂಶನ	ನಿರ್ದೇಶನ
೨೩	೧೧	ಇದಕ್ಕೊ	ಇದಕ್ಕೆ
೨೫	೧೦	ಲಕ್ಕಾಗನ್	ಅಕ್ಕಾಗನ್
೩೫	೬	ನಿರುದ್ದಿಶ್ಯವಾಗಿ	ನಿರುದ್ದಿಶ್ಯವಾಗಿ
೩೫	೨೧	ಆಟಿಗೆಯೆಲ್ಲ	ಆಟಿಗೆಯಲ್ಲ,
೪೭	೭	ಪರಿಹಾರಬೇಕು. ಸಮಸ್ಯೆಗಳಿಗೆ	ಪರಿಹಾರಬೇಕು–ಸಮಸ್ಯೆಗಳಿಗೆ.
೪೯	೬	ಆತ್ಮನಿರೀಕ್ಷಣೆ	ಆತ್ಮಪರೀಕ್ಷೆ
೫೦	೧೬	ನೆಟ್ಟಿರುವಂತಹ	ನೆಟ್ಟಿರುವಂತಹ
೫೧	೧೫	ವಿಚಾರಕ್ರಮವನ್ನು	ವಿಚಾರಕ್ರಮವನ್ನು
೫೫	೧೫	ಬಾಲಿತನ	ಖಾಲಿತನ
೫೬	೨೨	ಸ್ವಾಧೀಫ	ಸ್ವಾಧೀನ
೬೪	೨೫	ಮನಸ್ಸಿಲ್ಲದ	ಮನಸ್ಸಿನಲ್ಲದ
೬೮	೬	ಆಲೋಚನೆ	ಆಲೋಚನೆಗೆ

ಪುಟ	ಪಂಕ್ತಿ	ತಪ್ಪು	ಸರಿ
೬೮	೨೪	ನಿರಂತಕ	ನಿರಂತರ
೭೦	೨೦	ಈ	ಆ
೭೨	೨೨	ಪ್ರೇಮ	ಪ್ರೇಮ
೮೧	೧೭	ಮನುಪ್ಯನನ್ನು	ಮನುಷ್ಯನನ್ನು
೮೧	೧೮	ಅರ್ಥವಂತಿತೆ	ಅರ್ಥವಂತಿಕೆ
೮೩	೨೫	ಸಂಘರ್ಷವನ್ನು	ಸಂವಿಧಾನವನ್ನು
೮೭	೧೦	ಸದ್ಯ, ಪ್ರತ್ಯಕ್ಷ	ಸದ್ಯಃ ಪ್ರತ್ಯಕ್ಷ
೮೭	೨೩	ಸದ್ಯಃ, ಪ್ರತ್ಯಕ್ಷ	ಸದ್ಯಃ ಪ್ರತ್ಯಕ್ಷ
೮೮	೧೩	ನಿಮಗಿಲ್ಲದಿದ್ದರೆ	ನಮಗಿಲ್ಲದಿದ್ದರೆ
೮೯	೧೧	ಆರಿಯುವ	ಅರಿಯುವ
೯೦	೬	ಪಪಂಚದಲ್ಲಿಯೂ	ಪ್ರಪಂಚದಲ್ಲಿಯೂ
೯೭	೪	ಪ್ರತಿಕ್ರಿಯೆಯಾದದರೆ	ಪ್ರತಿಕ್ರಿಯೆಯಾದರೆ
೧೦೨	೨೩	ಪೂರ್ವಗ್ರಹಡ,	ಪೂರ್ವಗ್ರಹ,
೧೦೩	೭	ಏಕೀಭಾವಿಸಿಕೊಂಡುಬಿಟ್ಟದೆ	ಏಕೀಭವಿಸಿಕೊಂಡುಬಿಟ್ಟದೆ.
೧೦೩	೧೮	ಪಲಾಯಗಳನ್ನು	ಪಲಾಯನಗಳನ್ನು
೧೦೬	೨೬	ಎಂದರೆ	ಏಕೆಂದರೆ
೧೧೦	೧೮	ಸಿದ್ಧಾಂತಗಳ	ಸಿದ್ಧಾಂತಗಳು
೧೧೧	೨೬	ಸಮಸ್ಯೆಯಾದುದು	ಸಮಸ್ಯೆಯಿರುವದು
೧೧೨	೩	ಜ್ಞಾತನನ್ನು	ಅಜ್ಞಾತವನ್ನು
೧೧೨	೨೧	ನಿಮ್ಮನ್ನು	ನಮ್ಮನ್ನು
೧೧೩	೧	ಅವುಗಳಲ್ಲಿ	ಅವುಗಳಿಗೆ
೧೧೮	೨೩	ಪ್ರಭಟನೆ	ಪ್ರತಿಭಟನೆ
೧೨೬	೪	ಇರುವಂತಹ	ಇರದಂತಹ
೧೨೮	೧	ಕೃರ್ತೃ	ಕರ್ತೃ
೧೨೫	೧	ಮಾಡಲು	ಮೊದಲು

ಪುಟ	ಪಂಕ್ತಿ	ತಪ್ಪು	ಸರಿ
೧೩೬	೧೮	ವಿಸ್ಮೃತ	ವಿಸ್ತೃತ
೧೩೭	೨೬	ಮಾತಿನಹಂತಹದಲ್ಲಿ	ಮಾತಿನಲ್ಲಿ
೧೩೯	೫	ಆತನ	ಆತ್ಮದ
೧೩೯	೨೭	ಹೊಸವಾದ	ಹೊಸದಾದ
೧೪೬	೧೩	ಅನೇಕರು	ಅನೇಕರಿಗೆ
೧೪೯	೧೩	ಬೇರು–ಈ	ಬೇರು–
೧೫೨	೨೫	ಕೊಂಡು	ಕೊಂಡ
೧೬೦	೨೨	ಕದ್ದು–ಮುಚ್ಚಿ	ಕದ್ದು–ಮುಚ್ಚು
೧೬೨	೧೦	ಅದರೊಂದಿನ	ಅದರೊಂದಿಗಿನ
೧೬೮	೮	ಸಿಲುಕಿದ	ಸಿಲುಕಿದೆ

ಇತ್ತೀಚಿನ ಕೆಲವು ಪ್ರಕಟಣೆಗಳು

ಸಾಧನ ಪಂಚಕ (ಶಂಕರಾಚಾರ್ಯ ವಿರಚಿತ)	೬-೦೦
ಅರಳುವ ಮೊಗ್ಗು (ಮಕ್ಕಳ ಪಾಲಕರ ಕೈಪಿಡಿ)	೭-೦೦
ಗೀತಾಂಜಲಿ (ನೋಬೆಲ್ ಬಹುಮಾನಿತ) ಟಾಗೋರ	೭-೫೦
ತಾ ಲೆಕ್ಕಣಿಕಿ ತಾ ದೌತಿ — ಅಂಬಿಕಾತನಯದತ್ತ	೬-೦೦
ಆಧುನಿಕ ಹೊಲಿಗೆಯ ಶಾಸ್ತ್ರ — ಹಳಪೇಟಿ ಚಿಂತಾಮಣಿ	೧೫-೦೦
ರಸಪಾಕ — ಶಾಂತಾದೇವಿ ಮಾಳವಾಡ	೧೨-೦೦
ಗೃಹದೀಪಿಕೆ — ನಿತ್ಯೋಪಯೋಗಿ ಸಲಹೆಗಳು	೭-೦೦
ನಲ್ವಾಡುಗಳು (ಪ್ರೀತಿಗೀತಗಳು) — ಆನಂದಕಂದ	೪-೫೦
ಗಂಗಾವತರಣ — ಅಂಬಿಕಾತನಯದತ್ತ	೮-೦೦
ಜನಪ್ರಿಯ ಗಾದೆಗಳ ನಿಘಂಟು — ಕಾವ್ಯಪ್ರೇಮಿ	೭-೫೦
ಅಯಸ್ಕಾಂತ ಚಿಕಿತ್ಸೆ — ಮನೋಹರ ಘಾಣೇಕರ	೧೮-೦೦
ಸರ್ವಜ್ಞ ಸಾರ — ಸಂ. ಕೊಟ್ಟಲಗಿ	೪-೦೦
ಅಲ್ಲಮನ ವಚನಸುಧೆ — ಸಂ. ಕಾವ್ಯಪ್ರೇಮಿ	೪-೫೦
ಪುರಂದರದಾಸರ ಹಾಡುಗಳು —	೧೩-೫೦
ಕ್ರಿಯಾತ್ಮಕ ಯೋಗಾಸನಗಳು — ಸ್ವಾಮಿ ಯೋಗಾನಂದ	೭-೦೦
ಉದರದ ಆರೋಗ್ಯ — ಸ್ವಾಮಿ ಶಿವಾನಂದ	೭-೦೦
ಹಠಯೋಗ ಪ್ರದೀಪಿಕೆ— ಆರೆನ್ಕೆ	೨೫ ೦೦
ಮಾರ್ಕಂಡೇಯ ಪುರಾಣ—ಆರೆನ್ಕೆ	೧೨-೦೦
ವಾತ್ಸ್ಯಾಯನ ಕಾಮಸೂತ್ರ— ಕನ್ನಡ ಭಾಷಾಂತರ	೨೫-೦೦
ಆರೋಗ್ಯ ಸಂಪತ್ತು — ಡಾ॥ ಧನ್ಯಕುಮಾರ	೧೦-೦೦
ವಧುವಿಗೆ ಉಡುಗೊರೆ — ಶಾಂತಾದೇವಿ ಮಾಳವಾಡ	೧೩-೫೦
ಶ್ಯಾಮನ ತಾಯಿ — ಸಾನೇ ಗುರೂಜಿ	೧೨-೦೦

ಸಮಾಜ ಪುಸ್ತಕಾಲಯ, ಧಾರವಾಡ-೧

Kshana Kshanakoo
Hosabadukige— J. K. Rs. 13-50